ಸಂಕಲನ

ವರ್ಷ ೭

ಸಪ್ಟಂಬರ್ + ಅಕ್ಟೋಬರ್

೨೦೦೨

೩೫

ಸಂಪಾದಕರು

ಸಿದ್ಧಲಿಂಗ ಪಟ್ಟಣಶೆಟ್ಟಿ

ಹೇಮಾ ಪಟ್ಟಣಶೆಟ್ಟಿ

ಸಂಕಲನದ ಲೇಖಕರಿಗೆ + ಓದುಗರಿಗೆ ಕೆಲವು ಸೂಚನೆಗಳು

೧. ಲೇಖನಗಳ ಕೈಬರೆಹದ / ಟೈಪ್ ಮಾಡಿದ / ಡಿಟಿಪಿ ಮಾಡಿದ ಮೂಲ ಪ್ರತಿಗಳನ್ನೇ ಕಳಿಸಬೇಕು. ಝೆರಾಕ್ಸ್ ಪ್ರತಿ ಪರಿಶೀಲಿಸಲಾಗುವುದಿಲ್ಲ.

೨. ಲೇಖನಗಳು ಪ್ರಕಟಣೆಗೆ ಸ್ವೀಕೃತವಾದರೆ ಅವು ತಲುಪಿದ ೨ ತಿಂಗಳೊಳಗೆ ತಿಳಿಸಲಾಗುವುದು.

೩. ಸಂಕಲನದ ೧ ಸಂಚಿಕೆ ಪ್ರಕಟವಾಗುವಾಗ ಅದರ ಮುಂದಿನ ೩ ಸಂಚಿಕೆಗಳಿಗಾಗಿ ಆಯ್ದ ಲೇಖನಗಳು ಡಿಟಿಪಿ ಆಗಿ ಸಿದ್ಧವಾಗಿರುವುದರಿಂದ ಯಾವುದೇ ಹೊಸ ಲೇಖನ ಕನಿಷ್ಠ ನಾಲ್ಕಾರು ತಿಂಗಳ ನಂತರ ಪ್ರಕಟವಾಗುತ್ತದೆ. ಆದ್ದರಿಂದ ಲೇಖಕರು ಅನಗತ್ಯ ಕುತೂಹಲ ಅಥವಾ ಅವಸರ ತಳೆಯದಿರಲು ಕೋರಿಕೆ.

೪. ಉತ್ತರವನ್ನು ನಿರೀಕ್ಷಿಸಿ ಯಾರೂ ಸ್ವವಿಳಾಸದ ಲಕೋಟೆ ಅಥವಾ ಅಂಚೆಚೀಟಿ ಕಳಿಸುವುದು ಬೇಡ. ಕವಿತೆಗಳನ್ನು ಹೊರತುಪಡಿಸಿ ಅಸ್ವೀಕೃತ ಲೇಖನಗಳನ್ನು ಸಂಕಲನದ ವೆಚ್ಚದಲ್ಲಿಯೇ ಆಯಾ ಲೇಖಕರಿಗೆ ಮರಳಿಸಲಾಗುವುದು.

೫. ಪರಿಶೀಲನೆಗೆ ಪುಸ್ತಕದ ೨ ಪ್ರತಿ ಕಳಿಸಿದರೆ ಮಾತ್ರ ಪರಿಗಣಿಸಲಾಗುವುದು. ಎರಡು ಪ್ರತಿ ಸ್ವೀಕರಿಸಿದ ಮಾತ್ರಕ್ಕೆ ಅದರ ಪರಿಶೀಲನೆ ಮಾಡಿಸಲೇಬೇಕೆಂಬುದು ಸಂಕಲನಕ್ಕೆ ಬಂಧನಕಾರಿಯಲ್ಲ. ಒಮ್ಮೊಮ್ಮೆ ಪರಿಶೀಲಿತ ವಿಮರ್ಶಾಲೇಖನ ಪ್ರಕಟಣೆಗೆ ಸಿಗುವುದು ಅತಿ ವಿಳಂಬದ್ದೂ ಕಷ್ಟದ್ದೂ ಆಗಬಹುದಾಗಿದೆ.

೬. ಜನೆವರಿ, ಮಾರ್ಚ್, ಮೇ, ಜುಲಾಯಿ, ಸಪ್ಟಂಬರ್, ನವಂಬರ್ ೧೪ ರ ದಿನಾಂಕ ಹೊತ್ತು ಪ್ರಕಟವಾಗುವ ಸಂಚಿಕೆಗಳು ಸಕಾಲದಲ್ಲಿ ಚಂದಾಹಣ ಕೊಟ್ಟ ಎಲ್ಲರಿಗೂ ಸಾಮಾನ್ಯವಾಗಿ ಆಯಾ ತಿಂಗಳ ೧೦-೧೨ ನೇ ದಿನಾಂಕದೊಳಗಾಗಿ ತಲುಪುತ್ತವೆ.

೭. ಲೇಖಕರು ತಮ್ಮ ಒಳ್ಳೆಯ ಬರೆಹಗಳನ್ನು ಕಳಿಸುವುದರೊಂದಿಗೆ ತಮ್ಮ ಗಮನಕ್ಕೆ ಬರುವ ಹೊಸ ಲೇಖಕರ ಒಳ್ಳೆಯ ಲೇಖನಗಳನ್ನೂ ಸಂಕಲನಕ್ಕೆ ಕಳಿಸಲು ಪ್ರೇರೇಪಿಸಿರಿ.

೮. ಪ್ರಕಟವಾಗುವ ಪ್ರತಿಯೊಂದು ಲೇಖನಕ್ಕೆ ಸಾಂಕೇತಿಕ ಗೌರವಧನ ರೂ. ೧೦೦/- ಲೇಖನ ಪ್ರಕಟವಾದ ಎರಡು ವಾರದೊಳಗಾಗಿ ಕಳಿಸಲಾಗುವುದು.

ಸಂಕಲನ

ಸಪ್ಟಂಬರ್ + ಅಕ್ಟೋಬರ್ ೨೦೦೭

ಸಂಪಾದಕರು

ಸಿದ್ಧಲಿಂಗ ಪಟ್ಟಣಶೆಟ್ಟಿ
ಹೇಮಾ ಪಟ್ಟಣಶೆಟ್ಟಿ

ಸಂಕಲನ ಪ್ರಕಾಶನ
ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ
ಧಾರವಾಡ – ೫೮೦ ೦೦೪

R N I No. KARKAN 14160 / 10 / 1 / 2002 - TC

SANKALANA :

A Kannada Literary Magazine
Volume 6, Issue 5 : September + October 2007
Edited by Dr. Siddhaling Pattanshetti
Hoomane, Shridevinagar, Vidyagiri, Dharwad - 580 004
Printed by Saraswati Offset Printers, Shivaji Road, Dharwad -580 001

•

•

•

ಸಂಕಲನ – ೩೫
ಸಂಪುಟ ೬, ಸಂಚಿಕೆ ೫ : ಸೆಪ್ಟಂಬರ್ + ಅಕ್ಟೋಬರ್ ೨೦೦೭
ಸಂಪಾದಕರು : ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ ಮತ್ತು ಡಾ. ಹೇಮಾ ಪಟ್ಟಣಶೆಟ್ಟಿ
ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ – ೫೮೦ ೦೦೪
✆ : ೦೮೩೬-೨೪೬ ೨೭೧೮
ಸಿ.ಪ. : ೯೪೪೮೬ ೩೦೬೩೭, ಹೇಮಾ : ೯೪೪೮೮ ೬೧೬೦೪

•

ಸಂಕಲನದಲ್ಲಿ ಪ್ರಕಟವಾದ ಲೇಖನಗಳಲ್ಲಿ ವ್ಯಕ್ತವಾದ
ಅಭಿಪ್ರಾಯಗಳ ಹೊಣೆ, ಹಕ್ಕು ಆಯಾ ಲೇಖಕರವು.

•

ವಾರ್ಷಿಕ ಚಂದಾ ರೂ. ೨೦೦/- (ಚೆಕ್ ೨೨೦/-)
೨೦೦೫, ೨೦೦೬, ೨೦೦೭ ಈ ಮೂರು ವರ್ಷಗಳ ಚಂದಾ ರೂ. ೫೦೦/- (ಚೆಕ್ ೫೫೦/-

•

ಡಿಟಿಪಿ + ಮುದ್ರಣ :
ಸರಸ್ವತಿ ಆಫ್‌ಸೆಟ್ ಪ್ರಿಂಟರ್ಸ್, ಶಿವಾಜಿ ಬೀದಿ, ಧಾರವಾಡ – ೫೮೦ ೦೦೧
✆ : ೦೮೩೬-೨೪೪ ೧೦೬೫

ಸಂಕಲನ – ೩೫ : ಪರಿವಿಡಿ

೧.	ಒನ್ನೇಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ	೫–೬
೨.	ಮೆರೀನ್ ಡ್ರೈವ್‌ನ ದಂಡೆಯಲ್ಲಿ ಒಂದು ಸಂಜೆ – ಮಿತ್ರಾ ವೆಂಕಟ್ರಾಜ	೭–೧೧
೩.	ಭಾಷಾವಾರು ಪ್ರಾಂತ್ಯರಚನೆಯ ತತ್ತ್ವಾದರ್ಶಗಳು –ಅರವಿಂದ ಚೊಕ್ಕಾಡಿ	೧೧–೧೫
೪.	ಹಾಡು ಎರಡು 'ಹಾ' ಹಲವು – ಸ. ರಘುನಾಥ	೧೫–೧೮
೫.	ಇಲ್ಲಿ ಜನ ಮಾತನಾಡುವುದಿಲ್ಲ –ಆರ್. ಪವಿತ್ರ ಪ್ರಿಯಭಾಷಿಣಿ	೧೮
೬.	ಗುಂಥರ್ ಗ್ರಾಸ್ – ವಿಜಯ್ ಕುಮಾರ್/ಆರ್. ಪಿ. ಹೆಗಡೆ	೧೯–೨೪
೭.	ಐಕ್ಯ – ವಿಜಯಕ್ಕ	೨೪
೮.	ಸತ್ವಂತ ನಾಗಮ್ಮ – ಹೊರೆಯಾಲ ದೊರೆಸ್ವಾಮಿ	೨೫–೨೯
೯.	ಭಿಖಾರೀ ಠಾಕುರ್‌ನ 'ಬಿದೇಸಿಯಾ' –ಪ್ರಸನ್ನ	೩೦–೩೩
೧೦.	'ನನ್ನ ಶಾಲಾ ಗುರುಗಳು' : ಗೌರವ – ೧೬ –ನಾ. ಡಿಸೋಜ	೩೪–೩೯
೧೧.	'ನನ್ನ ಶಾಲಾ ಗುರುಗಳು' : ಗೌರವ – ೧೭ –ಯು.ಎನ್.ಸಂಗನಾಳಮಠ	೪೦–೪೧
೧೨.	ಎರಡು ಕವಿತೆಗಳು – ಅಶ್ವಿನ್ ಸಿ.	೪೧
೧೩.	ಎರಡು ಕವಿತೆಗಳು – ಬಸವರಾಜ ಹೂಗಾರ	೪೨
೧೪.	ಕಾರಂತರ ಜೀವಂತ ಪಾತ್ರಗಳು – ೧ –ಸಿ. ಸೋಮಶೇಖರಯ್ಯ	೪೩–೫೦
೧೫.	ನಾಲ್ಕು 'ಹನಿ' –ಸಿ. ಪಿ. ಕೆ	೫೦
೧೬.	ಸುಮತೀಂದ್ರ ನಾಡಿಗರ 'ಮೌನದಾಚೆಯ ಮಾತು' –ಜಿ. ಎಸ್. ಸಿದ್ಧಲಿಂಗಯ್ಯ	೫೧–೫೫
೧೭.	ಆರು ಕವಿತೆಗಳು –ಬಸವರಾಜ ವಕ್ಕುಂದ	೫೬–೫೯
೧೮.	ಕಿನ್ನೂರಿಯ ಬೆನ್ನೇರಿ –ಗಿರಿಜಾ ಶಾಸ್ತ್ರಿ	೫೯–೬೪
೧೯.	ಷ. ಶೆಟ್ಟರ್ ಅವರ 'ಕವಿರಾಜಮಾರ್ಗಮಂಥನ' –ಎಚ್. ಎಸ್. ಶಿವಪ್ರಕಾಶ್	೬೫–೭೧
೨೦.	ಪುಸ್ತಕ ಪರಿಶೀಲನೆ :	೭೨–೭೭
	೧. ತಬಲಜಿ : ಬಸವರಾಜ ಡೋಣೂರ – ಆರ್. ಜಿ. ಮಠಪತಿ	
	೨. ಅನಾಮಿಕನ ಉಲುಹು : ಮೋಹನ ಹಬ್ಬು ;	
	೩. ಬಾಳ ದಾರಿಯಲಿ : ಎಸ್. ಆರ್. ಮಳಗಿ – ಬಸವರಾಜ ವಕ್ಕುಂದ	
	೪. ತೋಡಿರಾಗ : ಆರ್. ತಾರಿಣಿ ಶುಭದಾಯಿನಿ ;	
	೫. ಮಾತಿನ ಚಪ್ಪರ : ಶಿಕಾರಿಪುರ ಕೆ. ಹರಿಹರೇಶ್ವರ – ಶ್ಯಾಮಸುಂದರ ಬಿದರಕುಂದಿ	
	೬. ಪಂಡಿತರ ಕೂಟ : ಎಸ್. ಆರ್. ಚಂದ್ರ – ಶಶಿಧರ ತೋಡಕರ	
೨೧.	ಸಂಕಲನ : ಅನಿಸಿಕೆ	೭೮–೭೯
೨೨.	ಕಡೇಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ	೮೦ + ಆವರಣ ಪುಟ ೩

ಸಂಪಾದಕರ ಮಾತು

ಸಂಕಲನ-೩೧ ಮತ್ತು ೩೩ ರಲ್ಲಿ **'ನನ್ನ ಶಾಲಾಗುರುಗಳು'** ಮಾಲಿಕೆಯ ೧೪ ಮತ್ತು ೧೫ ನೇ ಲೇಖನ ಪ್ರಕಟಿಸಿದ್ದೆವು. ಈಗ **ಸಂಕಲನ**-೩೫ ರಲ್ಲಿ ಈ ಮಾಲಿಕೆಯ ೧೬ ಮತ್ತು ೧೭ ನೇ ಕ್ರಮದ ೨ ಲೇಖನಗಳನ್ನು ಒಟ್ಟಿಗೇ ಪ್ರಕಟಿಸಿದ್ದೇವೆ.

ಸಂಕಲನ-೩೨ ಮತ್ತು ೩೪ ರಲ್ಲಿ **'ನನ್ನ ಅವ್ವ ನನ್ನ ಅಪ್ಪ'** ಮಾಲಿಕೆಯ ೩೧, ೩೨ ನೇ ಲೇಖನ ಪ್ರಕಟಿಸಿದ್ದೆವು. **ಸಂಕಲನ**-೩೬ ರಲ್ಲಿ ಈ ಮಾಲಿಕೆಯ ೩೩ ನೇ ಲೇಖನ ಪ್ರಕಟವಾಗುವುದು.

ಶಿವರಾಮ ಕಾರಂತರ ಸಮಗ್ರ ಕಥಾಸಾಹಿತ್ಯವನ್ನು ನಮ್ಮ ಹೊಸ ಪೀಳಿಗೆಯ ಮನಸ್ಸುಗಳಿಗೆ ಪರಿಚಯಿಸುವ ಉದ್ದೇಶದಿಂದ ನಾವು **'ಕಾರಂತರ ಜೀವಂತ ಪಾತ್ರಗಳು'** ಎಂಬ ಹೆಸರಿನ ಹೊಸ ಲೇಖನ ಮಾಲಿಕೆಯೊಂದನ್ನು ಆರಂಭಿಸುತ್ತಿದ್ದೇವೆ. ಚಿತ್ರದುರ್ಗದ ಸಿ. ಸೋಮಶೇಖರಯ್ಯ ಅವರು ಬರೆದ ೧೦ ಅಧ್ಯಯನಪೂರ್ಣ ಲೇಖನಗಳು ಈಗಾಗಲೇ ನಮ್ಮಲ್ಲಿವೆ. ಈ ಮಾಲಿಕೆಯ ಮೊದಲ ಲೇಖನವನ್ನು ಪ್ರಸ್ತುತ **ಸಂಕಲನ**-೩೫ ರಲ್ಲಿ ಪ್ರಕಟಿಸಿದ್ದೇವೆ. ಮುಂಬರುವ ಸಂಚಿಕೆಗಳಲ್ಲಿ ಈ ಮಾಲಿಕೆಯ ಲೇಖನಗಳು ಕ್ರಮವಾಗಿ ಪ್ರಕಟವಾಗುವುವು.

'ನನ್ನ ಗೆಳೆಯರು ಗೆಳತಿಯರು' ಹೆಸರಿನ ಇನ್ನೊಂದು ಹೊಸ ಲೇಖನಮಾಲಿಕೆಯನ್ನು ಆರಂಭಿಸಲು ಸಹ **ಸಂಕಲನ** ಯೋಜಿಸಿದೆ. ಈಗಾಗಲೇ ಕೆಲವು ಲೇಖನಗಳನ್ನು ಸಂಗ್ರಹಿಸಲಾಗಿದೆ. ಈ ಮಾಲಿಕೆಯ ಲೇಖನಗಳನ್ನು **ಸಂಕಲನ**-೩೬ ಅಥವಾ ೩೭ ರಿಂದ ಆರಂಭಿಸಲಾಗುವುದು. ಲೇಖಕ ಮಿತ್ರರು ತಮ್ಮ ಬಾಲ್ಯಕಾಲದ ಮರೆಯಲಾಗದ, ಈಗಲೂ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದಿರುವ, ಭಾವದೀಪವಾಗಿ ಬೆಳಗುತ್ತಿರುವ ತಮ್ಮ ಗೆಳೆಯರ ಮತ್ತು / ಅಥವಾ ಗೆಳತಿಯರ ಬಗ್ಗೆ ೮-೧೦ ಪುಟಗಳಿಗೆ ಹೊಂದುವಂತೆ ಲೇಖನಗಳನ್ನು ಕಳಿಸಬಹುದು.

ಪ್ರೊಫೆಸರ್ ಷ. ಶೆಟ್ಟರ್ ಅವರು ಈವರೆಗೆ 'ಕವಿರಾಜಮಾರ್ಗಮಂಥನ' ಮಾಲಿಕೆಯಲ್ಲಿ ಬರೆದ ೧೩ ಲೇಖನಗಳನ್ನು ಓದಿ ಎಚ್. ಎಸ್. ಶಿವಪ್ರಕಾಶ ಅವರು ಒಂದು ಲೇಖನ ಬರೆದು ಕಳಿಸಿದ್ದಾರೆ. ಇದನ್ನು ಪ್ರಸ್ತುತ ಸಂಚಿಕೆಯಲ್ಲಿ ಪ್ರಕಟಿಸಿದ್ದೇವೆ. ಶೆಟ್ಟರ್ ಅವರು 'ಕವಿರಾಜಮಾರ್ಗ' ಕುರಿತು ಬರೆದ ಹೊಸ ಲೇಖನವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

ಸಂಕಲನದಲ್ಲಿ ಪ್ರಕಟವಾದ ಶೆಟ್ಟರ್ ಅವರ ಇದುವರೆಗಿನ ಹದಿಮೂರೂ ಪ್ರಬುದ್ಧ ಲೇಖನಗಳು ಈಗ **'ಶಂಗಂ ತಮಿಳಗಂ ಮತ್ತು ಕನ್ನಡ ನಾಡು ನುಡಿ'** ಎಂಬ ಹೆಸರಿನಲ್ಲಿ ಪುಸ್ತಕ ರೂಪದಲ್ಲಿ ಪ್ರಕಟವಾಗಿವೆ. ಬೆಂಗಳೂರಿನ ಅಭಿನವ ಪ್ರಕಾಶನವು ಈ ಕೃತಿಯನ್ನು ಪ್ರಕಟಿಸಿದೆ. ಇದರ ಬೆಲೆ ರೂ. ೧೫೦/-. **ಸಂಕಲನ**ದ ಚಂದಾದಾರರಿಗೆ ಮತ್ತು ಓದುಗರಿಗೆ ಶೇ. ೨೫ ರ ರಿಯಾಯತಿ ಯಲ್ಲಿ ಇದನ್ನು ನೀಡಲಾಗುತ್ತದೆ. ಆಸಕ್ತರು ತಮಗೆ ಬೇಕಾದಷ್ಟು ಪ್ರತಿಗಳ ಮೊತ್ತವನ್ನು ಲೆಕ್ಕ ಹಾಕಿ ಡಿ.ಡಿ. ಅಥವಾ ಎಂ. ಓ. ಮೂಲಕ- ನ. ರವಿಕುಮಾರ, ಅಭಿನವ, ೧೭/೧೮-೨, ಒಂದನೇ ಮುಖ್ಯರಸ್ತೆ, ಮಾರೇನಹಳ್ಳಿ, ವಿಜಯನಗರ, ಬೆಂಗಳೂರು-೫೬೦ ೦೪೦- ಇವರಿಗೆ ಕಳಿಸಿ ಪ್ರತಿಗಳನ್ನು ಪಡೆಯಬಹುದು.

೧ ಸಪ್ಟಂಬರ್ ೨೦೦೭ **ಸಿದ್ಧಲಿಂಗ ಪಟ್ಟಣಶೆಟ್ಟಿ**

ಹೂಮನೆ, ಧಾರವಾಡ-೪ **ಹೇಮಾ ಪಟ್ಟಣಶೆಟ್ಟಿ**

ಒನ್ನೇಪುಟ

– ಸಿದ್ಧಲಿಂಗ ಪಟ್ಟಣಶೆಟ್ಟಿ

ಭಾಳ ದಿವಸದ ಮ್ಯಾಲ ಒಂದು ಒಳ್ಳೆಯ ಇಂಗ್ಲಿಶ್ ಪುಸ್ತಕ ಓದಿ ಮನಸ್ಸು ತುಂಬಿದ್ಹಂಗ ಆಗೇತಿ. ಜೇ ಪ್ಯಾರಿನಿ ರಚಿಸಿದ 'ದಿ ಲಾಸ್ಟ್ ಸ್ಟೇಶನ್' ಅನ್ನುವ ಸತ್ಯಾಧಾರಿತ ಐತಿಹಾಸಿಕ ಕಾದಂಬರಿಯನ್ನ ಓದಿದ ಯಾವ ವ್ಯಕ್ತಿಯೂ ತಮ್ಮ ಲಾಸ್ಟ್ ಸ್ಟೇಶನ್ ತಲುಪುವ ವರೆಗೂ ಈ ಕಾದಂಬರಿಯ ಒಳ ಧ್ವನಿತಂತುಗಳನ್ನ ಮರಿಯಾಕ ಸಾಧ್ಯ ಇಲ್ಲ.

ಆಕ್ಸ್‌ಫರ್ಡ್‌ದಲ್ಲಿರುವ ಪ್ರಖ್ಯಾತ ಅಮೆರಿಕನ್ ಕವಿ, ಕಾದಂಬರಿಕಾರ ಜೇ ಪ್ಯಾರಿನಿ ಈ ಮೊದಲು ಬರೆದ ಇಂಥದೇ 'ಥಿಯೊಡೋರ್ ರೊಯೆತ್‌ಕ : ಆ್ಯನ್ ಅಮೆರಿಕನ್ ರೊಮ್ಯಾಂಟಿಕ್' ಅನ್ನುವ ವಿಮರ್ಶಾ ಕೃತಿ ಪುಲಿತ್‌ಝರ್ ಪುರಸ್ಕಾರದ ಕೊನೆಯ ಆಯ್ಕೆ ಪಟ್ಟಿಯೊಳಗೂ ಇತ್ತು. ಲಿಯೊ ಟಾಲ್‌ಸ್ಟಾಯ್ ಅವರ ಬದುಕಿನ ಕೊನೆಯ ವರ್ಷದ ವಿವರಗಳನ್ನ ಹೇಳತಾ ಅವರ ಸಮಗ್ರ ಬದುಕನ್ನ ಈಗಷ್ಟೇ ನಮ್ಮ ಕಣ್ಣ ಮುಂದ ನಡ್ಯಾಕಹತ್ತೇತಿ ಅನ್ನವರ್ಹಂಗ ಚಿತ್ರಿಸುವ ಅದ್ಭುತ ಕಾದಂಬರಿ 'ದಿ ಲಾಸ್ಟ್ ಸ್ಟೇಶನ್' ಸಯ್ತ ಜಾರ್ಜ್ ವಾಶಿಂಗ್ಟನ್ ಕಿಡ್ ಪ್ರಶಸ್ತಿ ಮುಂತಾದುವನ್ನ ಪಡದಯ್ತಿ.

ರಶಿಯಾದ ಆಗಿನ ದೊರೆ ತ್ಸಾರ್‌ರಿಗೆ ಸಮಾನವಾದ ಸ್ಥಾನ, ಗೌರವ, ಘನತೆಗಳನ್ನ ಹೊಂದಿದ ಕೌಂಟ್– ಮಹಾಸರದಾರ– ಲಿಯೊ ಟಾಲ್‌ಸ್ಟಾಯ್ ೮೨ ವರ್ಷದ 'ಎಲ್ಲಾ ರೀತಿಯಿಂದ' ಅತ್ಯಂತ ಸಮೃದ್ಧವಾಗಿದ್ದ ಬದುಕನ್ನ ಬದುಕಿದ್ದ (೧೮೨೮–೧೯೧೦). 'ಯುದ್ಧ ಮತ್ತು ಶಾಂತಿ', 'ಆನ್ನಾ ಕರೆನಿನಾ', 'ಸತ್ಯನಿವೇದನೆ (ಕನ್‌ಫೆಶನ್)' ಮುಂತಾದ ಕೃತಿಗಳಲ್ಲದೆ, ಅನೇಕ ಪ್ರಸಿದ್ಧ ಕತೆಗಳನ್ನ ರಚಿಸಿದ್ದ ಟಾಲ್‌ಸ್ಟಾಯ್ ಸಂಪೂರ್ಣ ಅರ್ಥದಲ್ಲಿ ಒಬ್ಬ ಸಹಜ ಮನುಷ್ಯನಾಗಿದ್ದರೂ, ಮಹಾನ್ ಎತ್ತರಕ್ಕೆ ಏರಿದ ಪ್ರಬುದ್ಧ ಜೀವ ಆಗಿದ್ದ.

ಈ ಕಾದಂಬರಿ ಬಹಳ ವಿಶಿಷ್ಟವಾದದ್ದು. ಜೇ ಪ್ಯಾರಿನಿ ಟಾಲ್‌ಸ್ಟಾಯ್ ಹಾಗೂ ಅವನ ಕುಟುಂಬದ ಮತ್ತು ಸಮಕಾಲೀನರ ಎಲ್ಲಾ ಕೃತಿಗಳನ್ನ ಓದ್ಯಾನ, ತಿಳಕೊಂಡಾನ, ಅವುನ್ನ ತನ್ನ ಬರವಣಿಗೆಗೆ ಬಳಸಿಕೊಂಡಾನ. ಲಿಯೊ ಟಾಲ್‌ಸ್ಟಾಯ್, ಅವನ ಹೆಂಡತಿ ಸೋಫ್ಯಾ ಆಂಡ್ರೆಯೆವ್ನಾ, ಟಾಲ್‌ಸ್ಟಾಯ್ ಪಂಥ ನಿರ್ಮಿಸಿ, ನಿರ್ವಹಿಸಿದ ಪರಮಶಿಷ್ಯ ವ್ಲಾಡಿಮಿರ್ ಚೆರ್ಟ್‌ಕೊವ್, ಕಾರ್ಯದರ್ಶಿ ವ್ಯಾಲೆಂಟಿನ ಬಲ್ಗಾಕೊವ್, ಮಕ್ಕಳು ಇಲ್ಯಾ, ಲಿಯೊ, ಸೆರ್ಗೆಯ್, ತಾನ್ಯಾ, ಅಲೆಕ್ಸಾಂದ್ರಾ (ಸಾಶಾ), ಡಾ. ದುಶನ್ ಮ್ಯಾಕೊವಿಟ್‌ಸ್ಕಿ ಮುಂತಾದವರೆಲ್ಲರೂ ಆಗ ವಿವರವಾಗಿ ಬರೆದಿಟ್ಟಿದ್ದ ಡೈರಿಗಳನ್ನ ಆಳವಾಗಿ ಓದಿ, ಅಭ್ಯಸಿಸಿ; ಇತರರು ಬರೆದ ಜೀವನಚರಿತ್ರೆಗಳನ್ನ ಓದಿ, ತಿಳಕೊಂಡು; ಸ್ವತಃ ಟಾಲ್‌ಸ್ಟಾಯ್ ಬರೆದ ಎಲ್ಲಾ ಕೃತಿಗಳನ್ನ ಹೃದಯದೊಳಗ ಅಚ್ಚು ಹಾಕಿಕೊಂಡು ೨೯೦ ಪುಟದ ಈ ಕಾದಂಬರಿ ಬರೆದದ್ದು ಆಶ್ಚರ್ಯ. ಇದನ್ನ ಒಂದನ್ಸಲ ಓದಿದರೂ ಟಾಲ್‌ಸ್ಟಾಯ್‌ನ ಎಲ್ಲಾ ಕೃತಿಗಳನ್ನೂ ಓದಿದ್ಹಂಗ ಆಕ್ಕತಿ, ಸಮಕಾಲೀನರ ಎಲ್ಲಾ ಡೈರಿಗಳನ್ನೂ ಓದಿದ್ಹಂಗ ಆಕ್ಕತಿ, ಜೊತೆಗೆ ಅವೆಲ್ಲಾ ಪಾತ್ರಗಳ ಮಾತು–ಕತಿಯೊಳಗ, ಸ್ವಗತ–ಒಳತೋಟಿಗಳೊಳಗ ಬೆರತು ಜೀವಂತ ಸುತ್ತಾಡಿ ಬಂದ್ಹಂಗ ಆಕ್ಕತಿ.

ಸೋಫ್ಯಾ ಆಂಡ್ರೆಯೆವ್ನಾ, ಬಲ್ಗಾಕೊವ್, ಮ್ಯಾಕೊವಿಟ್‌ಸ್ಕಿ, ಸಾಶಾ, ಚೆರ್ಟ್‌ಕೊವ್ ಮತ್ತು ಸ್ವತಃ ಟಾಲ್‌ಸ್ಟಾಯ್‌ನ ಪತ್ರಗಳು, ಡೈರಿ, ಬರವಣಿಗೆಯ ಮೂಲಕ ಅವರವರೇ ತಮ್ಮ ಬದುಕಿನ ಕತೆ ಹೇಳಿದ್ಹಾಂಗ, ನೇರ ಆತ್ಮಕಥಾತ್ಮಕ ಶೈಲಿಯೊಳಗ, ಒಂದು ಕ್ರಮಬದ್ಧ ವಿಕಾಸಾತ್ಮಕ ಹಂತಹಂತದ ಮುಂದುವರಿಕೆಯ ರೂಪದೊಳಗ, ಅತ್ಯಂತ ಆಕರ್ಷಕ ರೀತಿಯೊಳಗ ಶತಮಾನದ ಸಾಹಿತ್ಯಿಕ, ಸಾಂಸ್ಕೃತಿಕ, ರಾಜಕೀಯ, ಯುದ್ಧ, ಹೋರಾಟ, ಸ್ವಾರ್ಥ, ತ್ಯಾಗಗಳ ಚಿತ್ರಗಳನ್ನ, ಒಂದು ಪ್ರತಿಷ್ಠಿತ ಕುಟುಂಬದ ಎಲ್ಲ ವಿವರಗಳನ್ನ ಬಿಚಮುಗ್ಗಿಯಾಗಿ ನೀಡುವುದರ ಜೊತೆಗೆ, ಪ್ರತಿಯೊಂದು ಪಾತ್ರದ ಭಯಂಕರ ತೊಳಲಾಟಗಳ, ನರಳಾಟಗಳ ಎಲ್ಲಾ ರಾಗ–ಸ್ವರಗಳನ್ನ

ನೇರವಾಗಿ ನುಡಿಸ್ತಾರ. ಆರಂಭದ ದಿನಗಳ ಕಾಮುಕ, ರಸಿಕ, ವಿನೋದಿ, ಕ್ರಾಂತಿಕಾರಿ, ವಂಚಕ, ವಿಲಾಸಿ, ಲೋಲುಪ, ಶ್ರೀಮಂತ ವ್ಯಕ್ತಿ ನಂತರದ ದಿನಗಳಲ್ಲಿ ಪೂರ್ಣ ಕ್ರಿಸ್ತಾವಲಂಬಿ, ಅಹಿಂಸಾವಾದಿ, ಭಗವತ್‌ತತ್ತ್ವಪ್ರೇರಕ, ಸರ್ವಪರಿತ್ಯಾಗಿ, ಕೃಷಿಕ ಪಕ್ಷಪಾತಿ ಏನೇನೆಲ್ಲಾ ಆದ. ಸ್ವತಃ ತನ್ನ ಮನೆಯೊಳಗ ಅವನಿಗೆ ಶಾಂತಿ, ಸಮಾಧಾನ, ನೆಮ್ಮದಿ ಸಿಗಲಿಲ್ಲ.

ಪ್ರೀತಿಯ ಮಗಳು ಸಾಶಾಳಿಗೆ ಮಾತ್ರ ಹೇಳಿ, ರಹಸ್ಯವಾಗಿ ಒಂದು ರಾತ್ರಿ ಡಾ. ಮ್ಯಾಕೊವಿಟ್‌ಸ್ಕಿಯ ಕೂಡ ಮನೆ ಬಿಟ್ಟು ಓಡಿಹೋದ. ಆ ಈ ಊರು ಸ್ಟೇಶನ್ ಅಂತ ಯಾರಿಗೂ ತಿಳೀದ್ಹಂಗ, ತನ್ನ ಹೆಂಡತಿಗಂತೂ ಗೊತ್ತೇ ಆಗದ್ಹಂಗ ದೂರ ಹೋಗಿ ಸಾಯಬೇಕು ಅಂತ ತಿರಗತಾ ತಿರಗತಾ ಅಸ್ಟಾಪೊವೊ ಅನ್ನುವ ಏನೇನೂ ಅನುಕೂಲ, ಸೌಲಭ್ಯ ಇಲ್ಲದ ಸ್ಟೇಶನ್ ತಲುಪಿದ. ಆ ಹಳ್ಳಿಯ ಪ್ಲ್ಯಾಟ್‌ಫಾರ್ಮಿನ್ಯಾಗ ಅನಿವಾರ್ಯವಾಗಿ ಕಡೆಯ ದಿನಗಳನ್ನ ಅತ್ಯಂತ ಜರ್ಜರಿತವಾಗಿ ದುರ್ಬಲನಾಗಿ ಕಳೆಯ ಬೇಕಾಯಿತು. ಯಾರಿಗೂ ತಿಳೀದ್ಹಂಗ ಸಾಯಬೇಕಂದ. ಆದರ ಜಗತ್ತಿನ ಎಲ್ಲಾ ದೇಶಗಳ ಮಾಧ್ಯಮ ಪ್ರತಿನಿಧಿಗಳು, ರಾಜಪ್ರಮುಖರು, ಕುಟುಂಬದವರು ಅಸ್ಟಾಪೊವೊಕ್ಕ ಬಂದರು. ಅವರೆಲ್ಲರೂ ಟಾಲ್‌ಸ್ಟಾಯ್‌ನ ಸಾವಿನ ಒಂದೊಂದು ಕ್ಷಣದ ವಿವರಗಳನ್ನ ಸಯ್ತ ಪಡೀತಿದ್ದರು. ಅಂಥಾ ಹೊತ್ತಿನ್ಯಾಗೂ ಅವನ ಪಾಲಿಗೆ ಟಾಲ್‌ಸ್ಟಾಯ್‌ನ ಸ್ವಂತದ ಏಕಾಂತದ ಸಾವಿನ ಅನಿವಾರ್ಯ ಅನುಭವ ಅವನಿಗೆ ಸಿಗೂಹಂಗ ಮಗಳು ಸಾಶಾ, ಮ್ಯಾಕೊವಿಟ್‌ಸ್ಕಿ ಮತ್ತು ಚೆರ್ಟ್‌ಕೊವ್ ಮಾಡಿದರು.

ಶೇಕ್ಸ್‌ಪಿಯರ್ ಇಂಗ್ಲಂಡದ ದೊಡ್ಡ ನಾಟಕಕಾರ ಹೌದು. ಆದರ ಆತ ತನ್ನ ನಾಟಕಗಳಲ್ಲಿ ಎಲ್ಲಾ ಪಾತ್ರಗಳಲ್ಲಿ ತಾನ್‌ಅ ಹರವಿ ಹಂಚಿಕೊಂಡು ಆವರಿಸಿಕೊಂಡಿರತಾನ. ನಿಜವಾದ ದೊಡ್ಡ ಲೇಖಕ ಯಾವುದಾದರೂ ಒಂದು ನೇರ ಪಾತ್ರದೊಳಗ ತುಂಬಿಕೊಂಡು ಸ್ಪಷ್ಟವಾಗಿ ಓದುಗರ ಎದುರಿಗೆ ನಿಲ್ಲಬೇಕು. ತನ್ನ ಅಭಿಪ್ರಾಯ, ವಿಚಾರಗಳನ್ನ ಓದುಗರಿಗೆ ಮುಖಾಮುಖಿ ಅನ್ನೂಹಂಗ ಹೇಳುವ ಪಾತ್ರವಾಗಬೇಕು. ಆಗ ಆ ಲೇಖಕ ಮಹಾನ್ ಆಗತಾನ ಅಂತ ಸ್ಪಷ್ಟವಾಗಿ ಹೇಳಿದ್ದ ಟಾಲ್‌ಸ್ಟಾಯ್ ತನ್ನ ಬರವಣಿಗೆಯೊಳಗ ಅದನ್ನ ಸಾಧಿಸಿದ.

ಭಾರತದ ಬಗ್ಗೆ, ಭಗವದ್ಗೀತಾದ ಬಗ್ಗೆ ಅಪಾರ ಪ್ರೀತಿ, ಗೌರವ ಹೊಂದಿದ್ದ ಟಾಲ್‌ಸ್ಟಾಯ್ ಮತ್ತು ಮಹಾತ್ಮಾ ಗಾಂಧೀ ನಡುವ ಸಂಪರ್ಕ ಇತ್ತು, ಪತ್ರವ್ಯವಹಾರ ಇತ್ತು, ಆತ್ಮಿಕ ಸಂಬಂಧ ಇತ್ತು. ಹಿಂಗಾಗಿ ಟಾಲ್‌ಸ್ಟಾಯ್ ಭಾರತೀಯರಿಗೆ ಭಾಳ ಹತ್ತಿರದಾವ್ನ ಅನಿಸ್ತಾನ.

ಇಲ್ಲ... ಇಲ್ಲಿಯ ಎಷ್ಟೋ ವಿವರಗಳನ್ನ ನನಗ ಬರ‍್ಯಾಕ, ಹೇಳಾಕ ಆಗವಲ್ಲದು... 'ಡಾ ವಿಂಚಿ ಕೋಡ್' ಓದಾಕ್ಹತ್ತಿದ್ದೆ, ಅದನ್ನ ಬಿಟ್ಟು ನೋಡೂಣು ಅಂತ ಕುತೂಹಲದಿಂದ 'ಲಾಸ್ಟ್ ಸ್ಟೇಶನ್'ದ ಒನ್ನೇ ಪುಟಾ ಓದಿದೆ, ಮುಂದಿನ ಪುಟ ತಾನ್ ಓದಿಸಿಕೊಂಡಿತು, ಉಳಕೀ ಪುಟಾ ಹಿಡಕೊಂಡಬಿಟ್ಟವು, ಈಗ ನಾನ್‌ಅ ಮುಗದಬಿಟ್ಟೇನಿ... ಕಣ್ತುಂಬ, ಮನಸಿನ ತುಂಬ ಭಾವ–ವಿಚಾರಗಳ ತುಂಬ ಲೇಖಕ ಟಾಲ್‌ಸ್ಟಾಯ್ ಮತ್ತು ಒಂದು ಕಾಲಕ್ಕ ತಾನೂ ಲೇಖಕಿ ಆಗಿದ್ದ ಅವನ ಹೆಂಡತಿ ಸೋಫ್ಯಾ. ಅವರು ಇಬ್ಬರೂ ಪರಸ್ಪರರಿಗೆ ಬೇಕಾಗಿದ್ದು, ಬ್ಯಾಡಾಗಿದ್ದು, ಒಬ್ಬರನ್ನೊಬ್ಬರು ಕಾಡಿದ್ದು, ತಿವಿದಿದ್ದು, ಹಾಳುಗೆಡವಿದ್ದು, ಹಠಗಳನ್ನ, ಸ್ವಾರ್ಥಗಳನ್ನ ಸಾಧಿಸಿದ್ದು ಇವನ್ನೆಲ್ಲಾ ನಮ್ಮ ಎಲ್ಲಾ ಲೇಖಕರು, ಲೇಖಕಿಯರು, ಕಲಾವಿದರು, ಅದರಾಗೂ ಗಂಡಾ ಹೇಣತಿ ಇಬ್ಬರೂ ಸಾಹಿತ್ಯ–ಕಲಾ–ಸಂಸ್ಕೃತಿ ಲೋಕದೊಳಗ ಇದ್ದವರಂತೂ ಓದಲೇಬೇಕು.

'ದಿ ಲಾಸ್ಟ್ ಸ್ಟೇಶನ್' ಟಾಲ್‌ಸ್ಟಾಯ್ ಬದುಕಿನ ಒಂದೊಂದು ಕ್ಷಣದ ಕೊನೆಯ ನಿಲುಗಡೆ. ಬದುಕಿನ ಕೊನೆಯ ಉಸಿರು ಕಳೆದ ಸ್ಟೇಶನ್. ಕೊನೆಯ ನಿರ್ಧಾರದ ಸ್ಟೇಶನ್. ಏನೇನೂ ಹೆಸರಿಲ್ಲದ ಅಸ್ಟಾಪೊವೊ ಜಗತ್ಪ್ರಸಿದ್ಧವಾದ ಅಸ್ಟಾಪೊವೊ ಅನ್ನಿಸಿಕೊಂಡ ಕತೆ, ಸಂಶೋಧನೆ, ವಿವರಣೆ, ಸಮಾಧಾನ, ನೆಮ್ಮದಿ ನೀಡುವ ಬರೆಹ.

ಮೆರೀನ್ ಡ್ರೈವ್‌ನ ದಂಡೆಯಲ್ಲಿ ಒಂದು ಸಂಜೆ

ಮಿತ್ರಾ ವೆಂಕಟ್ರಾಜ

ಆ ದಿನ ಕಣ್ಣು ಬಿಡುವ ಮೊದಲೇ ಅಂದಿನ ಬೆಳಗು ಅವಳ ಕಿವಿಯಲ್ಲಿ ಏನೋ ಪಿಸುಗುಟ್ಟಿದಂತೆ ಎನಿಸಿದ್ದು ಹೌದೇ?

ಹಾಸಿಗೆ ಬಿಟ್ಟೆದ್ದು, ಬ್ರಶ್ಶಿಗೆ ಪೇಸ್ಟು ಹಚ್ಚುವಾಗ ಮನಸ್ಸಿಗೆ ಅದೇನೋ ನಿರಾಳತೆ ಆವರಿಸಿದಂತೆ ನಿಸಿತು. ಅರ್ಥವಾಗದ ಕನಸು ಮುಗಿದ ನಿರಾಳತೆ ಅದು. ಅಥವಾ...? ಒಂದು ಕನಸಿನಿಂದ ಇನ್ನೊಂದು ಕನಸಿಗೆ ಹೊಗ್ಗುವ ಮಧ್ಯಂತರವೇ? ಅದು ಹೇಗೋ ಅವಳು ಆ ಗೋಡೆಯ ಒಳಗೆ ಸಿಕ್ಕಿಬಿದ್ದಿದ್ದಳು. ಸಿಮೆಂಟು, ಹೊಯಿಗೆ ಮೆತ್ತಿಕೊಂಡು ಉಸಿರು ಕಟ್ಟಿಸುತ್ತಿದ್ದುವು. ಒದ್ದಾಡಿ ಕೊಂಡು ಮುಂದೆ ಹೋಗಲು ಹೆಣಗುತ್ತಿದ್ದಾಗಲೇ, ತಾನು ಗೋಡೆಯೊಳಗಿದ್ದೇನೆಂದು ಅವಳಿಗೆ ತಿಳಿದದ್ದು. ಬಿರುಕನ್ನು ಕೈಯಲ್ಲಿ ಕೆರೆಸುತ್ತಿದ್ದಳು; ಮೊಣಗೈಯಿಂದ ದೂಡುತ್ತಿದ್ದಳು; ಮುಷ್ಟಿಯಿಂದ ಕುಟ್ಟುತ್ತಿದ್ದಳು... ಒಂದು ಗೆರೆ ಬೆಳಕು, ಎರಡು ಹನಿ ಗಾಳಿ...

ಚಾ ಕುಡಿದು ಲೋಟೆ ಹರಪಿ ಇಟ್ಟವಳು, ಕೆಲಸದವಳ ಹತ್ತಿರ, 'ಚಲೋ ಊಪರ್', ಎಂದಳು. ಇಬ್ಬರೂ ಮೇಲೆ ಟೆರೇಸಿಗೆ ಹೋಗಿ ಮುಂಚಿನ ದಿನ ಮಾಡಿಟ್ಟ ಸಂಡಿಗೆಗಳನ್ನು ಒಣಗಲು ಹಾಕಿ ಬಂದರು. ಅವಳ ಅತ್ತೆ ಅಡುಗೆಮನೆಯಲ್ಲಿ ಉಪ್ಪಿನಕಾಯಿಯ ತಯಾರಿ ಯಲ್ಲಿದ್ದರು. 'ನೋಡು ಪ್ರಭಾವತಿ, ಇಷ್ಟು ಮೆಣಸು ಸಾಕಲ್ಲವೇ?' ಎಂದರು. ಮಿಕ್ಸಿಯಲ್ಲಿ ಮೆಣಸು ಹಾಕಿ ಪ್ರಭಾವತಿ ಅರೆಯುವಾಗ ಅವಳ ಅತ್ತೆ ಹೇಳುತ್ತಿದ್ದರು, 'ಈ ಹೆಂಗಸಿಗೆ ಸೊಕ್ಕು ಉಂಟು ಸ್ವಲ್ಪ ಅಲ್ಲ. ನನ್ನ ಮಾತೆಂದರೆ ಮಾ ಸಸಾರ. ಹೀಗೆ ಆದರೆ...' ಕೆಲಸದವಳು ಅವರ ಮಾತಿಗೆ ಲಕ್ಷ್ಯ ಕೊಡುವುದಿಲ್ಲವೆಂಬುದು ಅವರ ಎಂದಿನ ದೂರಾಗಿತ್ತು.

ಪ್ರಭಾವತಿ ಕೆಲಸದವಳನ್ನು ಕರೆದು, ಅತ್ತೆಯವರ ವಸ್ತ್ರವನ್ನು ಸರಿಯಾಗಿ ಬ್ರಶ್ಶಿನಲ್ಲಿ ತಿಕ್ಕಿ ತೊಳೆಯುವಂತೆ ಹೇಳಿ, 'ನೋಡು, ಬಾಯಿ, ನಿನ್ನದು ಅತಿಯಾಯಿತು. ಹೀಗೆ ಮಾಡಿದರೆ...' ಎಂದು ಹೆದರಿಸಿದಳು.

ಸ್ನಾನಮಾಡಿ ಭುಜದವರೆಗಿನ ಕೂದಲನ್ನು ಒರೆಸುತ್ತ ಬಾಲ್ಕನಿಗೆ ಬಂದು ಬೈರಾಸವನ್ನು ಕೊಡಕಿ ಹಗ್ಗದ ಮೇಲೆ ಹರಹುವಾಗ, 'ಮ್ಮಾ...' ಎಂಬ ಆರ್ತ ಸ್ವರ.

ಹದಿನಾರು ವರ್ಷದ ಅವಳ ಹಿರಿಯ ಮಗಳು ಪಮ್ಮಿಗೆ ಗೊತ್ತಿದ್ದುದು ಅದೊಂದೆ ಶಬ್ದವಾದರೂ, ಅಷ್ಟರಲ್ಲೇ ಅವಳು ಎಲ್ಲವನ್ನೂ ವ್ಯಕ್ತಪಡಿಸುತ್ತಿದ್ದಳು. 'ಅಮ್ಮ... ಮ್ಮಾ... ಆ... ಆ...' ಎಂಬ, ನೀನು ತಡಮಾಡಿದಿ ಎಂಬರ್ಥದ ಆಕ್ಷೇಪಣೆಯ ದನಿಯೊಂದಿಗೆ ನೀರಿನ ಲೋಟೆ ಉರುಳಿದ ಸದ್ದು.

ಶಾಲೆಯ ಸಿದ್ಧತೆಯಲ್ಲಿದ್ದ ಎರಡನೆಯ ಮಗಳು ರಶ್ಮಿ, 'ಅಮ್ಮಾ, ನನ್ನ ಯೂನಿಫಾರಂ ಎಲ್ಲ ಚಂಡಿ. ನಂಗೊತ್ತಿಲ್ಲ. ಈ ಪಮ್ಮಿಯೊಬ್ಬಳು...' ಎಂದು ಕಾಲು ಬಡಿಯತೊಡಗಿದ್ದಳು. ಪ್ರಭಾ ಅಲ್ಲಿಗೆ ಧಾವಿಸಿ, ಬಿದ್ದ ನೀರಿನ ಮೇಲೆ ಒರಸರಿವೆಯನ್ನು ಹಾಕಿ, ಕಾಲಿನಿಂದ ಅದನ್ನು ಒರೆಸುತ್ತ, ಪಮ್ಮಿಯನ್ನು ಮೈಗಾನಿಸಿಕೊಂಡು ರಮಿಸತೊಡಗಿದಳು.

ಅಮ್ಮನ ಸಾಮೀಪ್ಯದ ನೆಮ್ಮದಿಯಿಂದ ಪಮ್ಮಿಯ ಗಂಟಲಿಂದ ಹೊರಟ, 'ಅ... ಗ್ಹ... ಗ್ಹ... ಕ್ಹಾ...' ಗುಳುಗುಳು ಸ್ವರವು ಪ್ರಭಾಳ ಒಳಗೆ ಸುಖದ ಬೆಚ್ಚನೆ ಅಲೆಗಳನ್ನು ಹರಡಿಸಿತು.

'ಹಾ, ಏನು ಗಲಾಟೆ? ಎಂದು ಬಚ್ಚಲುಮನೆಯಿಂದ ಇಣಿಕಿದ ಸದಾನಂದ, 'ಕೂಗಬೇಡ, ರಶ್ಮಿ, ಒದ್ದೆ ಯೂನಿಫಾರ್ಮಿಗೆ ಇಸ್ತ್ರಿ ಹಾಕಿ ನೋಡುವ, ತಡಿ' ಎಂದು ರಶ್ಮಿಗೆ ಸಮಾಧಾನ

ಮಾಡಿದ. ಇಸ್ತ್ರಿಪೆಟ್ಟಿಗೆ ಹುಡುಕುತ್ತ ಅವನು ಹೇಳುತ್ತಿದ್ದ, 'ನನಗೆ ಗೊತ್ತಿತ್ತು, ಏನಾದರೂ ಒಂದು... ದಿನಾ ತಡವಾಗಲೇ ಬೇಕು...'

ಒಂದೊಂದೇ ಚಿಮಟಿ ಇಡ್ಲಿಯ ತುಂಡನ್ನು ಬೆರಳಲ್ಲಿ ಹಿಚುಕಿ ಸಕ್ಕರೆ-ಬೆಣ್ಣೆ ಬೆರೆಸಿ ಪಮ್ಮಿಯ ಬಾಯಿಗೆ ಹಾಕುತ್ತ, ಅದರ ಎಡೆಯಲ್ಲಿ ಮೊಸರನ್ನವನ್ನು ಕಲಸಿ ಡಬ್ಬಿಗೆ ತುಂಬಿಸಿ, ರಶ್ಮಿಯ ಚೀಲಕ್ಕೆ ತುರುಕಿದಳು.

ರಶ್ಮಿಯ ಕೋಣೆಗೆ ಹೋಗಿ ನಿಂತರೆ, ಗಡಿಬಿಡಿಯ ನಿರ್ಗಮನದ ಎಲ್ಲ ಲಕ್ಷಣಗಳೂ ಅಲ್ಲಿದ್ದವು. ಪುಸ್ತಕಗಳನ್ನು ಸರಿಮಾಡಿ ಇಡಲು ಹೋಗಿ, ಒಂದೆರಡು ಪುಸ್ತಕಗಳನ್ನು ಅತ್ತಿತ್ತ ಮಗುಚಿ, ಮತ್ತೆ ಅಲ್ಲೇ ಒಂದನ್ನು ಹಿಡಿದು ಓದುತ್ತ ಕುಳಿತುಬಿಟ್ಟಳು.

'ಭಾಭೀ...' ಎಂದು ಕೆಲಸದವಳು ಕರೆದಾಗ ಚರಿತ್ರೆ ಪುಸ್ತಕದ ಹಾಳೆಗಳೊಳಗಿಂದ ಹೊರಬಂದವಳು, ಮೆಶಿನ್ನಿಗೆ ಹಾಕುವ ತೊಳೆಯುವ ವಸ್ತ್ರಗಳನ್ನು ಹೆಕ್ಕಿ ತೆಗೆದು ಕೊಟ್ಟಳು. ಅಷ್ಟರಲ್ಲಿ, ಟೆಲಿಫೋನಿನ ಗಂಟೆ ಉದ್ದಾನುದ್ದಕ್ಕೂ ಬಡಿದುಕೊಂಡಿತು.

ಅತ್ತೆ ಕೂಗಿದರು, 'ನೋಡು ನೋಡು, ರೂಪನ ಫೋನು.'

'ಓ, ಹೇಳಿದ ಹಾಗೆ, ರೂಪತ್ತಿಗೆ ನಾಳೆ ಬರುವವಳಿದ್ದಾಳೆ'ಂಬುದು ನೆನಪಾದುದು ಆಗಲೇ.

'ಅತ್ತಿಗೆ, ನೀ ಗಾಬರಿಯಾಗುದು ಬೇಡ. ಬೆಳಿಗ್ಗೆ ೬ ಕ್ಕೆ ಗಾಡಿ ಕುರ್ಲಾಕ್ಕೆ ಬರುವಾಗ ಸ್ಟೇಶನ್ನಿನಲ್ಲಿ ನಾವು ಇರುತ್ತೇವೆ', ಎಂದು ರೂಪಳಿಗೆ ಆಶ್ವಾಸನೆ ಕೊಟ್ಟಳು.

ಅತ್ತೆ ಸೊಸೆ ಕುಳಿತು ಮರುದಿನ ರೂಪ, ಮಕ್ಕಳು ಬಂದಾಗ ಏನೇನು ಅಡಿಗೆ ಮಾಡುವುದೆಂದು ಲೆಕ್ಕ ಹಾಕಿದರು. ಅವಳು ಮಕ್ಕಳಿಗಿಷ್ಟವಾದ ಚೈನೀಸ್ ನೂಡಲ್ಸ್ ಮತ್ತು ಮಂಚೂರಿಯನ್ ಮಾಡುವ ಯೋಚನೆಯನ್ನು ಹೇಳಿದಳು. ಅತ್ತೆಯೆಂದರು, 'ಅಯ್ಯೋ, ಮಕ್ಕಳಿಗೆ ಇಷ್ಟ, ನಿನಗೆ ಬೇರೆ ಕೆಲಸವಿಲ್ಲ. ಸುಮ್ಮಸುಮ್ಮನೆ... ಅದನ್ನೆಲ್ಲ ಹಚ್ಚಿಸಿಕೊಂಡು... ನಿನ್ನ ಉಮೇದಿಗೆ ಅಡ್ಡಿಲ್ಲ.' ಎಂದು ಖುಶಿಯಲ್ಲಿ ಹೇಳುತ್ತ, 'ರವೆ ಉಂಡೆಯನ್ನು ಇವತ್ತೇ ಮಾಡಿಡುವ, ಆಗದಾ? ಊಟ ಆದ ಮೇಲೆ ರವೆ ಹುರಿದು ಕೊಡುತ್ತೇನೆ,' ಎಂದರು. ಅವರ ಮಾತುಗಳನ್ನು ಕೇಳುತ್ತ, ಅವಳ ಮನಸ್ಸು ಎಲ್ಲಿಯೋ ಹೋಯಿತು.

ತನ್ನ ಬಗ್ಗೆ ಎಲ್ಲರೂ ಹಾಗೇ ಹೇಳುವವರಲ್ಲವೇ? 'ನೀನು ಎಷ್ಟು ಚುರುಕು, ಚೂರೂ ಉದಾಸೀನ ಇಲ್ಲಲ್ಲ ನಿಂಗೆ, ಸಾಕು' ಎನ್ನುತ್ತಿದ್ದಳು ಗೆಳತಿ ನೀನಾ. 'ನಿನಗೆ ಎಷ್ಟು ಉತ್ಸಾಹ, ಎಲ್ಲದರಲ್ಲೂ ಅದೆಷ್ಟು ಉಮೇದು. ಎಲ್ಲಿಂದ ಸ್ಟೇಮಿನಾ ನಿಂಗೆ ಹೇಳು' ಎನ್ನುತ್ತಿದ್ದರು ಜನ. ಹೌದೇ ಎಂದುಕೊಂಡಳು. ಎಂತಹ ವಿಪರ್ಯಾಸ. ಸುಳ್ಳೆ ಸುಳ್ಳು. ಬಹುಶಃ ಅದು ಅವಳ ಗುಣವಾಗಿರಲೇ ಇಲ್ಲ. ಶ್ಶೇ, ಅವಳು ಅವಳಾಗಿಯೇ ಇರುವುದು ಸಾಧ್ಯವಾಗಿದ್ದರೆ, ಒಂದರೆಕ್ಷಣದ ಮಟ್ಟಿಗಾದರೂ.

ಅವಳು ಒಣಗಿದ ಕೂದಲನ್ನು ಬಾಚಲೆಂದು ಕೋಣೆಗೆ ಹೋಗಿ, ಕನ್ನಡಿಯ ಮುಂದೆ ನಿಂತಳು. ಕೆಲಸದ ಸುಸ್ತು, ಮನಸ್ಸಿನ ಆಯಾಸ, ಬೇಸಿಗೆಯ ಕಡು ಸೆಕೆಗಳಿಂದಾಗಿ ಮುಖವೆಂಬುದು ಬೇಯಿಸಿದ ಬದನೆಕಾಯಿಯ ಹಾಗೆ ಆಗಿರಬಹುದೆಂದು ಖಿನ್ನತೆಯಲ್ಲಿಯೇ ಕಣ್ಣು ಹಾಯಿಸಿದರೆ, ಅವಳಿಗೆ ಅಚ್ಚರಿಯಾಯಿತು. ಸೂಕ್ಷ್ಮವಾಗಿ ತನ್ನನ್ನೇ ದಿಟ್ಟಿಸಿ ನೋಡಿಕೊಳ್ಳತೊಡಗಿದಳು.

ಉರುಟೆನ್ನಬಹುದಾದ ಮುಖದಲ್ಲಿ ತೆಳ್ಳಗಿನ ಹುಬ್ಬುಗಳು, ಮೀನಿನಾಕಾರದ ತೀರ ಸಣ್ಣ ಕಣ್ಣುಗಳು, ಮೂಗು ಸ್ವಲ್ಪ ಚಟ್ಟೆಯೆನಿಸಿತು ಅವಳಿಗೆ. ಮೂಗು ಮೇಲೆ ಮಾಡಿ ಸೇದುವ ದನಿ ಹೊರಡಿಸಿದಳು. ಹಲ್ಲುಗಳ ಬಿಳಿಯ ಸಾಲುಗಳನ್ನು ನೋಡಿಕೊಂಡಳು. ಬಾಯಿಯನ್ನು ಒಮ್ಮೆ

ಅಗಲ ಮಾಡಿ, ಇನ್ನೊಮ್ಮೆ ವಾರೆ ಮಾಡಿ ಮೃದುವಾಗಿ ನಕ್ಕಳು. ಕಣ್ಣ ಮೇಲೆ ಹಾದು ಬಂದ ಉದ್ದದ ಬೆಳ್ಳಿ ಕೂದಲೆಳೆಯನ್ನು ಸೀಟಿ ಕಿವಿಯ ಹಿಂದೆ ಸರಿಸಿದಳು.

ಇನ್ನು ನಿಜವಾದ ತಾನು ಕಾಣುತ್ತಿದ್ದೇನೆಯೇ ಅಲ್ಲಿ? ಅಯ್ಯೋ, ಎಂತಹ ಹೇಯತನ. 'ನಿನಗೆ ನಿಜವಾಗಿ ಬಿರುದು ಕೊಡಬೇಕು, ಪ್ರಭಾವತಿ, ಯಾವ ರೀತಿ ನಿನ್ನನ್ನು ನೀನು ರೂಪಿಸಿಕೊಂಡಿದ್ದಿ ಮತ್ತು ಅದಕ್ಕೆ ಸರಿಯಾಗಿ ಸದಾ ನಡೆಯುತ್ತಿರುತ್ತಿಯಲ್ಲ.' ಎಂದು ತನ್ನನ್ನೇ ಹೀಯಾಳಿಸಿಕೊಂಡಳು. ಈಗ ಒಬ್ಬಳೇ ಇರುವಾಗಲೂ ನಟಿಸುವ ಅಗತ್ಯವೇನು? ಕೇವಲ ಸ್ವಲ್ಪವೇ ತುಟಿಯನ್ನಗಲಿಸಿ ಮುಗುಳ್ನಗೆ ಸೂಸಿದರಷ್ಟೇ ಒಂದು ಕೋಡು ಮೂಡುವುದೋ? ದುಃಖವಾದರೆ ಒಮ್ಮೆ ಬಿಕ್ಕಳಿಸಿ ಅತ್ತುಬಿಡಬಹುದಲ್ಲ. ಸಿಟ್ಟು ಬಂದರೆ ಸಿಡುಕಲಿಕ್ಕೇನು ಅಥವಾ ಕೋಪದಿಂದ ಒಂದು ಹುಬ್ಬು ಗಂಟಿಕ್ಕಲಿಕ್ಕೂ ಪರವಾನಿಗೆ ಬೇಕೇ ಹೇಗೆ?

ಕಣ್ಣಲ್ಲಿ ಕಣ್ಣಿಟ್ಟು ನೋಡುವಾಗ ನಿಜವಾದ ಪ್ರಭಾಳ ಛಾಯೆ ಮಾತ್ರ ಕಂಡಂತಾಯಿತು: ಮಬ್ಬಾದ, ಅಸ್ಪಷ್ಟ ಛಾಯೆ. ಯಾವ ಕೆಲವೇ ಸಣ್ಣ ಸೂಕ್ಷ್ಮ ಗಳಿಗೆಗಳಲ್ಲಿ ಅವಳು ಅವಳಾಗಿಯೇ ವ್ಯಕ್ತವಾಗುವಳೋ ಆ ಛಾಯೆ. ತಾನು ಸದಾ ಅದೇ ಪ್ರಭಾಳಾಗಿರುವುದು ಸಾಧ್ಯವಾಗಿದ್ದರೆ ಎಂದು ಕೊಂಡಳು.

ಇರುವ ಒಂದು ಜೀವನದಲ್ಲಿ ಏನನ್ನೆಲ್ಲ ಸಾಧಿಸಬಹುದು. ಜೀವನ ಸಾಗುತ್ತಿದ್ದಂತೆ ಯಾವುದೇ ವ್ಯಕ್ತಿ ಒಂದು ನಿರ್ದಿಷ್ಟ ಅಚ್ಚಿನಲ್ಲಿ ಬಿದ್ದನೆಂದರೆ ಮತ್ತೆ ಜೀವನಪೂರ್ತಿ ಅಲ್ಲೇ ಇರಬೇಕಾಗುವ ಪರಿಸ್ಥಿತಿಯ ಬಗ್ಗೆ ಅವಳಿಗೆ ವಿಚಿತ್ರವೆನಿಸಿತು.

ಬಿದ್ದ ಅಚ್ಚಿನಿಂದ ಸ್ವಲ್ಪವಾದರೂ ಮೇಲೇಳುವಂತಾದರೆ?

ಅಚ್ಚಿನ ಎರಕವನ್ನು ತುಸುವಾದರೂ ಬದಲಾಯಿಸುವಂತಾದರೆ...?

ಗೋಡೆಯ ಬಿರುಕನ್ನು ಚೂರಾದರೂ ಒಡೆದಲ್ಲಿ ಗಾಳಿಯ ಒಂದೇ ಒಂದು ಅಲರು ಒಳಗೆ ನುಳಿದೀತೆಂದು ತಾನು ಕನಸಿನಲ್ಲಿ ಒದ್ದಾಡಿದ್ದು ಅವಳಿಗೆ ನೆನಪಾಯಿತು.

ಮಧ್ಯಾಹ್ನದ ಊಟ ಮುಗಿದ ಮೇಲೆ ಪಮ್ಮಿಯನ್ನು ಮಲಗಿಸಿಟ್ಟವಳು, ಬಾಗಿಲು ಮುಂದುಮಾಡಿಕೊಂಡು ಹೊರಗೆ ಕಾಲಿಟ್ಟಳು.

ಮನೆಯಿಂದ ಕೆಳಗಿಳಿದರೆ, ಕಬ್ಬಿನ ರಸದ ಅಂಗಡಿ, ಮುಂದೆ ನಾಲ್ಕು ಹೆಜ್ಜೆ ನಡೆದರೆ ನೀಲಗಿರಿ ಮರಗಳ ಪಾರ್ಕು. ಅದೇ ದಾರಿಯಲ್ಲಿ ಮುಂದೆ ಹೋದರೆ ನಿಲ್ದಾಣಕ್ಕೆ ಒಂದೇ ಮಾರು. ನಾಲ್ಕೈದು ನಿಮಿಷಗಳಲ್ಲಿ ಅವಳು ಅಂಧೇರಿ ನಿಲ್ದಾಣ ತಲಪಿ ಟಿಕೇಟು ಕೌಂಟರಿನೆದುರು ನಿಂತಿದ್ದಳು.

ಅವಳು ಉದ್ದೇಶಪೂರ್ವಕವಾಗಿ ನಿಧಾನದ ಗಾಡಿಯನ್ನೇ ಆರಿಸಿದಳು. ಸಾವಕಾಶವಾಗಿ ಎಲ್ಲ ನಿಲ್ದಾಣಗಳನ್ನು ಅನುಭವಿಸಿಕೊಂಡು ಹೋಗಬೇಕಿತ್ತು ಅವಳಿಗೆ. ದಿನಾ ಹೋಗಿ ಬರುವವರಂತೆ ಮುಖವಾಡ ಮಾಡಿಕೊಂಡು, ಸುತ್ತಲೂ ಕಣ್ಣು ಹಾಯಿಸುತ್ತ, ಪ್ಲಾಟ್‌ಫಾರ್ಮ್‌ನ ಮೆಟ್ಟಿಲುಗಳನ್ನು ಹತ್ತಿ, ಚರ್ಚ್‌ಗೇಟಿಗೆ ಹೋಗುವ ಲೋಕಲ್ ಏರಿ ತಣ್ಣಗೆ ಕುಳಿತಳು. ಎಷ್ಟು ಬೇಗ ಈ ಜನಜಂಗುಳಿಯಲ್ಲಿ ಒಂದಾಗಿ ಬಿಡಬಹುದಲ್ಲ ಎಂಬುದೇ ಈ ನಗರದಲ್ಲಿ ಅವಳಿಗೆ ಅತ್ಯಂತ ಖುಶಿ ಕೊಡುವ ವಿಷಯಗಳಲ್ಲೊಂದಾಗಿತ್ತು.

ಚರ್ಚ್‌ಗೇಟಿನಲ್ಲಿ ಅವಳು ಇಳಿದಾಗ ಸಂಜೆಯ ಬಿಸಿಲು ಇಳಿಮುಖವಾಗುತ್ತ ಬಂದಿತ್ತು. ನಿಲ್ದಾಣದಿಂದ ಹೊರಬರುತ್ತಾ, ಆಫೀಸು ಮುಗಿಸಿ ಮನೆಗೆ ಹೋಗುವ ಜನಸ್ತೋಮಕ್ಕೆ ಎದುರಾಗಿ ಹೆಜ್ಜೆ ಹಾಕತೊಡಗಿದಳು. ಗುರುತು ಪರಿಚಯವಿಲ್ಲದ ಸಾವಿರಾರು ಮುಖಗಳು ಒಂದೇಸಮನೆ

ಥಾಪಿಸುವ ರೀತಿ ಅವಳಲ್ಲಿ ವಿಚಿತ್ರ ಆತ್ಮವಿಶ್ವಾಸವನ್ನು ತುಂಬತೊಡಗಿತು.

ಮರೀನ್ ಡ್ರೈವ್‌ನ ದಂಡೆಯ ಮೇಲೆ ಕುಳಿತು ಎದುರಿನ ಸಮುದ್ರ, ಆಕಾಶ, ಸೂರ್ಯನನ್ನು ಒಂದೆಂದೂ ನೋಡದಂತೆ ನೋಡಿದಳು. ಕೆಲವು ಗಳಿಗೆಗಳು ಯಾವುದೇ ಕೆಲಸಕ್ಕೆ ಹೇಳಿಸಿರುವುದಿಲ್ಲ. ಅವು ಬರೇ ಶ್ವಾಸವನ್ನು ಒಳಗೆಳೆದುಕೊಳ್ಳುವುದಕ್ಕೆ ಮಾತ್ರ ಇದ್ದಂತಿರುತ್ತವೆ; ಇದು ಅಂತಹ ಒಂದು ಅಪೂರ್ವ ಗಳಿಗೆ ಎಂದುಕೊಳ್ಳುತ್ತ ದೀರ್ಘ ಶ್ವಾಸವೊಂದನ್ನು ಎಳೆದುಕೊಂಡಳು.

ಪಶ್ಚಿಮದ ಆಗಸದ ಸ್ವಚ್ಛ ಬೆಳಕು ಪೂರ್ವದ ಮರಗಳ ಮೇಲೆ ಬಿದ್ದು ನೀರಿನಲ್ಲಿ ಪ್ರತಿಫಲನಗೊಂಡಿದ್ದವು. ಕೆಲವೇ ಸಂಜೆಯ ಮೋಡಗಳು ನೀರಿನಲ್ಲಿ ಪ್ರತಿಫಲಿಸತೊಡಗಿದವು. ದೂರದಲ್ಲಿ ಕಾಣುವ ಕೆಲವು ದೋಣಿಗಳಿಂದಾಗಿ, ನೀರ ಮೇಲ್ಮೈಯು ಅಲ್ಲಲ್ಲಿ ಕೆಲವೊಂದು ಕಷೆ ಮಾತ್ರ, ಗುಳಿ ಬಿದ್ದಂತಿದ್ದವು. ತೆಂಗಿನ ಮರಗಳ ನೆಟ್ಟ ನೇರತನವನ್ನೇ ತನ್ಮಯಳಾಗಿ ನೋಡತೊಡಗಿದಳು. ಪ್ರಕೃತಿಯ ಬಲವನ್ನು, ಎದ್ದು ನಿಲ್ಲುವ ಶಕ್ತಿಯನ್ನು ಸಾರುವಂತಿದ್ದ ಆ ಮರಗಳು ಯಾವುದೋ ಪ್ರಾಚೀನ ತತ್ತ್ವವೊಂದನ್ನು ಒತ್ತಿ ಹೇಳುವಂತೆ ಅವಳಿಗನಿಸಿತು. ಕೇಳಿಯೂ ಕೇಳಿಸದಂತೆ ನೀರಿನ ಮೇಲಿಂದ ಬೀಸಿ ಬರುವ ಗಾಳಿಯ ನಿಟ್ಟುಸಿರು ನೀರಿಗೂ ಬೂದು ಛಾಯೆಯನ್ನು ತಂದಂತಿತ್ತು.

ಒಂದರ ಮೇಲೊಂದು ರಭಸವಾಗಿ ಬಂದು ಗಿರ್ರನೆ ಸುತ್ತಿಸಿ ಎಸೆದು ಫಕ್ಕನೆ ಕೆಳಮುಖವಾಗಿ ಇಂಗಿ ಹೋಗುತ್ತ ಹಿಮ್ಮರಳುವ ಅಲೆಗಳು ದಡದಲ್ಲಿರುವ ಕಲ್ಲುಬಂಡೆಗಳಿಗೆ ಮುದ್ದು ಕೊಟ್ಟು ಹೋಗುವಾಗ, ಕೆಲವೊಮ್ಮೆ ತರಂಗದ ಮೆಲುಸಪ್ಪಳಗಳು ಎಂದಿಗಿಂತ ಜೋರಾಗಿ, ಅದರೊಟ್ಟಿಗೆ ಬಂಡೆಗೆ ತಾಂಟಿ ಮೇಲೇರಿದ ನೀರು ತೊಟ್ಟಿಕ್ಕುವ ಸದ್ದೂ ಸೇರಿ, ಇಡೀ ಪ್ರಕೃತಿಯಲ್ಲಿಯೇ ಅದೇನೋ ಅವಸರವಿದ್ದಂತೆ, ಯಾವುದರದೋ ತಯಾರಿಯಿದ್ದಂತೆ ಅನಿಸುತ್ತಿತ್ತು. ಹಬ್ಬದ ತಯಾರಿಯ ಆ ಪಿಸುಗುಟ್ಟುವ ದನಿಗಳು ಅವಳಲ್ಲಿ ರೋಮಾಂಚನವನ್ನುಂಟು ಮಾಡಿದವು.

ಕಣ್ಣು ಕಿರಿದುಗೊಳಿಸಿ ನೀಲ ನೀರ ರಾಶಿಯನ್ನು ದಿಟ್ಟಿಸಿ ನೋಡುತ್ತ, ತನ್ನಲ್ಲೇ ಹೇಳಿಕೊಂಡಳು, ನಾನೀಗ ಪ್ರಭಾ ಅಲ್ಲ. ಈಗ, ಈ ಕ್ಷಣಕ್ಕೆ ನನ್ನ ಅಸ್ತಿತ್ವ ಬೇರೆ, ಎಂದುಕೊಂಡಳು. ಅವಳ ಮೈಯಲ್ಲಿ ಮಿಂಚು ಹರಿದಂತಾಯಿತು. ತಂಗಾಳಿ ಅವಳ ಮುಖವನ್ನು ಸ್ಪರ್ಶಿಸಿ ಬೀಸುವಾಗ ಅವಳಿಗೆ ಅದು ಹೌದೆನಿಸಿತು. ದಂಡೆಯುದ್ದಕ್ಕೂ ಕೂತ ಜನರಿಗೂ ಅವಳಿಗೂ ಯಾವುದಾದರೂ ಸಂಬಂಧವಿದೆಯೇ? ಇದೆಯೆಂದರೆ ಇದೆ. ಇಲ್ಲವೆಂದರೆ ಇಲ್ಲ. ಆ ಯೋಚನೆಯಿಂದಲೇ ಅವಳಿಗೆ ಹಿತಕರವಾದ ಮುದವೆನಿಸಿತು. ದಂಡೆಯ ಮೇಲೆ ಕುಳಿತ ಈ ಮುಂಬಯಿಗರು ಸುಮ್ಮಸುಮ್ಮನೆ ಅವಳ ಗೋಜಿಗೆ ಹೋಗುವವರಲ್ಲ. ಒಂದು ರೀತಿಯಲ್ಲಿ ಅಲ್ಲಿ ಅವಳು ಏಕಾಕಿ. ಆದರೂ ಒಂದೇ ದಂಡೆಯ ಮೇಲೆ ಕುಳಿತಿದ್ದಾರೆನ್ನುವ ಅಂಶವು ಅಲ್ಲಿ ಉಂಟುಮಾಡಿದ ಕಣ್ಣಿಗೆ ಕಾಣದ ಸೂಕ್ಷ್ಮ ಎಳೆಯೊಂದು ಅವರೆಲ್ಲರನ್ನೂ ಸ್ಪರ್ಶಿಸಿದ ರೀತಿಯ ಅರಿವೂ ಅವಳಿಗಿತ್ತು.

ಅವಳ ಬಲಕ್ಕೆ ಕುಳಿತವನು ಬೆನ್ನು ಗೂನಾಗಿಸಿ ಕುಳಿತು ಕೈಯಲ್ಲಿನ ಕಾಗದದ ಪೊಟ್ಟಣದಿಂದ ಒಂದೊಂದೇ ನೆಲಗಡಲೆಯನ್ನು ಬಾಯಿಗೆ ಎಸೆಯುತ್ತ ಸಾಗರದ ಅಲೆಗಳನ್ನು ನೋಡುತ್ತಿದ್ದ. ನೀಟಾಗಿ ಮೇಲಕ್ಕೆ ಬಾಚಿದ ಅವನ ನರೆಗೂದಲುಗಳು ಗಾಳಿಗೆ ಹಾರುವುದನ್ನು ಮರೆತು ಅವನ ತಲೆಯ ಬೋಡಿಗೆ ಅಂಟಿಕೊಂಡಿದ್ದುವು. ಇನ್ನೊಂದು ಬದಿಯಲ್ಲಿ ಕುಳಿತ ಇಬ್ಬರು ಕಾಲೇಜು ಹುಡುಗಿಯರು ಅರಳು ಹುರಿದಂತೆ ಮಾತಾಡುತ್ತಿದ್ದವರು ಮೂರನೇ ಜೊತೆಗಾತಿ ಬರುತ್ತಲೂ ದಡಕ್ಕನೆ ಜಿಗಿದು ಅವಳೊಂದಿಗೆ ಹೊರಟರು. ಅವರು ಹೊರಟರೆನ್ನುವಾಗ, ಬಲಕ್ಕೆ ಸೆರಗು ಹಾಕಿದ ದಢೂತಿ ಹೆಂಗಸೊಬ್ಬಳು, ಮೊಮ್ಮಗನಿರಬೇಕು, ಗುಜರಾತಿಯಲ್ಲಿ ಒಂದಷ್ಟು ಆಣತಿಗಳನ್ನು ಆದೇಶಿಸುತ್ತ, ಕೈಯೂರಿ ದಂಡೆ ಹತ್ತಿ, ಸಮುದ್ರಕ್ಕೆ ಬೆನ್ನುಮಾಡಿ ಕುಳಿತುಕೊಂಡು ಅವನ ಓಟ ಓಡಾಟಗಳನ್ನು ನಿಗ್ರಹಿಸತೊಡಗಿದ್ದಳು. ಅಲ್ಲೇ ಆಚೆ...

ಕಾರು ಬಸ್ಸುಗಳ ಹಾರ್ನು. ಕ್ರಿಕೆಟ್ ಆಟಗಾರರ ಬೊಬ್ಬೆ. ಫುಟ್‌ಪಾತಿನಲ್ಲಿ ಉರುಳಾಡುತ್ತಿದ್ದ ತರಗೆಲೆಗಳ ಸ್ವರದೊಂದಿಗೆ ಮಿಳಿತವಾದ ಮಾರುವವರ ಏಕತಾನದ ಏರುದನಿಯ ಒರಟು ಸಂಗೀತ. ರಸ್ತೆಯ ಯಾವ್ಯಾವುದೋ ಶಬ್ದಗಳು. ಎಲ್ಲೋ ದೂರದಿಂದ ಬಂದಂತೆ ಕಿವಿಗೆ ಆಗಾಗ್ಗೆ ಬಂದು ಬೀಳುತ್ತಿದ್ದವು. ಈ ಸಾಮಾನ್ಯ ಶಬ್ದಗಳು ಬಾಹ್ಯ ಜಗತ್ತಿಗೆ ಸಂಬಂಧ ಕಲ್ಪಿಸುತ್ತಿದ್ದಂತೆಯೇ. ಆಗ ಆಗಷ್ಟೇ. ಅವಳು ಶಬ್ದಗಳ ವ್ಯಾಪ್ತಿಯ ಆಚೆ ಕೇಳಬಲ್ಲವಳಾದಳು ಮತ್ತು ನೋಟದಂಚಿನ ಆಚೆ ನೋಡಬಲ್ಲವಳಾದಳು. ಹೊರಜಗತ್ತಿನೊಡನೆ ಒಂದಾದಂತೆ. ಅವಳು ನೋಡುತ್ತ. ಕೇಳುತ್ತ. ಅನುಭವಿಸುತ್ತ. ಅವಳ ಎಲ್ಲ ಇಂದ್ರಿಯಗಳು ಜಾಗೃತವಾದಂತನಿಸಿ. ಆಗಸದಲ್ಲಿ ನಕ್ಷತ್ರಗಳು ಹೊರಬಂದಂತೆ. ಅವಳ ಯೋಚನೆಗಳು ಸ್ಪಷ್ಟಗೊಂಡು. ಮನಸ್ಸು ತಿಳಿಯಾಗತೊಡಗಿತು.

ಕೈಗಡಿಯಾರ ನೋಡಿಕೊಂಡು ಅವಳು ಮನೆಗೆ ಹೋಗಲು ಎದ್ದುನಿಂತಳು.

ಗಂಟೆ ಬಾರಿಸುತ್ತಲೂ. ಮನೆಬಾಗಿಲು ತೆರೆದ ಸದಾನಂದ. ಚಡಪಡಿಕೆಯನ್ನು ಹತ್ತಿಕ್ಕುತ್ತ ಕೇಳಿದ. 'ಎಲ್ಲಿ ಹೋದದ್ದು ನೀನು? ಎಷ್ಟು ಹೊತ್ತಿನಿಂದ...?'

ಅವನ ದನಿಯಲ್ಲಿ ಸ್ವಲ್ಪ ಗಾಬರಿಯೂ ಇತ್ತು.

'ನಾನಾ? ಬೇರೆಯೇ ಲೋಕಕ್ಕೆ...' ಎನ್ನುತ್ತ ಒಳನಡೆದ ಪ್ರಭಾಳ ಮುಖದಲ್ಲಿ ಒಂದು ಕಿರುನಗೆಯಿತ್ತು.

✣ ಮಿತ್ರಾ ವೆಂಕಟ್ರಾಜ : # ೪೦೧. ಅಶಿಯಾನಾ. ೨೧. ಸೆಂಟ್ ಪಾಲ್ ರಸ್ತೆ.
ಬಾಂದ್ರಾ (ಪಶ್ಚಿಮ). ಮುಂಬಯಿ–೪೦೦ ೦೫೦ ✣

ಭಾಷಾವಾರು ಪ್ರಾಂತ್ಯರಚನೆಯ ತತ್ತ್ವಾದರ್ಶಗಳು

ಅರವಿಂದ ಚೊಕ್ಕಾಡಿ

ಕರ್ನಾಟಕದ ಏಕೀಕರಣ ಎನ್ನುವ ಒಂದು ಪರಿಕಲ್ಪನೆಯು ರಾಜಕೀಯ ವ್ಯಾಪ್ತಿಯನ್ನು ನೆಚ್ಚಿಕೊಂಡಿದೆ ಎಂಬುದನ್ನು ಗಮನಿಸಬೇಕು. ಸಾಂಸ್ಕೃತಿಕ ವ್ಯಾಪ್ತಿಯಲ್ಲಿ ಹೇಳಲು ಹೊರಟರೆ ಕರ್ನಾಟಕವು ಅಮೇರಿಕದಲ್ಲೂ ಇದೆ : ರಾಜಕೀಯ ಕರ್ನಾಟಕದ ಒಳಗೆ ಸಾಂಸ್ಕೃತಿಕ ತಮಿಳುನಾಡು. ಸಾಂಸ್ಕೃತಿಕ ಆಂಧ್ರಪ್ರದೇಶಗಳೆಲ್ಲ ಇವೆ. ಅಂತಲೇ ಕರ್ನಾಟಕ ಎಂದು ನಾವು ಕರೆಯುವ ಕರ್ನಾಟಕವು ರಾಜಕೀಯ ಕರ್ನಾಟಕವಾಗಿದೆ. ಭಾಷೆಯ ಆಧಾರದಲ್ಲಿ ರಾಜಕೀಯ ಪ್ರಾಂತ್ಯಗಳು ಯಾಕೆ ರಚನೆಯಾದವು ಎನ್ನುವುದರ ಹಿಂದೆ ಬಹಳ ದೊಡ್ಡ ಚರಿತ್ರೆಯೇ ಇದೆ. ಮುಖ್ಯವಾಗಿ ಭಾಷಾವಾರು ಪ್ರಾಂತ್ಯ ರಚನೆಯ ಹಿಂದೆ ಇದ್ದ ಆಶಯಗಳು ಗಮನಾರ್ಹ ಸಂಗತಿಯಾಗಿದೆ. ಅದು ಅರ್ಥವಾಗಬೇಕಾದರೆ ಭಾಷೆಯ ಶಕ್ತಿಯನ್ನು ಮೊದಲು ಅರ್ಥಮಾಡಿಕೊಳ್ಳಬೇಕು. ಭಾಷೆಯು ವರ್ತನೆಯ ನಿಯಂತ್ರಕವಾಗಿ ಕೆಲಸ ಮಾಡುತ್ತದೆ. ಪ್ರಜ್ಞೆಯ ನಿಯಂತ್ರಕವಾಗಿಯೂ ಕೆಲಸ ಮಾಡುತ್ತದೆ. ಆದ್ದರಿಂದಲೇ ಭಾಷೆಯು ಮನುಷ್ಯ ಜೀವನವನ್ನು ನಿಯಂತ್ರಿಸುವ ಮತ್ತು ನಿರ್ದೇಶಿಸುವ ಪರಿಣಾಮಕಾರಿ ಉಪಕರಣವಾಗಿದೆ. ಅದು ರಾಜಕೀಯವಾಗಿ ಪ್ರಾಧಾನ್ಯವನ್ನು ಪಡೆದಿರುವುದರ ಹಿಂದೆ ಭಾರತದ ರಾಷ್ಟ್ರೀಯ ಚಳವಳಿಯು ದಟ್ಟ ಪ್ರಭಾವವನ್ನು ಬೀರಿದೆ. ೧೮೭೪ ರಲ್ಲಿ ಬಂಗಾಳದಿಂದ ಸಿಲೆಟನ್ನು ಬೇರ್ಪಡಿಸಿದಾಗ ನಡೆದ ತೀವ್ರ ಪ್ರತಿಭಟನೆಯು ಭಾಷೆಯ ವಿಚಾರವು ರಾಜಕೀಯ ಸೀಮಾರೇಖೆಯನ್ನು ನಿರ್ಧರಿಸುವಂತಾಗಬೇಕು ಎಂಬ ಅಪೇಕ್ಷೆಯು ಹೊರಹೊಮ್ಮಿದ್ದನ್ನು

ಸೂಚಿಸುತ್ತದೆ. ಅನಂತರ ಆ ಭಾವನೆಯು ಬೃಹತ್ತಾಗಿ ಬೆಳೆದು ಸ್ವತಂತ್ರ ಭಾರತದಲ್ಲಿ ಭಾಷಾವಾರು ಪ್ರಾಂತ್ಯಗಳು ರಚನೆಯಾಗುವುದರೊಂದಿಗೆ ತನ್ನ ಒಂದು ಉರುಳುವಿಕೆಯನ್ನು ಮುಗಿಸಿತು. ಇಲ್ಲಿ ರಾಷ್ಟ್ರೀಯ ಚಳವಳಿಯು ನಡೆದದ್ದು ಪರಕೀಯರ ದಬ್ಬಾಳಿಕೆಯ ವಿರುದ್ಧ ಎಂಬುದನ್ನು ಗಮನಿಸಬೇಕು. ಅದರ ಜೊತೆಗೇ ಬೆಳೆದ ರಾಜಕೀಯಾತ್ಮಕ ಭಾಷಾಪ್ರಜ್ಞೆಯು ರಾಷ್ಟ್ರೀಯ ಚಳವಳಿಯದೇ ಮತ್ತೊಂದು ನೆಲೆಯಾಗಿದೆ. ರಾಷ್ಟ್ರೀಯ ಚಳಚಳಿಯು ಪರಕೀಯರು ಕಟ್ಟಿದ ವಸಾಹತುಶಾಹಿ ಕಟ್ಟಡವನ್ನು ಕೆಡಹುವುದನ್ನು ಉದ್ದೇಶವಾಗಿಟ್ಟುಕೊಂಡಿತ್ತು. ಭಾಷಾಪ್ರಜ್ಞೆಯು ಹೊಸ ದೇಶೀಯ ಕಟ್ಟಡವನ್ನು ಕಟ್ಟುವ ಉದ್ದೇಶವನ್ನು ಹೊಂದಿತ್ತು. ಒಂದು Destructive Nature ಅನ್ನು ಹೊಂದಿದ್ದರೆ ಮತ್ತೊಂದು Constructive Nature ಅನ್ನು ಹೊಂದಿತ್ತು. ಭಾಷಾವಾರು ಪ್ರಾಂತ್ಯದ ರಚನೆಯೊಂದಿಗೆ ಈ ರಾಜಕೀಯ ಸಮೀಕರಣವು ಸರಿಹೊಂದುತ್ತದೆ. ಅದಕ್ಕೆ ತಕ್ಕ ಹಾಗೆ ಸಾಂವಿಧಾನಿಕ ಆಶಯವಿದೆ. ಇಲ್ಲಿ ಭಾರತ ಸಂವಿಧಾನದ ಒಂದನೆಯ ವಿಧಿಯೇ ಭಾರತವನ್ನು ಹಲವು ರಾಜ್ಯಗಳ ಒಕ್ಕೂಟವನ್ನಾಗಿ ಮಾಡಿದ್ದು ಸಂವಿಧಾನದ ತಾತ್ವಿಕ ಆಶಯವು ರಾಜ್ಯಗಳ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುವುದೇ ಆಗಿದೆ ಎಂಬುದನ್ನು ಗಮನಿಸಬೇಕು. ಸಂವಿಧಾನವು ಎಲ್ಲಿಯೂ ಕೂಡ Central Government ಎನ್ನುವ ಪ್ರಸ್ತಾಪವನ್ನು ಮಾಡುವುದಿಲ್ಲ. ಬದಲು ಅದನ್ನು Union Government ಎಂದು ಕರೆಯುತ್ತದೆ. ಅಂದರೆ ಎಲ್ಲ ರಾಜ್ಯಗಳನ್ನು ಒಟ್ಟಾಗಿ ಮುನ್ನಡೆಸುವ ಒಂದು ಸರಕಾರದ ಅಸ್ತಿತ್ವ ಸಂವಿಧಾನಕ್ಕೆ ಮುಖ್ಯವಾಗಿದೆಯೇ ಹೊರತು ಎಲ್ಲ ರಾಜ್ಯಗಳ ಪ್ರಶ್ನಾತೀತ ಅಧಿಕಾರಿಯಾಗಿ ಕೇಂದ್ರ ಸ್ಥಾನದಲ್ಲಿರುವ ಸರಕಾರವಲ್ಲ. ಈ ಆಶಯವನ್ನೂ ಭಾಷಾವಾರು ಪ್ರಾಂತ್ಯ ರಚನೆಯನ್ನೂ ಒಟ್ಟಾಗಿ ಇಟ್ಟುಕೊಂಡು ನೋಡಿದರೆ ಎಲ್ಲ ಅರ್ಥಗಳಲ್ಲೂ ಸ್ವಂತಿಕೆಯ ಸಂಕೇತವಾಗಿ ನಿಲ್ಲುವ ಸಾಂಸ್ಕೃತಿಕ ಉಪಕರಣವಾದ ಭಾಷೆಯ ಮುಖಾಂತರ ಒಟ್ಟಾರೆ ಅಭಿವೃದ್ಧಿಯನ್ನು ಸಾಧಿಸುವುದೇ ಇಲ್ಲಿನ ಮಹತ್ತರ ಉದ್ದೇಶವಾಗಿದೆ. ಆ ಧ್ಯೇಯದೊಂದಿಗೆ ಕರ್ನಾಟಕದ ರಚನೆಗಾಗಿ ಶ್ರಮಿಸಿದ ನಾಯಕರುಗಳ ಬಗ್ಗೆ, ಸಂಸ್ಥೆಗಳ ಬಗ್ಗೆ, ಒಂದು ಕಾಲಘಟ್ಟದ ಜನ ಸಮುದಾಯವೇ ಅದಕ್ಕಾಗಿ ಸ್ಪಂದಿಸಿದುದರ ಬಗ್ಗೆ ಕರ್ನಾಟಕ ಚರಿತ್ರೆಯ ಯಾವುದೆ ಪಠ್ಯಪುಸ್ತಕವನ್ನು ತೆರೆದು ನೋಡಿದರೂ ಗೊತ್ತಾಗುತ್ತದೆ.

ಆದರೆ ಒಂದು ಕಾಲಘಟ್ಟದ ತತ್ವಾದರ್ಶಗಳು ಮತ್ತೊಂದು ಕಾಲಘಟ್ಟಕ್ಕೆ ಹೇಗೆ ಅರ್ಥವನ್ನು ಕಳೆದುಕೊಳ್ಳುತ್ತವೆ ಎನ್ನುವುದು ನಮ್ಮೆದುರಿಗಿರುವ ಪ್ರಶ್ನೆಯಾಗಿದೆ. ಈ ವಿಚಾರವು ಭಾಷಾವಾರು ಪ್ರಾಂತ್ಯ ರಚನೆಯ ಒಂದು ವಿಷಯಕ್ಕೆ ಸಂಬಂಧಿಸಿದ್ದಲ್ಲ. ಗಾಂಧೀವಾದ, ಮಾರ್ಕ್ಸ್‌ವಾದ, ಲೋಹಿಯಾವಾದ, ಅಂಬೇಡ್ಕರ್‌ವಾದ ಎಲ್ಲ ತತ್ವಾದರ್ಶಗಳ ಪರಿಸ್ಥಿತಿಯೂ ಇದೇ. ಇದು ಯಾಕೆ ಸಂಭವಿಸುತ್ತದೆ ಮತ್ತು ಏಕೆ ಸಂಭವಿಸುತ್ತದೆ ಮತ್ತು ಸಂಭವಿಸಿದ್ದು ಸರಿಯೂ ಆಗಿರಬಹುದೆ? ಎನ್ನುವ ಪ್ರಶ್ನೆಗಳನ್ನು ಇಟ್ಟುಕೊಂಡು ಈ ಚರ್ಚೆಯನ್ನು ಬೆಳೆಸಬಹುದು.

ಇದಕ್ಕೆ ಪೂರಕವಾಗಿ ಇತ್ತೀಚಿನ ಸಂದರ್ಭದಲ್ಲಿ ನಡೆದ ಎರಡು ವಿದ್ಯಮಾನಗಳನ್ನು ಗಮನಿಸಬೇಕು. ಭಾರತೀಯ ಜ್ಞಾನ ಆಯೋಗದ ಅಧ್ಯಕ್ಷ ಸ್ಯಾಂ ಪಿತ್ರೋಡಾ ಅವರು ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸುವಂತೆ ಒತ್ತಾಯಿಸಿ ಪ್ರಧಾನ ಮಂತ್ರಿಯವರಿಗೆ ಪತ್ರ ಬರೆದರು. (ಶಿಕ್ಷಣ ಮಾಧ್ಯಮ ಯಾವುದಿರಬೇಕೆಂಬ ಬಗ್ಗೆ ಅವರು ಮೌನವಾಗಿದ್ದಾರೆ ಎಂಬುದು ಗಮನಾರ್ಹ.) ಇನ್ನೊಂದು ಪ್ರಸಂಗ ಇನ್‌ಫೋಸಿಸ್ ನಾರಾಯಣಮೂರ್ತಿಯವರದು. ಎಲ್ಲ ಶಾಲೆಗಳನ್ನೂ ಆಂಗ್ಲ ಮಾಧ್ಯಮ ಶಾಲೆಗಳಾಗಿ ಪರಿವರ್ತಿಸಬೇಕೆಂಬ ಸಲಹೆಯನ್ನು ಅವರು

ಕೊಟ್ಟಿದ್ದಾರೆ. ಇದು ಕೇವಲ ಒಬ್ಬ ವ್ಯಕ್ತಿಯ ಅಭಿಪ್ರಾಯವಾಗಿ ಉಳಿಯುವಷ್ಟು ದುರ್ಬಲವಾದ ಹೇಳಿಕೆಯಲ್ಲ. ಅವರು ಸಮಾಜದ ಸುಮಾರು ೫೦ರಿಂದ ೬೦ ಶೇಕಡಾದಷ್ಟು ಜನರ ಅಭಿಪ್ರಾಯ ಅಥವಾ ಗೊಂದಲಗಳನ್ನು ಧ್ವನಿಸುವ ಕೆಲಸವನ್ನು ಮಾಡಿದ್ದಾರೆ. ಇದಕ್ಕೆ ಪೂರಕವಾಗಿ ಕರ್ನಾಟಕ ಸರಕಾರವು ಒಂದನೇ ತರಗತಿಯಲ್ಲಿ ಇಂಗ್ಲಿಷ್ ಕಲಿಸುವ ಕೆಲಸವನ್ನು ಆರಂಭಿಸಿದೆ. ಅದರ ಶೈಕ್ಷಣಿಕ ಪರಿಣಾಮಗಳನ್ನು ಕೊಂಚ ಬದಿಗಿಟ್ಟು ಹೇಳುವುದಾದರೆ ಕಲಿಕೆಯ ಮೊದಲ ಹಂತದಲ್ಲಿ ಪರಕೀಯ ಭಾಷೆಯನ್ನು ಕಡ್ಡಾಯಗೊಳಿಸುವುದೆಂದರೆ ತಾತ್ವಿಕವಾಗಿ ಅದು ಕನ್ನಡಕ್ಕೇ ಇಂಗ್ಲಿಷನ್ನು ಪರ್ಯಾಯವೆಂದು ದೃಢೀಕರಿಸಿದ ಹಾಗಾಗುತ್ತದೆ. ಏನೇ ಅನಿವಾರ್ಯತೆ ಇದ್ದಾಗ್ಯೂ ಕರ್ನಾಟಕದಲ್ಲಿ ಕನ್ನಡವೊಂದೇ ಯಜಮಾನ ಭಾಷೆಯ ಸ್ಥಾನದಲ್ಲಿ ಇರುತ್ತದೆ ಎಂಬ ಸಂದೇಶವನ್ನು ಉಳಿಸುವುದಕ್ಕಾಗಿ ಎರಡನೆ ತರಗತಿಯಿಂದ ಇಂಗ್ಲಿಷ್ ಕಲಿಸಲು ಶುರು ಮಾಡಬಹುದಾಗಿತ್ತು. ಅಂತಹ ಒಂದು ಕನಿಷ್ಠ ಪ್ರಜ್ಞೆಯನ್ನೂ ತೋರಿಸಲಿಲ್ಲ. ಮತ್ತು ಅದಕ್ಕಾಗಿ ಜನ ಏನನ್ನೂ ಮಾಡುವುದಿಲ್ಲವೆಂದರೆ ಭಾಷಾವಾರು ಪ್ರಾಂತ್ಯ ರಚನೆಯ ಮೂಲಭೂತ ತತ್ವಾದರ್ಶವೇ ಬುಡಮೇಲಾಗುತ್ತದೆ. ಫಜಲ್ ಅಲಿ ಆಯೋಗದ ವರದಿಯ ಆಶಯವು ಕುಸಿದು ಹೋಗುತ್ತದೆ. ಬದಲು ಎಸ್. ಕೆ. ಧರ್ ಆಯೋಗದ ವರದಿಗೆ ಮಾನ್ಯತೆ ಬಂದು ಬಿಡುತ್ತದೆ. ಎಲ್ಲ ಶಾಲೆಗಳನ್ನೂ ಆಂಗ್ಲ ಮಾಧ್ಯಮ ಶಾಲೆಗಳನ್ನಾಗಿ ಮಾಡುವುದಾದರೆ ಭಾಷಾವಾರು ಪ್ರಾಂತ್ಯದ ರಚನೆಯನ್ನು ಯಾಕೆ ಮಾಡಬೇಕಾಗಿತ್ತು? ಆಸ್ಟ್ರೇಲಿಯಾದ ಹಾಗೆ ಅಥವಾ ಹಲ್ವಾವನ್ನು ತುಂಡು ಮಾಡಿದ ಹಾಗೆ ಚೌಕ, ಆಯತ, ತ್ರಿಕೋನ, ವೃತ್ತ ಯಾವುದಾದರೊಂದು ಮಾದರಿಯಲ್ಲಿ ದೇಶವನ್ನು ಆಡಳಿತಾತ್ಮಕ ವಿಭಾಗಗಳಾಗಿ ಮಾಡಿದ್ದರೆ ಸಾಕಾಗಿತ್ತು. ಅಂದರೆ ಕರ್ನಾಟಕ ಏಕೀಕರಣದ ತತ್ವಾದರ್ಶಗಳು ಕುಸಿದಿರುವ ಅಥವಾ ಬಹುತೇಕ ನಾಶವಾಗಿರುವ ಸ್ಥಿತಿಯನ್ನು ಇದು ಸೂಚಿಸುತ್ತದೆ.

ಈ ಕುಸಿತ ಯಾಕೆ ಸಂಭವಿಸಿತು? ಕನ್ನಡ ಭಾಷೆಯನ್ನಾಡುವವರು ದುರ್ಬಲರಾಗಿರುವುದರಿಂದ ಸಂಭವಿಸಿತು. ಕನ್ನಡ ಎಂ. ಎ. ಮಾಡಿದವನಿಗೆ ಉದ್ಯೋಗವಿಲ್ಲದಾಗ ತನ್ನ ಮಕ್ಕಳೂ ತನ್ನ ಹಾಗೆ ಪರಿತಪಿಸುವುದು ಬೇಡವೆಂದು ಅವನು ಇಂಗ್ಲಿಷ್ ಮಾಧ್ಯಮ ಶಾಲೆಗಳಿಗೆ ತನ್ನ ಮಕ್ಕಳನ್ನು ಸೇರಿಸುವ ಸ್ಥಿತಿಯಲ್ಲಿ ಸಂಭವಿಸಿತು. ಈ ದೌರ್ಬಲ್ಯ ಹೇಗೆ ಸಂಭವಿಸಿತು? ಸ್ವಾತಂತ್ರ್ಯ ಬಂದಾಗ "ಸ್ವರಾಜ್ಯಕ್ಕಾಗಿನ ಹೋರಾಟ ಇನ್ನು ನಡೆಯಬೇಕಾಗಿದೆ" ಎಂದಿದ್ದರು ಗಾಂಧಿ. ಈ ವಿಚಾರ ಆ ಮೇಲೆ ಯಾವತ್ತೂ ಮಹತ್ವವನ್ನು ಪಡೆದುಕೊಳ್ಳಲಿಲ್ಲ. ಬ್ರಿಟಿಷ್ ಅಭಿವೃದ್ಧಿ ಮಾದರಿಗಳೇನಿದ್ದವೋ ಅದನ್ನೇ ಅಲ್ಪ ಸ್ವಲ್ಪ ಬದಲಾಯಿಸಿಕೊಂಡು ಕೆಲವು ಕಾಲ ರಷ್ಯನ್ ಮಾದರಿ ನಂತರ ಅಮೆರಿಕನ್ ಮಾದರಿಯಾಗಿ ಬೆಳೆಸಲಾಯಿತೆ ಹೊರತು ದೇಶೀಯವಾದ ಅಭಿವೃದ್ಧಿಯ ಮಾದರಿಗಳನ್ನು ರೂಪಿಸಿಕೊಂಡು ದೇಶೀಯ ಉತ್ಪಾದನಾ ಮತ್ತು ವಿತರಣಾ ಮಾರುಕಟ್ಟೆಯನ್ನು ಬೆಳೆಸಲೇ ಇಲ್ಲ. ಈ ಉತ್ಪಾದನಾ ಘಟಕಗಳ ಮತ್ತು ವಿತರಣಾ ಘಟಕಗಳ ಜ್ಞಾನ ಮತ್ತು ಕೌಶಲಗಳು ದೇಶೀಯ ಭಾಷೆಗಳ ಬಳಿ ಇದ್ದವು. ದೇಶೀಯ ಭಾಷೆಗಳ ಶಕ್ತಿವರ್ಧನೆ ಮಾಡಲು ಈ ಆರ್ಥಿಕ ಘಟಕಗಳ ಬೆಳವಣಿಗೆಯ ಅಗತ್ಯವಿತ್ತು. ಇವೆರಡಕ್ಕೂ ಮಹತ್ವ ಬರಲಿಲ್ಲ. ಯಾಕೆಂದರೆ ಸ್ವಾತಂತ್ರ್ಯ ಹೋರಾಟ ನಡೆಯುವಾಗ ಸ್ವಂತಿಕೆಯ ಆವೇಗ ಇತ್ತು. ಸ್ವಾತಂತ್ರ್ಯ ಬಂದ ತಕ್ಷಣ ಆ ಆವೇಗ ಹೊರಟುಹೋಯಿತು. ಆದರೆ ೨೦೦ ವರ್ಷಗಳಿಂದ ಬೆಳೆದ ದಾಸ್ಯದ ಮನೋಧರ್ಮ ಹೊರಟುಹೋಗಲಿಲ್ಲ. ಅಷ್ಟು ಬೇಗ ಅದು ಹೊರಟು ಹೋಗುವಂತಹದ್ದೂ ಅಲ್ಲ. ಸ್ವಾತಂತ್ರ್ಯಾನಂತರ ಕನಿಷ್ಠ ಒಂದಿಪ್ಪತ್ತೈದು ವರ್ಷಗಳ ಕಾಲವಾದರೂ ಅಂತಹ ವಿವೇಚನಾಯುಕ್ತ ಪ್ರಬುದ್ಧ ನಾಯಕತ್ವದ ಅಗತ್ಯ ಇತ್ತು. ನಮ್ಮ ಇವತ್ತಿನ ಹೀರೋಗಳಿಗೆ ಹೋಲಿಸಿದರೆ ನೆಹರೂ ಪ್ರಬುದ್ಧ ನಾಯಕರೇ ಆಗಿದ್ದರು. ಆದರೆ ಕಾಲಘಟ್ಟದ ಸಂದರ್ಭದಲ್ಲಿ ಸ್ವಾತಂತ್ರ್ಯದ ಹುರುಪನ್ನು ಕಡೆಗಣಿಸಿ ಸ್ವಂತಿಕೆಗಾಗಿ ಕೆಲಸ ಮಾಡುವ ಪ್ರಬುದ್ಧತೆ ನೆಹರೂ

ವ್ಯಕ್ತಿತ್ವಕ್ಕೆ ಇರಲಿಲ್ಲ.

ಒಬ್ಬರಿಗೆ ಮಾತ್ರ ಆ ಸಾಮರ್ಥ್ಯ ಇತ್ತು. ಅದು ಗಾಂಧಿ. ಎಲ್ಲರೂ ಸ್ವಾತಂತ್ರ್ಯದ ಸಂಭ್ರಮಕ್ಕಾಗಿ ಕೆಂಪು ಕೋಟೆಯಲ್ಲಿ ಜಮಾಯಿಸಿದ್ದಾಗ ಗಾಂಧಿ ಮಾತ್ರ ಮತೀಯ ಗಲಭೆಗಳನ್ನು ನಿಯಂತ್ರಿಸುವುದಕ್ಕಾಗಿ ಕೋಲ್ಕತ್ತಾ ಮತ್ತು ನೊಆಖಾಲಿಯ ಬೀದಿಬೀದಿಗಳಲ್ಲಿ ಏಕಾಂಗಿಯಾಗಿ ತಿರುಗಾಡುತ್ತಿದ್ದರು. ಆದರೆ ಗಾಂಧಿಯನ್ನು ಅಷ್ಟೇ ಬೇಗ ದೇಶ ಕಳೆದುಕೊಂಡಿತು. ಸರ್ದಾರ್ ಪಟೇಲ್‌ಗೆ ದೇಶದ ಸ್ವಂತಿಕೆಯ ಮೇಲೆ ಅಪಾರ ಕಾಳಜಿ ಅಭಿಮಾನಗಳಿದ್ದುದು ನಿಜ. ಆದರೆ ಉಪ್ಪಿನ ಮೇಲೆ ಹಾಕಿದ ಜುಜುಬಿ ತೆರಿಗೆಯನ್ನೇ ಕಾರಣವಾಗಿಟ್ಟುಕೊಂಡು ರಾಷ್ಟ್ರೀಯ ಮಹಾ ಬಂಡಾಯವನ್ನು ರೂಪಿಸಿದ ಗಾಂಧಿಗೆ ಇದ್ದಂತಹ ಪ್ರತಿಭೆ ಪಟೇಲ್‌ಗೆ ಇರಲಿಲ್ಲ. ಆಮೇಲೆ ಸ್ವತಂತ್ರವಾದ ಅಭಿವೃದ್ಧಿಯ ಮಾದರಿ ಬಗ್ಗೆ ಸ್ಪಷ್ಟ vision ಹೊಂದಿದ್ದ, ಇಮತನಕದ ಕೊನೆಯ ವ್ಯಕ್ತಿ ಎಂದರೆ ಡಾ. ರಾಮಮನೋಹರ್ ಲೋಹಿಯಾ. ಲೋಹಿಯಾ ಕೈಗೆ ಅಧಿಕಾರ ಸಿಕ್ಕಿದ್ದರೆ ಸ್ವಲ್ಪ ಮಟ್ಟಿಗಾದರೂ ಸ್ವತಂತ್ರ ಅಭಿವೃದ್ಧಿಯ ಮಾದರಿಗಳು ಮೂಡಿ ಬರಲು ಸಾಧ್ಯವಿತ್ತು. ಆದರೆ ಅವರಿಗೆ ಅಧಿಕಾರವೇ ಸಿಗಲಿಲ್ಲ. ಅಧಿಕಾರವಿಲ್ಲದೆಯೇ ಅಂತಹ ಮಾದರಿಗಳನ್ನು ಅನುಷ್ಠಾನಕ್ಕೆ ತರಲು ಬೇಕಾಗಿದ್ದ ಗಾಂಧಿಗಿದ್ದಂತಹ ವರ್ಚಸ್ಸು ಲೋಹಿಯಾಗೆ ಇರಲಿಲ್ಲ. ಆದ್ದರಿಂದ ದಾಸ್ಯ ಮನೋಭಾವವನ್ನು ತೊಲಗಿಸಲು ಸಾಧ್ಯವಾಗಲಿಲ್ಲ.

ಇವತ್ತು ಅದು ಹೆಮ್ಮರವಾಗಿ ಬೆಳೆದು ಸ್ವತಃ ಸರಕಾರವೇ ಗುಲಾಮರನ್ನು ಸೃಷ್ಟಿಸಲು ವಿಶೇಷ ಪ್ರೋತ್ಸಾಹ ಕೊಡುತ್ತಿದೆ! ಶಾಲೆಗಳು ಗುಲಾಮರನ್ನು ತಯಾರು ಮಾಡುವ ಕಾರ್ಖಾನೆಗಳಾಗಿವೆ. ಆಕ್ಸ್‌ಫರ್ಡ್ ಇಂಗ್ಲಿಷನ್ನು ಶಿಕ್ಷಕರಿಗೂ ಮಕ್ಕಳಿಗೂ ಕಲಿಸಲು ಬರುವ ವಿದ್ವಾಂಸರಿದ್ದಾರಲ್ಲ: ಇವರಷ್ಟು ಬ್ರಿಟಿಷ್ ಸಾಮ್ರಾಜ್ಯಕ್ಕೆ ಪರಮ ನಿಷ್ಠಾವಂತರಾದ ಗುಲಾಮರು ಬೇರೆಲ್ಲೂ ಇಲ್ಲ. ಅವರಿಗೆ ಆಕ್ಸ್‌ಫರ್ಡ್ ಇಂಗ್ಲಿಷೇ ಆಗಬೇಕು. ಅಮೆರಿಕನ್ನರು ಅಮೆರಿಕನ್ ಇಂಗ್ಲಿಷನ್ನು ಮಾಡಿಕೊಳ್ಳಬಹುದಾದರೆ ಭಾರತೀಯರು ಇಂಡಿಯನ್ ಇಂಗ್ಲಿಷನ್ನು ಯಾಕೆ ಮಾಡಿಕೊಳ್ಳಬಾರದು ಎಂದು ಯೋಚಿಸಬೇಕಾದ ಅಗತ್ಯವೇ ಅವರಿಗೆ ಹೊಳೆಯುವುದಿಲ್ಲ. ಗುಲಾಮಗಿರಿತನದ ಪೊರೆಯು ಪ್ರಜ್ಞೆಯನ್ನು ಆವರಿಸಿರುವಾಗ ಈ ಯೋಚನೆ ಬರಲು ಸಾಧ್ಯವೂ ಇಲ್ಲ. ಟೈ–ಕೋಟು ಕಟ್ಟಿದ ಗುಲಾಮರಿಗೆ ಸಿಗುವ ಮಾನ್ಯತೆ 'ಸ್ವತಂತ್ರ'ರಿಗೆ ಸಿಗದೆ ಇರುವಾಗ ಎಲ್ಲರೂ ಗುಲಾಮರಾಗಲು ಪೈಪೋಟಿ ನಡೆಸುವುದು ಸಹಜವೇ ಆಗಿದೆ. ಭಾಷಾವಾರು ಪ್ರಾಂತ್ಯ ರಚನೆಯ ಉದಾತ್ತ ಆದರ್ಶಗಳನ್ನು ಬಡಿದುಹಾಕಿರುವುದು ಈ ಮನೋಧರ್ಮವೇ.

ಇದಕ್ಕೆ ಪ್ರತಿಯಾಗಿ ಭಾಷಾ ಮೂಲಭೂತವಾದಿಗಳೂ ಸಹ ಭಾಷಾವಾರು ಪ್ರಾಂತ್ಯ ರಚನೆಯ ಆದರ್ಶಗಳನ್ನು ನಾಶ ಮಾಡುವುದರಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಉದಾಹರಣೆಗೆ ಹೇಳುವುದಾದರೆ ತಮಿಳುನಾಡು–ಕರ್ನಾಟಕಗಳು ತಮ್ಮ ಅನನ್ಯತೆಯನ್ನು ಕಾಪಾಡಿಕೊಳ್ಳ ಬೇಕೆಂಬುದು ಭಾಷಾವಾರು ಪ್ರಾಂತ್ಯ ರಚನೆಯ ಆಶಯವೆನ್ನುವುದು ನಿಜ. ಆದರೆ ಭಾರತೀಯ ಒಕ್ಕೂಟದಲ್ಲೇ ಇರುವ ಈ ಎರಡು ರಾಜ್ಯಗಳು ಭಾರತ–ಪಾಕಿಸ್ತಾನಗಳ ಹಾಗೆ ಕಿತ್ತಾಡಿಕೊಳ್ಳುವುದು ಭಾಷಾವಾರು ಪ್ರಾಂತ್ಯ ರಚನೆಯ ಆದರ್ಶವಲ್ಲ. ಒಂದೇ ಉಪಖಂಡದ ಭೌಗೋಳಿಕ ವ್ಯಾಪ್ತಿಯಲ್ಲಿರುವ, ಸಾಂಸ್ಕೃತಿಕ–ಸಾಮಾಜಿಕ–ಭಾಷಿಕ ಸಾಮೀಪ್ಯವಿರುವ ಭಾರತ–ಪಾಕಿಸ್ತಾನಗಳೇ ಕಿತ್ತಾಡಿಕೊಳ್ಳುವುದಕ್ಕೆ ಅರ್ಥವಿಲ್ಲ. ಅಂಥಾದ್ದರಲ್ಲಿ ಒಂದೇ ಒಕ್ಕೂಟದಲ್ಲಿರುವ ರಾಜ್ಯಗಳು ಶತ್ರು ದೇಶಗಳ ಹಾಗೆ ಕಿತ್ತಾಡಿಕೊಳ್ಳುವುದರಲ್ಲಿ ಭಾಷಿಕ ಮೂಲಭೂತವಾದಿಗಳ ಪಾತ್ರವೇ ದೊಡ್ಡದು. ಸ್ವತಂತ್ರವಾಗಿ ಅಭಿವೃದ್ಧಿ ಹೊಂದಿ ರಾಜ್ಯಗಳು ಸಮರ್ಥವಾಗಿರುತ್ತಿದ್ದರೆ ಭಾಷಾ ಮೂಲಭೂತವಾದಿಗಳ ಪ್ರಭಾವ ಕಡಿಮೆಯಾಗುತ್ತಿತ್ತು. ಆದರದು ನಡೆಯಲೆ ಇಲ್ಲ. ಆದ್ದರಿಂದಲೇ ಭಾಷಾ ಮೂಲಭೂತ ವಾದಿಗಳು ಪ್ರಭಾವಶಾಲಿಗಳಾಗಿದ್ದಾರೆ. ಇವರ ಇನ್ನೊಂದು ಮುಖವೆಂದರೆ ಭಾಷಾ ಪಾವಿತ್ರ್ಯದ ಪ್ರತಿಪಾದನೆ. ಕನ್ನಡದ ಜೊತೆಯಲ್ಲಿ ಅನ್ಯ ಭಾಷೆಯ ಶಬ್ದಗಳು ಬರತಕ್ಕದ್ದಲ್ಲ ಎನ್ನುವಂತಹ

ಮಡಿವಂತಿಕೆಯೇ ಸಾಕು ಕನ್ನಡವನ್ನು ಕೊಲ್ಲುವುದಕ್ಕೆ. ಯಾಕೆಂದರೆ ಚಲನಶೀಲತೆಯೇ ಭಾಷೆಯ ಜೀವಂತಿಕೆಯ ಸಂಕೇತ. ಬದಲಾವಣೆಯ ಜೊತೆಗೆ ಬೇರೆ ಭಾಷೆಗಳಿಂದ ಕೆಲವನ್ನು ಪಡೆದುಕೊಂಡು, ಕೆಲವನ್ನು ಕಳೆದುಕೊಂಡು ಮುಂದುವರಿಯುವ ಭಾಷೆ ಉಳಿದುಕೊಳ್ಳುತ್ತದೆ. ಆ ಚಲನಶೀಲತೆಯನ್ನು ತಡೆದ ತಕ್ಷಣ ಭಾಷೆ ಸಾಯಲು ಶುರುವಾಗುತ್ತದೆ. ಇದಕ್ಕೆ ಸಂಸ್ಕೃತಕ್ಕಿಂತ ಒಳ್ಳೆಯ ಉದಾಹರಣೆ ಬೇಕಾಗಿಲ್ಲ. ಇವತ್ತು ಸಂಸ್ಕೃತವು ಉಳಿದುಕೊಂಡಿರುವುದು ಸಂಸ್ಕೃತವಾಗಿ ಅಲ್ಲ. ಆದರೆ ಇತರ ಭಾರತೀಯ ಭಾಷೆಗಳ ಮುಖಾಂತರ ಅದು ಜೀವಂತವಾಗಿದೆ. ಅದು ಎಷ್ಟೊಂದು ಹದಗೊಂಡುಬಿಟ್ಟಿದೆ ಎಂದರೆ ಯಾವುದೇ ಒಂದು ಭಾರತೀಯ ಭಾಷೆಯಿಂದ ಸಂಸ್ಕೃತವನ್ನು ಕಿತ್ತು ಹಾಕಿದರೆ ಅದೊಂದು ಹೊಸ ಭಾಷೆಯಂತೆ ಭಾಸವಾಗಬಲ್ಲುದು!

ಒಂದು ಕಡೆ ಪರಭಾಷಾ ವ್ಯಾಮೋಹ, ಇನ್ನೊಂದು ಕಡೆ ಸ್ವಭಾಷಾ ದುರಭಿಮಾನ ಇವೆರಡೂ ಅಪಾಯಕಾರಿಗಳೇ. ಆದರೆ ಇವುಗಳಲ್ಲಿ ಪರಭಾಷಾ ವ್ಯಾಮೋಹ ಪ್ರಬಲವಾಗಿದೆ. ಬಹುಶಃ ಅದನ್ನು ವ್ಯಾಮೋಹ ಎನ್ನುವುದಕ್ಕಿಂತ ಪರಭಾಷಾ ಅನಿವಾರ್ಯತೆ ಎನ್ನುವುದು ಸೂಕ್ತವಾದೀತೇನೋ. ಈ ಅನಿವಾರ್ಯತೆಯು ಇಂಗ್ಲಿಷ್‌ಗಿರುವ ಆರ್ಥಿಕ ವ್ಯಾಪ್ತಿಯಿಂದ ಬಂದಿದೆ. ಅದಕ್ಕೆ ಸರಿಸಮನಾಗಿ ಅಲ್ಲದಿದ್ದರೂ; ಅದಕ್ಕೆ ಪ್ರತಿಯಾಗಿ ಕನ್ನಡಕ್ಕೆ ಒಂದು ಆರ್ಥಿಕ ವ್ಯಾಪ್ತಿಯನ್ನು ಸೃಷ್ಟಿಸದೆ ಹೋದರೆ ಕರ್ನಾಟಕ ರಾಜ್ಯರಚನೆಯ ತತ್ತ್ವಾದರ್ಶಗಳೊಂದೂ ಉಳಿಯುವುದಿಲ್ಲ.

ನಾನು ಎತ್ತಿರುವ ಪ್ರಶ್ನೆಗಳಲ್ಲಿ ಕೊನೆಯ ಪ್ರಶ್ನೆಯನ್ನು ಪ್ರಸ್ತಾಪಿಸಬೇಕಾಗಿದೆ. ಕಾಲಘಟ್ಟದ ಬದಲಾವಣೆಯೊಂದಿಗೆ ಒಂದು ತತ್ತ್ವಾದರ್ಶ ಕುಸಿದು ಬೀಳುವುದು; ಅಲ್ಲಿ ಮತ್ತೊಂದು ಹುಟ್ಟಿಕೊಳ್ಳುವುದು ನಡೆದೇ ಇದೆ. ಈ ನಿಟ್ಟಿನಲ್ಲಿ ಭಾಷಾವಾರು ಪ್ರಾಂತ್ಯ ರಚನೆಯ ತತ್ತ್ವಾದರ್ಶವಾದ ಸ್ವಂತಿಕೆ-ಸ್ವತಂತ್ರ ಅಭಿವೃದ್ಧಿಯನ್ನು ಬಿಟ್ಟುಹಾಕುವುದೇ ಸರಿಯಾದ ನಿರ್ಧಾರವಾಗಿರಲೂಬಹುದು. ನ್ಯೂಯಾರ್ಕ್‌ನ ಒಂದು ಮಮಳು ಬೃಹತ್ ಭಾರತೀಯ ಒಕ್ಕೂಟದ ನೂರಾಹತ್ತು ಕೋಟಿ ಜನರು ಹೇಗೆ ಯೋಚಿಸಬೇಕೆಂದು ತೀರ್ಮಾನಿಸುವ ಪದ್ಧತಿಯೇ ಸರಿಯಾಗಿರಲೂಬಹುದು. ಆದರೆ ಅದನ್ನು ಸರಿಯೆಂದು ಒಪ್ಪಿಕೊಳ್ಳಲು ನನಗೆ ಸಾಧ್ಯವಾಗುತ್ತಿಲ್ಲ. ನಾನು ಮತ್ತು ನನ್ನಂತಹ ಕೆಲವರು ಸವಕಲು ನಾಣ್ಯಗಳಾಗಿದ್ದೇವೆ ಎಂದು ಗೊತ್ತಿದ್ದರೂ ಸಹ ನನ್ನ ನಿಲುಮೆಯಲ್ಲಿ ನಾನು ಖಚಿತವಾಗಿದ್ದೇನೆ ಮತ್ತು ಸ್ಪಷ್ಟವಿದ್ದೇನೆ.

* ಕರ್ನಾಟಕ ಲಲಿತ ಕಲಾ ಅಕಾಡೆಮಿ, ಬೆಂಗಳೂರು ಇವರು ೧೦ ಮೇ ೨೦೦೭ ರಂದು ಉಡುಪಿಯಲ್ಲಿ ನಡೆಸಿದ ಸಂಸ್ಕೃತಿ ಸಮ್ಮೇಳನದಲ್ಲಿ ನೀಡಿದ ಉಪನ್ಯಾಸದ ಸಂಕ್ಷಿಪ್ತ ಬರಹ ರೂಪ.

✣ **ಅರವಿಂದ ಚೊಕ್ಕಾಡಿ** : ಕೊಡಂಗಲ್ಲು ಅಂಚೆ, ಮೂಡುಬಿದಿರೆ – ೫೭೪ ೧೯೭ (ದ.ಕ.) ✣

ಹಾಡು ಎರಡು 'ಹಾ' ಹಲವು

ಸ. ರಘುನಾಥ

೧. ಗೂಡೆ ಹಾಕುವ ಅಜ್ಜಿ

ಬೆಳದಿಂಗಳ ಗಂಧ
ಚುಕ್ಕಿಗಳ ನಾದ
ಹೃದಯಕ್ಕೆ ತಂದ
ನುಡಿಯವ್ವೆ ಅಜ್ಜಿ

ಕಥೆ
ಕಟ್ಟಿದ ಮಾಲೆ
ಭಾವದಂಗಳದಲ್ಲಿ
ತೂಗು ಉಯ್ಯಾಲೆ

ಅರ್ಥವಾಗದ್ದು
ಮೋಡವಾಗಿದ್ದು
ಮಳೆಗರೆವುದೀಗ
ಕೋಡಿ ಕೆರೆಯಿಂದ ಕೆರೆಗೆ

ಕೆಲವು ಕಥೆ
ಗುಡಿಯ ಮುಂದಿನೆತ್ತರದ
ಕಂಬದ ನೆತ್ತಿ ಮೇಲಿನ
ಹಣತೆ

ಮೊಗಸೆಗೆ ಬಂದರೂ
ಸಿಗದೆ
ಆಡಿಸುವ
ನೆರಳು ದೀಪ.

ಗೂಢ ನೀರಿಗೆ 'ಗೂಡೆ' ಹಾಕುವ ಅಜ್ಜಿ
ಹೇಳುತ್ತಾಳೆ
ಬೆಳಕಿನಿಂದ
ನೆರಳ ದೀಪ ಮುಡಿಸುವುದು ಕಲಿ.

ಕಲಿಯಲೆಂದೇ ಅವಳು
ನೀರಿಗೆ ಹೊರಟಾಗ ಹಳ್ಳಕ್ಕೆ
ಕಥೆಯೊಂದು ಹೇಳಿದ್ದು
ನೆನಪಲ್ಲಿ ಹೀಗೆ

ಆಚೆ ದಡ ಈಚೆ ದಡ
ನಡುವೆ ದೊಡ್ಡ ಹಳ್ಳ
ಇಳಿದು ಹತ್ತಲು
ಆ ಈ ದಡದಲ್ಲಿ ಮೆಟ್ಟಿಲು

ಆಚೆ ದಡದಿಂದ ಇಳಿದರೆ
ಹತ್ತಬೇಕು ಆಚೆ ದಡಕ್ಕೆ
ಈಚೆ ದಡದಿಂದ ಇಳಿದರೆ
ಈಚೆ ದಡಕ್ಕೆ

ಆ ದಡದಿಂದ ಇಳಿದು ಈ ದಡಕ್ಕೆ
ಈ ದಡದಿಂದ ಇಳಿದು ಆ ದಡಕ್ಕೆ
ಹತ್ತಲು ಇಳಿದು ಈಜಬೇಕು
ಇಲ್ಲವೆ ನೀರು ಬತ್ತಬೇಕು.

ನೀರು ಹತ್ತುವುದು ಮಳೆಗೆ
ಇಳಿಯುವುದು ಬಿಸಿಲಿಗೆ
ಹತ್ತಿಳಿವ ನೀರಿಗೆ ಮೆಟ್ಟಿಲು ಅಳತೆ
ಮೆಟ್ಟಿಲಿಗಿಲ್ಲ ಈ ನೀರಿನಳತೆ

ಕೇಳಿದೆ– ಅಳೆಯಬಹುದೆ ಹೀಗೆ
ಬೆಳಕಿನಿಂದ ದೀಪವನ್ನು
ಗಾಳಿಯಿಂದ ಬಯಲನ್ನು
ಚುಕ್ಕಿಯಿಂದ ಬಾನನ್ನು ?

ನೀರಿನಲೆಯಲ್ಲಿ ಕಣ್ಣು
ಮನಸ್ಸಿನಲ್ಲಿ ಬಾನು
ಮೈ ತುಂಬ ಗಾಳಿ
ಮೌನದಲಿ ಅಜ್ಜಿ

ಕೊಂಚ ಹೊತ್ತಿನ ಮೇಲೆ ಹೇಳಿದಳು
ನಿನ್ನಂಥ ಬುದ್ಧಿಯ ಅರಸನೊಬ್ಬನಿದ್ದ
ನಕ್ಷತ್ರಗಳನೆಣಿಸಿ ಹೇಳೆಂದು
ಪಂಡಿತರ ಕಾಡುತಿದ್ದ.

ಆಸ್ಥಾನದಲ್ಲಿದ್ದವರು, ಬಂದವರು
ತಲೆಬಾಗಿ ನಿಂತವರೆ
ನಾಚಿ
ಸೋಲೇ ತಾವಾಗಿ.

ಅರಸ ಹಾಕಿದ ಪ್ರಶ್ನೆ
ಸಾರಿದ ಬಹುಮಾನ
ಉಳಿದಿತ್ತು ಕಳೆದರೂ
ದಶಮಾನ.

ಊರೂರ ದಾಸಯ್ಯ ಈ ಊರಿಗೂ ಬಂದು
ಅರಸನಿಗೆ ಪೊಡಮಟ್ಟು ಹೇಳಿದ
ಊರೂರಲ್ಲೂ ಜೀಯ
ಎಣಿಸಿ ಬಂದಿರುವೆ ನಕ್ಷತ್ರಗಳ.

ಸಭೆ ಇರಲು ಬೆರಗಲ್ಲಿ
ಅರಸ ಕೇಳಿದ– ದಿಟವೆ !
ಹೇಳಿದರೆ ನಿನಗೇ
ಕಾಯ್ದಿಟ್ಟ ಬಹುಮಾನ.

ಹೇಳಿದರೆ ಒಪ್ಪದಿರಬಹುದು ಬುದ್ಧಿ
ನೀನೆ ಎಣಿಸುವುದೊಳಿತು
ನಾನು ಎಣಿಸಿದ್ದು ಇಷ್ಟೆಂದು
ಹೆಗಲ ಜೋಲದ ಮರಳ ಗುಡ್ಡೆ ಸುರಿದ.

ಅವನು ಬೆಳಕಿನ ಗಾಣದಲ್ಲಿ
ಕತ್ತಲೆಯನರೆದಿದ್ದ ಕಂದ
ಕತ್ತಲಲ್ಲಿ ಕತ್ತಲನರೆದಿದ್ದ ಅರಸ
ಹತ್ತಲಾಗದಿದ್ದ ಅವನು ಎರಿದ ಗುಡ್ಡ.

೨. ಹಾಲು ಉಣಿಸುವ ಹಾಡು

..ದಿದ ಅಜ್ಜ ಹೇಳುವ ಕಥೆಗಳಿಗಿಂತ
..ದವ ಅಜ್ಜಿ ಹೇಳುವ ಕಥೆಗಳೇ ಚೆಂದ
..ವನ ಕಥೆಗಳಲ್ಲಿ ಬುದ್ಧಿ–ವಾದ
..ವಳ ಕಥೆಗಳಲ್ಲಿ ಜೀವನ ನಾದ.

ಅಜ್ಜಿ ಪ್ರಾರಂಭಿಸಿದ್ದು ಹೀಗೆ
ಮುಚ್ಚದ ಬಾಯಿ ಹಸಿವೆಗೆ
ನೋವದಕೆ ಕೈತುತ್ತು
ಎರಡೂ ಬಡತನದ ಹಾಡೆ.

ಅವರನ್ನ ಬಿಟ್ಟು ಇವರ್‍ಯಾರು
ಆಡುವಂತೆ ಮಕ್ಕಳು
ಹಸಿವೆಯೂ ಹೀಗೆಯೆ
ಕೇಳುವುದು ಬಡವರನ್ನೆ.

ಸೋಮ ಎಂಬುವನೊಡನೆ
ಬಡತನವು ಇದ್ದಂತೆ
ಚೆಂದವಿದ್ದಳು ಮಡದಿ
ಹಂಚಿಕೊಂಡು ಹಸಿವೆಯನ್ನೆ.

ಸಿಕ್ಕಾಗ ಸಮಪಾಲು ಗಂಜಿ
ತುಂಡು ಬೆಲ್ಲ ತಂಬಿಗೆ ನೀರು
ಇದ್ದಂದು ಶ್ರೀರಾಮನವಮಿ
ಮುದ್ದೆ ಇದ್ದ ದಿನ ಯುಗಾದಿ.

ಅವರಿಗೊಂದು ಕೂಸು
ಪ್ರೀತಿಯ ಹುವ್ವು

ಅಮ್ಮ ಕೊಡುವ ಮುತ್ತು
ಆ ಮುತ್ತಿಗಿನ್ನು ನೀರು.

ಹಬ್ಬವೆಂದರೆ ಹೀಗೆ
ಒಗೆದಷ್ಟು ಹೊಸ ಬಟ್ಟೆ
ಹೊಟ್ಟೆ ತುಂಬ ಮುದ್ದೆ
ಕಣ್ತುಂಬ ನಿದ್ದೆ.

ಸೋಮ ಬಿಡುವ ನಿಟ್ಟುಸಿರು
ಅವಳೆದೆಗೆ ಉರಿಕಿಚ್ಚು
ಬಿಗಿ ಹಿಡಿವಳು ಕಾವು
ಹೃದಯದಲೆ ಬೆಂಮು.

ತೂಗುತ್ತ ಹಾಡುವಳು
ಅಳಬೇಡ ಕಂದಮ್ಮ
ಹುಣ್ಣಿಮೆಯು ಬರಲಿ
ಕುಡಿಸುವೆ ಬೆಳದಿಂಗಳ ಹಾಲು.

ನಿನ್ನ ನಗೆಯಂತೆ ಮಳೆ ಬರಲಿ
ಊರವರ ಹೊಲದಲ್ಲಿ ಕೂಲಿ ಸಿಗಲಿ
ನಾಲ್ಕೆಮ್ಮೆ ಕರೆದಷ್ಟು ಹನಿ ಹಾಲು ನೀಡಲಿ
ಕೊಟ್ಟವರ ಮನೆ ತುಂಬಿ ತಣ್ಣಗಿರಲಿ.

ಹಾಡಿನಲೆ ಮಗು ಮಗಳಾಗಿ ಬೆಳೆದು
ಇನ್ನೊಂದು ಮನೆಯಲ್ಲಿ ತೂಗಿದಳು ತೊಟ್ಟಿಲು
ಅಳಬೇಡ ಕಂದಮ್ಮ ಹುಣ್ಣಿಮೆಯು ಬರಲಿ
ಕುಡಿಸುವೆ ಬೆಳದಿಂಗಳ ಹಾಲು.

೩. 'ಹಾ' ಹಲವು

೦೧. ಅಂಗವಿಕಲತೆ
ಆ ಅಂಗ
ದಾಚೆ ಇರುವುದಿಲ್ಲ.

೦೨. ನಾನು ಕುಂಟಿದರೆ
ದಾರಿ
ಕುಂಟುವುದಿಲ್ಲ.

೦೩. ಪುಸ್ತಕದ ಹಾಳೆಗಳನ್ನು ಹರಿದು
ಗಾಳಿಪಟ, ದೋಣಿ
ಮಾಡಿದಂತೆ ಹುಡುಗನಿಗೆ ಕನಸು.

೦೪. ಯಾರನ್ನಾದರೂ ಭೇಟಿ
ಮಾಡಿಸುವುದು
ದಾರಿಯೊಂದೆ.

೦೫. ದಾರಿ
ದಾರಿಗೆ
ದೂರವಲ್ಲ.

೦೬. ದಾರಿಯಲ್ಲೆ ಇದೆ
ಹತ್ತಿರ
ದೂರ.

೦೭. ಕಿಚ್ಚಿಕ್ಕುವವರ ಎದೆಗೇ ಬಿದ್ದರೆ
ಕಿಚ್ಚು
ಯಾರ ಮನೆಯೂ ಸುಡದು.

೦೮. ಮಳೆಯಾಗುವುದು ಹೇಗೆಂದು
ಮೋಡಕ್ಕೆ
ತೋರಿಸಿತು ಬಡವಿಯ ಕಣ್ಣು.

೦೯. ನದಿಗೆ
ನೀರು
ಕೂಡಿ.

೧೧. ಇಷ್ಟೇ ಮೌನದಲ್ಲಿ
ಕೆತ್ತಿತ್ತೆ ಉಳಿ
ಬಾಹುಬಲಿಯ ಮೂರ್ತಿ.

೧೩. ಹಾಗಿ ಚಳಿಯಲ್ಲಿ ಮುದುಕ
ಮಲಗೂ ಕೋಣೆಯಲ್ಲಿ
ಮುದುಕಿ ದೇವರ ಮನೆಯಲ್ಲಿ.

೧೫. ಗಿಣಿ ಬಂತು ಗಿಣಿ
ಹೇಳದೆ
ಹೋಯ್ತು ಕಣಿ.

೧೭. ಬ್ರಹ್ಮ ಹೇಳಿದ
ಬಟ್ಟಲು ನನ್ನ ಸೃಷ್ಟಿ
ಮಧು ನಿನ್ನ ದೃಷ್ಟಿ.

೧೯. ಪಂಚಾಂಗದಲ್ಲಿಲ್ಲ
ಮಧು
ಕುಡಿಯುವ ಮುಹೂರ್ತ.

೨೧. ಹಕ್ಕಿಯನ್ನು ಹಿಡಿ
ಅದರ
ಹಾಡಿನಲ್ಲಿ.

೨೩. ಹಳ್ಳದಲ್ಲಿ ದಾರಿ
ಪಡೆಯುತ್ತಿತ್ತು
ವಿಶ್ರಾಂತಿ.

೧೦. ಕಿತ್ತು ತಂದರೆ ಗೂಡು
ಹಕ್ಕಿ
ಬರುವುದಿಲ್ಲ ಹಿಂಬಾಲಿಸಿ.

೧೨. ಹೂಬಿಟ್ಟ ಅವರೆ
ಚಂದಮಾಮನ
ಸಣ್ಣ ಉಳಿತಾಯ ಖಾತೆ.

೧೪. ಬೇಸಗೆಯಲ್ಲಿ ಕೆರೆಯ ಮೈ ತುಂಬ
ಮುಪ್ಪು
ಸುಕ್ಕಿನ ಗೆರೆ.

೧೬. ಕುಂಟೋಕೆ ನಾಚಿದ ಹುಡುಗಿ
ನೀ ಆಡೋದು ಹೇಗೆ
ಕುಂಟೊಬಿಲ್ಲೆ?

೧೮. ಬಟ್ಟಲಲ್ಲಿದೆ ಅರ್ಥ ಮಧು
ಎಂದರೆ
ಬಟ್ಟಲೇ ಅರ್ಥವೆಂದಲ್ಲ.

೨೦. ಮಧುವಿಗೇ ಅಮಲು
ಹತ್ತಿಸುತ್ತೆ
ಕವಿತೆ.

೨೨. ಹಾ, ಕೊಲ್ಲು ನೋವನ್ನು
ಇನ್ನೊಬ್ಬರ ಎದೆ
ಗಾಯ ಮಾಡುವ ಮೊದಲು.

✤ ಸ.ರಘುನಾಥ :
ಶ್ರೀಲಕ್ಷ್ಮೀ ಪ್ರಾವಿಷನ್ ಸ್ಟೋರ್ಸ್ ರಸ್ತೆ, ರಾಮಕೃಷ್ಣ ಬಡಾವಣೆ,
ಶ್ರೀನಿವಾಸಪುರಂ-೫೬೩ ೧೩೫ (ಕೋಲಾರ) ✤

ಇಲ್ಲಿ ಜನ ಮಾತನಾಡುವುದಿಲ್ಲ... ಆರ್. ಪವಿತ್ರ ಪ್ರಿಯಭಾಷಿಣಿ

ಧರಣಿಯ ಧರಣೆ ಬಗ್ಗೆ
ತೂಗಿ ತೆನೆಯುವ ತೆನೆಯ ಬಗ್ಗೆ
ಅಕ್ಕರೆಯ ಸ್ಫುರಿಸುವ ಬಗ್ಗೆ

ತಟ್ಟುವ ನಿಶೆಯ ಬಗ್ಗೆ
ಸುಲಿಪಲ್ಲ ಗೊರವನ ಬಗ್ಗೆ
ಹೊಳೆಯುವ ದಿವ್ಯ ಮುಖದ ಬಗ್ಗೆ

ಕೇಳದ ಆಕ್ರಂದನದ ಬಗ್ಗೆ
ಮೂಡದ ಹಾದಿಯ ಬಗ್ಗೆ
ಜನಾಂಗದ ಅಂತಃಸಾಕ್ಷಿಯ ಬಗ್ಗೆ

ಸಾವಿನ ನಿಗೂಢತೆ ಬಗ್ಗೆ
ನಿರಂತರ ದಿಕ್ಕೆಟ್ಟ ದೃಸೇಸಿಗಳ ಬಗ್ಗೆ
ಬದುಕ ಜೇಲಿ ಕಟ್ಟಿಕೊಳ್ಳುವ ಬಗ್ಗೆ

ಶಂಖ ಮೊಳಗುತ್ತಿದೆ...
ಲೋಕವೆಲ್ಲ ಮಿನುಗುತ್ತಿದೆ
ಕಾರುಣ್ಯದಲಿ ಮಿಂದಂತೆ

ಮಾತು ಮುತ್ತು ಕಟ್ಟುತ್ತದೆ
ಭಾರೀ ವಹಿವಾಟಿನ
ಲಾಭ ನಷ್ಟದ ಸುಳಿವಿನಲ್ಲಿ

ಮೀನು ಸುಳಿದಾಡಿ
ಅತ್ತಿತ್ತ... ಅಬ್ಬರಿಸುತ್ತವೆ
ಷೇರು ಪೇಟೆಯ ಕೊಬ್ಬಿದ ಗೂಳಿಯಂತೆ.

✤ ಆರ್.ಪವಿತ್ರ ಪ್ರಿಯಭಾಷಿಣಿ :
ತಂದೆ : ಟಿ. ಆರ್. ರಾಧಾಕೃಷ್ಣ, 'ಆತ್ಮೀಯ', ೨೭೦-ಎ,
ಫಿಲ್ಟರ್ ಹೌಸ್ ರಸ್ತೆ, ಚಿತ್ರದುರ್ಗ-೫೭೭ ೫೦೧ ✤

ಗುಂಥರ್ ಗ್ರಾಸ್ : ವಿಳಂಬದ ಆತ್ಮಸ್ವೀಕೃತಿ*

ಹಿಂದಿಯಲ್ಲಿ : **ವಿಜಯ್ ಕುಮಾರ್** ಕನ್ನಡಕ್ಕೆ : **ಆರ್. ಪಿ. ಹೆಗಡೆ**

'ಅಲಮಾರಿನಲ್ಲಿ ಅಡಗಿಸಿಟ್ಟ ಅಸ್ಥಿಪಂಜರ ಹೊರಗೆ ಬಂದಿದೆ' ಎಂಬುದು ಇಂಗ್ಲಿಷ್‌ನ ಒಂದು ಗಾದೆ. ನೀವು ಎಲ್ಲರ ದೃಷ್ಟಿಯಿಂದ ಅಡಗಿಸಿಟ್ಟ ರಹಸ್ಯ ಒಮ್ಮೆಲೇ ಬೆಳಕಿಗೆ ಬಂದಿದೆ ಎಂದು ಅರ್ಥ. ಆತ್ಮಸ್ವೀಕೃತಿಗಳು ಇಂಥದೇ ಯಾವುದೋ ಜೋಪಾನವಾಗಿ ಕಾದಿಟ್ಟ ನಿಗೂಢ ವನ್ನು ಪ್ರಕಟ ಮಾಡಲಿಕ್ಕಾಗಿಯೇ ಇರುತ್ತವೆ. ಪ್ರತಿಯೊಂದು ಆತ್ಮಸ್ವೀಕೃತಿಯೂ ಬಹುಶಃ ಅತೀತದ ಯಾವುದೋ ಪ್ರೇತಬಾಧೆಯಿಂದ ಬಿಡುಗಡೆಗೊಳ್ಳುವ ಚಡಪಡಿಕೆಯಾಗಿರುತ್ತದೆ. ಆದರೆ ಯಾವಾಗ ಹೀಗಾಗುತ್ತದೆ. ಆತ್ಮಸ್ವೀಕೃತಿ ಬಂದ ಸಂದರ್ಭ ಯಾವುದು. ಮತ್ತು ಅದರ ಪರಿಸ್ಥಿತಿಗಳೇನು ಎಂಬುದು ಮುಖ್ಯ ಪ್ರಶ್ನೆ.

ಬಡಪಾಯಿ ಗುಂಥರ್ ಗ್ರಾಸ್! ಆತ ೮೦ ರ ವಯಸ್ಸಿನಲ್ಲಿ ಇತ್ತೀಚೆಗೆ ತಮ್ಮ ಆತ್ಮಸ್ವೀಕೃತಿಯನ್ನು ಬಹಿರಂಗಪಡಿಸಿದ್ದಾರೆ. ಎರಡನೆಯ ಮಹಾಯುದ್ಧದ ದಿನಗಳಲ್ಲಿ ಅವರು ಹಿಟ್ಲರನ ಫ್ಯಾಸಿಸ್ಟ್ ಸೇನೆಯಲ್ಲಿ ಕಾರ್ಯನಿರತರಾಗಿದ್ದರಂತೆ. ಈ ಸತ್ಯ ಹೊರಗೆ ಬರುತ್ತಲೇ ಭಾರೀ ಗೊಂದಲವೆದ್ದಿದೆ. ಎಂದಾದರೊಂದು ದಿನ ಈ ಸತ್ಯ ಹೊರಗೆ ಬರಲೇಬೇಕಾಗಿತ್ತು ಎಂದು ಗುಂಥರ್ ಗ್ರಾಸ್ ಹೇಳುತ್ತಾರೆ. ೨೦೦೬ ರ ಆಗಸ್ಟ್ ೧೨ ರಂದು ಜರ್ಮನಿಯ ಒಂದು ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ಗ್ರಾಸ್ ೧೯೪೪ ರಲ್ಲಿ ಎರಡನೆಯ ಮಹಾಯುದ್ಧದ ಕೊನೆಯ ತಿಂಗಳುಗಳಲ್ಲಿ ಹಿಟ್ಲರನ ಕುಖ್ಯಾತ ಸೈನ್ಯ ವಿಭಾಗದ 'ವೆಫನ್ ಎಸ್. ಎಸ್.'ದ ಒಬ್ಬ ಸಕ್ರಿಯ ಸದಸ್ಯರಾಗಿದ್ದುದಾಗಿಯೂ. ರಷ್ಯ ಸೇನೆಯ ವಿರುದ್ಧ ಹೋರಾಡುತ್ತಿದ್ದುದಾಗಿಯೂ ರಹಸ್ಯೋದ್ಘಾಟನೆ ಮಾಡಿದ್ದಾರೆ. ಸೈನ್ಯದ 'ವೆಫನ್ ಎಸ್. ಎಸ್'. ವಿಭಾಗವು ನಾಜಿಗಳು ಯಹೂದಿಗಳ ಮೇಲೆ ನಡೆಸಿದ ಅತ್ಯಾಚಾರಗಳು ಹಾಗೂ ನರಸಂಹಾರದಿಂದಾಗಿಯೂ ಕುಖ್ಯಾತವಾಗಿದೆ.

ಗ್ರಾಸ್‌ರ ಈ ಆತ್ಮಸ್ವೀಕೃತಿಯ ಅನಂತರ ತೀಕ್ಷ್ಣವಾದ ಪ್ರತಿಕ್ರಿಯೆಗಳು ಎದುರು ಬರುತ್ತಿವೆ. ಗ್ರಾಸ್‌ರನ್ನು ಕಟುವಾಗಿ ನಿಂದಿಸಲಾಗುತ್ತಿದೆ. ಈ ಮಹಾನ್ ಲೇಖಕನು ತನ್ನ ಇಳಿವಯಸ್ಸಿನಲ್ಲಿ ಇದನ್ನೆಲ್ಲ ಹೇಳುವುದು ಒಂದು ರೀತಿಯಲ್ಲಿ ಉದ್ದೇಶಪೂರ್ವಕವಾದ ಅವಕಾಶವಾದವೇ? ಅವರು ಇಷ್ಟು ದಿನ ಯಾಕೆ ಸುಮ್ಮನಿದ್ದರು ? ಕಳೆದ ೬೦ ವರ್ಷಗಳಿಂದ ಅವರ ಬಾಯಿಗೆ ಯಾಕೆ ಬೀಗ ಬಿದ್ದಿತ್ತು? ತಮ್ಮ ಆತ್ಮಕಥೆ ದಾಖಲೆ ರೀತಿಯಲ್ಲಿ ಮಾರಾಟವಾಗಲಿ ಎಂದೇ ಈಗ ಇದನ್ನೆಲ್ಲ ಅವರು ಹೇಳುತ್ತಿದ್ದಾರೆಯೇ?- ಎಂದೆಲ್ಲ ಕೇಳಲಾಗುತ್ತಿದೆ. ಈ ಪುಸ್ತಕ ಬಿಡುಗಡೆಯಾಗುವ ಕೆಲವು ದಿನಗಳ ಮೊದಲು ಗುಂಥರ್ ತಮ್ಮ ಆತ್ಮಸ್ವೀಕೃತಿಯ ಮೂಲಕ ಒಂದು ರೀತಿಯ ಸಂಚಲನವನ್ನುಂಟು ಮಾಡಿದ್ದಾರೆ. ಪರಿಣಾಮವಾಗಿ ಈ ಆತ್ಮಕತೆಯ ಮಾರಾಟವು ಜೋರಾಗಿ ನಡೆಯತೊಡಗಿದೆ. ೨೦೦೬ ರ ಆಗಸ್ಟ್ ಮೂರನೆಯ ವಾರದಲ್ಲಿ ಈ ಪುಸ್ತಕ ಹೊರಬಂದಿದೆ. ಒಂದೇ ವಾರದೊಳಗೆ ಅದರ ಅರವತ್ತು ಸಾವಿರ ಪ್ರತಿ ಮಾರಾಟವಾಗಿವೆ. ಈ ಪುಸ್ತಕದ ಪ್ರಕಾಶಕನು ಇದನ್ನು ಮೊದಲು ಸಪ್ಟೆಂಬರ್ ವೇಳೆಗೆ ಬಿಡುಗಡೆ ಮಾಡಬೇಕೆಂದು ಕೊಂಡಿದ್ದ. ಆದರೆ ಗ್ರಾಸ್ ಈ ಗುಟ್ಟು ಬಹಿರಂಗಪಡಿಸಿದ ಅನಂತರ ಈ ಬಿರುಗಾಳಿಯ ಲಾಭ ಪಡೆಯುವ ಅವಕಾಶವನ್ನು ಅವನೇಕೆ ಕಳೆದುಕೊಂಡಾನು? ಗ್ರಾಸ್‌ನ ಸಂದರ್ಶನದ ನಂತರ ಮೂರು ದಿನಗಳೊಳಗೆ ಈ ಪುಸ್ತಕವನ್ನು ರಿಲೀಜ್ ಮಾಡಲಾಯಿತು. ಪುಸ್ತಕ ಬಿಡುಗಡೆ ಮಾಡುತ್ತಲೇ ಪ್ರಕಾಶಕ, 'ಸುನಾಮಿ ತೆರೆಗಳು ಬಂದಿವೆ' ಎಂದು ಹೇಳಿದ್ದ.

ಇಲ್ಲಿ ಪ್ರಶ್ನೆಯೇಳುವುದು ಇಷ್ಟೇ. ಗ್ರಾಸ್‌ನಂಥ ಲೇಖಕರು ಇದನ್ನೆಲ್ಲ ಹೇಳಿರುವುದು ನಿಶ್ಚಯವಾಗಿಯೂ ತನ್ನ ಪುಸ್ತಕದ ಮಾರಾಟವನ್ನು ಹೆಚ್ಚಿಸುವ ಸಲುವಾಗಿ, ಪ್ರಚಾರದ ಸ್ಟಂಟನ್ನಾಗಿ

ಬಳಸಿಕೊಳ್ಳುವುದಕ್ಕಾಗಿಯೇ? ಈಗ ಎಲ್ಲ ಬಗೆಯ ಪ್ರತಿಕ್ರಿಯೆ ಬರುತ್ತಿವೆ. ಗ್ರಾಸ್‌ನ ಈ ತಡವಾಗಿ ಬಂದ ಆತ್ಮಸ್ವೀಕೃತಿಯಿಂದಾಗಿ ಅವರ ಬಹಳಷ್ಟು ಪ್ರಶಂಸಕರೂ ನಿರಾಶರಾಗಿದ್ದಾರೆ. ಜೆಕೊಸ್ಲೊವಾಕಿಯಾದ ಪೆನ್ ಕ್ಲಬ್ ೧೯೯೪ ರಲ್ಲಿ ಗುಂಥರ್ ಗ್ರಾಸ್ ಅವರಿಗೆ ನೀಡಿದ ಪ್ರತಿಷ್ಠಿತ ಸಮ್ಮಾನ 'ಕಾರೆಲ್ ಚಾಪೆಕ್ ಪುರಸ್ಕಾರ'ವನ್ನು ಅವರಿಂದ ಮರಳಿ ಪಡೆಯಲು ಯೋಚಿಸುತ್ತಿದೆ. ಗ್ರಾಸ್ ಹುಟ್ಟಿದ್ದು ೧೯೨೭ ರಲ್ಲಿ. ಜರ್ಮನಿ ಮತ್ತು ಪೋಲೆಂಡ್‌ಗಳ ಗಡಿಯಲ್ಲಿರುವ ನಗರ ಡೆನ್ಜಿಗ್‌ನಲ್ಲಿ. ಈಗ ಅದು ಪೋಲೆಂಡ್‌ನಲ್ಲಿದೆ. ಅದಕ್ಕೆ ಈಗ 'ಡಾನ್ಸ್ಕ್' ಎಂದು ಹೆಸರಿದೆ. ಈ ನಗರದ ಜೊತೆ ಗ್ರಾಸ್‌ನ ಗಾಢವಾದ ಸಂಬಂಧವಿದೆ. ಈ ಕಾರಣದಿಂದಲೇ ಪೋಲೆಂಡ್‌ನ ಈ ನಗರದ ಸಿಟಿ ಕೌನ್ಸಿಲ್ ಗ್ರಾಸ್‌ರಿಗೆ ನಗರದ ಪ್ರತಿಷ್ಠಿತ ನಾಗರಿಕತೆಯನ್ನು ನೀಡಿ ಸಮ್ಮಾನಿಸಿತ್ತು. ಈಗ ಅದೇ ಸಿಟಿ ಕೌನ್ಸಿಲ್ ತಾನೇ ಕೊಟ್ಟ ಪ್ರತಿಷ್ಠಿತ ನಾಗರಿಕತೆಯನ್ನು ರದ್ದುಗೊಳಿಸಲು ಯೋಚಿಸುತ್ತಿದೆ. ಈ ನಗರಕ್ಕೆ ವಿಶೇಷ ಐತಿಹಾಸಿಕ ಮಹತ್ವ ಇದೆ. ಎರಡನೆಯ ಮಹಾಯುದ್ಧ ಪ್ರಾರಂಭವಾದದ್ದು ಈ ನಗರದಲ್ಲಿ. ರಕ್ತದ ಮೊದಲ ಹನಿ ಬಿದ್ದುದೂ ಇಲ್ಲೇ. ಹಿಟ್ಲರನ ವಾಫೆನ್ ಎಸ್.ಎಸ್.ನಂತಹ ಕುಖ್ಯಾತ ಸೈನ್ಯ ಭಾಗದ ಹಿಂದಿನ ಸದಸ್ಯನು ಈಗ ಈ ನಗರದ ಪ್ರತಿಷ್ಠಿತ ನಾಗರಿಕನಾಗುವುದು ನಗರಕ್ಕೆ ಒಪ್ಪಿಗೆಯಿಲ್ಲ. ನಗರದ ನಾಗರಿಕ ಅಧಿಕಾರಿಗಳು ಗುಂಥರ್ ಗ್ರಾಸ್‌ರಿಗೆ ಕೊಟ್ಟ ಸಮ್ಮಾನಿತ ನಾಗರಿಕತೆಯನ್ನು ರದ್ದುಗೊಳಿಸುವ ನಿರ್ಣಯದ ಸಂಬಂಧದಲ್ಲಿ ನಗರದ ನಾಗರಿಕರ ಅಭಿಪ್ರಾಯದ ಸರ್ವೆ ಮಾಡಿಸಿದರು. ಮೋಜಿನ ವಿಷಯವೆಂದರೆ ಬಹುಮತವು ಈ ನಿರ್ಣಯದ ವಿರುದ್ಧವಾಗಿತ್ತು. ಮುನಿಸಿಪಲ್ ಕೌನ್ಸಿಲ್, ಗತಿಸಿ ಹೋದ ಯಾವುದೇ ವಿಷಯದ ಬಗ್ಗೆ ನಿರ್ಣಯ ನೀಡುವುದಿಲ್ಲವೆಂದು ನಗರದ ಮೇಯರ್ ಹೇಳಿದ್ದಾರೆ. ಪೋಲೆಂಡ್‌ನ ಹಿಂದಿನ ರಾಷ್ಟ್ರಪತಿ, ೧೯೮೦ ರಲ್ಲಿ ಪೋಲೆಂಡ್‌ನ ಮಡಿಲಲ್ಲೇ ನಡೆದ ಕಾರ್ಮಿಕರ ಪ್ರಖ್ಯಾತ ಬಂದ್ 'ಸಾಲಿಡರಿಟಿ'ಯ ಮುಖಂಡ ಲೇಕ್ ವಾಲೇಸಾ ಅವರು ಗುಂಥರ್ ಗ್ರಾಸ್ ಹಿಟ್ಲರನ ಫ್ಯಾಸಿಸ್ಟ್ ಸೈನ್ಯದಲ್ಲಿ ತಾವು ಇದ್ದ ಸತ್ಯವನ್ನು ಅರವತ್ತು ವರ್ಷಗಳವರೆಗೆ ಮುಚ್ಚಿಟ್ಟದ್ದನ್ನು ಕಟುವಾಗಿ ಟೀಕಿಸಿದ್ದರು. ಗ್ರಾಸ್ ಸ್ವೇಚ್ಛೆಯಿಂದ ಡಾನ್ಸ್ಕ್ ನಗರದ ಪ್ರತಿಷ್ಠಿತ ನಾಗರಿಕತೆಯನ್ನು ತ್ಯಾಗ ಮಾಡಬೇಕೆಂದೂ ಹೇಳಿದ್ದರು. ನಂತರ ಸಾರ್ವಜನಿಕ ರೂಪದಲ್ಲಿ ಅವರು ತಮ್ಮ ಟೀಕೆಯನ್ನು ವಾಪಸು ಪಡೆದಿದ್ದಾರೆ. ಜರ್ಮನ್ ಸಾಹಿತ್ಯದ ಪ್ರಮುಖ ವಿಮರ್ಶಕ ಹೆಲ್‌ಮುಥ್ ಕಾರಾಸೇಕ್ ಅವರು ಗುಂಥರ್ ಗ್ರಾಸ್‌ರು ತಮ್ಮ ಹಿಂದಿನ ಐದು ದಶಕಗಳ ಪ್ರತಿಷ್ಠೆ ಹಾಗೂ ನೈತಿಕ ದನಿಯನ್ನು ಕಳೆದುಕೊಂಡಿದ್ದಾರೆ. ಬಹಳಷ್ಟು ಜನರಿಗೆ ಗುಂಥರ್ ಗ್ರಾಸ್ ವಿಷಯವಾಗಿ ಲೆಕ್ಕ ಚುಕ್ತಾ ಮಾಡುವ ಅವಕಾಶವೂ ದೊರೆತಂತಾಗಿದೆ ಎಂದು ಹೇಳಿದ್ದಾರೆ. ಗ್ರಾಸ್ ಜರ್ಮನಿಯ ಕ್ರಿಶ್ಚಿಯನ್ ಡೆಮಾಕ್ರಟಿಕ್ ಯೂನಿಯನ್‌ನ್ನು ಸದಾ ವಿರೋಧಿಸಿದ್ದಾರೆ. ಯಾಕೆಂದರೆ ಈ ಪಾರ್ಟಿಯು ನಾಜಿಗಳಿಗೆ ದಳದ ಸದಸ್ಯತ್ವವನ್ನು ನೀಡಿದೆ. ಜೀವನವಿಡೀ ರಾಜನೀತಿಜ್ಞರಿಗೆ ನೈತಿಕತೆಯ ಉಪದೇಶ ಬೋಧಿಸಿದ ಗುಂಥರ್ ಗ್ರಾಸ್‌ರ ಸ್ವಂತದ ನೈತಿಕತೆಯೇನು ಎಂದು ಜನ ಈಗ ಕೇಳುತ್ತಿದ್ದಾರೆ. ಗುಂಥರ್ ಗ್ರಾಸ್ ೧೯೯೯ ರಲ್ಲಿ ಸಿಕ್ಕಿದ ನೊಬೆಲ್ ಪುರಸ್ಕಾರ ಸಹಿತ ಈವರೆಗೆ ದೊರೆತ ಎಲ್ಲ ಪುರಸ್ಕಾರಗಳು, ಸಮ್ಮಾನಗಳು ಹಾಗೂ ಪದಕಗಳನ್ನೂ ಸ್ವಇಚ್ಛೆಯಿಂದ ಹಿಂತಿರುಗಿಸಬೇಕು, ಅವರು ಅವಕ್ಕೆ ಪಾತ್ರರಲ್ಲ, ಎಂಬುದೇ ಈಗ ಅವರ ನೈತಿಕತೆಯ ಬಗ್ಗೆ ತಕರಾರು.

ಗುಂಥರ್ ಗ್ರಾಸ್‌ರ ಈ ಆತ್ಮಸ್ವೀಕೃತಿ ಜನರಿಗೆ ಇತಿಹಾಸದ ಒಂದು ವಿಚಿತ್ರ ವಿಡಂಬನೆಯಾಗಿ ಕಾಣಿಸುತ್ತಿದೆ. ಯುದ್ಧಾನಂತರದ ವರ್ಷಗಳಲ್ಲಿ ಗ್ರಾಸ್ ನಾಜೀ ಯುಗದ ಎಲ್ಲಕ್ಕಿಂತ ಕಠೋರ ಟೀಕಾಕಾರರಾಗಿ ಹೊರಹೊಮ್ಮಿದ್ದರು. ಜರ್ಮನಿಯು ಸಾಹಸದಿಂದ ತನ್ನ ಗತಕಾಲದೊಡನೆ ಮುಖಾಮುಖಿಯಾಗಬೇಕು, ಅದರಿಂದ ಕಣ್ಣು ತಪ್ಪಿಸಿಕೊಳ್ಳುವುದಾಗಲಿ, ಅದರ ಮೇಲೆ ಪರದೆ ಎಳೆಯುವುದಾಗಲಿ ಮಾಡಬಾರದು. ಅಂದಾಗಲೇ ಜರ್ಮನಿಗೆ ಇತಿಹಾಸದ ತನ್ನ ತಪ್ಪುಗಳಿಂದ ಹಾಗೂ ತನ್ನ ಕೆಟ್ಟ ಗತಕಾಲದಿಂದ ಬಿಡುಗಡೆ ದೊರೆಯಬಲ್ಲದು ಎಂಬುದು ಅವರ

ಹೇಳಿಕೆಯಾಗಿತ್ತು. ೧೯೮೯ ರಲ್ಲಿ ಬರ್ಲಿನ್ ಗೋಡೆಯನ್ನು ಕೆಡಹುವ ಸಂದರ್ಭದಲ್ಲಿಯೂ ಗ್ರಾಸ್ ಅದನ್ನು ವಿರೋಧಿಸಿದ್ದರು. ಎರಡೂ ಜರ್ಮನಿಗಳ ಏಕೀಕರಣದಿಂದ ಜರ್ಮನಿಯು ಒಂದು ಬಹು ದೊಡ್ಡ ಶಕ್ತಿಶಾಲಿ ರಾಷ್ಟ್ರವಾಗುವುದು, ಮತ್ತು ಅದರಿಂದಾಗಿ ಅಂಥ ರಾಷ್ಟ್ರವಾದದ ಭಾವನೆಯು ಮತ್ತೊಮ್ಮೆ ತಲೆಯೆತ್ತುವುದು, ಫ್ಯಾಸಿಸ್ಟ್ ತತ್ವವು ಇನ್ನೊಮ್ಮೆ ತನ್ನ ಸ್ಥಾನವನ್ನು ಆಕ್ರಮಿಸಿಕೊಳ್ಳುವುದು ಎಂಬುದು ಗ್ರಾಸ್‌ರ ಅಭಿಪ್ರಾಯವಾಗಿತ್ತು. ನಾಜಿಗಳು ಕಳವು ಮಾಡಿದ ಕಲಾಕೃತಿಗಳಿಗಾಗಿ ಒಂದು ಪೋಲಿಶ್-ಜರ್ಮನ್ ಸಂಗ್ರಹಾಲಯವನ್ನು ಮಾಡಬೇಕು ಎಂದೂ ಅವರು ಹೇಳಿದ್ದರು. ಇತ್ತೀಚಿನ ದಿನಗಳಲ್ಲಿ ಪೋಲೆಂಡ್ ಮತ್ತು ಜರ್ಮನ್ ಸಂಬಂಧಗಳು ಸುಧಾರಣೆ ಹೊಂದುತ್ತಿರುವಲ್ಲಿ ಗುಂಥರ್ ಗ್ರಾಸ್‌ರ ಲೇಖನವೂ ಒಂದು ರೀತಿಯಲ್ಲಿ ಕಾರಣವಾಗಿದೆ. ಬರವಣಿಗೆಯಲ್ಲದೆ ಅವರು ೧೯೮೦ ರಿಂದ ಶಾಂತಿ ಆಂದೋಲನದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತ ಬಂದಿದ್ದಾರೆ. ಎರಡು ಬಾರಿ ಅವರು ಭಾರತಕ್ಕೂ ಬಂದಿದ್ದಾರೆ. ೧೯೮೦ ರ ಶಾಂತಿ ಆಂದೋಲನದ ಸಂಬಂಧದಲ್ಲಿ ಕೊಲ್ಕತ್ತಾಕ್ಕೂ ಗ್ರಾಸ್ ಬಂದಿದ್ದರು. ಇಲ್ಲಿ ಆರು ತಿಂಗಳು ನೆಲೆಸಿದ್ದರು. ಕೊಲ್ಕತ್ತಾ ಪ್ರವಾಸದ ಅನುಭವಗಳ ಮೇಲೆ ಅವರದೊಂದು ಪುಸ್ತಕವೂ ಬಂದಿದೆ. 'ಜೀಭ್ ದಿಖಾನಾ' ಎಂಬ ಹೆಸರಿನಿಂದ ವಿಷ್ಣು ಖರೆ ಅದನ್ನು ಹಿಂದಿಗೆ ಅನುವಾದಿಸಿದ್ದಾರೆ.

ಕಳೆದ ಐದು ದಶಕಗಳ ಅವಧಿಯಲ್ಲಿ ಅವರು ಜರ್ಮನಿಯಲ್ಲಿ ಮನುಷ್ಯನ ನೈತಿಕ ವಿವೇಕ, ಏಕಾಂಗಿ ಸಾಹಸ ಹಾಗೂ ಶಕ್ತಿಯ ಸಮ್ಮುಖದಲ್ಲಿ ತಳಮಟ್ಟದ ವಿರೋಧದ ಪರ್ಯಾಯ ದನಿಯಾಗಿದ್ದಾರೆ ಎಂಬುದು ಗುಂಥರ್ ಗ್ರಾಸ್‌ರ ವ್ಯಕ್ತಿತ್ವವನ್ನು ಗಮನಿಸಿದರೆ ಗೊತ್ತಾಗುತ್ತದೆ. ಈಗಿನ ಸಂದರ್ಭದಲ್ಲಿ ಅವರನ್ನು ವಿಶ್ವದ ಬಹು ದೊಡ್ಡ ಜೀವಂತ ಕತೆಗಾರರನ್ನಾಗಿ ಭಾವಿಸಲಾಗುತ್ತದೆ. ಅವರಿಗೆ ಎದುರಾಗಿ ಲ್ಯಾಟಿನ್ ಅಮೆರಿಕದ ಕತೆಗಾರ ಗಾರ್ಸಿಯಾ ಮಾರ್ಕ್ವೆಜ್ ಅವರನ್ನು ಮಾತ್ರ ಇಡಬಹುದಾಗಿದೆ. ಗುಂಥರ್ ಗ್ರಾಸ್‌ರಿಗೆ ಎಡಪಂಥೀಯ ವಿಚಾರಧಾರೆಯೊಡನೆ ಆಳವಾದ ಸಂಪರ್ಕವಿದ್ದರೂ ವಾಮಪಂಥೀಯ ಅತಿವಾದದೊಂದಿಗೆ ಅವರ ಅಸಮ್ಮತಿಯಿರುವುದನ್ನೂ ಗ್ರಹಿಸಬೇಕು. ಅವರು ಜನತಾಂತ್ರಿಕ ರೀತಿಯಿಂದ ಆಗುವ ಸುಧಾರಣೆಗಳ ಸಮರ್ಥಕರು. ಅದನ್ನವರು ಶಂಬುದ ಹುಳುವಿನ ವೇಗದಿಂದಾಗುವ ಸುಧಾರಣೆ ಎನ್ನುತ್ತಾರೆ.

ಗುಂಥರ್ ಗ್ರಾಸ್ ಐವತ್ತು ವರ್ಷಗಳ ವರೆಗೆ ತಮ್ಮ ಜೀವನದ ಒಂದು ಮಹತ್ವಪೂರ್ಣ ಸತ್ಯವನ್ನು ಬಚ್ಚಿಟ್ಟಿದ್ದರು. ಇದೊಂದು ಸಂಗತಿಯಿಂದ ಅವರ ಸಮಗ್ರ ವ್ಯಕ್ತಿತ್ವ ಹಾಗೂ ಕೃತಿತ್ವವನ್ನೇ ಪ್ರಶ್ನೆಗೆ ಈಡು ಮಾಡಬಹುದೇ? ಗ್ರಾಸ್ ಅವರ 'ಟಿನ್ ಡ್ರಮ್' ಕಾದಂಬರಿ ಓದಿದವರಿಗೆ ಗೊತ್ತು– ಒಬ್ಬ ಕಲಾವಿದನ ಕಳೆದುಹೋದ ನಿನ್ನೆಯೊಂದಿಗಿನ ತನ್ನ ಸಂಬಂಧ ಎಷ್ಟೊಂದು ಜಟಿಲವಾಗಿರುತ್ತದೆ, ಮತ್ತು ಅದಕ್ಕೆ ಎಷ್ಟೊಂದು ಪದರಗಳಿರುತ್ತವೆ. ಎಂಬುದು. ಲೇಖಕನು ತನ್ನ ಅತೀತದ ಯಾವುದೋ ಭಾರದಿಂದ ಮುಕ್ತವಾಗಲು ಬಯಸುತ್ತಾನಾದರೂ ಮುಕ್ತಿಯ ಈ ದಾರಿಯು ಇತಿಹಾಸದ ಭಯಾನಕ ವಾಸ್ತವದ ಮೂಲಕ ಹಾದು ಹೋಗುವುದರಿಂದಲೇ ಸಾಧ್ಯವಾಗುತ್ತದೆ. 'ಟಿನ್ ಡ್ರಮ್' ಇಪ್ಪತ್ತನೆಯ ಶತಮಾನದ ಒಂದು ಕ್ಲಾಸಿಕ್ ಕೃತಿ. ೧೯೫೯ ರಲ್ಲಿ ಈ ಕಾದಂಬರಿ ಪ್ರಕಟವಾದಾಗ, ಯುದ್ಧೋತ್ತರ ಜರ್ಮನ್ ಸಾಹಿತ್ಯವು ದೀರ್ಘ ಕಾಲದ ವರೆಗೆ ನೈತಿಕ ಮತ್ತು ಭಾಷಾಗತ ವಿಧ್ವಂಸದ ಅನಂತರದಲ್ಲಿ ಒಂದು ಹೊಸತನವನ್ನು ಆರಂಭ ಮಾಡಿದೆಯೆಂದು ಭಾವಿಸಲಾಗಿತ್ತು. ಈ ಮೊದಲ ಕಾದಂಬರಿಯೇ ಗ್ರಾಸ್‌ರನ್ನು ಯುದ್ಧೋತ್ತರ ಕಾಲದ ಎಲ್ಲಕ್ಕಿಂತ ಮಹತ್ವದ ಲೇಖಕರ ಸಾಲಿನಲ್ಲಿ ತಂದು ನಿಲ್ಲಿಸಿತ್ತು. ಈ ಕಾದಂಬರಿಯು ಗ್ರಾಸ್‌ರ ಬಾಲ್ಯದ ನಗರವಾದ ದೆನ್ಜಿಗ್‌ನಲ್ಲಿ ಆಕಾರ ಪಡೆಯುತ್ತದೆ. ಅದರಲ್ಲಿ ೧೯೨೫ ರಿಂದ ೧೯೫೫ ರ ವರೆಗಿನ ಕಾಲದ ವರ್ಣನೆ ಇದೆ. ಅರ್ಥಾತ್ ಯುದ್ಧದ ಸಂದರ್ಭದಲ್ಲಿ ರಕ್ತರಂಜಿತವಾಗಿ ನಂತರ ಎಲ್ಲಿಯೋ ಕಳೆದುಹೋದ ಯುದ್ಧಪೂರ್ವದ ಆ ಜಗತ್ತಿದೆ. ಕಾದಂಬರಿಯ ನಾಯಕ ಮೂವತ್ತು ವರ್ಷದ ಒಬ್ಬ ಕುಳ್ಳ ಯುವಕ ಆಸ್ಕರ್ ಮತ್ಸೆರೆಥ್ ಒಂದು ಹುಚ್ಚರಾಸ್ಪತ್ರೆಯಲ್ಲಿ

ಬಿದ್ದುಕೊಂಡು ತನ್ನ ನೆನಪುಗಳನ್ನು ಹೇಳುತ್ತಿದ್ದಾನೆ. ಆಸ್ಕರ್ ತನ್ನ ಇಚ್ಛೆಯಿಂದ ಮೂರು ಬೆಳೆಯಲು ನಿರಾಕರಿಸಿದ್ದಾನೆ. ಟಿನ್ನಿನ ಒಂದು ಢೋಲು ಅವನ ಏಕಮಾತ್ರ ಆಟಿಗೆಯಾಗಿದೆ. ಅದರ ಮೂಲಕವಾಗಿ ಅವನು ಹೊರಜಗತ್ತಿನೊಂದಿಗೆ ಸಂವಾದ ನಡೆಸುತ್ತಾನೆ. ಮೂವತ್ತು ವರ್ಷಗಳ ಆಸ್ಕರನ ಬೆಳವಣಿಗೆಯ ತಡೆ ನಾಜೀ ಯುಗದ ಒಂದು ಅದ್ಭುತ ಮೆಟಾಫರ್‌ನ್ನು ಸೃಷ್ಟಿಸುತ್ತದೆ. ನಾಯಕ ನಾಜೀ ಯುಗದ ಬರ್ಬರತೆಗೆ ಸಾಕ್ಷಿಯಾಗಿದ್ದಾನೆ. ಅವನ ಸುತ್ತಲೂ ಸುಳ್ಳು, ಭ್ರಷ್ಟಾಚಾರ, ಕ್ರೌರ್ಯದ ಒಂದು ಜಗತ್ತಿದೆ. ಆಸ್ಕರ್ ತನಗಿಂತ ದೊಡ್ಡವರ ಈ ಜಗತ್ತಿನ ಭಾಗವಾಗಲು ಬಯಸುವುದಿಲ್ಲ. ಅವನು ಈ ಜಗತ್ತನ್ನು ತನ್ನ ದೃಷ್ಟಿಯಿಂದ ಅರ್ಥ ಮಾಡಿಕೊಳ್ಳತೊಡಗುತ್ತ ಅದರ ಬಗ್ಗೆ ಟಿಪ್ಪಣಿ ಮಾಡುತ್ತಾನೆ. ಈ ಜಗತ್ತಿನಲ್ಲಿ ಸುಳ್ಳು, ಭ್ರಷ್ಟಾಚಾರ ಹಾಗೂ ಬರ್ಬರತೆಗಳಿಗೆ ಬಲಿಯಾದ ಜನರಿದ್ದಾರೆ. ಅವರ ಆಚರಣೆಗಳಿವೆ. ಒಂದು ಕಾಲಕ್ಕೆ ಭರವಸೆಯನ್ನು ಇಟ್ಟುಕೊಂಡಿದ್ದ ಮೌಲ್ಯಗಳನ್ನೆಲ್ಲ ಅವರು ಮರೆಯತೊಡಗಿದ್ದಾರೆ. ಆದರೆ ಆಸ್ಕರ್ ಯಾವುದನ್ನೂ ಮರೆಯಲು ಬಯಸುವುದಿಲ್ಲ. ಅವನು ತನ್ನ ಎಳೆತನದ ಹಾಗೂ ವಿಚಿತ್ರ ವ್ಯವಹಾರಗಳಿಂದ ದೊಡ್ಡವರ ಈ ಜಗತ್ತಿಗೆ 'ಕ್ರಿಟಿಕ್' ನಿರ್ಮಿಸುತ್ತಾನೆ. ಹೀಗೆ 'ಟಿನ್ ಡ್ರಮ್' ಕಾದಂಬರಿಯ ನಾಯಕ ನಾಜೀ ಯುಗದ ಬರ್ಬರತೆಗಳ ನಡುವೆ ಬೆಳೆದ ಒಂದು ಇಡೀ ತಲೆಮಾರಿನ ನೈತಿಕ ಸ್ವರ ಆಗಿಬಿಡುತ್ತಾನೆ. ಈ ಕಾದಂಬರಿಯ ತುಂಬ ವಿನೋದ ಹಾಗೂ ಆಳವಾದ ವಿಷಾದ ಒಟ್ಟಿಗೇ ಇದೆ. ಇತಿಹಾಸದ ಭೀಷಣ ಕಾಲಖಂಡದಲ್ಲಿ ಹಾಯ್ದು ಹೋಗುವ ಈ ಕಾದಂಬರಿಯು ಮಾನವ ಮನಸ್ಸಿನಲ್ಲಿ ಒಂದು ಪ್ರತಿಜಗತ್ತನ್ನು ಸೃಷ್ಟಿಸುತ್ತದೆ.

ತರ್ಕವನ್ನು ಕೇಳಿ ಕೇಳಿ ದಣಿದ ಯುಗದಲ್ಲಿ ತಾನು ತಡವಾಗಿ ಅವತರಿಸಿರುವ ಪ್ರವರ್ತಕನೆಂದು ಗ್ರಾಸ್ 'ಟಿನ್ ಡ್ರಮ್' ಬರೆದ ನಂತರ ಹೇಳಿದ್ದರು. ಸಾಯುತ್ತಿರುವ ಮನುಷ್ಯತ್ವವನ್ನು ಜೀವಂತವಾಗಿಡಲು ಆತನ ಬಾಯಿ ಹಾಗೂ ಕಿವಿಗಳಲ್ಲಿ ಲೇಖಕನು ಕೃತಕ ಶ್ವಾಸವನ್ನು ಊದುತ್ತಾನೆ ಎಂದು ತಮ್ಮ ಬರವಣಿಗೆಗಳ ಬಗ್ಗೆ ಗ್ರಾಸ್ ಹೇಳಿದ್ದಾರೆ.

'ಟಿನ್ ಡ್ರಮ್' ಅಷ್ಟೇ ಅಲ್ಲ, ಅವರ ಇತರ ಕಾದಂಬರಿಗಳನ್ನು ನೋಡಿದರೆ ಅವೂ ಅತೀತದ ಪ್ರೇತದೊಡನೆ ಸಂಘರ್ಷ ಮಾಡಿದವುಗಳೇ. ನಂತರದಲ್ಲಿ ಅವರ 'ಕ್ಯಾಟ್ ಆ್ಯಂಡ್ ಮೌಸ್', 'ಡಾಗ್ ಇಯರ್ಸ್' ನಂತಹ ಕಾದಂಬರಿಗಳು ಬಂದವು. ಈ ಮೂರು ಕಾದಂಬರಿಗಳು ಡೆನ್ಜಿಗ್ ನಗರದ ಸಾಮಾಜಿಕ – ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಇತಿಹಾಸದ ಒಂದು ವಿಶೇಷ ಕಾಲಖಂಡದ 'ಬೃಹತ್‌ತ್ರಯಿ' ಗಳಾಗಿವೆ. 'ಕ್ಯಾಟ್ ಆ್ಯಂಡ್ ಮೌಸ್' ನಲ್ಲಿ ೧೯೩೯ ರಿಂದ ೧೯೪೪ ರ ವರೆಗಿನ ಅವಧಿಯಲ್ಲಿ ಡೆನ್ಜಿಗ್ ನಗರದಲ್ಲಿನ ಕೆಳ ಮಧ್ಯಮ ವರ್ಗದ ಯುವಕನೊಬ್ಬನ ಜೀವನದ ಸಂಕಷ್ಟಗಳನ್ನು ತೆರೆದಿಡಲಾಗಿದೆ. ಇವು ಎರಡನೆಯ ಮಹಾಯುದ್ಧದ ವರ್ಷಗಳು. 'ಡಾಗ್ ಇಯರ್ಸ್' ಹಲವು ಅರ್ಥಗಳಲ್ಲಿ 'ಟಿನ್ ಡ್ರಮ್'ದ್ದೇ ವಿಸ್ತಾರವಾಗಿದೆ. ಈ ಕಾದಂಬರಿಯಲ್ಲಿ ಡೆನ್ಜಿಗ್ ನಗರದಲ್ಲಿ ವಾಸಿಸಿದ ವಿವಿಧ ಪಂಗಡಗಳ ಮಾನವ ಸಮುದಾಯದ ಹರಡಿಕೊಂಡ ಜೀವನದ ಅಂತರ್‌ಕಥೆಯನ್ನು ತುಂಬ ಕಲಾತ್ಮಕ ರೀತಿಯ ಗದ್ಯದಲ್ಲಿ ಪ್ರಸ್ತುತಪಡಿಸಲಾಗಿದೆ. ನಾಜೀ ಯುಗದ ಅಪರಾಧಗಳ ವೃತ್ತಾಂತ, ಹಾಗೂ ಯುದ್ಧಾನಂತರದ ವರ್ಷಗಳಲ್ಲಿ ಸಮಾಜದಲ್ಲಿ ಈ ಹಿಂದಿನ ನಾಜಿಗಳನ್ನು ಸಹಜ ರೀತಿಯಲ್ಲಿ ಒಪ್ಪಿಕೊಳ್ಳುವಿಕೆ ಒಂದು ವಿಡಂಬನೆಯಾಗಿ ಹೊರಹೊಮ್ಮಿದೆ. ಇತಿಹಾಸದ ಭೀಷಣತಮ ಸಂಕಷ್ಟಗಳನ್ನೂ ಸಹಜ ಸ್ವೀಕಾರ್ಯ ತಥ್ಯವಾಗಿಸಿದ ವಿಸ್ಮೃತಿಯ ವಿರುದ್ಧ ಕಲೆಯ ಪೂರ್ಣ ಸಂಘರ್ಷವಿದೆ.

ಜರ್ಮನಿಯಲ್ಲಿ ಎಲ್ಲ ಕಡೆ ಇವೇ ಪ್ರಶ್ನೆಗಳು– ಗುಂಥರ್ ಗ್ರಾಸ್ ತಮ್ಮ ಅತೀತದ ತಥ್ಯಗಳನ್ನು ಇಷ್ಟು ದಿನ ಯಾಕೆ ಮುಚ್ಚಿಟ್ಟರು ? ಈ ಬಗೆಗಿನ ಸ್ಪಷ್ಟೀಕರಣದಲ್ಲಿ ಗ್ರಾಸ್ ಇಷ್ಟು ಮಾತ್ರವೇ ಹೇಳಿದ್ದಾರೆ: ಈ ಎಲ್ಲ ಸಂಗತಿಗಳನ್ನು ಯುದ್ಧಾನಂತರದ ವರ್ಷಗಳಲ್ಲಿ ತಕ್ಷಣ ಹೇಳುವ ಸಾಹಸ ತಮ್ಮಲ್ಲಿರಲಿಲ್ಲ. ಮೈಕೆಲ್ ಜುರ್ಗ್ ಗುಂಥರ್ ಗ್ರಾಸ್‌ರ ಜೀವನಚರಿತ್ರೆಯನ್ನು

ಕೆಲ ವರ್ಷಗಳ ಹಿಂದೆ ಬರೆದಿದ್ದ. ಆಗ ಕೂಡ ಅವನ ಎದುರೂ ಗ್ರಾಸ್ ಏನೂ ಬಾಯಿ ಬಿಟ್ಟಿರಲಿಲ್ಲ. ತೀವ್ರತರವಾದ ಅಪರಾಧದ ಅನಿಸಿಕೆ ಹಾಗೂ ನಾಚಿಕೆಗಳಲ್ಲಿ ನಾನು ಮುಳುಗಿದ್ದೆ ಎನ್ನುತ್ತಾರೆ ಗ್ರಾಸ್. ತಮ್ಮ ಪತ್ನಿಯ ಎದುರು ಈ ಗುಟ್ಟನ್ನು ತುಂಬ ಮೊದಲೇ ಹೇಳಿದ್ದಾಗಿಯೂ, ಸಾರ್ವಜನಿಕ ರೂಪದಲ್ಲಿ ಅದನ್ನು ಹೇಳುವ ಧೈರ್ಯ ತನ್ನಲ್ಲಿ ಇರಲಿಲ್ಲವಾಗಿಯೂ ಅವರು ಹೇಳುತ್ತಾರೆ. ಗ್ರಾಸ್ ಯುದ್ಧಾನಂತರದ ವರ್ಷಗಳಲ್ಲಿ ತಮ್ಮ ಆತ್ಮಸ್ವೀಕೃತಿಯನ್ನು ಮುಂದಿಟ್ಟಿದ್ದರೆ ಬಹುಶಃ ಯಾರೂ ಅವರ ವಿರೋಧ ಮಾಡುತ್ತಿರಲಿಲ್ಲವೆಂದು ಅವರ ಜೀವನಚರಿತ್ರೆ ಬರೆದ ಮೈಕೆಲ್ ಜುರ್ಗ್ ಸಂಡೇ ಟೈಮ್ಸ್‌ನ ಒಂದು ಸಂವಾದದಲ್ಲಿ ಹೇಳಿದ್ದಾರೆ. ಯಾಕೆಂದರೆ ಆಗ ಯಾರಿಗೂ ಆಶ್ಚರ್ಯವಾಗುತ್ತಿರಲಿಲ್ಲ. ಎರಡನೆಯ ಮಹಾಯುದ್ಧದ ಆ ದಿನಗಳಲ್ಲಿ ಫ್ಯಾಸಿಸ್ಟರು ಯಾರನ್ನು ಬೇಕಾದರೂ ಹಿಡಿದು ಸೇನೆಗೆ ಭರ್ತಿ ಮಾಡಿಕೊಳ್ಳುತ್ತಿದ್ದರು. ಹೀಗೆ ಬಲವಂತವಾಗಿ ಮಾಡಿಕೊಂಡ ಸೇವರ್ಣದೆಯ ಒಂದು ಪೀಳಿಗೆಯೇ ಯುದ್ಧದ ಅನುಭವಗಳಿಂದ ಹೊರಬಂದಿದೆ. ಯುದ್ಧ ಮುಗಿದ ಅನಂತರ ಗ್ರಾಸ್ ಅಮೆರಿಕನ್ ಸೈನಿಕರ ಕೈಗೆ ಸಿಕ್ಕಿದ್ದರು. ತಾವು ಯುವಕರಾಗಿದ್ದಾಗ ಫ್ಯಾಸಿಸ್ಟರ ಉತ್ಸಾಹೀ ಸಮರ್ಥಕರಾಗಿದ್ದರೆಂಬುದನ್ನು ಅವರು ಮೊದಲೇ ಹೇಳಿದ್ದಾರೆ. ಆದರೆ ಅವರು ಹಿಟ್ಲರನ ಈ ಕುಖ್ಯಾತ ದಳದ ಸದಸ್ಯರಾಗಿದ್ದರೆಂಬುದನ್ನು ಹೇಳಿರಲಿಲ್ಲ. ಗ್ರಾಸ್‌ರ ಗತಕಾಲವು ಈವರೆಗೆ ಜನರಿಂದ ಗುಪ್ತವಾಗಿಯೇ ಉಳಿದಿದ್ದರೆ ಅದಕ್ಕೆ ಕಾರಣವೂ ಇತ್ತು. ೧೯೪೪ ರ ಕೊನೆಯ ತಿಂಗಳುಗಳಲ್ಲಿ ಸೈನಿಕರ ಗುಂಪುಗಳು ಅಷ್ಟೊಂದು ಸಂಘಟಿತವಾಗಿ ಇರಲಿಲ್ಲವಾದ್ದರಿಂದ, ಹಿಟ್ಲರನ ಸೈನ್ಯದಲ್ಲಿ ಸಾಮಾನ್ಯ ಪದ್ಧತಿಯಾಗಿದ್ದ- ಬಲವಂತವಾಗಿ ಭರ್ತಿ ಮಾಡಿದ ಯುವಕರ ಬಾಹುಗಳ ಮೇಲೆ ಅವರ ರಕ್ತದ ಗುಂಪನ್ನು ನಮೂದಿಸುವ ಕೆಲಸ ಆಗಿರಲಿಲ್ಲ. ಹಾಗಾಗಿ ಯುದ್ಧ ಮುಗಿದ ಅನಂತರ ಗ್ರಾಸ್ ಒಬ್ಬ ಸಾಧಾರಣ ಯುದ್ಧ ಕೈದಿಯೆಂದೇ ತಿಳಿಯಲ್ಪಟ್ಟಿದ್ದರು. ನಾಜೀ ಸೈನಿಕರು ಎಂಥ ಅಪರಾಧಗಳಲ್ಲಿ ತೊಡಗಿಕೊಳ್ಳುತ್ತಾರೆಂಬ ಆಭಾಸವೂ ಯೌವನದ ದಿನಗಳಲ್ಲಿ ತನಗಿರಲಿಲ್ಲವೆಂದು ಸ್ವಯಂ ಗ್ರಾಸ್ ಹೇಳುತ್ತಾರೆ. ಯುದ್ಧಾನಂತರ ನ್ಯೂರೆಂಬರ್ಗ್‌ನಲ್ಲಿ ನಡೆದ ಮೊಕದ್ದಮೆಗಳ ಸಂದರ್ಭದಲ್ಲಿ ಎಲ್ಲ ವಾಸ್ತವಗಳೂ ಎದುರಿಗೆ ಬಂದಾಗ ಅವರು ತೀವ್ರವಾದ ನಾಚಿಕೆಯನ್ನು ಅನುಭವಿಸಿದರು.

ಯಾವುದೇ ಆತ್ಮಸ್ವೀಕೃತಿಯಲ್ಲಿ ಸಮಯತತ್ವಕ್ಕೆ ಮಹತ್ವವಿದೆಯೇ ಎಂಬುದನ್ನು ಈ ಎಲ್ಲ ಸಂಗತಿಗಳ ನೆರವಿನಿಂದ ಅರಿಯಬೇಕಾಗಿದೆ. ಅದನ್ನು ಯಾವಾಗ ಮಾಡಲಾಗಿದೆಯೆಂಬುದರ ಮೇಲೆ ಅವನ ನೈತಿಕತೆ ನಿರ್ಧಾರವಾಗುತ್ತದೆಯೇ? ಗ್ರಾಸ್ ಫ್ಯಾಸಿಸ್ಟರೊಂದಿಗೆ ಸೇರಿಕೊಂಡಿದ್ದರೆಂಬ ಸಂಗತಿ ಮೊದಲೇ ಎದುರಿಗೆ ಬಂದಿದ್ದರೆ ಬಹುಶಃ ಅವರಿಗೆ ನೊಬೆಲ್ ಪುರಸ್ಕಾರವು ಎಂದೂ ಸಿಗುತ್ತಿರಲಿಲ್ಲವೆಂದು ಹೇಳಲಾಗುತ್ತಿದೆ.

ಈ ಎಲ್ಲ ಅಭಿಪ್ರಾಯಗಳು ಆಯಾ ಸಂದರ್ಭದಲ್ಲಿ ಸರಿಯೆನಿಸಬಹುದು. ಆದರೂ ಗುಂಥರ್ ಗ್ರಾಸ್‌ನಂಥವರು ಸಮೂಹ ಸನ್ನಿ ಹಾಗೂ ಅಪರಾಧೀ ವಿಚಾರಧಾರೆಯ ಎದುರು ಮನುಷ್ಯನ ವಿವೇಕದ ಪಕ್ಷ ವಹಿಸಿದ ಒಂದು ತಲೆಮಾರಿನವರು. ಆತ್ಮಕಥೆ ಸಹಿತವಾಗಿ ಅವರ ಸಮಸ್ತ ಬರೆಹ ನೋವು, ಪಶ್ಚಾತ್ತಾಪ ಹಾಗೂ ಆತ್ಮವಿಮರ್ಶೆಯ ಬರೆಹಗಳಾಗಿವೆ. ಎಲ್ಲ ಕಲೆ-ಕಲಂಕ, ಅಪೂರ್ಣತೆಗಳು ಹಾಗೂ ವ್ಯಕ್ತಿಗತ ಜೀವನದ ವೈಫಲ್ಯದೊಂದಿಗೆ ಒಬ್ಬ ಕಲಾವಿದನು ತನ್ನ ಭೌತಿಕ ಜೀವನವನ್ನು ಬದುಕುತ್ತಾನೆ. ಆದರೆ ಕಲೆಯು ಯಾವುದೋ ಒಂದು ನೆಲೆಯಲ್ಲಿ ಈ ಎಲ್ಲವನ್ನೂ ಮೀರುವ ಪ್ರಯತ್ನವೂ ಹೌದು. ಈ ಘಟನೆಯ ನಂತರ ಜನರ ಮನೋಲೋಕದಲ್ಲಿ ಗ್ರಾಸ್‌ರ ಕಾಂತಿ ಒಬ್ಬ ನಾಯಕನಷ್ಟು ಉಜ್ವಲವಾಗಿ ಉಳಿಯದಿದ್ದರೂ ಒಬ್ಬ ಮಹಾನ್ ಲೇಖಕರಾಗಿಯಂತೂ ಅವರು ಉಳಿದೇ ಉಳಿಯುತ್ತಾರೆ. ಅವರನ್ನು ನಾಯಕನ ಸಿಂಹಾಸನದಿಂದ ಬಹುಶಃ ಇಳಿಸಬಹುದಾದರೂ ಅವರ ಭೌತಿಕ ಜೀವನದ ಅನಂತರವೂ ಉಳಿಯುವ ಮತ್ತು ಮುಂದೆ ಬರಲಿರುವ ಪೀಳಿಗೆಯನ್ನೂ ಉತ್ತೇಜಿತಗೊಳಿಸಬಹುದಾದ ಅವರ ಸಾಹಿತ್ಯವನ್ನೇನು

ಮಾಡುವುದು? ಗುಂಥರ್ ಗ್ರಾಸ್‌ರ ಪ್ರಕರಣದಿಂದ ಆ ಹಳೆಯ ಚರ್ಚೆ ಮತ್ತೆ ಚರ್ಚೆಗೆ ಬಂದಿದೆ. ಕಲಾವಿದನ ಸ್ವಂತದ ವೈಯಕ್ತಿಕ ಸುಚಿತ್ವ ಹೆಚ್ಚು ಮುಖ್ಯವೋ ಅಥವಾ ಅವನ ಕೃತಿಯಲ್ಲಿ ಹುದುಗಿರುವ ನೈತಿಕತೆಯೋ? ಮಾರ್ಟಿನ್ ಹೈಡೆಗರ್ ಮತ್ತು ಪಾಲ್ ಡಿ ಮಾನ್ ಅವರಂತಹ ಚಿಂತಕರ ಸಂದರ್ಭದಲ್ಲಿ ಅವರು ನಾಜಿಗಳ ಸಮರ್ಥಕರೆಂದು ತಿಳಿದು ಬಂದಾಗ ಅವರ ಲೇಖನದ ಮಹತ್ವವೇನಾದರೂ ಕಡಿಮೆಯಾಯಿತೇ? ಎಜ್ರಾ ಪೌಂಡ್ ಫ್ಯಾಸಿಸ್ಟ್ ವಿಚಾರಧಾರೆಯ ಜೊತೆಗಿದ್ದ. ಇದು ತಿಳಿದ ನಂತರ ಜನರು ಎಜ್ರಾ ಪೌಂಡ್‌ನನ್ನು ಓದುವುದನ್ನು ನಿಲ್ಲಿಸಿದ್ದಾರೆಯೇ?

ಗುಂಥರ್ ಗ್ರಾಸ್‌ರ ಈ ಪ್ರಕರಣದಲ್ಲಿ ಸಲ್ಮಾನ್ ರಶ್ದಿಯವರು ಒಂದು ಮಹತ್ವಪೂರ್ಣ ಪ್ರಶ್ನೆಯನ್ನು ಎತ್ತಿದ್ದಾರೆ– ಆಯ್ಕೆ ನಿಮ್ಮೆದುರಿಗೆ ಇದೆ. ಗ್ರಾಸ್‌ರು ತಮ್ಮ ಯೌವನದ ದಿನಗಳಲ್ಲಿ ಮಾಡಿದ್ದ ಯಾವುದೋ ಅವಿವೇಕವನ್ನು ಆಧಾರವಾಗಿಟ್ಟುಕೊಂಡು ಅವರ ಮೌಲ್ಯಮಾಪನ ಮಾಡಿ; ಅಥವಾ ಕಳೆದ ಎಪ್ಪತ್ತು ವರ್ಷಗಳಲ್ಲಿ ಅವರು ಮಹತ್ವಪೂರ್ಣ ಕೆಲಸವನ್ನೇನಾದರೂ ಮಾಡಿದ್ದರೆ ಅದರ ಆಧಾರದ ಮೇಲಾದರೂ ಮಾಡಿ; ನೀವು ಯಾರದಾದರೂ ಅಪೂರ್ಣತೆಯ ಬಗೆಗೆ ಉದಾಸೀನ್ಯ ತೋರಬಹುದು, ಆದರೆ ಸಿಟ್ಟಾಗಲಾರಿರಿ. ಪ್ರತಿಭೆ ಮತ್ತು ಪ್ರಾಮಾಣಿಕತೆ ಅನೇಕ ಬಾರಿ ಒಂದು ಇನ್ನೊಂದರಿಂದ ದೂರ ಹೋಗಿರುವ ಪ್ರಶ್ನೆ ಈ ಮೊದಲು ಎದ್ದಿರಲಿಲ್ಲವೇ? ಒಬ್ಬ ಕಲಾವಿದ ಜೀವನದುದ್ದಕ್ಕೂ ತನ್ನ ಅಪೂರ್ಣತೆಯನ್ನು ಹೊತ್ತುಕೊಂಡೇ ಸಾಗುತ್ತಿರುತ್ತಾನೆ.

* ನಯಾ ಜ್ಞಾನೋದಯ್. ನವಂಬರ್ ೨೦೦೬. ಸಂಚಿಕೆ-೪೫

✣ **ಡಾ. ಆರ್. ಪಿ. ಹೆಗಡೆ :** ೨೩೪. 'ಸೃಷ್ಟಿ'. ಕಾಲೇಜ್ ಸ್ಟಾಫ್ ಹೌಸಿಂಗ್ ಕಾಲನಿ,
ಅವರಗುಪ್ಪಾ, ಸಿದ್ದಾಪುರ – ೫೮೧ ೩೫೫ (ಉ.ಕ.) ✣

ಐಕ್ಯ

ವಿಜಯಕ್ಕ

ನಿನ್ನ ಕಾಣಲು ಬಯಸಿ
ಹಂಬಲಿಸಿ ಹಂಬಲಿಸಿ
ಹಾತೊರೆದೆ

ಅಂದು–
ಬಾನಿನಂಗಳದಲ್ಲಿ ತಾರೆಗಳ
ಮಿನುಗಿನಲ್ಲಿ
ನಿನ್ನ ಕಣ್ಣಿನ ಬೆಳ್ಳಿ ಬೆಳಕು ಕಂಡೆ
ಆ ಬೆಳಕಿನೊಳು ಬೆಳಕಾಗಿ ಹೋದೆ

ಹಬ್ಬಿ ಹರಡಿದ ಹಚ್ಚ ಹಸುರ ವನ
ಸಿರಿಯಲ್ಲಿ ಅರಳಿರುವ ಬಣ್ಣ
ಬಣ್ಣದ ಕುಸುಮಗಳ ಎದೆಯಲ್ಲಿ
ನಿನ್ನ ನಗುವನೆ ಕಂಡೆ ಮೈಮರೆದೆ
ಹಕ್ಕಿಗಳ ಕಲರವದೆ ನಿನ್ನ ದನಿ ಕೇಳಿ
ನನ್ನ ನಾ ಮರೆದೆ ನಿನ್ನೊಳೇ ಬೆರೆದೆ

ಕೊನೆಗೆ–
ನಾನಿಲ್ಲ ನೀನಿಲ್ಲ
ಹನಿಯು ಕಡಲೊಳು ಸೇರಿ
ಕಡಲು ತಾನೇ ತಾನು
ನಾನು.

✣ ಡಾ. ವಿಜಯಕುಮಾರಿ ಎಸ್. ಕರಿಕಲ್ :
ಕನ್ನಡ ಉಪನ್ಯಾಸಕಿ. ಮಹಿಳಾ ವಿಶ್ವವಿದ್ಯಾಲಯ. ವಿಜಾಪುರ ✣

ಸತ್ವಂತ ನಾಗಮ್ಮ

ಹೊರೆಯಾಲ ದೊರೆಸ್ವಾಮಿ

ಕನ್ನಡ ನಾಡಿನಲ್ಲಿ ವೈಚಾರಿಕ ಚಿಂತನೆಗೆ ನಾಂದಿ ಹಾಡಿದ ಬಸವ ಚಳವಳಿ ದಕ್ಷಿಣ ಕರ್ನಾಟಕದ ಜನಮಾನಸದ ಮೇಲೂ ತನ್ನ ಪ್ರಭಾವವನ್ನು ಬೀರಿತು ಎಂಬುದು ಇತಿಹಾಸದ ಸಂಗತಿಯೇ ಆಗಿದೆ. ಅದೇ ರೀತಿ ಇಲ್ಲಿನ ಜನಪದ ಸಾಹಿತ್ಯದ ಮೇಲೂ ಪ್ರಭಾವ ಬೀರಿ ಅನೇಕ ಸೃಜನಾತ್ಮಕ ರಚನೆಗಳಿಗೂ ಕಾರಣವಾಗಿದೆ. ಜನಪದ ಕಥೆ, ಗೀತೆ, ಗಾದೆ ಈ ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ಅಲ್ಲಿನ, ಅಂದರೆ ಬಸವ ಚಳವಳಿಯ ಕೇಂದ್ರಸ್ಥಾನವಾದ ಕಲ್ಯಾಣದ ಘಟನಾವಳಿಗಳು, ಸಂಗತಿಗಳು ಮರುಹುಟ್ಟು ಪಡೆದಿರುವುದನ್ನು ನಾವು ಕಾಣಬಹುದು. ಅಂತಹದರಲ್ಲಿ ಒಂದು 'ಸತ್ವಂತ ನಾಗಮ್ಮ' ಎಂಬ ಕಥನಗೀತೆ.

ಬಸವಣ್ಣನ ಸೋದರಳಿಯ ಚನ್ನಬಸವಣ್ಣನ (ಅಕ್ಕ ನಾಗಮ್ಮನ ಮಗ) ಹುಟ್ಟಿಗೆ ಸಂಬಂಧಿಸಿದ ಈ ಕಥನಗೀತೆ ಚಾಮರಾಜನಗರ, ಮಂಡ್ಯ ಜಿಲ್ಲೆಗಳ ಗ್ರಾಮೀಣ ಪ್ರದೇಶಗಳಲ್ಲಿ ಪ್ರಚಾರದಲ್ಲಿದೆ. ೧೯೭೪ ರ ಸಮಯದಲ್ಲಿ ಗುಂಡ್ಲುಪೇಟೆ ತಾಲ್ಲೂಕಿನ ಹೊರೆಯಾಲ ಗ್ರಾಮದಲ್ಲಿ, ನಾನು ಸಂಗ್ರಹಿಸಿ ಪ್ರಕಟಿಸಿದ 'ನಾಲಿಗೆ ಅಕ್ಷರಕೆ ಒದುಗವ್ವ' ಎಂಬ ಜನಪದ ಕಥನಗೀತೆಯ ಸಂಕಲನದಲ್ಲಿ ಪ್ರಸ್ತುತ 'ಸತ್ವಂತ ನಾಗಮ್ಮ' ಕೃತಿ ಸಂಗ್ರಹಿತವಾಗಿದೆ. ಸಾಕಷ್ಟು ದೀರ್ಘವಾಗಿರುವ ಈ ಕಥನಗೀತೆಯನ್ನು ಹಾಡಿದವರು (ದಿವಂಗತ) ಶ್ರೀಮತಿ ದೇವಮ್ಮ (ಕರಗಕ್ಕ).

ಕಥನಗೀತೆಯ ಪ್ರಾರಂಭ ಹೀಗಿದೆ:

ನಾನೆದ್ದು ಹೊತ್ತಾರೆ ಯಾರ್‍ಯಾರ ನೆನೆವೇನೋ
ಸಿದ್ದರ ಚನ್ನಬಸವಯ್ಯ । ಸ್ವಾಮಿಯ
ಸಿದ್ದರ ಶ್ರೀಪಾದ ನೆನೆವೇನೋ ॥

ಎದ್ದು ನೆನೆವೇನೋ ಸಿದ್ದ್ರಸಿವ ಪಾದಾನ
ಮದ್ದೂರು ಕೆರೆಯ ಬಸವಾನ । ನೆನೆದಾರ
ನಮಗೆ ಹೊತ್ತಿದ್ದ ಪಾಪ ಪರಿಹಾರ ॥

ಆರೆಲಯ ಮಾವಿನ ತಾಳಿನ ಮ್ಯಾಗಿರುವ
ತಾಳಾಯ ಗತಿಗೆ ನಲುವವಳ । ಸರಸತಿಯೆ
ನಾಲಿಗೆ ಅಕ್ಷರಕೆ ಒದುಗವ್ವ ॥

....

–ಇವು ಪ್ರಾರ್ಥನಾಗೀತೆ.

ಕಥೆ : ಬಸವಣ್ಣನ ಹೆಂಡತಿ ನೀಲಲೋಚನೆ (ನೀಲಾಂಬಿಕೆ) ಒಮ್ಮೆ, ತಮಗೊಂದು ಶಿಶುವಿಲ್ಲವೆಂದು ಹಂಬಲಿಸಿ, ಗಂಡನಿಗೆ ತಿಳಿಸುತ್ತಾಳೆ. ಬಸವಣ್ಣ ಹೆಂಡತಿಯ ಕಡು ದುಃಖವನ್ನು ನೋಡಿ–

ಯಾಕೆಣ್ಣೆ ನನ್ನ ನೀಲೋಚನೆ ನೀ
ಕಂಬವ ಸೇರಿ ಕಡುದುಕ್ಕ ಮಾಡಾದು ?

ಎಂದು ಕೇಳಿದಾಗ ಅವಳು–

ನೀವು ಭೂಮಿಗೆ ದೊಡ್ಡವ್ರು ಭೂಲೋಕಕ್ಕೆ ಹೆಚ್ಚಿನವ್ರು
ನಿಮ್ಮ ಹೊಟ್ಟಾಲಿ ಒಂದು ಶಿಶುವಿಲ್ಲ(ದ) । ಮ್ಯಾಲೆ
ಪಟ್ಟದ್ಯಾರ ಸ್ವಾಮಿ ದೊರೆಗಳು ॥

ಮುಂದಿನ ಪಟ್ಟಕ್ಕೆ ಇನ್ನು ಯಾರು ತಾನೆ ಸ್ವಾಮಿ ದೊರೆಗಳು?– ಎಂದು ದುಃಖಿಸುತ್ತಾಳೆ. ಹೆಂಡತಿಯ ಮಾತನ್ನು ಕೇಳಿದ ಬಸವಣ್ಣ 'ಈ ಭೂಮ್ಯೆ ನಮ್ಮಕ್ಕ ಭೂಲೋಕ್ವೆ ನಮ್ಮಕ್ಕ ನಮಗ್ಯಾಕೆ ಹೆಣ್ಣೆ ಶಿಶುಮಕ್ಳ' ಎಂಬಂತಹ ಔದಾರ್ಯ ತುಂಬಿದ ಮಾತುಗಳನ್ನಾಡಿ,

ಮನೆಯಲ್ಲಿರುವ ತನ್ನ ತಂಗಿ ಎಳೆಯ ನಾಗಮ್ಮನನ್ನೆ (ವಾಸ್ತವವಾಗಿ ಬಸವಣ್ಣನ ಅಕ್ಕ) ಸಾಕಿ ಸಲಹುವಂತೆ ತಿಳಿಸುತ್ತಾನೆ. ಅದರಂತೆ ನೀಲಲೋಚನೆ ಏಳು ವರ್ಷದ ಎಳೆಯ ನಾಗಮ್ಮನನ್ನು ಕರೆತಂದು 'ಮ್ಯಮಂಡಾಯ' ತೊಳೆದು 'ಪಟ್ಟೆ ಪೀತಾಂಬರ ಉಡಿಸಿ' 'ಜಡೆಯ ಬಂಗಾರ ತೊಡಿಸಿ' 'ನನ ಕಂದಾ ಅಂತ ಸಾಕ್ಯಾಳು'.

ಇದಾದ ನಂತರ ಬಸವಯ್ಯ 'ಪರಸಾದ ನಾನು ತರಬೇಕು ಅಂತ' ಕಲ್ಯಾಣಕ್ಕೆ ತೆರಳುತ್ತಾರೆ. ಅಲ್ಲಿ ಶರಣರಾದ ಕಕ್ಕಯ್ಯನವರ ಮನೆಪ್ರಸಾದ, ಹರಳಯ್ಯನವರ ಮನೆಪ್ರಸಾದವನ್ನೆಲ್ಲ ಆಯ್ದು, 'ಗಂಟು ಮೂಟಾವ ಕಟ್ಟಿ', 'ಅವರು ಬಂದಾರು ತಮ್ಮ ಗುರುಮಠಕೆ'. ಆನಂತರ, ಗುರುಮಠದ ಬಾಗಿಲು ತೆರೆದು, ಚಂದ್ರಸಾಲೆಯ ಹೊಕ್ಕು, ಅಲ್ಲಿ ಪ್ರಸಾದದ ಗಂಟು ಮೂಟೆಯನ್ನು ಇರಿಸಿ, ಮುಖ ಕೈ ಕಾಲು ತೊಳೆಯಲು 'ಬಸವಯ್ಯ । ಕಲ್ಯಾಣಿ ಕೊಳಕ ಹೊರಟಾರು'. ಅದೇ ಹೊತ್ತಿಗೆ ಸರಿಯಾಗಿ ಚಂದ್ರಸಾಲೆಯ ದುಂಬುಧೂಳನ್ನು ಹೊಡೆಯಲು ಎಳೆಯ ನಾಗಮ್ಮ ಅದರ ಒಳಹೊಗುತ್ತಾಳೆ. ದುಂಬುಧೂಳನ್ನು ಹೊಡೆಯುತ್ತಿರುವ ಅವಳ ಕಣ್ಣಿಗೆ ಪ್ರಸಾದದ ಗಂಟು ಕಾಣುತ್ತದೆ. ಆಶ್ಚರ್ಯವಾಗುತ್ತದೆ. ಕುತೂಹಲ ಬರುತ್ತದೆ. ಅದನ್ನು ಬಿಚ್ಚಿ, ಒದರಿದಾಗ ಅದರಿಂದ 'ಅನ್ನದ ಅಗಳು ಬಿದ್ದೀತು'. ಅದನ್ನು ಕಂಡು ಅವಳು 'ಇದ್ಯಾರ । ಮಸ್ಗೆ ಅಣ್ಣಯ್ಯ ಬಿಣ್ಯಾಕೆ ಹೋಗಿದ್ರು' ಅಂದು ಅದೇ ಕುತೂಹಲದಿಂದ, 'ಅನ್ನದ ಅಗಳು ತಕ್ಕೊಂಡು ನಾಗಮ್ಮ। ಅನ್ಯನಾದಾರ ಸಲಿಸಾಳು'.

ಹೀಗೆ ಶರಣ ಹರಳಯ್ಯನವರ ಮನೆಯ ಪ್ರಸಾದವನ್ನು ತನಗರಿಪಿಲ್ಲದೇ ತಿಂದು ಬಸಿರಾದ ಎಳೆಯ ನಾಗಮ್ಮ, ಆನಂತರ ಅಚ್ಚುಕಟ್ಟು ಮಾಡಿದ ಚಂದ್ರಸಾಲೆಯಿಂದ ಹೊರಬರುವಳು.

ಇನ್ನು ಸ್ವಲ್ಪ ಹೊತ್ತಿನ ನಂತರ ಕಲ್ಯಾಣಿ ಕೊಳದಿಂದ ಬಂದ ಬಸವಯ್ಯನವರು, ಬಿಚ್ಚಿರುವ ಪ್ರಸಾದದ ಗಂಟನ್ನು ಕಂಡು 'ಜಲುಜಲುನೆ ಸ್ವಾಮಿ ಬೆವತಾರು'. ಹೆಂಡತಿ ನೀಲಲೋಚನೆಯನ್ನು ಆ ಬಗ್ಗೆ ವಿಚಾರಿಸಿದಾಗ, ಏಳು ವರುಷದ ಎಳೆಯ ನಾಗಮ್ಮ ಅಲ್ಲಿ (ಚಂದ್ರಸಾಲೆಯಲ್ಲಿ) 'ದುಂಬು ಧೂಳಾನೆ ಹೊಡೆದಾಳು' ಎಂದು ತಿಳಿಸುವಳು. ನಾಗಮ್ಮನೂ ತಾನು ಅನ್ನದ ಅಗಳನ್ನು ತಿಂದದ್ದು ನಿಜವೆಂದು ಹೇಳಿ, ಆ ಮೂಲಕ ಬಸಿರಿಯಾದದ್ದನ್ನು ಒಪ್ಪಿಕೊಂಡಾಗ, ಬಸವಣ್ಣನವರು,

ಅನ್ನ ಉಂಡಿ ಅಂತ ಹೆಜ್ಜಾಳ ನಿನಗ್ಯಾಕ
ಆ ಕಲ್ಯಾಣವೆಲ್ಲ ಕಲಿ ಎದ್ದು । ಕುಣಿವಾಗ
ಆ ಬಿಜ್ಜಾಳ ಬೇಗ ಬತ್ತಾನ ॥

ಎಂದು ದುಃಖಿಸುತ್ತ, ನಿನ್ನನ್ನು 'ಬಿಜ್ಜಳನ ಪಟ್ಟಣಕೆ ಕಳಿಯಬುಟ್ಟು । ತಂಗ್ಯಮ್ಮ ಜೇಪಿಸಿ ನಾನು ಇರಬಹುದ?' ಎಂದು ನೋಯುವರು. ಅವರು 'ಅನ್ನ ನೀರನು ಬಿಟ್ಟು ತಾನ ಜಪವ ಬಿಟ್ಟು। ಸ್ವಾಮಿ ಬಸವಯ್ಯ ಮನಗವ್ರೆ'.

ಈ ರೀತಿ ದಿನಗಳು ಕಳೆಯುತ್ತಿರಬೇಕಾದರೆ ಎಳೆಯ ನಾಗಮ್ಮ ಬಸಿರಿಯಾಗಿ 'ಒಂದು ತಿಂಗಳು ತುಂಬಿತು. ಎರಡು ತಿಂಗಳು ನಡೆದೀತು'. ಈ ಸುದ್ದಿಯು ದೊರೆ 'ಬಿಜ್ಜಳನ ಕಿವಿಗೆ ಬಿದ್ದೋಯ್ತು'. ಅವನ ಊಳಿಗದವರು ಬಂದು ಎಳೆಯ ನಾಗಮ್ಮನನ್ನು ಕುರಿತು–

ಯಾವ ಜಂಗಮಕೆ ಬಸಿರ್ಯಾದ ನಾಗಮ್ಮ । ಬಂದ ಜಂಗಮನ ಗುರುತೇಳು

ಅಂತ ಪ್ರಶ್ನಿಸುತ್ತಾರೆ. ನಾಗಮ್ಮನಾದರೂ ಪ್ರಸಾದದ ಅನ್ನದ ಅಗಳನ್ನು ಸೇವಿಸಿ ಬಸಿರಾದೆ ಎಂದು ಹೇಳಲು ಅವರು ಅದನ್ನು ಒಪ್ಪಲು ಸಿದ್ಧರಾಗುವುದಿಲ್ಲ. ಬದಲಾಗಿ, ದೊರೆ ಬಿಜ್ಜಳನಲ್ಲಿಗೆ ಸತ್ಯಕೆ (ದಿಬ್ಯಕ್ಕೆ ಅಥವಾ ದಿವ್ಯಕ್ಕೆ) ಕರೆಯುತ್ತಾರೆ. ಆಗ ಬಸವಣ್ಣನವರು–

ಅಂಥೆ ಅಂತ ಅನ್ಯಾಯ ಮಾಡಿಲ್ಲ ನನ ತಂಗಿ
ನಾನೇ ಬತ್ತೀನಿ ನಡಿರಯ್ಯ । ಬಿಜ್ಜಳ
ನನ್ನ ತಂಗೆನಾದರೂ ಕರೆಬೇಡಿ॥

ಎನ್ನುತ್ತ 'ಹರಳಯ್ಯನೋರ ಪಾದಿ ಪರಸಾದವ। ನನ ತಂಗಿ ನಾಗಮ್ಮ ಸಲಿಸೀದ' ಎಂದು ಹೇಳಿದರೂ ದೊರೆ ಬಿಜ್ಜಳ 'ಒಪ್ಪೊಲ್ಲ'. ಬದಲಾಗಿ, ಅವಳು ಸತ್ಯಕ್ಕೆ ಹೋಗಲೇಬೇಕಾಗುತ್ತದೆ. ನಾಗಮ್ಮ ಬಿಜ್ಜಳನಲ್ಲಿಗೆ ಹೊರಟಾಗ–

ಬಾಲೆ ನಾಗಮ್ಮ ಸತ್ಯಕ ಹೊಯ್ತಾಳಂತ
ಬಾಳೆಯ ವನವೇ ಹೊರಟೇತು ॥
ತಂಗಿ ನಾಗಮ್ಮ ಸತ್ಯಕ ಹೊಯ್ತಾಳಂತ
ತೆಂಗಿನ ವನವೇ ಹೊರಟೇತು ॥
ನಲ್ಲೆ ನಾಗಮ್ಮ ಸತ್ಯಕ ಹೊಯ್ತಾಳಂತ
ಮಲ್ಲಿಗೆ ವನವೇ ಹೊರಟೇತು ॥ ....

ಹೀಗೆ ಪ್ರಕೃತಿಯ ಅಪಾರ ಅನುಕಂಪದೊಂದಿಗೆ ಹೊರಟ ನಾಗಮ್ಮ ಊರಮುಂದೆ ನಿಂತುಕೊಂಡು 'ಬಿಜ್ಜಳ ದೊರೆಯೊಂದ್ಗೆ ಮಾತ್ನಾಡ್ತಾಳೆ'.

ಬಿಜ್ಜಳನು–ಕುಲಕೊಬ್ಬ ಶರಣ ಕೋಟಗೊಬ್ಬ ಭಕುತ
ಬರ್‍ತಿದ್ರು ಬಸವಯ್ನ ಗುರುಮಠ್ಕ । ನಾಗಮ್ಮ
ಯಾವ ಜಂಗಮಕೆ ಬಸಿರ್ಯಾದೆ ॥

ಎಂದು ಕೇಳುತ್ತಾನೆ.

ನಾಗಮ್ಮ– ಕೆಟ್ಟ ಮಾತ ಆಡಬ್ಯಾಡ ಕೇಡ್ಮಾತ ಆಡಬ್ಯಾಡ
ನಾನು ಅನ್ನಾಕೆ ಬಸಿರಾದ್ದು ನಿಜವಯ್ಯ ॥

ಎಂದು ಉತ್ತರಿಸುತ್ತಾಳೆ. ಆ ಉತ್ತರದಿಂದ ಸಮಾಧಾನವಾಗದ ಬಿಜ್ಜಳ–

ಅನ್ನ ಉಂಡು ಬಸಿರಿ ಯಾರ್‍ಯಾರು ಆಗಿದ್ರು
ಜಗತ್ನಲ್ಲಿಂತದು ನಡೆದಾದ । ನಾಗಮ್ಮ
ನೀ ಬಂದ ಜಂಗಮನ ಗುರುತೇಳು ॥

ಎಂದು ಮತ್ತೆ ಅದೇ ಪ್ರಶ್ನೆಯನ್ನು ಹಾಕುತ್ತಾನೆ. ಪ್ರತಿಯಾಗಿ ನಾಗಮ್ಮ–

ಹರಳಯ್ಯನ ಮನೆಯ ಹಿಟಿಯ ಪರಸಾದವ
ನಾನು ಸಲ್ಲಿಸಿ ಅನ್ನಾಕೆ ಬಸಿರಾದೆ ॥

ಎಂದು ಉತ್ತರಿಸುತ್ತಾಳೆ. ನಾಗಮ್ಮನ ಉತ್ತರದಿಂದ ಸಮಾಧಾನವಾಗದ ಬಿಜ್ಜಳ ಆಗ 'ನಾ ಹೇಳುವ ಸತ್ಯಕ ನಿಲುಮಂತ' ಎನ್ನುತ್ತ ಅವಳ ಮುಂದೆ ಒಂದೊಂದೇ ಸವಾಲು ಹಾಕುತ್ತ ಹೋಗುತ್ತಾನೆ :

ಹಾವು ಸಿಂಬಿ ಮಾಡಿ ಮರಳಲ್ಲಿ ಹರಪಿ ಮಾಡಿ
ಬರಿಕೆರಿಲಿ ನೀರ ಹೊತ್ಕೊಂಡು । ಬಂದರೆ
ನೀ ಅನ್ನಾಕೆ ಬಸಿರಾದದ್ದು ನಿಜವಮ್ಮ ॥

ಅಂತ. ಬಿಜ್ಜಳನ ಆ ಸವಾಲನ್ನು ಸ್ವೀಕರಿಸಿದ ನಾಗಮ್ಮ, ತನ್ನ ಅತ್ತಿಗೆ ನೀಲಮ್ಮನ ಪಾದವನ್ನೂ ಅಣ್ಣ ಬಸವಯ್ಯನ ಪಾದವನ್ನೂ ನೆನೆದು (ವಾಸ್ತವವಾಗಿ ಬಸವಣ್ಣ ತಮ್ಮ)

ಹಾವಾಗಿ ಹರಿದಾಳು ಪಾವಾಗಿ ಜರಿದಾಳು
ತಲಕಾಡು ಮಾಲಿಂಗಿ ಸಣ್ಣಮಳಲ । ಗುಡ್ಡೆ ಮಾಡಿ
ಮರಳಿ ಹರವೀಯ ಮಾಡಿದಳು ॥

ಆನಂತರ, 'ಹೊನ್ನುತ್ತಕೆ ಕೈಹಾಕಿ ಏಳುತಲೆ ಸರ್ಪವನ್ನಿಡಿದು'. ಸಿಂಬಿಯ ಮಾಡಿ. ತಲೆಯ ಮೇಲಿಟ್ಟು ಅದರ ಮೇಲೆ ಮರಳಿನ ಹರವಿ ಮಡಗಿ 'ಬರಿ ಕೆರೆಗೆ ತಾಯಿ ಹೊರಟಾಳು'. ಆಮೇಲೆ 'ನೀ ನಲಿದು ಬಾರಮ್ಮಾ ಶಿವಗಂಗೆ' ಎಂದು ಗಂಗೆಯನ್ನು ಪ್ರಾರ್ಥಿಸಿದಳು. ನಾಗಮ್ಮ 'ಆಡಿದ್ಮಾತು' ಗಂಗಮ್ಮನಿಗೆ ಅರುವಾಗಿ 'ನಲಿದು ಬಂದಾಳು ಶಿವಗಂಗೆ'. ಹಾಗೆ ಬಂದಂಥ 'ಅಗ್ಗಣೆ'ಯನ್ನು ನಾಗಮ್ಮ ಮೊಗೆಮೊಗೆದು ಹರವಿಗೆ ತುಂಬಿ. ಅದನ್ನು ಹತ್ತು ಬೆರಳುಗಳಿಂದಲೂ ಎತ್ತಿ ತಲೆಯ ಮೇಲೆ ಇಟ್ಟುಕೊಂಡು ಬಿಜ್ಜಳನ ಮುಂದೆ ನಡೆದಳು. ಸವಾಲಿಗೆ ತಕ್ಕ ಜವಾಬು ನೀಡಿದಳು. 'ದಿಬ್ಯ'ದ ಪರೀಕ್ಷೆಯಲ್ಲಿ ಗೆದ್ದಳು. ಆದರೆ. ಬಿಜ್ಜಳ ಅದನ್ನು ಒಪ್ಪಲು ಸಿದ್ಧನಿರಲಿಲ್ಲ. ಬದಲಾಗಿ ಅವನು ಹೇಳುತ್ತಾನೆ-

ಆಟ ನಿನ್ನಲ್ಲುಂಟು ಜಾಟ ನಿನ್ನಲ್ಲುಂಟು
ಕಲ್ತಿದ್ದೆ ಬಸವಯ್ನ ಗುರುವಿದ್ಯೆ । ನಾಗಮ್ಮ
ಈ ಸತ್ಯ ನನ್ನತ್ರ ನಡೆಯಾದು ॥

ಅಂತ. ಅನಂತರ, ನಾಗಮ್ಮನ ಮುಂದೆ ಇನ್ನೊಂದು ಸವಾಲನ್ನು (ದಿಬ್ಯವನ್ನು) ಇಡುತ್ತಾನೆ: ಒಂದು ಗಳುವನ್ನು ಒಡೆದು ಒಂಬತ್ತು ಪಾಲು ಮಾಡಿ. ಅದರಿಂದ ಸಣ್ಣ ಕಣ್ಣಿನ ಪಂದರಿಯನ್ನು ಗೇಮ (ಮಾಡಿ) ಅವಳಿಗೆ ನೀಡಿ. ಅದರಲ್ಲಿ ನೀರು ಹೊತ್ತು ತಂದರೆ 'ನೀ ಅನ್ನಾಗ ಬಸಿರಾದ್ದು ನಿಜವಮ್ಮ' ಅಂತ. ಎಳೆಯ ನಾಗಮ್ಮ ಅದನ್ನೂ ಸವಾಲಾಗಿ ಸ್ವೀಕರಿಸುತ್ತಾಳೆ. ಅವಳು ತನ್ನ ಹಿರಿಯರನ್ನು ನೆನೆದು. ತಲಕಾಡು ಮಾಲಂಗಿಗೆ ಹೋಗಿ. ಸಣ್ಣ ಕಣ್ಣಿನ ವಂದರಿಯಲ್ಲಿ ನೀರು ತುಂಬಿಕೊಂಡು 'ನಡೆದಾಳು ಧರ್ಮರ ಧರೆಯಲ್ಲಿ'.

ಆ ಸತ್ಯವನ್ನೂ ಒಪ್ಪದ ಬಿಜ್ಜಳ ದೊರೆ ಇನ್ನೊಂದು ಪರೀಕ್ಷೆಯನ್ನು ಅವಳ ಮುಂದೊಡ್ಡುತ್ತಾನೆ. ಬೀಟೆ ಮರದ ಒನಕೆಯನ್ನು ತಂದು ಬಿಜ್ಜಳ ನಾಗಮ್ಮನಿಗೆ ನೀಡಿ. ಅದರಲ್ಲಿ 'ನಾರ ತೆಗೆದಾರ ನಾಗಮ್ಮ' ನೀನು ಅನ್ನಕ್ಕೆ ಬಸಿರಾದದ್ದು ನಿಜವೆಂದು ನಂಬುತ್ತೇನೆ ಅಂತ ಸವಾಲು ಹಾಕುತ್ತಾನೆ. ಎಳೆಯ ನಾಗಮ್ಮ ಆ ಸವಾಲನ್ನು ಸ್ವೀಕರಿಸಿ. ಬಿಜ್ಜಳ ಕೊಟ್ಟ ಒನಕೆಯನ್ನು ಎಡಗೈಯಲ್ಲಿ ಹಿಡಿದುಕೊಂಡು ಗುರುಹಿರಿಯರನ್ನು ನೆನೆಸಿ. ಅದನ್ನು 'ಬಾಳೆಯ ನಾರಂಗೆ ಎಡೆದಾಳೆ'.

ಆ ಸತ್ಯವನ್ನೂ ಒಪ್ಪದ ಬಿಜ್ಜಳ ದೊರೆ ಇನ್ನೊಂದು 'ದಿಬ್ಯವನ್ನು' (ಪರೀಕ್ಷೆ) ಅವಳ ಮುಂದಿಡುತ್ತಾನೆ. ಅದೇನೆಂದರೆ-

ಹಿಂದೆ ಚೂಜಿ ನೆಟ್ಟು ಮುಂದೆ ದಬ್ಬನೆಟ್ಟು
ಚೂಜಿ ಹಿಂದ್ಗಾಣ ಹೋಗಿ ದಬ್ಬದ ಹಿಂದ್ಗಾಣ ಬಂದ್ರೆ
ನೀ ಅನ್ನಾಕೆ ಬಸಿರಾದ್ದು ನಿಜವಮ್ಮ ॥

ಅಂತ ಅವನು ಇನ್ನೊಂದು ಪರೀಕ್ಷೆ ಒಡ್ಡಿ. ಅದರಲ್ಲಿ ತೇರ್ಗಡೆ ಹೊಂದಿದರೆ. ಅವಳು ಅನ್ನಕ್ಕೆ ಬಸಿರಾದದ್ದು ನಿಜವೆಂದು ಒಪ್ಪುವುದಾಗಿ ತಿಳಿಸುತ್ತಾನೆ. ಎಳೆಯ ನಾಗಮ್ಮ ಆ ಪರೀಕ್ಷೆಯನ್ನೂ ಗೆದ್ದು ಬರುತ್ತಾಳೆ.

ಆ ಪರೀಕ್ಷೆಯನ್ನೂ ಗೆದ್ದ ನಾಗಮ್ಮನನ್ನು ಒಪ್ಪದ ಬಿಜ್ಜಳ ದೊರೆ. ಅವಳನ್ನು ಹೀಗಳೆಯಲು. ಮತ್ತೊಂದು ದಿಬ್ಯಕ್ಕೆ ಅವಳು ಸಿದ್ಧವಾಗುತ್ತಾಳೆ. ಮರಳುತ್ತಿರುವ ಎಣ್ಣೆ ಕೊಪ್ಪರಿಗೆಯಲ್ಲಿ ನಾಗಮ್ಮನನ್ನು ಹಾಕಿ. ಅವಳನ್ನು ಅದರಲ್ಲಿ ಮುಳುಗಿಸಲು ತನ್ನ ಊಳಿಗದವರಿಗೆ ಹೇಳುತ್ತಾನೆ. ಬಿಜ್ಜಳ ದೊರೆ. ನಾಗಮ್ಮ ಗುರು ಹಿರಿಯರನ್ನು ನೆನೆದು. ಕೊಪ್ಪರಿಗೆ ಒಳಗೆ ಇಳಿದು. 'ತಣ್ಣೀರಲ್ಲಿ ಕುಂತಂಗೆ ಕುಂತವ್ಳೆ'. ಇನ್ನು ಸ್ವಲ್ಪ ಹೊತ್ತಾದ ಮೇಲೆ 'ಮಂಕ್ರಿ'. 'ಎಲ್ಕೋಟು' ತಂದು 'ಅವಳ ಮೂಳೆ ಮುರ್ಕನ್ನು ಗೋರ್ಕೊಳ್ಳಿ' ಎಂದು ಬಿಜ್ಜಳ ದೊರೆ ಹೇಳಿದಾಗ. ನಾಗಮ್ಮ 'ಗಕ್ಕನಿ ತಾಯಿ ಎದ್ದಾಳು'. ಅವಳನ್ನು ನೋಡಿ ದೊರೆ. ಅವಳ ಗೆಲುವನ್ನು ಒಪ್ಪದೆ.

ನಿನ್ನ ಹೊಟ್ಟೇಲ್ಲಿರ ಮಗನ ನೀ ಹೊಡಮು
ಮಾತಾಡಿಸಿದರೆ ನೀ ಅನ್ನಕೆ ಬಸಿರಾದ್ದು ನಿಜವಮ್ಮ ।

ಅನ್ನುತ್ತಾನೆ. ಅವನ ಆ ಮಾತಿಗೆ ಸಿಟ್ಟಾದ ನಾಗಮ್ಮ,

ಹೊಟ್ಟೆಲಿರೊ ಮಗನ ಸಿಂತೆ ಬಂದಾರೆ
ನಿಮ್ಮ ಹೆಂಡೀರು ಬೇಗ ಮುಂಡೇರು ।

ಎಂದು ಕಿಡಿಕಾರುತ್ತಾಳೆ. ಆದರೂ ಬಿಜ್ಜಳ ದೊರೆ ತನ್ನ ಹಠವನ್ನೇ ಹಿಡಿಯುತ್ತಾನೆ. (ಅಂದರೆ ಹೊಟ್ಟೆಯಲ್ಲಿರುವ ಮಗನನ್ನು ಮಾತನಾಡಿಸಿದರೆ ನಾಗಮ್ಮ ಅನ್ನಕ್ಕೆ ಬಸಿರಾದದ್ದನ್ನು ಒಪ್ಪುವುದಾಗಿ ಬಿಜ್ಜಳ ದೊರೆ ತಿಳಿಸುತ್ತಾನೆ.) ಅವನ ಮಾತಿಗೆ ನಿಡುಸುಯ್ಯು ಬಿಡುತ್ತ ನಾಗಮ್ಮ ನಿಂತಿರುವಾಗ ಅವಳ ಹೊಟ್ಟೆಯೊಳಗಿದ್ದ ಶಿಶು ಚನ್ನಬಸವಯ್ಯ 'ನಿನ್ನ ಕಷ್ಟವ ನಾನು ನೋಡ್ಲಾರಿ ತಾಯವ್ವ' ಎಂದು ಪೇಚಾಡುತ್ತ, ನಾನು ಹೇಗೆ 'ಹೊಡೆಮು' ಬರಲಿ ಎಂದು ತನ್ನ ತಾಯಿ ನಾಗವ್ವನನ್ನು ಪ್ರಶ್ನಿಸುತ್ತಾನೆ. ಕಿವಿ, ಮೂಗು, ಕಣ್ಣು, ಬಾಯಿಯಿಂದ ಬಂದರೆ ಎಂಜಲಾಗುವುದೆಂದೂ, ಹೃದಯದ ಮೂಲಕ ಬಂದರೆ ಸೂತಕವಾಗುವುದೆಂದೂ ಶಿಶುವು ಹೇಳಿದಾಗ ನಾಗಮ್ಮ,

ನನ್ನ ಬೆನ್ನು ಬಾಗಾಯ ಹೊಡೆದಿನ್ನು ಬಸವಯ್ಯ
ನೀ ಬಲ್ದ ಪಾರ್ಶ್ಯಕಾಣೆ ಬಾರಯ್ಯ ॥

ಅಂತ ಹೇಳುತ್ತಾಳೆ. ಆಗ ಶಿಶು ಚನ್ನಬಸವಯ್ಯ ತಾಯಿಯ ಹೊಟ್ಟೆಯೊಳಗೆ ಗುಟುರು ಹಾಕುತ್ತ, ಅವಳ ಬಲ ಬೆನ್ನಿನ ಭಾಗದಿಂದ ಮೂಡಿ ಬರುತ್ತಾನೆ. 'ಆ ಕಾಲದಲ್ಲಿ ಬಿಜ್ಜಳನ ಪಟ್ಟಣ ಉರಿತಾದೆ'. ಎಳೆಯ ನಾಗಮ್ಮನಿಗೆ ಶಿಶು ಹುಟ್ಟಿದ ಸುದ್ದಿ ಬಸವಣ್ಣನವರಿಗೆ ತಿಳಿದು, ಅವರು 'ಹಕ್ಕ್ಯಾಗ ಹಾರ್ಕೊಂಡು ಬಿಜ್ಜಳನ ಪಟ್ಟಣಕ್ಕೆ ಬಂದು ಸೇರುತ್ತಾರೆ. ಆನಂತರ, ಸೋದರ ಅಳಿಯನನ್ನು ತಮ್ಮ ಪಟ್ಟೆ ವಸ್ತ್ರದಲ್ಲಿ ಸುತ್ತಿಕೊಂಡು, ತಂಗಿ ನಾಗಮ್ಮನೊಂದಿಗೆ ತಮ್ಮ ಗುರುಮಠಕ್ಕೆ ಬಂದು ತೊಟ್ಟಿಲು ಕಟ್ಟಿಸಲು, ಅಲ್ಲಿ ಮಗುವನ್ನು ಮಲಗಿಸಿ ನಾಗಮ್ಮ ತೂಗುತ್ತಾಳೆ.

(ಜೋ ಜೋ ಹಾಡು) :

ಮಲ್ಲಿಗೇ ವನದಲ್ಲಿ ನಲ್ಲೆ ತೊಟ್ಟಿಲು ಕಟ್ಟಿ
ಪುರುಷರಿಲ್ಲದ ನಾಗಮ್ಮನಿಗೆ । ಶಿಶುವಾದ್ರು ಬಸವಯ್ಯ
ಜೋ ಜೋ ನಮ್ಮಪ್ಪಾನೆ ಜೇಡೇಮು। ರಾತ್ಮನೇ ॥

ಇದೇ ಕಥನಗೀತೆಯು ಕೆಲವೊಂದು ಪಾಠಾಂತರಗಳೊಂದಿಗೆ ಬೇರೆ ಬೇರೆ ಸಂಗ್ರಾಹಕರಿಂದ ಸಂಗ್ರಹಿತವಾಗಿದೆ. ಮತಿಘಟ್ಟ ಕೃಷ್ಣಮೂರ್ತಿ, ಕರಾಕೃ, ಕ್ಯಾತನಹಳ್ಳಿ ರಾಮಣ್ಣ, ದೇವಯ್ಯ ಹರವೆ ಮತ್ತು ಮಲೆಯೂರು ಗುರುಸ್ವಾಮಿ ಇವರುಗಳು 'ಅಕ್ಕ ನಾಗಮ್ಮ' ಎಂಬ ಹೆಸರಿನಲ್ಲಿ ಕಥನಗೀತೆಯನ್ನು ಸಂಗ್ರಹಿಸಿದ್ದಾರೆ. ಅವುಗಳಲ್ಲಿ ಕೆಲವು ವ್ಯತ್ಯಾಸಗಳನ್ನು ಗುರುತಿಸಬಹುದಾದರೂ ಮೂಲವಸ್ತು ಚನ್ನಬಸವಣ್ಣನ ಹುಟ್ಟಿಗೆ ಸಂಬಂಧಿಸಿದ್ದೇ ಆಗಿದೆ. ಬಸವ ಚಳವಳಿಯ ಒಂದು ಘಟನೆ ಜನಪದ ಸಮಾಜದಲ್ಲಿ ಹೇಗೆ ಪುನರ್‌ಸೃಷ್ಟಿಗೊಂಡಿತು ಎಂಬುದನ್ನು ನಾವಿಲ್ಲಿ ಗುರುತಿಸಬಹುದು.

* ಅಗ್ಗಣಿ = ಅಗ್ಘವಣಿ, ತೀರ್ಥ;
ಒಕ್ಲಕ್ಕಿ = ಒಂದು ಕೊಳಗ ಅಕ್ಕಿ

✣ **ಹೊರೆಯಾಲ ದೊರೆಸ್ವಾಮಿ** :
'ಪೃಥ್ವಿ ನಿಲಯ', # ೭, ೭ನೇ ಮೇನ್ (ಉ), ೯ನೇ ಕ್ರಾಸ್,
ವಿವೇಕಾನಂದನಗರ, ಮೈಸೂರು – ೫೭೦ ೦೨೩ ✣

ಭಿಖಾರೀ ಠಾಕುರ್‌ನ 'ಬಿದೇಸಿಯಾ'

ಪ್ರಸನ್ನ

ಕಳೆದ ಅರ್ಧ ಶತಮಾನದ ರಂಗಭೂಮಿಯನ್ನು ಗಮನಿಸಿರಿ ; ಅದರ ನೇತಾರರನ್ನು ಗಮನಿಸಿರಿ! ಎಲ್ಲರೂ ಮಧ್ಯಮ ವರ್ಗದಿಂದ ಬಂದವರೇ ಹೌದು ; ನಾಟಕಕಾರ ನಿರ್ದೇಶಕ ನಟ ಅಷ್ಟೇ ಏಕೆ ಪ್ರೇಕ್ಷಕರೂ ಕೂಡ ಮಧ್ಯಮ ವರ್ಗದಿಂದ ಬಂದವರೇ ಹೌದು. ಮಧ್ಯಮ ವರ್ಗಕ್ಕೆ ಮಾತ್ರವೇ ಸೀಮಿತವಾಗಿರದ ರಂಗಭೂಮಿಯೊಂದು ಈ ಹಿಂದೆ ಜೀವಂತವಾಗಿತ್ತು, ಸಾಕಷ್ಟು ಪ್ರಭಾವಶಾಲಿಯಾಗಿ ಜೀವಂತವಾಗಿತ್ತು ಎಂಬ ಸಂಗತಿಯನ್ನು ನಾವು ಮರೆತೇ ಬಿಡುತ್ತೇವೆ. ಅಷ್ಟು ದಟ್ಟವಾಗಿ ಆವರಿಸಿಕೊಂಡಿದೆ, ರಂಗಭೂಮಿಯ ಮೇಲೆ ಮಧ್ಯಮ ವರ್ಗದ ಪ್ರಭಾವ.

ಭಾರತೀಯ ರಂಗಭೂಮಿಗೆ ಮಧ್ಯಮ ವರ್ಗವು ನೀಡಿರುವ ಮಹತ್ತರವಾದ ಕೊಡುಗೆಯನ್ನು ಅಲ್ಲಗಳೆಯುವುದು ಈ ಲೇಖನದ ಉದ್ದೇಶವಲ್ಲ; ಹಾಗೆ ನೋಡಿದರೆ ನಾನೂ ಸಹ ಮಧ್ಯಮ ವರ್ಗದಿಂದ ಬಂದವನೇ ತಾನೆ? ಆದರೆ ಮಧ್ಯಮ ವರ್ಗವೇ ದೇಶವಲ್ಲ. ಅಥವಾ ಮಧ್ಯಮ ವರ್ಗದ ರಂಗಭೂಮಿಯೇ ಭಾರತೀಯ ರಂಗಭೂಮಿಯಲ್ಲ. ಅಷ್ಟೇ ಏಕೆ, ಭಾರತೀಯ ರಂಗಭೂಮಿಯು ಇಂದು ಅನುಭವಿಸುತ್ತಿರುವ ಸಂಕಟಕ್ಕೆ ಅದರ 'ವರ್ಗಸೀಮಿತತೆ'ಯು ಬಹುಮಟ್ಟಿಗೆ ಕಾರಣವಾಗಿದೆ ಎಂದು ಯಾರಿಗಾದರೂ ಅರ್ಥವಾದೀತು.

'ವರ್ಗ ಸೀಮಿತತೆ'ಯು ಸಾಹಿತ್ಯ ಸೃಷ್ಟಿಯಲ್ಲಿ ಸ್ವಲ್ಪ ಮಟ್ಟಿಗೆ ಅನಿವಾರ್ಯವಿದ್ದೀತು. ಆದರೆ ನಾಟಕ ಕ್ಷೇತ್ರದಲ್ಲಂತೂ ಅಲ್ಲ. ನಾಟಕಕ್ಕೆ ರಂಗಭೂಮಿ ಅನಿವಾರ್ಯ. ರಂಗಭೂಮಿಗೆ ಭಾಷೆ ಅನಿವಾರ್ಯ, ಅಕ್ಷರಜ್ಞಾನವಲ್ಲ. ತನಗೆ ಬೇಕಿರುವ ಸಾಹಿತ್ಯಿಕ ಗುಣಗಳನ್ನು ನಾಟಕವು ಮೌಖಿಕ ಪರಂಪರೆಯಿಂದ ಪಡೆದುಕೊಂಡು ಬಿಡುತ್ತದೆ. ನಾಟಕ ಕ್ಷೇತ್ರವು ಮೇಲ್ಜಾತಿ ಹಾಗೂ ಮೇಲ್ವರ್ಗಗಳಿಗೆ ಸೀಮಿತವಾಗಬೇಕಿಲ್ಲ, ಸೀಮಿತವಾಗಬಾರದು.

ಹಿಂದೆಲ್ಲ ನಾಟಕ ಕಲಿಸುತ್ತಿದ್ದ ಹೆಚ್ಚಿನ 'ಮಾಸ್ತರರು' ಕೆಳಜಾತಿಯಿಂದ ಬಂದವರಾಗಿದ್ದರು, ಹಾಗೂ ಅರೆ-ಅಕ್ಷರಸ್ಥರಾಗಿರುತ್ತಿದ್ದರು. ಹಳೆಯ ಮೈಸೂರು ಪ್ರದೇಶದ ಮೈಸೂರು ಜಿಲ್ಲೆ ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ನಾಟಕ ಕಲಿಸುವ ಮಾಸ್ತರರು ಈಗಲೂ ಸಹ ಹರಿಜನ ಕೋಮಿನಿಂದ ಬಂದವರು. ಅವರ ಕಸುಬೇ ಹಾರ್ಮೋನಿಯಂ ಹಿಡಿದು ನಾಟಕ ಕಲಿಸುವುದು, ಇಲ್ಲವೇ ಭಜನೆಗಳನ್ನು ಕಲಿಸುವುದು. ಕಡಲ ತಡಿಯ ಯಕ್ಷಗಾನ ಪರಂಪರೆಯಲ್ಲಿ ಸಹ ಹಲವಾರು ಅರ್ಥಧಾರಿಗಳು ಶೂದ್ರ ಜನಾಂಗದಿಂದ ಬಂದವರು ಹಾಗೂ ಅನಕ್ಷರಸ್ಥರು. (ಈಗ ಆ ಪರಿಸ್ಥಿತಿ ಬದಲಾಗುತ್ತಿದೆ. ಯಕ್ಷಗಾನವು ದೊಡ್ಡ ರೀತಿಯಲ್ಲಿ ಬ್ರಾಹ್ಮಣೀಕರಣ ಹೊಂದುತ್ತಿದೆ.) ಬಯಲು ಸೀಮೆಯ ದೊಡ್ಡಾಟ ಕಲಿಸುವವರು ಶೂದ್ರರು. ಉತ್ತರ ಕರ್ನಾಟಕದ ಸಣ್ಣಾಟ 'ಸಂಗ್ಯಾ ಬಾಳ್ಯಾ' ನಾಟಕದ ಕರ್ತೃ ಪತ್ತಾರ ಮಾಸ್ತರನು ಶೂದ್ರ ಜನಾಂಗದಿಂದ ಬಂದವನು ಹಾಗೂ ಹಾರ್ಮೋನಿಯಂ ಮಾಸ್ತರನು.

ರಂಗಭೂಮಿಗೆ ಈ ಹಿಂದೆ ಲಭ್ಯವಿದ್ದ ವರ್ಗವೈಶಾಲ್ಯವು ಕರ್ನಾಟಕಕ್ಕೆ ಮಾತ್ರವೇ ಸೀಮಿತವಾದ ಸಂಗತಿ ಕೂಡ ಅಲ್ಲ. ಒಂದು ಕಾಲದಲ್ಲಿ ಭಾರತದಾದ್ಯಂತ ಹರಡಿಕೊಂಡಿದ್ದ ರಂಗ ಪರಂಪರೆಯದು. ನಾವದನ್ನು ಹೆಚ್ಚೂ ಕಡಿಮೆ ಸಂಪೂರ್ಣವಾಗಿ ಕಳೆದುಕೊಳ್ಳ ತೊಡಗಿದ್ದೇವೆ. ನಾನಿಲ್ಲಿ ಚರ್ಚಿಸಬಯಸುತ್ತಿರುವುದು, ಇಂತಹದ್ದೊಂದು ಗಟ್ಟಿ ಪರಂಪರೆಗೆ ಸೇರಿದ ಒಬ್ಬ ಅಸಾಧಾರಣ ನಾಟಕಕಾರನ ಬಗ್ಗೆ. ಆತ ಬಿಹಾರದವನು. ಆತನ ಹೆಸರು ಭಿಖಾರೀ ಠಾಕುರ್ ಎಂದು. ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ ನಾಟಕ ಕಲಿಸುತ್ತಿದ್ದ ಭಿಖಾರೀ ಠಾಕುರ್‌ನು, ಬಿಹಾರದ ಮಗಧ ಪ್ರದೇಶದ ಭಾಷೆಯಾದ ಭೋಜ್‌ಪುರಿಯಲ್ಲಿ ಹದಿಮೂರು ನಾಟಕಗಳನ್ನು ರಚಿಸಿದ್ದಾನೆ.

ಆತ ರಚಿಸಿದ 'ಬಿದೇಸಿಯಾ' ಎಂಬ ನಾಟಕವು ಕನ್ನಡದ 'ಸಂಗ್ಯಾ ಬಾಳ್ಯಾ' ನಾಟಕದಷ್ಟೇ ಪ್ರಖ್ಯಾತವಾಗಿದೆ. ಮಾತ್ರವಲ್ಲ 'ಸಂಗ್ಯಾ ಬಾಳ್ಯಾ'ದಂತೆಯೇ ಜಾನಪದ ನಾಟಕವೆಂಬ ತಪ್ಪು ಕಲ್ಪನೆಗೆ ಒಳಗಾಗಿದೆ. ತಪ್ಪು ಕಲ್ಪನೆ ಎಂದೆ. ವಿವರಿಸುತ್ತೇನೆ. ಕಂಬಾರರು, ಗಿರೀಶ ಕಾರ್ನಾಡರು, ಲಂಕೇಶರು ಬರೆದ ಕೃತಿಗಳು 'ನಾಟಕ'ಗಳೆಂದಾಗಬಲ್ಲುದಾದರೆ ಪತ್ತಾರ ಮಾಸ್ತರನು ಬರೆದ 'ಸಂಗ್ಯಾ ಬಾಳ್ಯಾ' ಹಾಗೂ ಭಿಖಾರೀ ಠಾಕುರ್‌ನು ಬರೆದ 'ಬಿದೇಸಿಯಾ' ಕೂಡ ನಾಟಕವೇ ಹೌದು; ಅರ್ಥಾತ್ ಸಾಹಿತ್ಯ ಕೃತಿಯೇ ಹೌದು. ನಾವು ಸಾಮಾನ್ಯವಾಗಿ ಜಾನಪದ ನಾಟಕವೆಂದು ಕರೆಯುವುದು ಸಾಮೂಹಿಕ ರಚನೆಗಳನ್ನು, ಅರ್ಥಾತ್ ಸಮಷ್ಟಿಯ ರಚನೆಗಳನ್ನು ; ವೈಯಕ್ತಿಕ ರಚನೆಗಳನ್ನಲ್ಲ.

ಭಿಖಾರೀ ಠಾಕುರ್ ಅರೆ-ಅಕ್ಷರಸ್ಥ ಹಾಗೂ ಶೂದ್ರ. ತನ್ನ ಜಾತಿ ಹಾಗೂ ವೃತ್ತಿಯಿಂದಾಗಿ ಆತ ಒಬ್ಬ ಕ್ಷೌರಿಕ. ಭಿಖಾರೀ ಠಾಕುರ್ ತನ್ನ ವೃತ್ತಿಯ ಕಾರಣಕ್ಕಾಗಿ ಬಿಹಾರದ ಹಲವು ಪಟ್ಟಣಗಳಲ್ಲಿ ಅಲೆದ, ಕಡೆಗೊಮ್ಮೆ ಕಲ್ಕತ್ತೆ ಸೇರಿದ. ಕಲ್ಕತ್ತೆಯಲ್ಲಿದ್ದಾಗ ಅವನಿಗೆ ಅಧ್ಯಾತ್ಮದ ಸೋಂಕು ತಗುಲಿತಂತೆ. ಕೈಯಲ್ಲಿ ರಾಮ್‌ಚರಿತ್‌ಮಾನಸ್ ಗ್ರಂಥವನ್ನು ಹಿಡಿದುಕೊಂಡು ಭಿಖಾರೀ ಠಾಕುರ್ ಬಿಹಾರಕ್ಕೆ ಹಿಂದಿರುಗಿದ. ನಂತರದ ತನ್ನ ಇಡೀ ಜೀವನವನ್ನೇ ನಾಟಕಕ್ಕೆ ಮುಡುಪಾಗಿಟ್ಟ.

ಭಿಖಾರೀ ಠಾಕುರ್ ನಾಟಕವಾಡಿದ್ದಾದರೂ ಎಲ್ಲಿ ? ಪ್ರಸಿದ್ಧ ರಂಗಮಂದಿರಗಳಲ್ಲಲ್ಲ ಅಥವಾ ಸುಸಂಸ್ಕೃತ ನಾಟಕಾಸಕ್ತರ ನಡುವೆಯೂ ಅಲ್ಲ. ರವೀಂದ್ರನಾಥ ಟಾಗೋರರಿಗೆ ಸಿಕ್ಕ ಗುರುಪೀಠವಾಗಲೀ ಅಥವಾ ಬಂಗಾಲೀ ನಾಟಕಕಾರ ಗಿರೀಶ್ ಘೋಷರಿಗೆ ಸಿಕ್ಕ ರಾಮಕೃಷ್ಣ ಪರಮಹಂಸರ ಆಶೀರ್ವಾದವಾಗಲೀ ಈತನಿಗೆ ಸಿಕ್ಕಲಿಲ್ಲ. ತನ್ನ ಹೆಸರು ಅನ್ವರ್ಥನಾಮವೋ ಎಂಬಂತೆ ಆತ ಕೊಚ್ಚೆಯಲ್ಲಿಯೇ ಬದುಕಿ ನಾಟಕ ಆಡುತ್ತ ಹೋದ.

ಬಿಹಾರದಲ್ಲಿ ಮದುವೆ ಇನ್ನಿತರ ಶುಭ ಸಮಾರಂಭಗಳಲ್ಲಿ ಶ್ರೀಮಂತ ಜಮೀನ್ದಾರರು 'ಲೌಂಡಾ ನಾಚ್' ಎಂಬ ನೃತ್ಯವನ್ನು ಏರ್ಪಡಿಸುತ್ತಾರಂತೆ. ಅದರ ಹೆಸರೇ ಸೂಚಿಸುವಂತೆ, ಲೌಂಡಾ ನಾಚ್ ನೃತ್ಯವು ಹುಡುಗರು ಹುಡುಗಿಯರ ವೇಷ ತೊಟ್ಟು ಕುಣಿಯುವ, ಸಾಕಷ್ಟು ಅಶ್ಲೀಲವಾದ ಒಂದು ನೃತ್ಯ ಶೈಲಿ. ಭಿಖಾರೀ ಠಾಕುರ್ ಲೌಂಡಾ ನಾಚ್‌ಗಳ ನಡುವಿನಲ್ಲಿ ತನ್ನ ನಾಟಕಗಳನ್ನು ಪ್ರದರ್ಶಿಸುತ್ತಿದ್ದ. ಆತನ ಜೀವಿತಾವಧಿಯಲ್ಲಿ ಆತನಿಗೆ ಯಾವುದೇ ಪುರಸ್ಕಾರವಾಗಲೀ ಅಥವಾ ಸಾಮಾಜಿಕ ಮಾನ್ಯತೆಯಾಗಲೀ ಸಿಕ್ಕ ಉದಾಹರಣೆಯಿಲ್ಲ.

ಶ್ರೀರಂಗರು, ಕೈಲಾಸಂ ಆದಿಯಾಗಿ ಇಂಗ್ಲಂಡಿನಲ್ಲಿ ಕಲಿತು ಬಂದ ಮೇಲ್ವರ್ಗದ ನಾಟಕಕಾರರು ಸಮಾಜಸುಧಾರಣೆಯ ನಾಟಕಗಳನ್ನು ಬರೆಯುತ್ತಿದ್ದ ಕಾಲದಲ್ಲಿಯೇ ಭಿಖಾರೀ ಠಾಕುರ್ ತಾನೂ ಸಹ ನಾಟಕಗಳನ್ನು ಬರೆಯುತ್ತಿದ್ದ, ಹಾಗೂ ತನ್ನದೇ ತಂಡದ ಮೂಲಕ ಅವುಗಳನ್ನು ಆಡಿಸುತ್ತಿದ್ದ. ಭಿಖಾರೀ ಠಾಕುರ್ ಹಾಗೂ ಪತ್ತಾರ ಮಾಸ್ತರನಂತಹ ನಾಟಕಕಾರರಿಗೂ ಮೇಲ್ವರ್ಗದ ನಾಟಕಕಾರರಿಗೂ ಇರುವ ವ್ಯತ್ಯಾಸಗಳನ್ನು ಸಮರ್ಪಕವಾಗಿ ಗುರುತಿಸುವುದು ಒಳ್ಳೆಯದು. ಇಲ್ಲದಿದ್ದರೆ ಅವರು ಒಳ್ಳೆಯ ಸಾಹಿತ್ಯಕಾರರು, ಇವರು ಕೀಳು ಮನರಂಜನೆಯ ರಂಗಕರ್ಮಿಗಳು ಎಂಬ ಸರಳೀಕರಣವು ಹೀಗೆಯೇ ಮುಂದುವರಿದುಕೊಂಡು ಬರುವ ಅಪಾಯವಿದೆ.

ಮೇಲ್ವರ್ಗದ ಸಮಾಜ ಸುಧಾರಕರು ನಾಟಕದ ಕಾವ್ಯಗುಣವನ್ನು ಬದಿಗೊತ್ತಿ ಸಂಭಾಷಣೆಯ ಮೂಲಕವೇ ನಾಟಕವನ್ನು ರಚಿಸುವ ಪರಿಪಾಠ ಬೆಳೆಸಿಕೊಂಡರು. ಭಿಖಾರೀ ಠಾಕುರ್ ಹಾಗೂ ಪತ್ತಾರ ಮಾಸ್ತರರು ಕಾವ್ಯಮಯ ಶೈಲಿಯಲ್ಲಿ ಮುಂದುವರಿದರು. ಮೇಲ್ವರ್ಗದ ಸಮಾಜ ಸುಧಾರಕರದ್ದು ಬುದ್ಧಿಪ್ರಣೀತವಾದ ಬರವಣಿಗೆಯಾಯಿತು. ಹಾಗಾಗಿ ಕಾವ್ಯಮಯತೆಯನ್ನು ಬದಿಗೊತ್ತುವುದು ಅವರಿಗೆ ಅನಿವಾರ್ಯವಾಯಿತು. ಭಿಖಾರೀ ಠಾಕುರ್‌ನ ನಾಟಕಗಳಲ್ಲಿ

ಅಲ್ಲಿ ಸ್ವಲ್ಪ ಸಂಭಾಷಣೆಯೂ ಇದೆ. ಆದರೆ ಅವನಲ್ಲಿ ಕಾವ್ಯಮಯತೆಗೇ ಒತ್ತು ಜಾಸ್ತಿ. ಅಷ್ಟೇ ಏಕೆ ಭಿಖಾರೀ ಠಾಕುರ್‌ನ ಗಟ್ಟಿತನವಿರುವುದೇ ಆತನ ಗೀತೆಗಳಲ್ಲಿ.

ಮೇಲ್ವರ್ಗದ ನಾಟಕಕಾರರು ಸಮಾಜ ಸುಧಾರಣೆಯ ಮಹತ್ವಾಕಾಂಕ್ಷೆ ಹೊತ್ತು ಕೊಂಡಿರುತ್ತಾರೆ. ಅವರ ನಾಟಕಗಳೊಳಗೆ ನೊಂದವರ ಪರವಾಗಿ ಮಾತನಾಡುವ ಪಾತ್ರಗಳಿರುತ್ತವೆ. ಭಿಖಾರೀ ಠಾಕುರ್‌ನಿಗಾಗಲೀ ಪತ್ತಾರ ಮಾಸ್ತರನಿಗಾಗಲೀ ಇದು ಸಾಧ್ಯವಿಲ್ಲ. ಇವನ ನಾಟಕಗಳಲ್ಲೂ ನೊಂದವರಿರುತ್ತಾರೆ. ಆದರೆ ನೊಂದವರ ಪರವಾಗಿ ಮಾತನಾಡುವವರು ಇರುವುದಿಲ್ಲ. ಇದು ಕೀಳೇ? ನೊಂದವರ ಪರವಾಗಿ ಮಾತನಾಡುವುದು ಮೇಲೇ? ನೊಂದವರ ಪರವಾಗಿ ಧ್ವನಿ ಎತ್ತಲಿಲ್ಲ ಎಂಬ ಮಾತ್ರಕ್ಕೆ ಭಿಕಾರೀ ಠಾಕುರ್‌ನದ್ದು ನಿರುಪಯುಕ್ತ ಕೃತಿಗಳೇ? ಹಾಗೇನಿಲ್ಲ. ಮೇಲ್ವರ್ಗದ ಸಮಾಜ ಸುಧಾರಣೆ ನಾಟಕಗಳು ಬುದ್ಧಿಪ್ರಧಾನ ನಾಟಕಗಳು. ಭಿಖಾರೀ ಠಾಕುರ್‌ನದ್ದು ಭಾವಪ್ರಧಾನ ನಾಟಕ. ಭಿಖಾರೀ ಠಾಕುರ್‌ನ ನಾಟಕಗಳಲ್ಲಿ ನೊಂದವರಿದ್ದಾರೆ. ನೊಂದವರ ನೋವಿದೆ. ಆ ನೋವು ಹಾಡಿನ ರೂಪು ಪಡೆದು ಹರಿದು ಬರುತ್ತದೆ. ವಿಷಾದವನ್ನು ಉಕ್ಕಿಸುತ್ತದೆ ಹಾಗೂ ಕಡೆಗೊಮ್ಮೆ ಅಸಹಾಯಕತೆಯ ರೂಪು ಪಡೆದು ಹೆಪ್ಪುಗಟ್ಟಿ ನಿಲ್ಲುತ್ತದೆ. 'ಬಿದೇಸಿಯಾ' ನಾಟಕವು ಉಕ್ಕಿಸುವ ವಿಷಾದವು ಅಸಾಧಾರಣವಾದದ್ದು.

ಬಿಹಾರವು ಭೂಆವೃತ್ತವಾದ ರಾಜ್ಯ, ಬಡವರ ರಾಜ್ಯ. ಅಲ್ಲಿ ವ್ಯವಸಾಯವನ್ನು ಬಿಟ್ಟರೆ ಮಿಕ್ಕಾವ ಉದ್ದಿಮೆಯೂ ಇಲ್ಲ. ಬಿಹಾರದ ಬಡವರಿಗೆ ಉದ್ಯೋಗ ಹುಡುಕಿಕೊಂಡು ಪರದೇಶಕ್ಕೆ ವಲಸೆ ಹೋಗುವುದು ಅನಿವಾರ್ಯ. ಭಿಖಾರೀ ಠಾಕುರ್ ವಲಸೆಯ ಮಾನವೀಯ ದುರಂತವನ್ನು ಮತ್ತೆ ಮತ್ತೆ ಚಿತ್ರಿಸುತ್ತಾನೆ. ವಲಸೆ ಹೋದ ಗಂಡಸಿಗಿಂತ, ಆತ ಹಿಂದೆ ಬಿಟ್ಟು ಹೋದ ಹೆಂಗಸು ಭಿಖಾರೀ ಠಾಕುರ್‌ನ ಅಂತಃಕರಣವನ್ನು ಕಲಕುತ್ತಾಳೆ. ಹದಿನೆಂಟು ಹತ್ತೊಂಬತ್ತನೆಯ ಶತಮಾನದಾದ್ಯಂತ ಬಿಹಾರಿಗಳು ಕಬ್ಬಿನ ತೋಟಗಳಲ್ಲಿ ಕೆಲಸ ಮಾಡುವ ಗುತ್ತಿಗೆ ಕಾರ್ಮಿಕರಾಗಿ ಮಾರಿಶಸ್, ವೆಸ್ಟ್ ಇಂಡೀಸ್, ಗಯಾನಾ, ದಕ್ಷಿಣ ಆಫ್ರಿಕಾ, ಸುರೀನಾಮ್ ಇತ್ಯಾದಿ ದೇಶಗಳಿಗೆ ವಲಸೆ ಹೋದರು. ಇವರೆಲ್ಲರಿಗೂ ಕಲ್ಕತ್ತೆಯೆಂಬುದು ವಿಶ್ವಕ್ಕೆ ತೆರೆದುಕೊಂಡ ಮಹಾದ್ವಾರ. ಹಲವರು ಅಲ್ಲಿಂದ ಮುಂದೆ ಹಡಗಿನಲ್ಲಿ ಪಯಣಿಸಿದರೆ, ಮಿಕ್ಕ ಅನೇಕರು ಕಲ್ಕತ್ತೆಯಲ್ಲಿಯೇ ಉಳಿದುಕೊಂಡು ಅಲ್ಲಿನ 'ಬಾಬು'ಗಳ ಸೇವೆಗೆ ನಿಂತರು.

ಬಿಹಾರದ ಗಂಡಸಿಗೆ ವಲಸೆಯ ಸ್ವಾತಂತ್ರ್ಯವಾದರೂ ಇದೆ. ಹೆಂಗಸಿಗೆ ಅದೂ ಇಲ್ಲ. ಆಕೆ ಹಳ್ಳಿಯಲ್ಲೇ ಉಳಿದು ಮನೆತನದ ಮಾನ ಕಾಪಾಡಬೇಕು, ಜಮೀನು ಉಳಿಸಬೇಕು, ಮಗುವನ್ನು ಹೆತ್ತು ಹೊತ್ತು ಪಾಲಿಸಬೇಕು. ಇವೆಲ್ಲವೂ ಯಾಕಾಗಿ? ಯಾರಿಗಾಗಿ? ಹೋದ ಗಂಡ ಹಿಂತಿರುಗಿ ಬಂದಾನೆಂದು ಖಾತ್ರಿಯಿದೆಯೇ? ಆಕೆಗೆ ಕಾಯುವುದೊಂದೇ ಖಾತ್ರಿ. ಅಲ್ಲೇ ವಿದೇಶದಲ್ಲೇ ಮತ್ತೊಂದು ಮದುವೆಯಾಗಿ ಸಂಸಾರ ಹೂಡಿದ ಗಂಡಸರೇ ಜಾಸ್ತಿ. ಭಿಖಾರೀ ಠಾಕುರ್‌ನನ್ನು ಮತ್ತೆ ಮತ್ತೆ ಕಾಡಿದ ದುರಂತವಿದು. ಹೆಂಗಸರ ಅತಂತ್ರ ಸ್ಥಿತಿ, ವಿರಹ ವೇದನೆಗಳು ಅವನ ನಾಟಕಗಳಲ್ಲಿ ಹಲವು ಹತ್ತು ವಿಧದಲ್ಲಿ ಚಿತ್ರಿತವಾಗಿವೆ.

'ಬಿದೇಸಿಯಾ' ನಾಟಕದ ಗಂಡನು ಕಲ್ಕತ್ತೆಗೆ ಹೋಗಿಯಾಗಿದೆ. ಎಷ್ಟೋ ವರ್ಷ ಕಳೆದು ಹೋಗಿವೆ. ಆತನಿಂದ ಸುದ್ದಿಯಿಲ್ಲ, ಪತ್ರವಿಲ್ಲ, ಹಣವಂತೂ ಇಲ್ಲವೇ ಇಲ್ಲ. ಹೆಂಡತಿ ಅನಕ್ಷರಸ್ಥೆ. ಯಾರು ಯಾರನ್ನೋ ಕಾಡಿ ಬೇಡಿ ಪತ್ರ ಹಾಕಿಸುತ್ತಾಳೆ. ಸುದ್ದಿ ತಿಳಿಯುವ ಪ್ರಯತ್ನ ನಡೆಸುತ್ತಾಳೆ. ಕಡೆಗೊಮ್ಮೆ ಹಟ ಹಿಡಿದು ಕಲ್ಕತ್ತೆಯ ವರೆಗೂ ಹೋಗಿ ಬರುತ್ತಾಳೆ. ಅಲ್ಲಿ ಅವಳ ಗಂಡ ವೇಶ್ಯೆಯೊಬ್ಬಳ ಜೊತೆ ಸಂಸಾರ ನಡೆಸಿದ್ದಾನೆ. ಈಕೆ ತನ್ನ ಪ್ರತಿಷ್ಠೆ ನುಂಗಿಕೊಂಡು, ಸಾಧ್ಯವಿದ್ದಷ್ಟೂ ಸಣ್ಣವಳಾಗಿ, 'ಅವಳೂ ಇರಲಿ, ನಾನೂ ಇರುತ್ತೇನೆ' ಎಂದು ಬೇಡಿಕೊಳ್ಳುತ್ತಾಳೆ. ತಿರಸ್ಕೃತಳಾಗುತ್ತಾಳೆ. ಗಂಡನಿಗಿಂತ ಮಿಗಿಲಾಗಿ, ಆತನ ಆ ಮತ್ತೊಬ್ಬ

ಹೆಣ್ಣು, ತನ್ನವನನ್ನು ಹಂಚಿಕೊಳ್ಳಲಿಕ್ಕೆ ಒಲ್ಲೆ ಅಂದು ಬಿಡುತ್ತಾಳೆ.

ಭಿಖಾರೀ ಠಾಕುರ್‌ನ ಮತ್ತೊಂದು ಕಿರುನಾಟಕವಿದೆ. ಅದರ ಹೆಸರು 'ಗಡ್‌ಬಡ್ ಗೋತಾಲಾ' ಎಂದು. ಅದಂತೂ ವಿಸ್ಫೋಟಕವಾದ ವಸ್ತುವನ್ನುಳ್ಳ ನಾಟಕ. ಗಂಡ ಊರು ಬಿಟ್ಟು ಹೋಗಿ ಹತ್ತಾರು ವರ್ಷಗಳೇ ಕಳೆದಿವೆ. ಹೆಂಡತಿಗೆ ಮಗನೊಬ್ಬ ಹುಟ್ಟಿದ್ದಾನೆ. ಈಗವನು ವಯಸ್ಸಿಗೆ ಬರುತ್ತಿದ್ದಾನೆ. ದೂರದೂರಿನಲ್ಲಿರುವ ಗಂಡನಿಗೆ ವಯಸ್ಸಿಗೆ ಬಂದ ಮಗನ ಸುದ್ದಿ ಮುಟ್ಟುತ್ತದೆ. ಕೆಲಸಕ್ಕೆ ಮತ್ತೊಬ್ಬ ಆಳಿದ್ದರೆ ಒಳ್ಳೆಯದು ಅನ್ನಿಸಿ. ಮಗನನ್ನು ಕೊಂಡೊಯ್ಯಲೆಂದು ಊರಿಗೆ ಬರುತ್ತಾನೆ. ಹೆಂಡತಿಯು ಹತಾಶಳಾಗಿ 'ನನ್ನನ್ನೂ ಒಯ್ಯಿ. ಮಗನಿಂದ ನನ್ನನ್ನು ಬೇರ್ಪಡಿಸಬೇಡ' ಎಂದು ಗೋಗರೆಯುತ್ತಾಳೆ. ಗಂಡ ಒಪ್ಪುವುದಿಲ್ಲ. ಪಂಚಾಯ್ತಿಯಾಗುತ್ತದೆ. ಪಂಚಾಯ್ತಿದಾರ ಭ್ರಷ್ಟ, ಪತಿಯ ಪರವಾಗಿ ತೀರ್ಪು ನೀಡುತ್ತಾನೆ. ಪತಿ ಮಗನನ್ನು ಕರೆದುಕೊಂಡು ಹೊರಡಲಿಕ್ಕೆ ಸಿದ್ಧನಾಗುತ್ತಾನೆ.

ಅಷ್ಟರಲ್ಲಿ ಅಲ್ಲಿಗೆ ಮತ್ತೊಬ್ಬ ಬರುತ್ತಾನೆ. ಬಂದವನು ಅಷ್ಟ ತರುಣ. 'ಮಗ ನನ್ನವನು. ನನ್ನ ಹಕ್ಕು' ಎನ್ನುತ್ತಾನೆ. ಹೇಗೆ ಎಂದು ಕೇಳಿದರೆ. 'ಹಾಲಿನ ಗಡಿಗೆ ಅವನದ್ದು ನಿಜ. ಆದರೆ ಹಾಲು ಅವಳದ್ದು. ಹೆಪ್ಪು ನನ್ನದ್ದು. ಹಾಗಾಗಿ ಮೊಸರು ಸಹಿತ ನನ್ನದು' ಎಂದು ಸಾಧಿಸುತ್ತಾನೆ. ಪಂಚಾಯ್ತಿದಾರ ಹೆಂಡತಿಯನ್ನು ಕೇಳುತ್ತಾನೆ. ಹೆಂಡತಿಯು. 'ಹೌದು ದಿನಾ ಬಂದು ಸೊಟ್ಟ ಮೂತಿ ಮಾಡಿಕೊಂಡು ನಿಲ್ಲುತ್ತಿದ್ದ. ಕೆಟ್ಟ ಘಳಿಗೆಯಲ್ಲಿ ತಪ್ಪು ಮಾಡಿಬಿಟ್ಟೆ. ಆದರೆ ಮಗ ನನ್ನವನು' ಎಂದು ಬೇಡುತ್ತಾಳೆ. 'ಹಾಲು ನನ್ನದು. ಹೆಪ್ಪಿಗೆಂದು ಚೂರು ಮೊಸರನ್ನು ಕಡ ತಂದ ಮಾತ್ರಕ್ಕೆ ಮೊಸರಿನ ಗಡಿಗೆಯೇ ಅವನದ್ದು ಹೇಗಾದೀತು' ಎಂದು ವಾದಿಸುತ್ತಾಳೆ. ಗಂಡ ಮತ್ತೊಂದು ರೀತಿಯ ವಾದ ಮಂಡಿಸುತ್ತಾನೆ. 'ಕುಂಬಳದ ಬಳ್ಳಿ ನೆಟ್ಟೆ. ಬಳ್ಳಿಯು ಬೆಳೆದು ಮನೆಯಾಚೆಗೂ ಹರಡಿ ಪಕ್ಕದ ಮನೆಯವನ ಚಪ್ಪರ ಏರಿ ಅಲ್ಲಿ ಕಾಯಿ ಬಿಟ್ಟಿದೆ. ಚಪ್ಪರವೇನೋ ಅವನದ್ದು ನಿಜ. ಆದರೆ ಕುಂಬಳವೂ ಅವನದ್ದೇ ಏನು?' ಎಂದು ಹಕ್ಕು ಸ್ಥಾಪಿಸುತ್ತಾನೆ.

ಪಂಚಾಯ್ತಿದಾರ ಮೇಲ್ಜಾತಿಯವನು. ಶಾಣ್ಯಾ: ಇಬ್ಬರು ಗಂಡಸರಿಂದಲೂ ಲಂಚ ಪಡೆದು. 'ಮಗನನ್ನು ಮೂರು ತುಂಡು ಮಾಡಿಬಿಡಿ. ಮೂವರೂ ಸಮನಾಗಿ ಹಂಚಿಕೊಳ್ಳಿ' ಎಂದು ತೀರ್ಪು ನೀಡುತ್ತಾನೆ. ಕಟುಕ ಬಂದು ಮಗುವನ್ನು ಕಡಿಯಲು ತಯಾರಾಗಿ ನಿಲ್ಲುತ್ತಾನೆ. ಮಾತೃ ಹೃದಯ ರೋದಿಸುತ್ತದೆ. 'ದಮ್ಮಯ್ಯ ಕೊಲ್ಲಬೇಡಿ. ಇಡಿಯಾದ ಮಗನನ್ನು ಯಾರಿಗಾದರೂ ಕೊಡಿ. ಕೊಂಡೊಯ್ಯಲಿ...ಆದರೆ ಕೊಲ್ಲಬೇಡಿ' ಎಂದು ಗೋಗರೆಯುತ್ತಾಳೆ. ಪಂಚಾಯ್ತಿದಾರನ ಕಣ್ಣು ತೆರೆಯುತ್ತದೆ. ಆತ ಗಂಡಸರಿಬ್ಬರನ್ನೂ ಗದರಿಸಿ ಕಳಿಸಿ ಮಗುವನ್ನು ತಾಯಿಯ ಸುಪರ್ದಿಗೆ ಒಪ್ಪಿಸುತ್ತಾನೆ.

ಈ ನಾಟಕವು ಬಂದಾಗ ಬ್ರೆಕ್ಟ್‌ನ 'ಕಕೇಶಿಯನ್ ಚಾಕ್ ಸರ್ಕಲ್' ನಾಟಕವಿನ್ನೂ ಬಂದಿರಲಿಲ್ಲ. ನಿಜ. ಭಿಖಾರೀ ಠಾಕುರ್‌ನ ನಾಟಕಕ್ಕೆ, ಚಾಕ್ ಸರ್ಕಲ್ ನಾಟಕಕ್ಕಿರುವ ಬಿಗಿ ಬಂಧವಿಲ್ಲ ಹಾಗೂ ಅದಕ್ಕಿರುವ ಹರವು ಸಹಿತ ಇಲ್ಲ. ಆದರೆ ಜನರ ನಾಡಿ ಹಿಡಿಯುವಲ್ಲಿ ಭಿಖಾರೀ ಠಾಕುರ್ ಮಿಕ್ಕೆಲ್ಲರಿಗಿಂತ ಮುಂದೆ ನಿಲ್ಲುತ್ತಾನೆ. ಪ್ರಖ್ಯಾತ ವಿದ್ವಾಂಸ, ಮಹಾಪಂಡಿತ ರಾಹುಲ್ ಸಾಂಕೃತ್ಯಾಯನ್‌ರು ಭಿಖಾರೀ ಠಾಕುರ್‌ನ ಬಗ್ಗೆ ಹೇಳುತ್ತ, 'ಅದೊಂದು ಕಡೆಯದ ಒರಟು ವಜ್ರ' ಅನ್ನುತ್ತಾರೆ. ಕನ್ನಡದ ಪತ್ತಾರ ಮಾಸ್ತರ ಕೂಡ ಕಡೆಯದ ಒರಟು ವಜ್ರವೇ ಸರಿ. ಒಂದು ರೀತಿಯ ನಾಟಕಗಳು ಬೌದ್ಧಿಕ ಕಸರತ್ತು ಮಾತ್ರವೇ ಆಗಿ, ಮತ್ತೊಂದು ರೀತಿಯವು ಭಾವನಾತ್ಮಕ ಅಳಲು ಮಾತ್ರವೇ ಆಗಿ ಉಳಿದದ್ದು ಸಮಕಾಲೀನ ನಾಟಕ ಪರಂಪರೆಯ ದುರಂತವಾಗಿದೆ. ಇವೆರಡನ್ನೂ ಬೆಸೆಯಬಲ್ಲಂತಹ ಪರಂಪರೆಯ ರಚನೆಯಾಗಬೇಕಿದೆ. ಭಾರತೀಯ ರಂಗಭೂಮಿಯು ಜನಪರ ರಂಗಭೂಮಿಯಾಗಬೇಕು ಎಂಬ ಆಶಯವು ಇದೇ ಆಗಿದೆ. ಅದು ಜನಪರ ಘೋಷಣೆಗಳು ಮಾತ್ರವೇ ಆಗಬಾರದು. ಅಥವಾ ಹಸಿ ಬಿಸಿ ಅಳಲುಗಳನ್ನು ಹಾಡುವ ಕೃತಿಯೂ ಆಗಬಾರದು. ಚಿಂತನೆ ಹಾಗೂ ಭಾವನೆಗಳು ಕೂಡಿದ ಸಂರಚನೆಯಾಗಬೇಕು ನಾಟಕವೆಂಬುದು.

❖ ಪ್ರಸನ್ನ : ಕವಿ-ಕಾವ್ಯ ಟ್ರಸ್ಟ್, ಹೆಗ್ಗೋಡು-೫೭೭ ೪೧೭ (ಶಿವಮೊಗ್ಗ) ❖

ನನ್ನ ಗುರುಗಳು

— ನಾ. ಡಿಸೋಜ

ಪ್ರೀತಿ ವಿಶ್ವಾಸದ ಆಗರವಾದ ತನ್ನ ಮನೆಯಿಂದ ಮಗು ಜ್ಞಾನದ ದೇಗುಲವಾದ ಶಾಲೆಗೆ ಬಂದಾಗ ಶಿಕ್ಷಕ ಈ ಮಗುವಿನ ಮೇಲೆ ಅಪಾರವಾದ ಪ್ರಭಾವವನ್ನು ಬೀರುತ್ತಾನೆ. ಶಿಕ್ಷಕನ ಮಾತು ನಡೆ ಎಲ್ಲವನ್ನೂ ಮಗು ಸೂಕ್ಷ್ಮವಾಗಿ ಗಮನಿಸುತ್ತದೆ. ಬಹಳಷ್ಟು ಅಂಶಗಳನ್ನು ಮಗು ಈತನಿಂದ ಹೆಕ್ಕಿಕೊಳ್ಳುತ್ತದೆ.

ನಾನು ಒಂದು ಅರ್ಥದಲ್ಲಿ ಪಂಡಿತಪುತ್ರ. ನನ್ನ ತಂದೆಯವರು ಪ್ರಾಥಮಿಕ ಶಾಲೆಯ ಶಿಕ್ಷಕರಾಗಿದ್ದರೂ ನಾನು ಬೇರೆ ಬೇರೆ ಕಾರಣಗಳಿಗಾಗಿ ಬೇರೆ ಶಾಲೆಗಳಲ್ಲಿ ಕಲಿಯಬೇಕಾಯಿತು.

ಸಾಗರದ ಚರ್ಚ್ ಶಾಲೆಯಲ್ಲಿ ಒಂದೆರಡು ವರುಷ ಪ್ರಾಥಮಿಕ ಶಿಕ್ಷಣ ಮುಗಿಸಿದ ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿರುವವರು ಪಾಪಮ್ಮ ಮೇಡಂ. ಬಹುಶಃ ಯಾರುಯಾರಿಗೆ ಪಾಪಮ್ಮ ಮೇಡಂ ಪಾಠ ಹೇಳಿಕೊಡುತ್ತಿದ್ದರೋ ಅವರು ಯಾರೂ ಕೂಡ ಇವರನ್ನು ಮರೆಯಲಾರರು. ಮಕ್ಕಳ ಮೇಲೆ ಅಪಾರ ಮಮತೆ. ಶಾಂತ, ಸೌಮ್ಯ ಸ್ವಭಾವ. ಎಂದೂ ಬಿರುನುಡಿ ಆಡದ, ಬೆತ್ತ ಹಿಡಿಯದ, ಸರಳವಾಗಿ ಪಾಠ ಹೇಳಿಕೊಡುವ ಶಿಕ್ಷಕಿ ಈಕೆ. ಇವರ ವ್ಯಕ್ತಿತ್ವವೇ ಆಕರ್ಷಕವಾದದ್ದು. ದುಂಡು ಮುಖ, ಕಪ್ಪು ಬಣ್ಣ. ಪ್ರೀತಿ ಸೂಸುವ ಕಣ್ಣುಗಳು. ಮೆದು ಮಾತು. ಸದಾ ಮುಗುಳು ನಗೆ. ಇವೆಲ್ಲ ಪಾಪಮ್ಮನವರ ವ್ಯಕ್ತಿತ್ವದ ಪ್ಲಸ್ ಪಾಯಿಂಟ್‌ಗಳು. ಶಾಲೆಗೆ ಹಸಿದು ಬರುವ ಎಷ್ಟೋ ಮಕ್ಕಳನ್ನು ಮನೆಗೆ ಕರೆದೊಯ್ದು ಊಟ ಹಾಕುತ್ತಿದ್ದರು ಪಾಪಮ್ಮ. ಮಕ್ಕಳಿಗೆ ಸ್ಲೇಟು, ಬಳಪ, ಪುಸ್ತಕಗಳನ್ನು ತಂದುಕೊಡುತ್ತಿದ್ದರು. ದಡ್ಡ ಹುಡುಗರ ಬಗ್ಗೆ ಹೆಚ್ಚು ಆಸಕ್ತಿ ವಹಿಸುತ್ತಿದ್ದರು.

ಎಲ್ಲರೂ ಪಾಪಮ್ಮನವರನ್ನು ಕೊಂಡಾಡುವಾಗ ಯಾವುದೋ ಕಾಯಿಲೆಯಿಂದಾಗಿ ಅವರು ಸರಕಾರಿ ಆಸ್ಪತ್ರೆ ಸೇರಿದರು. ನಾವೆಲ್ಲ ಹುಡುಗರು ಆಸ್ಪತ್ರೆಗೆ ಹೋಗಿ ಪಾಪಮ್ಮನವರನ್ನು ನೋಡಿ ಬಂದೆವು. ಅಲ್ಲಿ ಆಸ್ಪತ್ರೆಯಲ್ಲಿ ಕೂಡ ಅದೇ ಪ್ರೀತಿ ವಿಶ್ವಾಸದ ನಗೆ. ಎಲ್ಲರ ಕೈ ಹಿಡಿದು ನಮ್ಮ ಮಾತನಾಡಿಸಿದರು. ಚೆನ್ನಾಗಿ ಓದಬೇಕು ಎಂದರು.

ಆದರೆ ಆಸ್ಪತ್ರೆಗೆ ಹೋದ ಪಾಪಮ್ಮ ಮೇಡಂ ಮತ್ತೆ ಬರಲಿಲ್ಲ. ಅವರನ್ನು ಸಾವು ಕರೆದುಕೊಂಡಿತು. ನಾವು ಶಾಲಾ ಮಕ್ಕಳು ಅವರ ಶವಯಾತ್ರೆಯಲ್ಲಿ ಪಾಲ್ಗೊಂಡು ಸಿಮಿಟ್ರಿಯ ವರೆಗೂ ಅವರನ್ನು ಬೀಳ್ಕೊಟ್ಟು ಅಳುತ್ತ ಬಿಕ್ಕುತ್ತ ಬಂದೆವು. "ದೇವರು ಈ ಮಕ್ಕಳಿಗೆ ತುಂಬಾ ಅನ್ಯಾಯ ಮಾಡಿಬಿಟ್ಟ" ಎಂದು ಯಾರೋ ಒಬ್ಬರು ಹೇಳಿದ್ದು ನನ್ನ ಕಿವಿಯಲ್ಲಿ ಈಗಲೂ ಕೇಳಿಬರುತ್ತಿದೆ. ಆರೋ ಏಳೋ ವಯಸ್ಸಾದಾಗ ನಾನು ಅನುಭವಿಸಿದ ಮೊದಲ ನೋವಿದು.

ಪಾಪಮ್ಮ ಮೇಡಂ ಅವರನ್ನು ನಾನು ಹೇಗೆ ಮರೆಯಲಾರೆನೋ ಹಾಗೆಯೇ ಹ್ಯಾರಿಸ್ ಮೇಷ್ಟ್ರನ್ನೂ ಮರೆಯಲಾರೆ. ಹ್ಯಾರಿಸ್ ಖಳನಾಯಕನಂತೆ ತೋರುತ್ತಿದ್ದರು. ಕಪ್ಪು ಬಣ್ಣ. ಒರಟು ಮುಖ. ಕೆಂಪು ಕಣ್ಣು. ಹಣೆಯ ಮೇಲೆ ಬಂದು ಬೀಳುವ ಕೂದಲು. ವಿಚಿತ್ರವಾದ ನಡಿಗೆಯಿಂದಾಗಿ ನಮ್ಮನ್ನೆಲ್ಲ ಹೆದರಿಸಿ ಇರಿಸಿಕೊಂಡಿದ್ದರು ಹ್ಯಾರಿಸ್.

ಇವರಿಂದಾಗಿ ನನಗಂತೂ ಒಂದು ಕಹಿ ಅನುಭವವಾಯಿತು. ಆಗ ಪ್ರಾಥಮಿಕ ಶಾಲೆಯಲ್ಲಿ ಮೌಖಿಕ ಪರೀಕ್ಷೆಗಳು ನಡೆಯುತ್ತಿದ್ದವು. ಉಪಾಧ್ಯಾಯರು ಒಬ್ಬೊಬ್ಬ ವಿದ್ಯಾರ್ಥಿಯನ್ನು ಕರೆದು ತನ್ನ ಮುಂದೆ ಕೂರಿಸಿಕೊಂಡು ಪ್ರಶ್ನೆ ಕೇಳುವುದು. ಉತ್ತರ ನೀಡಿದ ನಂತರ ಅಲ್ಲಿಯೇ ಅಂಕ ಕೊಡುವುದು.

ಅಂದು ನಮ್ಮ ಮೌಖಿಕ ಪರೀಕ್ಷೆ. ತರಗತಿಯ ತುಂಬ ಹುಡುಗರು. ಬೋರ್ಡಿನ ಬಳಿ ಹ್ಯಾರಿಸ್ ಮೇಷ್ಟ್ರು. ಅವರ ಮುಂದೆ ಒಂದು ಸ್ಟೂಲು. ನನ್ನ ಸರದಿ ಬಂದಾಗ ನಾನು ಎದ್ದುಹೋಗಿ ಅವರ ಮುಂದೆ ಕುಳಿತೆ. ಪ್ರಶ್ನೆ ಕೇಳಿದರು, ಉತ್ತರ ಹೇಳಿದೆ. ನಾನು ಬುದ್ಧಿವಂತ ವಿದ್ಯಾರ್ಥಿಯೆ. ಎಲ್ಲ ಪ್ರಶ್ನೆಗಳಿಗೂ ಸರಿ ಉತ್ತರ ನೀಡಿದೆ. ನೂರಕ್ಕೆ ಅರವತ್ತು ಅಂಕ ಪಡೆದೆ. ಅವರು ೬೦ ಎಂದು ಬರೆದುದನ್ನೂ ಗಮನಿಸಿದೆ.

ನನಗೆ ಅಪಾರ ಸಂತೋಷವಾಯಿತು. ತಿರುಗಿ ಬರುವಾಗ ಈ ಸಂತೋಷವನ್ನು ತಡೆದುಕೊಳ್ಳಲಾಗದೆ ನನ್ನ ಸಹಪಾಠಿಗಳತ್ತ ತಿರುಗಿ ನನ್ನ ಸಂತಸವನ್ನು ಹಂಚಿಕೊಂಡೆ.

ಇದನ್ನು ಹ್ಯಾರಿಸ್ ಗಮನಿಸಿಬಿಟ್ಟರು.

"ಡಿಸೋಜಾ... ಬಾ ಇಲ್ಲಿ..." ಎಂದರು. ನಾನು ಮತ್ತೆ ತಿರುಗಿ ಹೋದೆ.

"ಕುಳಿತುಕೋ" ಎಂದರು. ಕುಳಿತೆ. ನನ್ನ ಹೆಸರಿನ ಮುಂದೆ ಏನು ೬೦ ಎಂದು ಬರೆದಿದ್ದರು. ಅದನ್ನು ತೋರಿಸಿ, ನಾನು ನೋಡುತ್ತಿರಲು ೬ ನ್ನು ಸೊನ್ನೆ ಎಂದು ಬದಲಾಯಿಸಿದರು.

"ಹೋಗು ಸೀಟಿಗೆ" ಎಂದರು. ನನಗೆ ಕಾಲು ಹಿಡಿದು ನೆಲಕ್ಕೆ ಬಡಿದ ಹಾಗೆ ಆಯಿತು. ಏನು ಮಾಡಬೇಕು ತಿಳಿಯಲಿಲ್ಲ. ಪೆಚ್ಚಾಗಿ ನಾನು ನನ್ನ ಜಾಗಕ್ಕೆ ಬಂದು ಕುಳಿತೆ. ೬೦ ಈಗ ೦೦ ಆದುದನ್ನು ಸಹಪಾಠಿಗಳೂ ಗಮನಿಸಿದ್ದರು.

ಆದರೆ ಆ ಬಾರಿ ಪರೀಕ್ಷೆಯಲ್ಲಿ ನಾನು ಉತ್ತೀರ್ಣನಾಗಿದ್ದೆ. ಹ್ಯಾರಿಸ್ ಮೇಷ್ಟ್ರು ನನ್ನ ೦೦ ಯನ್ನು ನಂತರ ಮತ್ತೆ ೬೦ ಎಂದು ಬದಲಾಯಿಸಿದ್ದಿರಬಹುದು. ಇದಂತೂ ನನಗೊಂದು ಪಾಠವಾಯಿತು. ಸಂತಸ, ಸಂಭ್ರಮವನ್ನು ಹೀಗೆ ಅವಸರದಲ್ಲಿ ಪ್ರದರ್ಶಿಸಬಾರದು ಎಂಬ ಪಾಠವನ್ನು ನಾನು ಕಲಿತೆ.

ಮಾಧ್ಯಮಿಕ ಶಾಲೆಗೆ ಬಂದಾಗ ಅನಂತರಾಯರು ನಮ್ಮ ಮುಖ್ಯೋಪಾಧ್ಯಾಯರು. ಇವರು ಕೂಡ ಒಳ್ಳೆಯ ಶಿಕ್ಷಕರೆ. "ಏನು ಮರೀ..." ಎಂದು ಎಲ್ಲರನ್ನೂ ಅಪ್ಪಿ ಹಿಡಿದು ಮಾತನಾಡಿಸುತ್ತಿದ್ದರು.

ಆಗ ಸಾಗರದಲ್ಲಿ ಪ್ಲೇಗು ಕಾಲರಾದ ಕಾಟ. ಪ್ರತಿ ವರುಷ ಮಳೆಗಾಲ ಬರುವಂತೆ ಪ್ಲೇಗು ಕಾಲರಾ ಸಾಗರಕ್ಕೆ ಬರುತ್ತಿತ್ತು. ಶಾಲೆಯೊಳಗೆ ಬಂದ ತಕ್ಷಣ ನಾವು ಸತ್ತು ಬಿದ್ದಿರುವ ಇಲಿಗಳನ್ನು ಹುಡುಕುವುದು. ಇಲಿಯನ್ನು ತೆಗೆದುಕೊಂಡು ಹೋಗಿ ಉಪಾಧ್ಯಾಯರಿಗೆ ತೋರಿಸಿದರೆ ಕೂಡಲೇ ಶಾಲೆಗೆ ರಜೆ ಕೊಡಲಾಗುತ್ತಿತ್ತು. ಊರಿನಲ್ಲಿ ಪ್ಲೇಗು ಕಾಲರಾ ಹೆಚ್ಚಾದರೆ ಶಾಲಾ ಮಕ್ಕಳಿಗೆ ಸೂಜಿ ಮದ್ದು. ವೈದ್ಯರು ಬಂದು ತಮ್ಮ ಸಲಕರಣೆಗಳ ಜೊತೆ ಕುಳಿತರೆ ಅನಂತರಾಯರು ಅಲ್ಲಿ ಹಾಜರು. ಅಳುವ, ಕೊಸರಾಡುವ, ಓಡಿ ಹೋಗುವ ಯತ್ನ ಮಾಡುವ, ಎಲ್ಲ ಹುಡುಗರಿಗೆ ಧೈರ್ಯ ಹೇಳಿ ಅವರು ಸೂಜಿಮದ್ದು ನೀಡುವಂತೆ ನೋಡಿಕೊಳ್ಳುತ್ತಿದ್ದರು. "ಮರಿ... ನೋವಾಗೋದಿಲ್ಲಪ್ಪ... ನೋವಾಗೋದಿಲ್ಲ... ಬಾ..." ಎಂದು ಸಮಾಧಾನ ಹೇಳುತ್ತಿದ್ದರು.

ನಾನು ಮಾಧ್ಯಮಿಕ ಶಾಲೆಗೆ ಹೋದ ಎರಡನೇ ವರ್ಷ ಅನಂತರಾಯರಿಗೆ ವರ್ಗವಾಯಿತು. ಸ್ಟ್ರೈಕ್ ಮಾಡೋಣ ಎಂದರು ಯಾರೋ. ನಾವೆಲ್ಲ ಸ್ಟ್ರೈಕ್ ಮಾಡಿದೆವು. ಊರಿನಲ್ಲಿ ಒಂದು ಮೆರವಣಿಗೆ, 'ಅನಂತರಾಯರು– ಬೇಕೇ ಬೇಕು', 'ಅನಂತರಾಯರು ಬೇಕೇ ಬೇಕು.'

ಅಂದು ಸಾಗರದಲ್ಲಿ ಪ್ರಭಾತಫೇರಿಗಳು ನಡೆಯುತ್ತಿದ್ದವು. ಹಾಗೆಯೇ ನಮ್ಮ ಮೆರವಣಿಗೆ. ಆದರೆ ಅನಂತರಾಯರು ಓಡಿ ಬಂದರು. "ಮಕ್ಕಳೇ ಈ ವರ್ಗದಿಂದ ನನಗೆ ಒಳ್ಳೆಯದಾಗುತ್ತೆ... ನನ್ನ ಮಕ್ಕಳು ಮನೆಯವರು ಶಿವಮೊಗ್ಗದಲ್ಲಿದ್ದಾರೆ. ನನಗೆ ಹೋಗಲಿಕ್ಕೆ ಅವಕಾಶ ಮಾಡಿಕೊಡಿ..." ಅನಂತರಾಯರು ಕೇಳಿಕೊಂಡರು. ನಮ್ಮ ಸ್ಟ್ರೈಕು ರದ್ದಾಯಿತು.

ಮುತ್ತಣ್ಣ ಎಂದೊಬ್ಬರು ಇಂಗ್ಲೀಷ್ ಮೇಷ್ಟ್ರು. ತುಂಬಾ ಒಳ್ಳೆಯವರು. ಖಾದಿ ಬಟ್ಟೆ ತೊಡುತ್ತಿದ್ದರು. ತುಂಬಾ ಚೆನ್ನಾಗಿ ಪಾಠ ಮಾಡುತ್ತಿದ್ದರು. ಇವರಿಗೆ ಬೇರೊಂದು ಕೆಲಸ ಸಿಕ್ಕಿತು. "ನಾಳೆಯಿಂದ ನಾನು ನಿಮ್ಮ ತರಗತಿಗೆ ಬರುವುದಿಲ್ಲ. ನೀವೆಲ್ಲ ಚೆನ್ನಾಗಿ ಓದಿ ಮುಂದೆ ಬರಬೇಕು... ನಾನು ಬೇರೆ ಕೆಲಸಕ್ಕೆ ಹೋಗತಿದೀನಿ" ಎಂದು ಮುತ್ತಣ್ಣ ಒಂದು ದಿನ ತರಗತಿಯಲ್ಲಿ ಹೇಳಿ ನಮ್ಮನ್ನೆಲ್ಲ ಅಳಿಸಿಬಿಟ್ಟರು. ಡೆಸ್ಕಿನ ಮೇಲೆ ಜೋರಲು ಬಿದ್ದು ನಾವೆಲ್ಲ ಅತ್ತಿದ್ದೆವು. "ಸಾರ್, ನೀವು ಹೋಗಬೇಡಿ... ನೀವು ನಮಗೆ ಬೇಕು..." ಎಂದು ನಾವೆಲ್ಲ ಜೋರಿಟ್ಟು ಕಣ್ಣೀರು ಸುರಿಸಿದ್ದೆವು. ಮುತ್ತಣ್ಣ ಕೂಡ ವಾಸ್‌ಕೋಟಿನ ಜೋಬಿನಿಂದ ಕರವಸ್ತ್ರ ತೆಗೆದು ಕಣ್ಣೊರೆಸಿಕೊಂಡರು.

ಶಿವಪ್ಪ ನಮಗೆ ಕನ್ನಡ ಕಲಿಸಲು ಬರುತ್ತಿದ್ದರು. ಕಚ್ಚೆ ಪಂಚೆ, ಹಸಿರು ಕೋಟು, ಬಿಳಿಯ ಪೇಟ ಇವರ ಉಡಿಗೆ. ಕೋಟಿನ ಕಿಸೆಯಲ್ಲಿ ಒಂದು ಬೆಳ್ಳಿಯ ನಸ್ಯದ ಡಬ್ಬಿ. ಆಗಾಗ್ಗೆ ಈ ಡಬ್ಬಿಯಿಂದ ನಸ್ಯ ತೆಗೆದು ಬಹಳ ಆಪ್ತವಾದ ರೀತಿಯಲ್ಲಿ ಅದನ್ನು ಮೂಗಿಗೆ ಏರಿಸುತ್ತಿದ್ದರು.

"ಮಕ್ಕಳೇ, ನೀವು ಯಾರೂ ನಸ್ಯ ಸೇದಬೇಡಿ... ಹ್ಞಾ" ಎಂದು ನಮಗೆ ಎಚ್ಚರಿಕೆಯ ಮಾತುಗಳನ್ನು ಹೇಳುತ್ತಿದ್ದರು. 'ನಾಗರಹಾವೇ ಹಾವೊಳು ಹೂವೆ... ಬಾಗಿಲ ಬಿಳಿಯಲಿ ನಿನ್ನಯ ಠಾವೆ' ಎಂಬ ಪದ್ಯವನ್ನು ರಾಗವಾಗಿ, ಅಭಿನಯಿಸಿ ಹಾಡುತ್ತಿದ್ದರು. ಅದನ್ನು ವಿದ್ಯಾರ್ಥಿಗಳ ಮೂಲಕವೂ ಮಾಡಿಸುತ್ತಿದ್ದರು.

ನಮ್ಮ ತರಗತಿಯ ಗೋಡೆಯ ಮೇಲೆ ಎಂಟು ಮೂಲೆಗಳ ಒಂದು ದೊಡ್ಡ ಗಡಿಯಾರವಿತ್ತು. ಅದರ ಲೋಲಕ ಸದಾ ಅತ್ತ-ಇತ್ತ ತೂಗಾಡುತ್ತಿತ್ತು. ಸೋಮವಾರದಂದು ಅದಕ್ಕೆ ಕೀ ಕೊಡಬೇಕಾದುದರಿಂದ MON ಎಂಬ ಮೂರಕ್ಷರಗಳನ್ನು ಕ್ಯಾಲೆಂಡರಿನಿಂದ ಕತ್ತರಿಸಿ ಗಡಿಯಾರದ ಗಾಜಿಗೆ ಅಂಟಿಸಲಾಗಿತ್ತು. ಈ ಗಡಿಯಾರದಲ್ಲಿ ಒಂದು ದೋಷವಿತ್ತು. ಒಂದು ಗಂಟೆ ಆದ ತಕ್ಷಣ ಗಡಿಯಾರದ ದೊಡ್ಡ ಮುಳ್ಳು ಮುಂದೆ ಸರಿಯುತ್ತಿತ್ತು. ಈ ಮುಳ್ಳು ನಾಲ್ಕರ ಅಂಕಿಗೆ ಬಂದ ತಕ್ಷಣ ಠಕ್ ಎಂದು ಐದರ ಅಂಕೆಗೆ ಹಾರಿ ಕುಳಿತುಬಿಡುತ್ತಿತ್ತು. ತರಗತಿಯ ನಾವೆಲ್ಲ ಈ ಕ್ಷಣಕ್ಕಾಗಿ ಕಾದು ಕುಳಿತು ಮುಳ್ಳು ಹಾರಿದ ತಕ್ಷಣ ಹೋ ಎಂದು ಒಟ್ಟಿಗೇನೆ ನಗುತ್ತಿದ್ದೆವು. ಪಾಠ ಮಾಡುವ ಶಿಕ್ಷಕರಿಗೂ ಇದು ಗೊತ್ತಿದ್ದರಿಂದ ಅವರು 'ಹ್ಞಾ ಸಾಕು ಸಾಕು...' ಎಂದು ನುಡಿದು ಪಾಠ ಮುಂದುವರಿಸುತ್ತಿದ್ದರು. ಗಡಿಯಾರದ ಮುಳ್ಳು ಐದು ನಿಮಿಷ ಮುಂದು ಹೋದುದರಿಂದ ನಮಗೇನೂ ಉಪಯೋಗವಾಗುತ್ತಿರಲಿಲ್ಲ. ಏಕೆಂದರೆ ಶಾಲಾ ಜವಾನ ಮುಖ್ಯೋಪಾಧ್ಯಾಯರ ಕೋಣೆಯಲ್ಲಿರುವ ಗಡಿಯಾರ ನೋಡಿ ಗಂಟೆ ಹೊಡೆಯುತ್ತಿದ್ದ. ನಾನು

ಮಾಧ್ಯಮಿಕ ಶಾಲೆ ಬಿಡುವಾಗ ಈ ಗೋಡೆ ಗಡಿಯಾರ ಅಲ್ಲಿಂದ ಮಾಯವಾಗಿದ್ದು ಮಾತ್ರ ನಿಜ.

• • •

ಅಂದು ಮಾಧ್ಯಮಿಕ ಶಾಲೆಯ ಕೊನೆಯ ಪರೀಕ್ಷೆಗೆ ತುಂಬಾ ಗೌರವ. ಲೋಯರ್ ಸೆಕೆಂಡರಿ (L. S.) ಎಂದು ಕರೆಯಲಾಗುತ್ತಿದ್ದ ಇದನ್ನು ಎಂಟು ರುಪಾಯಿ ಪರೀಕ್ಷೆ ಎಂದು ಕೂಡ ಕರೆಯುತ್ತಿದ್ದರು. ಪಬ್ಲಿಕ್ ಪರೀಕ್ಷೆ. ಏನೋ ಭೀತಿ. ಹೆದರಿಕೆ. ನಾನು ಈ ಪರೀಕ್ಷೆ ಮುಗಿಸಿಕೊಂಡು ಪ್ರೌಢಶಾಲೆಗೆ ಬಂದೆ.

ಅದು ಪ್ರತ್ಯೇಕವಾದ ಒಂದು ಜಗತ್ತು. ವಿದ್ಯಾರ್ಥಿಗಳೆಲ್ಲ ಪ್ರೌಢರು, ಬೆಳೆದವರು. ಮದುವೆಯಾದ ಒಂದಿಬ್ಬರು ನಮ್ಮ ಜೊತೆಗಿದ್ದರು. ಶಿಕ್ಷಕರ ರೀತಿ ನೀತಿ ಬೇರೆ. ಪ್ರೌಢ ಶಾಲೆಯ ವಾತಾವರಣಕ್ಕೆ ಹೊಂದಿಕೊಳ್ಳಲು ನನಗೆ ಕೆಲ ದಿನಗಳು ಬೇಕಾದವು.

ಪ್ರೌಢಶಾಲೆಯ ಶಿಕ್ಷಕರು ಮೊದಲನೆಯದಾಗಿ ನನ್ನ ಗಮನ ಸೆಳೆದರು. ಅವರಲ್ಲಿ ಒಳ್ಳೆಯವರೂ ಇದ್ದರು ಕೆಟ್ಟವರೂ ಇದ್ದರು. ಪ್ರತಿಭಾವಂತರೂ ಇದ್ದರು. ಪ್ರತಿಭೆ ಇಲ್ಲದವರೂ ಇದ್ದರು.

ಕಣ್ಣಿಗೆ ಬಿದ್ದವರೆಲ್ಲರ ರೇಖಾಚಿತ್ರ ಬರೆಯುವ ಗಂಗಾಧರ್, ವರ್ಡ್ಸ್‌ವರ್ತ್ ಕವಿತೆಗಳನ್ನು ಕನ್ನಡಕ್ಕೆ ಅನುವಾದ ಮಾಡುವ ಚಂದ್ರಶೇಖರ್, ನಶ್ಯ ಸೇದಿ ಇಡೀ ಶಾಲೆಗೆ ಪ್ರತಿಧ್ವನಿಸುವಂತೆ ಸೀನುವ ಶಾಮಣ್ಣ; ಎಸ್.ಎಸ್.ಎಲ್.ಸಿ. ಪರೀಕ್ಷೆ ಮುಗಿದ ತಕ್ಷಣ ಉತ್ತರ ಪತ್ರಿಕೆಗಳು ಎಲ್ಲಿ ಹೋಗಿವೆ ಎಂಬುದನ್ನು ತಿಳಿದುಕೊಂಡು, ಕೆಲ ವಿದ್ಯಾರ್ಥಿಗಳಿಂದ ಪಾಸು ಮಾಡಿಸಲು ಹಣ ಸಂಗ್ರಹಿಸಿಕೊಂಡು ಅಲ್ಲಿಗೆ ಹೋಗುವ ಓರ್ವರು. ಹುಡುಗಿಯರನ್ನು ಯಾಮಾರಿಸುವ ಇನ್ನೋರ್ವರು. ಮುಖ್ಯೋಪಾಧ್ಯಾಯರನ್ನು ಗಲಿಬಿಲಿಗೊಳಿಸಲು ಪ್ರಶ್ನೆಪತ್ರಿಕೆಗಳನ್ನು ಬಯಲು ಮಾಡುವ ಮಾರನೆಯುವರೊಬ್ಬರು. ಹೀಗೆ ನಾನಾ ಬಗೆಯ ಶಿಕ್ಷಕರನ್ನು ನಾನು ಕಂಡೆ.

ಇವರೆಲ್ಲರ ನಡುವೆ ಓರ್ವ ಶಿಕ್ಷಕರು ನನ್ನ ಗೌರವಕ್ಕೆ ಪಾತ್ರರಾದರು. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಸಹೋದರ ಗೊರೂರು ನರಸಿಂಹಾಚಾರ್ ಅವರು ನಮಗೆ ಕನ್ನಡ ಶಿಕ್ಷಕರಾಗಿದ್ದರು. ಎತ್ತರದ ಗಂಭೀರ ವ್ಯಕ್ತಿ. ಬೋಳು ತಲೆ. ದುಂಡನೆ ಮುಖ. ದುಂಡು ಕನ್ನಡಕ. ಗಂಟು ಮುಖವಿದ್ದರೂ ಹೂವಿನ ಹೃದಯ. ಪಂಚೆಯ ಮೇಲೊಂದು ಹಸಿರು ಶಾಲು ಹೊದೆಯುತ್ತಿದ್ದರು. ತೀಕ್ಷ್ಣ ನೋಟ. ಕಂಚಿನ ಕಂಠ. ಅಂದಿನ ಸಾಗರ ಪುರ ಪ್ರೌಢಶಾಲೆಯಲ್ಲಿ ಹಲವು ಸುಧಾರಣೆ, ಬದಲಾವಣೆಗಳನ್ನು ತಂದವರು ನರಸಿಂಹಾಚಾರ್.

ಶಾಲಾ ವಿದ್ಯಾರ್ಥಿಗಳಿಗೊಂದು ಡ್ರೆಸ್ ಕೋಡ್ ಇತ್ತು. ವಿದ್ಯಾರ್ಥಿಗಳು ಕೋಟು ಇಲ್ಲ ಟೋಪಿ ಹಾಕಿಕೊಳ್ಳಬೇಕು. ಶರಟಿನ ಮೇಲಿನ ಗುಂಡಿಯನ್ನು ಕಡ್ಡಾಯವಾಗಿ ಹಾಕಿಕೊಳ್ಳಬೇಕು.

'ಶಾಲಾ ಪ್ರಾರ್ಥನೆಗಳು' ಎಂಬ ಕಿರುಪುಸ್ತಕವನ್ನು ಮುದ್ರಿಸಿ ಎಲ್ಲ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿತ್ತು. ಈ ಪುಸ್ತಕದಲ್ಲಿ ರಾಷ್ಟ್ರಗೀತೆಯ ಜೊತೆಗೆ ದಿನಕ್ಕೊಂದು ಪ್ರಾರ್ಥನೆಯನ್ನು ಗುರುತಿಸಿ ಮುದ್ರಿಸಲಾಗಿತ್ತು. ಉದಾಹರಣೆಗೆ, ಸೋಮವಾರ 'ಸಕಲಕೆಲ್ಲಕು ನೀನೆ ಅಕಳಂಕ ಗುರು', ಗುರುವಾರ ಭಗವದ್ಗೀತೆಯ ಒಂದು ಅಧ್ಯಾಯ 'ಯಂ ಬ್ರಹ್ಮಾ ವರುಣೇಂದ್ರರುದ್ರಮರುತಃ 'ದಿಂದ ಆರಂಭಿಸಿ ಕೆಲ ಶ್ಲೋಕಗಳು, ಶುಕ್ರವಾರ ಖುರಾನಿನ ಒಂದು ಶ್ಲೋಕ, ಶನಿವಾರ ಬೈಬಲಿನ ಪರಲೋಕಮಂತ್ರ. ಹೀಗೆ ದಿನಕ್ಕೊಂದು ಪ್ರಾರ್ಥನೆಯನ್ನು ನಾವೆಲ್ಲ ವಿದ್ಯಾರ್ಥಿಗಳು ಹೇಳುತ್ತಿದ್ದೆವು.

ಪ್ರಾರ್ಥನೆಯ ನಂತರ ಹಿಂದಿನ ದಿನದ ಸುದ್ದಿಯನ್ನು ಓರ್ವ ವಿದ್ಯಾರ್ಥಿ ಸಂಕ್ಷಿಪ್ತವಾಗಿ ಹೇಳಬೇಕು. ನಾಳಿನ ಸುದ್ದಿ ಯಾರು ಹೇಳಬೇಕು ಎಂಬುದನ್ನು ಇಂದು ನರಸಿಂಹಾಚಾರ್ ಅವರು ಅಲ್ಲಿ ಪ್ರಕಟಿಸುತ್ತಿದ್ದರು.

ಪ್ರಾರ್ಥನೆ ಪ್ರಾರಂಭವಾದ ಮೇಲೆ ಯಾರೂ ಕೂಡ ತಡವಾಗಿ ಬಂದು ಸಾಲಿನಲ್ಲಿ ಸೇರಿಕೊಳ್ಳುವುದಲ್ಲ. ಅವರು ಪ್ರತ್ಯೇಕವಾಗಿ ಒಂದೆಡೆ ನಿಲ್ಲಬೇಕು. ನರಸಿಂಹಾಚಾರ್ ಅವರು ಮುಂಬದಿಯಲ್ಲಿ ಶಿಸ್ತಿನಿಂದ ನಿಂತು ಎಲ್ಲವನ್ನೂ ಗಮನಿಸುತ್ತಿದ್ದರು. ಸುದ್ದಿ ಹೇಳಬೇಕಾದ ವಿದ್ಯಾರ್ಥಿ ಬಾರದಿದ್ದರೆ ಅವರೇ ಸುದ್ದಿ ಹೇಳುತ್ತಿದ್ದರು. ಅವರ ಅಸ್ಖಲಿತ ವಾಣಿಗೆ ನಾವೆಲ್ಲ ಬೆರಗಾಗಿ ಕೇಳುತ್ತಿದ್ದೆವು.

ಶಾಲೆಯ ಎಲ್ಲ ತರಗತಿಗಳವರೂ ಒಂದೊಂದು ಕೈಬರಹದ ಪತ್ರಿಕೆಯನ್ನು ಹೊರತರಬೇಕಿತ್ತು. ಶಿಕ್ಷಕರೇ ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡಿ ಲೇಖನಗಳನ್ನು, ಚಿತ್ರಗಳನ್ನು ಬರೆಸುತ್ತಿದ್ದರು. ವಾಚನಾಲಯಗಳಲ್ಲಿ ಈ ಕೈಬರಹದ ಪತ್ರಿಕೆಗಳು ವಿದ್ಯಾರ್ಥಿಗಳಿಗೆ ಓದಲು ಲಭ್ಯವಾಗುತ್ತಿದ್ದವು.

ನರಸಿಂಹಾಚಾರ್ ಅವರು ಉಪಕ್ರಮಿಸಿದ ಮತ್ತೂ ಒಂದು ಕಾರ್ಯವೆಂದರೆ, ವಿದ್ಯಾರ್ಥಿಗಳಿಗೆ ವಿಶ್ವದ ಮಹಾನ್ ಕಾದಂಬರಿಗಳನ್ನು ಪರಿಚಯ ಮಾಡಿಕೊಡುವುದು. ಶೈಕ್ಷಣಿಕ ವರ್ಷದ ಮೊದಲ ದಿನ ಅವರು ತಾವು ಇಂಥದೇ ಒಂದು ಕ್ಲಾಸಿಕ್‌ನ್ನು ವರ್ಷವೆಲ್ಲ ಧಾರಾವಾಹಿ ರೂಪದಲ್ಲಿ ಹೇಳುವುದಾಗಿ ತಿಳಿಸುತ್ತಿದ್ದರು. ೪೫ ನಿಮಿಷಗಳ ಒಂದು ಅವಧಿಯಲ್ಲಿ ೩೫ ನಿಮಿಷಗಳನ್ನು ಪಾಠಕ್ಕೆ ಮೀಸಲಿಟ್ಟು ಉಳಿದ ೧೦ ನಿಮಿಷಗಳನ್ನು ಈ ಕಾದಂಬರಿಯ ಪರಿಚಯಕ್ಕಾಗಿ ಅವರು ತೆಗೆದಿರಿಸುತ್ತಿದ್ದರು. ಇಡೀ ಕಾದಂಬರಿಯನ್ನು ಹಂತ ಹಂತವಾಗಿ ಅವರು ಹೇಳುತ್ತಿದ್ದರು. ಘಟನೆ, ಸಮಯ ಸಂದರ್ಭ, ಪಾತ್ರಚಿತ್ರಣ, ಸಂಭಾಷಣೆ ಹೀಗೆ ಕಾದಂಬರಿಯ ಮೂಲಕ್ಕೆ, ಕಲಾತ್ಮಕತೆಗೆ ಧಕ್ಕೆ ಬಾರದ ಹಾಗೆ ಅವರ ನಿರೂಪಣೆ ಇರುತ್ತಿತ್ತು. ಕುತೂಹಲಕರವಾದ ಒಂದು ಹಂತಕ್ಕೆ ಅವರು ಕತೆಯನ್ನು ತಂದು ನಿಲ್ಲಿಸುತ್ತಿದ್ದರು. ಇವರ ಕನ್ನಡ ತರಗತಿಗೆ ಯಾವ ವಿದ್ಯಾರ್ಥಿಗಳೂ ತಪ್ಪಿಸಿಕೊಳ್ಳುತ್ತಿರಲಿಲ್ಲ.

ಮೂರು ವರ್ಷಗಳ ಅವಧಿಯಲ್ಲಿ ನಾನು ಇವರ ಬಾಯಿಂದ ಮೂರು ಮಹಾನ್ ಕಾದಂಬರಿಗಳನ್ನು ಕೇಳಿದೆ. ಒಂದು ವಿಕ್ಟರ್ ಹ್ಯೂಗೋನ 'ಲೆ ಮಿಸರಿಬಲ್', ಮತ್ತೆರಡು ಅಲೆಕ್ಸಾಂಡರ್ ಡ್ಯೂಮಾನ 'ತ್ರೀ ಮಸ್ಕಿಟಿಯರ್ಸ್' ಹಾಗೂ 'ಕೌಂಟ್ ಆಫ್ ಮಾಂಟೆ ಕ್ರಿಸ್ಟೊ'. ಗುರುಗಳು 'ಲೆ ಮಿಸರಿಬಲ್' ಹೇಳುವಾಗಲೇ ಈ ಕಾದಂಬರಿಯನ್ನು ಆಧರಿಸಿದ ಒಂದು ತಮಿಳು ಚಿತ್ರ ಸಾಗರಕ್ಕೆ ಬಂದು ನಮ್ಮನ್ನು ರೋಮಾಂಚನಗೊಳಿಸಿತು.

ನನ್ನ ಗುರುಗಳಾದ ನರಸಿಂಹಾಚಾರ್ ಅವರು ಬದುಕಿನಲ್ಲಿ ಒಂದು ಆದರ್ಶವನ್ನು ರೂಪಿಸಿಕೊಂಡವರು. ದೇಶದ ಬಗ್ಗೆ, ದೇಶದ ಕಾನೂನು ನಿಯಮಗಳ ಮೇಲೆ ಅಪಾರ ಗೌರವ ಇರಿಸಿಕೊಂಡವರು. ಅವರು ಸಾಗರದಲ್ಲಿ ಇರುವಾಗಲೇ ಪುರಸಭೆಯಿಂದ ಒಂದು ನಿವೇಶನವನ್ನು ಕೊಂಡಿದ್ದರು. ಸಾಗರದಿಂದ ವರ್ಗವಾಗಿ ಅವರು ಬೆಂಗಳೂರಿಗೆ ಹೋಗಿ ನೆಲಸಿದ ಮೇಲೆ ಈ ನಿವೇಶನವನ್ನು ಮಾರುವ ವಿಚಾರವನ್ನು ಅವರು ಮಾಡಿದರು. ಅವರ ಸ್ನೇಹಿತರ ಮೂಲಕ ನಿವೇಶನವನ್ನು ಕೊಳ್ಳುವವರೂ ಬಂದರು. ನಿವೇಶನಕ್ಕೆ ಒಂದು ಬೆಲೆ ನಿಗದಿಯಾಯಿತು. ದಾಖಲೆ ಪತ್ರದಲ್ಲಿ ಈ ಬೆಲೆಯನ್ನು ತೋರಿಸಿದರೆ ಸರಕಾರಕ್ಕೆ ಹೆಚ್ಚು ಹಣ ಕಟ್ಟಬೇಕಾಗುತ್ತದೆ,

ಸುಮ್ಮನೆ ಸರಕಾರಕ್ಕೆ ಏಕೆ ಹಣ ಕೊಡುವುದು. ದಾಖಲೆ ಪತ್ರದಲ್ಲಿ ಕಡಿಮೆ ಹಣ ತೋರಿಸೋಣ, ವ್ಯತ್ಯಾಸದ ಹಣವನ್ನು ನೀವು ನಗದಾಗಿ ತೆಗೆದುಕೊಳ್ಳಿ, ಎಂದರೂ ಗುರುಗಳು ಕೇಳಲಿಲ್ಲ. "ಕೊಳ್ಳುವವರಿಗೆ ನಷ್ಟವಾಗುತ್ತದಾದರೆ ಬೆಲೆಯನ್ನು ಕಡಿಮೆ ಮಾಡಿಕೊಳ್ಳಿ, ಆದರೆ ದಾಖಲೆ ಪತ್ರದಲ್ಲಿ ಸುಳ್ಳು ಮೊಬಲಗು ತೋರಿಸಬೇಡಿ..." ಎಂದರು ನರಸಿಂಹಾಚಾರ್‌ರು. ಅಂತ್ಯ ಕಾಲದ ವರೆಗೂ ಇದೇ ಶಿಸ್ತನ್ನು, ನೇಮ ನಿಯಮಗಳನ್ನು ಅವರು ಇರಿಸಿಕೊಂಡಿದ್ದರು ಎಂದು ಅವರ ಮಕ್ಕಳು ಹೇಳುತ್ತಾರೆ. ಗೊರೂರು ನರಸಿಂಹಾಚಾರ್ ಅವರು ಬಹು ರೀತಿಯಲ್ಲಿ ನನ್ನ ಮೇಲೆ ಪ್ರಭಾವ ಬೀರಿದವರು.

ಪ್ರಾಥಮಿಕ, ಮಾಧ್ಯಮಿಕ, ಪ್ರೌಢಶಾಲೆಗಳಲ್ಲಿ ನನಗೆ ಪಾಠ ಹೇಳಿಕೊಟ್ಟ ಶಿಕ್ಷಕರ ಸಂಖ್ಯೆ ಕಡಿಮೆ ಏನಲ್ಲ. ಆದರೆ ಅವರೆಲ್ಲರಿಂದ ನಾನು ಒಂದಲ್ಲಾ ಒಂದು ಪಾಠ ಕಲಿತಿದ್ದೇನೆ. ಅದು ಸಾಹಿತ್ಯ ಕ್ಷೇತ್ರವಿರಬಹುದು, ಎಲ್ಲ ಧರ್ಮಗಳನ್ನೂ ಸಮಾನವಾಗಿ ಕಂಡು ಗೌರವಿಸುವ ಮನೋಭಾವ ಇರಬಹುದು, ದೇಶದ ಬಗ್ಗೆ ಶ್ರದ್ಧೆ ಅಭಿಮಾನವಿರಿಸಿಕೊಳ್ಳುವುದಿರಬಹುದು. ಎಲ್ಲವನ್ನೂ ನನ್ನಲ್ಲಿ ಬಿತ್ತಿದ್ದು ಈ ಶಾಲೆಗಳು, ಇಲ್ಲಿಯ ಶಿಕ್ಷಕರು.

ಪ್ರೌಢಶಾಲೆಯಲ್ಲಿ ವೆಂಕಟರಾಮನ್ ಎಂದೊಬ್ಬರು ಶಿಕ್ಷಕರು ನನಗಿದ್ದರು. ಅವರು ಚರಿತ್ರೆ ಕಲಿಸುತ್ತಿದ್ದರು. ತುಸು ಸಿಡಿಲ ಮಾತು. ತಟ್ಟನೆ ತಾಳ್ಮೆ ಕಳೆದುಕೊಳ್ಳುತ್ತಿದ್ದರು. ಸಟ್ಟನೆ ಏನೋ ಹೇಳಿಬಿಡುತ್ತಿದ್ದರು.

ನಬಿ ಎಂಬೊಬ್ಬ ಸಹಪಾಠಿ ನನಗೆ. ಈ ನಬಿಯ ತಂದೆ ತೀರಿಕೊಂಡು ಏಳೆಂಟು ದಿನವಾಗಿತ್ತು. ನಬಿ ತುಂಬಾ ಚಿಂತೆಯಿಂದಲೇ ಶಾಲೆಗೆ ಬಂದಿದ್ದ. ವೆಂಕಟರಾಮನ್ ತರಗತಿಯಲ್ಲಿ ಪಾಠ ಮಾಡುತ್ತಿದ್ದರು. ಅದು ಕೃಷ್ಣದೇವರಾಯನ ವಿಷಯ. ತೆನಾಲಿ ರಾಮನ ಒಂದು ಕತೆ ಹೇಳಿ ವೆಂಕಟರಾಮನ್ ಅವರು ವಿದ್ಯಾರ್ಥಿಗಳನ್ನೆಲ್ಲ ನಗಿಸಿದರು. ಎಲ್ಲ ವಿದ್ಯಾರ್ಥಿಗಳು ನಗುವಾಗ ಅನ್ಯಮನಸ್ಕನಾಗಿದ್ದ ನಬಿಗೆ ಏನೆಂದು ತಿಳಿಯಲಿಲ್ಲ. ಆತ ಎದ್ದು ನಿಂತು ವೆಂಕಟರಾಮನ್‌ಗೆ ಕೇಳಿದ– "ಯಾರು ಸಾರ್?"

ವೆಂಕಟರಾಮನ್ ಅವರಿಗೆ ಸಿಟ್ಟು ಬಂದಿತು. ಮೊದಲೇ ಸಿಡುಕರಾಗಿದ್ದ ಅವರು ನಬಿಯ 'ಯಾರು ಸಾರ್' ಎಂಬ ಪ್ರಶ್ನೆಗೆ ತಟ್ಟನೆ– "ನಿಮ್ಮಪ್ಪ" ಎಂದು ಉತ್ತರ ಕೊಟ್ಟುಬಿಟ್ಟರು.

ಬಾಂಬು ಸಿಡಿಯಿತು. ನಬಿ ಬಿಕ್ಕಿ ಬಿಕ್ಕಿ ಅಳತೊಡಗಿದ.

ಇನ್ನೋರ್ವ ವಿದ್ಯಾರ್ಥಿ ಎದ್ದು ನಿಂತು ನಬಿ ತಂದೆ ಕೆಲವೇ ದಿನಗಳ ಹಿಂದೆ ತೀರಿಕೊಂಡಿದ್ದನ್ನು ಶಿಕ್ಷಕರಿಗೆ ಹೇಳಿದ. ಈಗ ಪೇಚಾಡುವ, ಕ್ಷಮಾಪಣೆ ಕೇಳುವ ಸರದಿ ನಮ್ಮ ಶಿಕ್ಷಕರದಾಯಿತು. ವೆಂಕಟರಾಮನ್ ನಬಿಯನ್ನು ತಬ್ಬಿಕೊಂಡು, "ಸಾರಿ ಮೈ ಸನ್... ಸಾರಿ..." ಎಂದರು. ಅವರ ಕಣ್ಣುಗಳಲ್ಲಿ ನೀರು ಬಂದಿತು.

ಶಾಲೆಗಳಲ್ಲಿ ನಡೆದ ಇಂತಹ ಘಟನೆಗಳಿಂದಲೂ ನಾನು ಪಾಠ ಕಲಿತಿದ್ದೇನೆ. ಶಾಲೆಗಳಲ್ಲಿ ಶಿಕ್ಷಕರು ಇರುವುದೇ ಪಾಠ ಕಲಿಸಲಿಕ್ಕೆ ಅಲ್ಲವೆ?

✤ ಡಾ. ನಾ. ಡಿಸೋಜ :
೧೫/೧೪, ೨ನೇ ಕ್ರಾಸ್, ನೆಹರೂ ನಗರ, ಸಾಗರ-೫೭೭ ೪೦೧ (ಶಿವಮೊಗ್ಗ) ✤

ನನ್ನ ಶಾಲಾ ಗುರುಗಳು

ಸಂಗನಾಳಮಠ ಯು. ಎಸ್.

ನನ್ನ ಪ್ರಾಥಮಿಕ, ಮಾಧ್ಯಮಿಕ, ಹೈಸ್ಕೂಲು, ಕಾಲೇಜು ಹಂತದ ಶಿಕ್ಷಣ ನಗರ ಪ್ರದೇಶದಲ್ಲಿ ಆಯಿತು. ಹೀಗಾಗಿ ನನ್ನ ಬದುಕಿನಲ್ಲಿ ಅಥವಾ ಓದಿನಲ್ಲಿ ಗ್ರಾಮೀಣ ಪ್ರದೇಶದ ಒಸ್ನೆಲೆ ಇರುವದಿಲ್ಲ. ನನ್ನ ಬದುಕಿನ ವೈಚಿತ್ರಕ್ಕೆ ಒಳಗಾಗಿ, ನನ್ನ ಪೂರ್ವಿಕರ ಪ್ರದೇಶ ಗ್ರಾಮೀಣವಾದರೂ, ನಾನು ಬೆಳೆದದ್ದು ನಗರಪ್ರದೇಶದಲ್ಲಿ. ಹುಬ್ಬಳ್ಳಿಯ ಹೊಸೂರಿನ ಕನ್ನಡ ಗಂಡು ಮಕ್ಕಳ ಶಾಲೆ ನಂ. ೧೬ ನಾನು ಓದಿದ ಮೊದಲ ಶಾಲೆ.

ಈಗಿನಂತೆ ಬಾಲವಾಡಿ, ಅಂಗನವಾಡಿ, ಎಲ್.ಕೆ.ಜಿ., ಯು.ಕೆ.ಜಿ. ಗಾಳಿಯಿಲ್ಲದ ಆ ಪರಿಸರದಲ್ಲಿ ಅಕ್ಷರಾಭ್ಯಾಸದ ಪದ್ಧತಿ ಪ್ರಾರಂಭವಾದದ್ದು ಮನೆಯಲ್ಲಿ. ನನ್ನ ಮನೆತನದ ವಿಶೇಷವೆಂದರೆ ನನ್ನ ಅಜ್ಜ ಅಪ್ಪ ವಿದ್ಯಾಕ್ಷೇತ್ರದಲ್ಲಿ ಅಧಿಕಾರಿಗಳಾಗಿದ್ದವರು. ಪ್ರಾಥಮಿಕ ಶಾಲೆ ಸೇರುವ ಹೊತ್ತಿಗೆ ನನ್ನ ಅಜ್ಜ, ಧಾರವಾಡ ಜಿಲ್ಲೆಯ ಅಸಿಸ್ಟಂಟ್ ಡೆಪ್ಯೂಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರ್ ಆಗಿ ನಿವೃತ್ತಿ ಹೊಂದಿದ್ದರು. ನನ್ನ ಅಪ್ಪ ಧಾರವಾಡ ಜಿಲ್ಲೆಯ ಶಿಕ್ಷಣಾಧಿಕಾರಿಗಳಾಗಿದ್ದರು. ನನ್ನ ಅಪ್ಪನ ಸಂಪರ್ಕ ಇಲ್ಲದ್ದರಿಂದ ನನಗೆ ಅಜ್ಜನೇ ಪೋಷಕ, ಪಾಲಕ, ವಿದ್ಯಾಗುರು. ಮನೆಯಲ್ಲಿಯೇ ಅಜ್ಜ ಅಕ್ಷರ, ಮಗ್ಗಿ ಎಲ್ಲವನ್ನೂ ಪ್ರತಿದಿನ ಹೇಳಿಕೊಡುತ್ತಿದ್ದರು. ಅಜ್ಜ ಈಗಾಗಲೇ 'ಸುಲಭ ಬಾಲಬೋಧೆ' ಎಂಬ ಪ್ರಾಥಮಿಕ ಹಂತದ ಶೈಕ್ಷಣಿಕ ಪಠ್ಯವನ್ನು ರಚಿಸಿ ವಿದ್ಯಾ ಇಲಾಖೆಯಿಂದ ಮನ್ನಣೆ ಹೊಂದಿದ್ದರು. ಆ ನನ್ನ ಅಜ್ಜ ೨೦ ನೇ ಶತಮಾನದ ಆರಂಭದ ಕಾದಂಬರಿಕಾರ, ಶಿಕ್ಷಣತಜ್ಞ, ವಾಗ್ಮಿ ಜಿ. ಜಿ. ಬೂದಿಹಾಳಮಠ.

ನನ್ನ ವಯಸ್ಸು ಕಡಿಮೆ ಇದ್ದುದರಿಂದ ಶಾಲೆಯಲ್ಲಿ ನನ್ನ ಹೆಸರನ್ನು ಅಧಿಕೃತವಾಗಿ ಹಚ್ಚಿಕೊಳ್ಳಲಿಲ್ಲ. ಹೀಗಾಗಿ ಒಂದನೆಯ, ಎರಡನೆಯ ವರ್ಗಗಳನ್ನು ಶಾಲೆಯಲ್ಲಿ ಕಲಿಯಲಿಲ್ಲ. ಶಾಲೆಗೆ ಹೋಗಲೇಬೇಕೆಂದು ಹಠ ಮಾಡಿದ್ದರಿಂದ ನೇರವಾಗಿ ಮೂರನೇ ತರಗತಿಗೆ ಹಚ್ಚಲಾಯಿತು. ಆಗ ಧಾರವಾಡದಿಂದ ಪರೀಕ್ಷಕರು ಬಂದು ಪರೀಕ್ಷೆ ಮಾಡಿ ಹೆಸರು ಹಚ್ಚಲಾಯಿತು. ಮನೆಯ ಹಿಂದಿನ ರಸ್ತೆಯಲ್ಲಿ ಶಾಲೆ. ಸಾಹೇಬರ ಮಗ, ಮೊಮ್ಮಗನೆಂದು ಬಹಳ ಕಾಳಜಿ ವಹಿಸುತ್ತಿದ್ದರು. ಆಗಿನ ನನ್ನ ಗೆಳೆಯ ರತಿಕಾಂತ (ಡಾ. ಡಿ. ಎಸ್. ಕರ್ಕಿಯವರ ಮೂರನೆಯ ಮಗ) ಮತ್ತು ಪಕ್ಕದ ಮನೆಯ ಪ್ರಕಾಶ ಪೋಣಾರಕರ್. ಆಗ ವರ್ಗದ ಗುರುಗಳು ಅಮ್ಮಿನಭಾವಿ ಮಾಸ್ತರರು. ಉದ್ದನೆಯ ತೆಳ್ಳನೆಯ ವ್ಯಕ್ತಿತ್ವದ ಶಿಸ್ತಿನ ಮಾಸ್ತರರು. ಪಾಠಗಳನ್ನು ಸರಳವಾಗಿ ಮಕ್ಕಳೊಂದಿಗೆ ಮಕ್ಕಳಾಗಿ ಬೋಧಿಸುತ್ತಿದ್ದರು. ಇವರೇ ನನ್ನ ಮೊದಲ ಶಾಲಾ ಗುರುಗಳು. ಲೋಹಾರ್ ಮಾಸ್ತರರು ಡ್ರಾಯಿಂಗ್ ಮಾಸ್ತರರಾಗಿದ್ದರು. ಅವರು ಚಿತ್ರಕಲೆಯಲ್ಲಿ, ಚಿತ್ರ ಸಂಗ್ರಹಿಸುವದರಲ್ಲಿ, ಹಾಡು ಹೇಳುವದರಲ್ಲಿ ಅಭಿರುಚಿ ಬೆಳೆಸಿದರು. ನಾನು ಚಿಕ್ಕವನಿದ್ದಾಗ ಬಹಳ ಚೆನ್ನಾಗಿ ಹಾಡುತ್ತಿದ್ದೆನೆಂದು ಈಗಲೂ ಸಂಬಂಧಿಕರು ಹೇಳುತ್ತಾರೆ. ನನ್ನದು ಮುಕ್ತಲು ಸ್ವಭಾವ. ಮೊದಲಿನಿಂದಲೂ ನನ್ನ ಶಾಲೆ, ನನ್ನ ಮನೆ, ನನ್ನ ಅಭ್ಯಾಸಕ್ಕೆ ಸೀಮಿತ. ಮನೆಯಲ್ಲಿ ಅಜ್ಜ ಕನ್ನಡ ಇಂಗ್ಲಿಷ್, ಗಣಿತ, ಸಮಾಜಶಾಸ್ತ್ರ ಹೇಳಿದರೆ, ಮನೆಗೆ ಬರುತ್ತಿದ್ದ ನಿವೃತ್ತ ಅವಾರಿ ಮಾಸ್ತರರು ವಿಜ್ಞಾನ ಹೇಳುತ್ತಿದ್ದರು. ನಾಲ್ಕನೆಯ ವರ್ಗದಲ್ಲಿ ಜಿಲ್ಲಾ ಮಟ್ಟದ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಗಳಿಸಿ ಶಿಷ್ಯವೇತನ ಪಡೆದೆನು. ಏಳನೇ ತರಗತಿಯ ಪಬ್ಲಿಕ್ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಹೊಂದಿದ್ದೆನು.

ವಿದ್ಯಾಭ್ಯಾಸದ ಎರಡನೇ ಹಂತ ಹೈಸ್ಕೂಲು. ಹುಬ್ಬಳ್ಳಿಯ ಲ್ಯಾಮಿಂಗ್‌ಟನ್ ಹೈಸ್ಕೂಲ್ ವಿದ್ಯಾರ್ಥಿಯಾಗಿ ಸೇರಿದೆ. ಹಾಲಪ್ಪನವರ ಸರ್ ಪ್ರಿನ್ಸಿಪಾಲರಾಗಿದ್ದರು. ಪ್ರಾಥಮಿಕ ಶಾಲೆಯಲ್ಲಿ ಧರಿಸುತ್ತಿದ್ದ ಗಾಂಧಿ ಟೊಪ್ಪಿಗೆ ಇಲ್ಲದೆ ಖಾಕಿ ಅರ್ಧ ಪ್ಯಾಂಟ್, ಅರ್ಧ ತೋಳಿನ ಶರ್ಟ್ ಅಲ್ಲಿಯ ಸಮವಸ್ತ್ರ. ಹೈಸ್ಕೂಲಿನಲ್ಲಿ ನನ್ನ ಮೇಲೆ ಪ್ರಭಾವ ಬೀರಿದ ಗುರುಗಳೆಂದರೆ ಸಿ. ಎಸ್.

ಜಗತಿ ಮಾಸ್ತರರು. ಧಡೂತಿ ದೇಹದ ಪಾಚಾಳಿ. ಗಣಿತದ ಬೋಧನೆಯಲ್ಲಿ ಎತ್ತಿದ ಕೈ. ಗಣಿತ ಸೂತ್ರಗಳು ಓತಪ್ರೋತವಾಗಿ ಬರುತ್ತಿದ್ದವು. ಗಣಿತವನ್ನು ಬಿಡಿಸುವ ವೈಖರಿಗೆ ಎಷ್ಟೋ ಶಿಕ್ಷಕರು ಪ್ರಭಾವಿತರಾಗಿದ್ದರು. ಅವರದು ಗಟ್ಟಿ ಧ್ವನಿ. ಅಷ್ಟೇ ನಿಖರತೆ. ಜಗತಿ ಮಾಸ್ತರರ ಇನ್ನೊಂದು ಹವ್ಯಾಸ ಸರ್ವಜ್ಞನ ಅಭಿಮಾನ. ಕವಿ ಸರ್ವಜ್ಞನ ಬಗ್ಗೆ ಅಧಿಕಾರಯುತವಾಗಿ ಗಂಟೆಗಟ್ಟಲೆ ಭಾಷಣ ಮಾಡುತ್ತಿದ್ದರಲ್ಲದೇ ಅವ್ಯಾಹತವಾಗಿ ಸಂದರ್ಭಕ್ಕನುಸಾರವಾಗಿ ಸರ್ವಜ್ಞನ ವಚನಗಳನ್ನು ಉದಾಹರಿಸುತ್ತಿದ್ದರು. ಅವರು 'ಸರ್ವಜ್ಞನು ಘೋಷಿಸಿದ ಜೀವನ ಮೌಲ್ಯಗಳು' ಎಂಬ ಗ್ರಂಥವನ್ನು ರಚಿಸಿದರು. ಮೂಲತಃ ವಿಜಾಪುರ ಜಿಲ್ಲೆಯ ಸಿಂದಗಿ ತಾಲೂಕಿನ ಯರಗಲ್ಲದವರಾದ ಚಂದ್ರಶೇಖರ ಜಗತಿ ಮಾಸ್ತರರು ಕೊನೆಗಾಲದಲ್ಲಿ ಬಹಳ ಕಷ್ಟಪಟ್ಟರೆಂದು ನಂತರ ತಿಳಿದುಬಂದಿತು. ನಮ್ಮ ಮನೆಗೆ ಬರುತ್ತಿದ್ದರು. ಅವರನ್ನು ನೋಡಿದರೆ ಹೆದರಿಕೆ ಬರುತ್ತಿತ್ತು. ನಿಜಲಿಂಗಪ್ಪ, ಜತ್ತಿ ಅವರೊಡನೆ ಸಂಪರ್ಕವಿದ್ದಿತು. ಮತ್ತೊಬ್ಬ ಸವದತ್ತಿ ಮಾಸ್ತರರು ನನ್ನ ಸಾಹಿತ್ಯಿಕ ಚಟುವಟಿಕೆಗಳಿಗೆ ಪ್ರೇರಣೆ ನೀಡುತ್ತಿದ್ದರು. ಈ ನಡುವೆ ನನ್ನ ಜೀವನದಲ್ಲಿ ಮರೆಯಲಾಗದ ಗುರುಗಳೆಂದರೆ ಕಲಬುರ್ಗಿ ಮಾಸ್ತರರು. ಸುಮಾರು ೮೦ ವರ್ಷದ ವಯೋವೃದ್ಧ ಜ್ಞಾನವೃದ್ಧ ಮಾಸ್ತರರು ನಿವೃತ್ತಿ ಹೊಂದಿದ್ದರೂ ಮನೆತನದ ತೊಂದರೆಯಿಂದ ಮನೆಗೆ ಬಂದು ಪಾಠ ಹೇಳುತ್ತಿದ್ದರು. ಅವರು ಕಲಿಸಿದ ಆಂಗ್ಲ ಭಾಷೆಯ ವ್ಯಾಕರಣ, ಪ್ರಬಂಧ, ಇನ್ನೂ ಹಸಿಗೋಡೆಯ ಕಲ್ಲಿನಂತೆ ಸ್ಥಿರವಾಗಿವೆ.

✣ ಯು. ಎಸ್. ಸಂಗನಾಳಮಠ : ಸರ್ಕಾರಿ ಪದವಿ ಪೂರ್ವ ಕಾಲೇಜು, ಹೊನ್ನಾಳಿ-೫೭೭ ೨೧೭ ✣

ಎರಡು ಕವಿತೆಗಳು

ಅಶ್ವಿನ್ ಸಿ.

೧. ಹೂದಾನಿ

ಅಹೋ! ಈ ಮನೆಯಲ್ಲೇನೋ ಸಡಗರ
ಪೂಜೆಗೋ, ತಿಥಿಗೋ, ಅರಳಿದೆ ಚಪ್ಪರ.
ದೊಡ್ಡ ಮನೆ–
ಬಂದವರನೆಲ್ಲ ತುಂಬಿಸಿದೆ.
ನಡುಮನೆಯ ಹೂದಾನಿ
ಎಲ್ಲರ ಮುಖ ಬಿಂಬಿಸಿದೆ.
ಗಂಟು ಗಂಟಾದ ಹೂದಂಟು
ಒಟ್ಟಾಗಿ ನೀರೊಳು ಮುಳುಗಿವೆ.
ಆದರೂ, ಹೂಗಳು ಹೊರಜಾಜಿ
ದೂರ ಸಂದಿವೆ.
ತಮ್ಮ ತಮ್ಮ ಬಣ್ಣಗಳ
ಬಿಡದೇ ಕುಳಿತಿವೆ.
ಒಡೆಯನೋ
ನಾಜೂಕಿನಿಂದ ಚುಮುಕಿಸಿ
ತಣಿಸುತಿಹನು, ಕ್ಷಣ ಕ್ಷಣಕೂ
ಹೊಗೆ, ಸದ್ದುಗಳಿಗೆ ಬಾಡದಂತೆ,
ದಿನದ ಮಟ್ಟಿಗಾದರೂ ಉಳಿಯುವಂತೆ
ಆದರೂ ಕೆಲವು ಸಿಂಡರಿಸಿ ಕುಳಿತಿವೆ.
ಅಹೋ!
ಒಡೆಯನ ಪುತ್ರ
ಒಡೆದೇ ಬಿಟ್ಟ !

೨. ಹೂಪೂಜೆ

ಚುಮು ಚುಮು ಮುಂಜಾವು.
ಕತ್ತಲ ಕಂಬಳಿ ಸರಿವ ಹೊತ್ತು.
ತಟ್ಟೆಯ ಹೊತ್ತು
ತೋಟದೆಡೆಗೆ
ಹೂಗಳ ಸುಲಿಗೆ
ಮಾಡಹೊರಟೆ.
ಪೂಜೆಗೆ.
ಅರೆ ಧ್ಯಾನಸ್ಥ ಮೊಗ್ಗು ಬಿರಿದಿತ್ತು
ಪೊದೆಯಲ್ಲೆರಡು ಕಣ್ಣರಳಿತ್ತು
ಪ್ರಶ್ನಾಕಾರ, ಚೂಪು ಕೊಕ್ಕು
ಮಕರಂದ ಹೀರಲು ಸಜ್ಜಾಗಿತ್ತು
ಚಿವ್ ಚಿವ್ ಹೂಗುಬ್ಬಿ
ನನ್ನ ಕಂಡು ಏನೋ ಬಡಬಡಿಸಿ
ದೂರ ಹಾರಿ, ಆಸೆಯ ನೋಟ ಬೀರಿತು–
ಹೂವಿನೆಡೆಗೆ.
ಇಬ್ಬನಿಯೊಂದು ತೊಟ್ಟಿಕ್ಕಿತ್ತೇನೋ ಅದರಿಂದ.
ಅರ್ಪಿಸಿ ಬಿಟ್ಟೆ
ಹೂ ಕೀಳದೆ ಬಿಟ್ಟೆ.
ತುಂಬಿತೋ ಪುಟ್ಟ ಹೊಟ್ಟೆ
ದೇವರ ತಟ್ಟೆ !

✣ ಅಶ್ವಿನ್ ಸಿ. : 'ಮಾನಸ', ಎ.ಸಿ. ರಸ್ತೆ, ಕಾಜೆಟ್ಟು, ಕಾರ್ಕಳ-೫೭೪ ೧೦೪ ✣

ಎರಡು ಕವಿತೆಗಳು

ಬಸವರಾಜ ಹೂಗಾರ

೧. ನಾಯಿ

ಹಲ್ಲು ಉಜ್ಜಲು ಇದ್ದಲಿ
ಸಬಕಾರ ಇಲ್ಲದ ಸ್ನಾನ
ಅಮಾವಾಸ್ಯೆ ಹುಣ್ಣಿವೆಗೆ ಮಾತ್ರ
ತಲೆಗೆಣ್ಣೆ.
ಕಸಿ ಕಟ್ಟಿದ ಚೊಣ್ಣ
ಗುಂಡಿ ಕಿತ್ತು ಹೋದ ಅಂಗಿ
ಮುಂಜಾನೆ
ತಟ್ಟೆಯಲಿ ಅಪ್ಪ ಬಡೆದಿಟ್ಟ
ಮುಗ್ಗು ಹತ್ತಿದ ಮುಂಗಾರಿ ಜೋಳದ
ಮೂರೇ ಮೂರು ರೊಟ್ಟಿ
ಅವನ್ನೂ... ಮಕ್ಕಳಿಗಿಟ್ಟು
ಬರಿ ಹೊಟ್ಟೆಯಲಿ
ಹೊಲದಲ್ಲಿ
ಜೀವರಿಳಿಸಿ ದುಡಿದು
ತತ್ರಾಣಿ ನೀರು ಹಂಚಿಕೊಂಡು ಕುಡಿವ
ಅಪ್ಪ ಅಪ್ಪ
ಹೊಲಕ್ಕೂ... ಹಸಿವು !
ಮನೆಯ ದಿಕ್ಕು ದಿಕ್ಕಿಗೂ
ದೈನೇಸಿ ಕೊರಗು
ದುಃಖದ ಭಾರಕ್ಕೆ
ಸೋತು ಬಾಗಿದ ಮನೆಯ
ತೊಲೆ ಜಂತಿ
ಆಗಾಗ ಉದುರುವ ಮಣ್ಣು
ಬಾಗಿಲ ಸಂದಿಯಲಿ
ಕಣ್‌ಕಪ್ಪಡಿಯ ಭಯದ ಕೂಗು
ದಿಂಡು ಹಾಕಿದ
ಹರಿದ ಸೀರೆಯನುಟ್ಟ
ಅವ್ವ ಮುಂದೆ ಹಾಯ್ದು ಹೋದರೆ
ಎದೆಗೆ ಬಡಿವ ಹಳ್ಳು
ಯಾರ ಮುಂದೆ ಹೇಳುವುದು ?
ಈ ಎಲ್ಲ ನೋವು
ಅದಕ್ಕೆ...
ಮನುಷ್ಯರಾಗಿ ಹುಟ್ಟದಿದ್ದರೂ
ಪರವಾಯಿಲ್ಲ...
ಬಿಸ್ಕತ್ತು, ಹಾಲು,
ಘಮಘಮಿಸುವ ಸಾಬೂನು.
ದಿನದಿನವೂ ಮೈ ತೊಳೆದು
ಅಪ್ಪಿ ಮುದ್ದಾಡುವ ಮನುಷ್ಯರು
ಚಿಕ್ಕ ಜಡ್ಡಿಗೂ ಡಾಕ್ಟರು !
ವಾರಕ್ಕೆ ಮೂರು ದಿನ ಮಾಂಸ,
ಗೋದಿ ಕೂಳು
ಕಾರಿನ ಗ್ಲಾಸಿಗೆ ಕುಳಿತು
ಜಗತ್ತು ನೋಡುವ ಸಂಭ್ರಮ;
ಮುಂದಿನ ಜನ್ಮವೊಂದೇನಾದರೂ ಇದ್ದರೆ
ದಯವಿಟ್ಟು ದೇವರೇ
ದಯವಿಟ್ಟು...
ನಮ್ಮನ್ನು...
ಶ್ರೀಮಂತರ ಮನೆಯ
ನಾಯಿಯಾಗಿ ಹುಟ್ಟಿಸು!

೨. ರೈಲು ನಿಲ್ದಾಣದ ಅನಾಥ ಹುಡುಗನ ಹಾಡು

ಆ ರಾತ್ರಿ ನನಗೊಂದು
ಕನಸು ಬಿತ್ತು
ಚಿಟ್ಟನೆ ಚೀರಿದೆ!
ಎಚ್ಚರವಾಯಿತು :
ಕನಸಿನಲ್ಲಿ ಅಪ್ಪ
ಅವ್ವನನ್ನು ಕಟ್ಟಿಗೆಯ
ತುಂಡಿನಿಂದ ಹೊಡೆಯುತ್ತಿದ್ದ
ನನಗೆ ವಿಪರೀತ ನೋವಾಗುತ್ತಿತ್ತು;
ಅವ್ವನೂ ಆಕ್ರೋಶಗೊಂಡಳು
ಅಪ್ಪನನ್ನು ಅಟ್ಟಾಡಿಸಿ
ಹೊಡೆಯಲು ಶುರು ಮಾಡಿದಳು
ಆಗಲೂ ನನಗೆ ನೋವಾಯಿತು;
ಅಂದೇ ಊರು ಬಿಟ್ಟೆ
ಇವತ್ತಿಗೂ ಮನೆಗೆ ಹೋಗಿಲ್ಲ!

✣ ಬಸವರಾಜ ಹೂಗಾರ : ಸಹಾಯಕ ನಿರ್ದೇಶಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
ನಾಲ್ವಡಿ ಕೃಷ್ಣರಾಜ ಒಡೆಯರ ಕಲಾಮಂದಿರ, ವಿ. ವಿ. ರಸ್ತೆ, ಮಂಡ್ಯ-೫೭೧ ೪೦೧ ✣

ಕಾರಂತರ ಜೀವಂತ ಪಾತ್ರಗಳು – ೧

ಸಿ. ಸೋಮಶೇಖರಯ್ಯ

ಕನ್ನಡ ನಾಡಿನಲ್ಲಿ ಕನ್ನಡ ಭಾಷೆ ಬಳಕೆಗೆ ಬಂದ ಕಾಲದಿಂದಲೂ, ಈ ನಾಡಿನಲ್ಲಿ ಸಂದು ಹೋದ ಕನ್ನಡಿಗರ ಸಂಖ್ಯೆ ಅಸಂಖ್ಯ, ಅನೇಕ ಕೋಟಿ; ಆದರೆ ಕೇವಲ ಬೆರಳೆಣಿಕೆಯಷ್ಟು ಜನರ ಸಾಂಸ್ಕೃತಿಕ ಕೃಷಿಗಳಾದ ಸಂಗೀತ, ನೃತ್ಯ, ಶಿಲ್ಪ ಇತ್ಯಾದಿ ಲಲಿತಕಲೆಗಳು ಮತ್ತು ಸಾಹಿತ್ಯಕ ಕಾರ್ಯಗಳು ಇಡೀ ನಾಡಿನ ಜನಸಮುದಾಯಕ್ಕೆ ಒಂದು ಸಂಸ್ಕೃತಿಯನ್ನು; ಒಂದು ಗಾಂಭೀರ್ಯವನ್ನು, ವಿಚಾರಶೀಲತೆಯನ್ನು ತಂದುಕೊಟ್ಟುದು ಈಗ ಇತಿಹಾಸ. ಅದರಲ್ಲೂ ಕನ್ನಡದಲ್ಲಿ ಹೊರ ಹೊಮ್ಮಿದ ಸಾಹಿತ್ಯ ಕನ್ನಡ ಭಾಷೆಗೆ ವಿಶ್ವದಲ್ಲಿ ಒಂದು ಸ್ಥಾನವನ್ನು ಮತ್ತು ಕನ್ನಡ ಜನತೆಗೆ ಸಾಂಸ್ಕೃತಿಕ ಜಾಗೃತಿಯನ್ನು ತಂದುಕೊಟ್ಟುದು ನಿಜ. ಈ ಬೆರಳೆಣಿಕೆಯಷ್ಟು ಮಹಾನುಭಾವರು ಕನ್ನಡ ನೆಲದಲ್ಲಿ ಜನ್ಮ ತಳೆಯದಿದ್ದರೆ ಕನ್ನಡ ಅತ್ಯಂತ ಬಡವಾದ ಒಂದು ಸಾಮಾನ್ಯ ಭಾಷೆಯಾಗಿರುತ್ತಿತ್ತು.

ಪಂಪ, ರನ್ನರು ಕನ್ನಡದ ಕಾವ್ಯಲೋಕಕ್ಕೆ ಅಸ್ತಿವಾರ ಹಾಕಿದರೆ ಅಕ್ಕ, ಅಲ್ಲಮ ಮುಂತಾದ ಶಿವಶರಣರು; ಹರಿಹರ, ರಾಘವಾಂಕ, ಕುಮಾರವ್ಯಾಸ, ಚಾಮರಸ, ಲಕ್ಷ್ಮೀಶ ಇಂತಹ ರಸಋಷಿಗಳಿಂದ ಅವರು ಜನ್ಮ ತಳೆದ ಶತಮಾನಗಳು ಸಾರ್ಥಕವಾಗಿ, ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಶಾಶ್ವತ ಸ್ಥಾನವನ್ನು ಪಡೆದುಕೊಂಡವು. ಈ ಶತಮಾನಗಳಲ್ಲಿ ವರ್ಧಿಸಿದ ಕನ್ನಡ ಪುನಃ ತನ್ನ ಸರ್ವತೋಮುಖ ಅಂತಃಸತ್ವವನ್ನು ಹೊರಗೆಡಹಿದುದು ಇಪ್ಪತ್ತನೆಯ ಶತಮಾನದಲ್ಲಿ. ಕನ್ನಡ ಭಾಷಾ ಚರಿತ್ರೆಯಲ್ಲಿ ಈ ಇಪ್ಪತ್ತನೆಯ ಶತಮಾನ, ತನ್ನದೇ ಆದ ರೀತಿಯ ಛಾಪು ಮೂಡಿಸುವಲ್ಲಿ ಎಣೆಇಲ್ಲದೆ ಯಶಸ್ವಿಯಾಗಿದೆ. ಇಪ್ಪತ್ತನೆಯ ಶತಮಾನವು, ಕನ್ನಡ ವಾಗ್ದೇವಿಯು ತನ್ನ ವೈಭವವನ್ನು ಅನೇಕಮುಖಿಯಾಗಿ ವಿಸ್ತರಿಸಿ ಮೆರೆದ ಪರ್ವ ಕಾಲ. ಇಪ್ಪತ್ತನೆಯ ಶತಮಾನದ ಕನ್ನಡ, ಅಂದಿನ ವರೆಗೆ ಮನುಷ್ಯ ಕುಲ ಪಡೆದ ಬಹುಮುಖೀ ಅನುಭವಗಳನ್ನು ಅಂತರ್ಗತ ಮಾಡಿಕೊಂಡು, ಹೊಸ ಹೊಸ ರೀತಿಯ ಸಾಹಿತ್ಯ ಮಾರ್ಗಗಳನ್ನು ಅನಾವರಣಗೊಳಿಸುವಲ್ಲಿ ಅದ್ಭುತ ಯಶ ಸಾಧಿಸಿತು. ಕುವೆಂಪು, ಮಾಸ್ತಿ, ಕಾರಂತ, ಬೇಂದ್ರೆಯವರಂತಹ ಹೆಮ್ಮರಗಳ ಜೊತೆಯಲ್ಲಿ ಸಮೃದ್ಧವಾಗಿ ಬೆಳೆದ ಸಾಹಿತ್ಯಸಿರಿಗೆ ಕೊನೆ ಮೊದಲಿಲ್ಲವೆಂಬಂತೆ ಹೊಸ ತಲೆಮಾರಿನ ಬರಹಗಾರರ, ಹೊಸ ಹೊಸ ರೀತಿಯ ಪ್ರಯೋಗಗಳಿಗೆ ಒಳಗಾಗಿ ಕನ್ನಡ ಸಾಹಿತ್ಯಲೋಕ ಅಪರಿಮಿತ ವಿಸ್ತಾರವನ್ನು ಪಡೆಯಿತು.

ಮಾನವ ಕುಲದ ಇತಿಹಾಸದಲ್ಲಿ ಇಪ್ಪತ್ತನೆಯ ಶತಮಾನ ಒಂದು ಪ್ರಧಾನ ಸಂಕ್ರಮಣದ ಸನ್ನಿವೇಶವನ್ನು ಸೃಷ್ಟಿಸಿತು. ಅನೇಕ ಶತಮಾನಗಳ ಹಿಂದೆಯೇ ಕಾಣಿಸಿಕೊಂಡಿದ್ದ ಬದಲಾವಣೆಯ ಸಂಚಲನ, ಅಪರಿಮಿತ ವೇಗದ ಭರವನ್ನು ಕಂಡುಕೊಂಡುದು ಇಪ್ಪತ್ತನೆಯ ಶತಮಾನದ ವೈಶಿಷ್ಟ್ಯ. ಸಾವಿರಾರು ವರ್ಷಗಳಿಂದ ಜನಜೀವನದ ರೀತಿ ನೀತಿಗಳಲ್ಲಿ ಅಂಥ ಮಾರ್ಪಾಡುಗಳಾಗದೆ, ಯಾವುದೋ ಪುರಾತನ ಕಾಲಗರ್ಭದ ನಿದ್ದೆಯಲ್ಲಿದ್ದ ಜಗತ್ತು ಒಮ್ಮೆಲೇ ಮೈ ಕೊಡವಿಕೊಂಡೆದ್ದು ಹೊಸ ಅಪರಿಚಿತ ಜಗತ್ತಿನೆಡೆಗೆ ಕ್ಷಿಪ್ರವಾಗಿ ಪ್ರವೇಶ ಮಾಡಿದ ವಿಚಿತ್ರ ಕಾಲಘಟ್ಟವೇ ಇಪ್ಪತ್ತನೆಯ ಶತಮಾನ.

ಇಂಥ ಒಂದು ಕಾಲಘಟ್ಟದಲ್ಲಿ ಶತಮಾನವಿಡೀ ಬಾಳಿ ತಮ್ಮ ಕಾಲದ ಸಮಗ್ರ ಚಿತ್ರಗಳನ್ನು ಪರಿಣಾಮಕಾರಿಯಾಗಿ ಹಿಡಿದಿಟ್ಟ ಎರಡು ಮಹಾ ಚೇತನಗಳೆಂದರೆ, ಕುವೆಂಪು ಮತ್ತು ಕಾರಂತರು. ಕುವೆಂಪು ತಮ್ಮ ಕಾಲದ ಸಹ್ಯಾದ್ರಿಯ ಅರಣ್ಯಕ ಜನಜೀವನವನ್ನು, ಅಲ್ಲಿನ ರುದ್ರರಮಣೀಯತೆಯನ್ನು, ಮಾನವನ ಬಾಳಿನ ದುರಂತ ಮತ್ತು ಕ್ರೌರ್ಯವನ್ನು, ಅಜ್ಞಾನ

ಮತ್ತು ಮೂಢನಂಬಿಕೆಗಳನ್ನು, ಮುಗ್ಧತೆ ಮತ್ತು ಕುತಂತ್ರಗಳನ್ನು ಪರಿಪರಿಯಾಗಿ ಹರಪಿಟ್ಟರು. ಅದೇ ಕಾಲದಲ್ಲಿ, ಘಟ್ಟದ ಕೆಳಗಣ ಕರಾವಳೀ ಕರ್ನಾಟಕದ ಮತ್ತು ಸಹ್ಯಾದ್ರಿಯ ಪರ್ವತದ ಪಶ್ಚಿಮ ತಪ್ಪಲಿನ ನಿಬಿಡ ಕಾನನದ ಬದುಕನ್ನು ಸಮೃದ್ಧವಾಗಿ ಮತ್ತು ಜೀವಂತವಾಗಿ ಹರಪಿದ ಗಾರುಡಿಗರು ಕಾರಂತರು. ಈ ಎರಡು ಚೇತನಗಳ ಚಿಂತನಶೀಲ, ಸೂಕ್ಷ್ಮಗ್ರಾಹಿ, ಸಂವೇದನಾ ಪೂರ್ಣ ಮನಸ್ಸುಗಳ, ಸೃಜನಶೀಲ ಶಕ್ತಿಯ ಪರಿಣಾಮವಾಗಿ, ಕನ್ನಡ ನಾಡಿನ ಅವರ ಕಾಲದ, ಅವರ ಪ್ರದೇಶದ, ಜನಜೀವನ ಮತ್ತು ಪರಿಸರದ ಮೇಲೆ ಕಾಲಗತಿಯಲ್ಲಿ ಆಗುತ್ತಿದ್ದ ಬದಲಾವಣೆಗಳು, ಅದರಿಂದ ವ್ಯಕ್ತಿಗತವಾಗಿ, ಸಾಮಾಜಿಕವಾಗಿ ಸಂಘಟಿಸುತ್ತಿದ್ದ ತುಮುಲಗಳು, ಈ ಎಲ್ಲದರ ಸಮಗ್ರ ಚಿತ್ರ, ಒಂದು ಚೌಕಟ್ಟಿನಲ್ಲಿ ರೂಪಿಸಿದ ಕಲಾವಿದನ ಕಾಣ್ಕೆಯಂತೆ, ಕಾಲವೊಂದನ್ನು ಬಂಧಿಸಿಟ್ಟ ಮಹಾನ್ ಕಲಾಕೃತಿಯಂತೆ ಇಂದು ನಮಗೆ ಲಭ್ಯವಾಗಿವೆ.

ಬಹುಶಃ ಕನ್ನಡ ನಾಡಿಗೇ ಒಂದು ರೀತಿಯ ವರದಾನವಾಗಿರುವ, ಈ ಪ್ರಾಕೃತಿಕ ವೈದೃಶ್ಯಗಳು ಸದಾ ಇಲ್ಲಿನ ಚೇತನವನ್ನು ಕೆಣಕುತ್ತಲೇ ಇರಬಹುದು! ಆದುದರಿಂದಲೇ ಇಲ್ಲಿ ಈ ರೀತಿಯ ಸಾಹಿತ್ಯಕ ಮೇರುಗಳ ಸೃಷ್ಟಿಯಾಗುತ್ತಿರಬಹುದು!

ಸದ್ಯಕ್ಕೆ ಕಾರಂತ ಪ್ರತಿಭೆಯ ಬಗ್ಗೆ ಈ ಲೇಖನಮಾಲೆ ಉದ್ದೇಶಿಸಿರುವುದರಿಂದ, ಆ ವ್ಯಕ್ತಿತ್ವದ ಸೂಕ್ಷ್ಮ ಒಳನೋಟಗಳ ಜಾಡುಗಳನ್ನು ಅನುಸರಿಸಲು ಪ್ರಯತ್ನಿಸಬಹುದು. ಕಾರಂತರು ತಮ್ಮ ಕಾಲದ ಸಂಕ್ರಮಣಶೀಲ ನಡುಗೆಯ ಬಗ್ಗೆ ಸದಾ ಜಾಗೃತರಾಗಿದ್ದವರು. ಮಾನವನ ಮಾನಸಿಕ ಸ್ಥಿತಿಗತಿಗಳ ಬಗ್ಗೆ, ಅದರಿಂದ ಒಟ್ಟೂ ಸಮಾಜದ ಮೇಲಾಗುವ ಪರಿಣಾಮಗಳ ಬಗ್ಗೆ, ಇಡೀ ಸಮಾಜದ ಮೌಲ್ಯಗಳು ತಾರುಮಾರಾಗುತ್ತಿದ್ದ ಒಂದು ವಿಚಿತ್ರ ಸನ್ನಿವೇಶವನ್ನು ತಮ್ಮ ಸದಾ ಜಾಗೃತ ಸ್ಥಿತಿಯ ಮನಸ್ಸಿನಲ್ಲಿ ಪರಿಭಾವಿಸಿ, ಅಲ್ಲಿನ ಸಮಸ್ಯೆಗಳಿಗೆ ತಮ್ಮ ಚಿಂತನಶೀಲ ಮನಸ್ಸು ಸೂಚಿಸುತ್ತಿದ್ದ ಪರಿಹಾರಗಳನ್ನು ನಿರ್ವಿಕಾರ ಮನಸ್ಸಿನಿಂದ ಅಭಿವ್ಯಕ್ತಿಸುವ ಶಕ್ತಿ ಅವರಲ್ಲಿ ಸಹಜವಾಗಿತ್ತು. ಆದುದರಿಂದ ಕಾರಂತ ಅಭಿವ್ಯಕ್ತಿ ಎಂಬುದು ಒಂದು ಚಿಂತನ ಕಾರಂಜಿಯಂತೆ ಸಹಜವಾಗಿ, ಮತ್ತು ಎಡೆಬಿಡದೆ ಇಡೀ ಒಂದು ಶತಮಾನ ಕಾಲ ಚಿಮ್ಮುತ್ತಲೇ ಇದ್ದದ್ದು. ಕಾರಂತಕೃಷಿ ಎಂಬುದು ಕನ್ನಡ ಭಾಷೆಯ ಬೆಳವಣಿಗೆಯ ದೃಷ್ಟಿಯಿಂದ ಮತ್ತು ವಿಚಾರಶೀಲ ಮನಸ್ಸುಗಳನ್ನು ರೂಪಿಸುವ ದೃಷ್ಟಿಯಿಂದ ಅತ್ಯಂತ ಪರಿಣಾಮಕಾರಿಯಾದ ಪ್ರಕ್ರಿಯೆಯಾಗಿತ್ತು.

ವ್ಯಕ್ತಿಗಳ ನಡವಳಿಕೆಗಳಿಂದಾಗಿ ಗರಿಗಟ್ಟುತ್ತಿದ್ದ ಸಮಾಜದ ಸ್ಥಿತ್ಯಂತರಗಳನ್ನು ಗ್ರಹಿಸುತ್ತಿದ್ದ ಸೃಜನಶೀಲ ಮನಸ್ಸೊಂದು ಆ ಎಲ್ಲ ಜನಜೀವನದ ನಡವಳಿಕೆಗಳನ್ನು ಸಾಹಿತ್ಯೀಕರಿಸುತ್ತ, ಒಂದು ಕಾಲವನ್ನು ಸಮಗ್ರವಾಗಿ ಒಂದು ಚೌಕಟ್ಟಿನಲ್ಲಿ ಹಿಡಿದಿಡುತ್ತಿತ್ತು. ಕಾರಂತರಿಗೆ ವಿಷಯಕ್ಕೆ ಬರಗಾಲವೆಂಬುದೇ ಇರಲಿಲ್ಲ! ಈ ಜನ, ಅವರ ವೈವಿಧ್ಯಮಯ ಜೀವನ, ಅದೆಲ್ಲ ಇರುವ ವರೆಗೆ ನನ್ನ ಕಾದಂಬರಿಗಳಿಗೆ ವಿಷಯದ ಕೊರತೆ ಎಲ್ಲಿಯದು?–ಎಂದು ಅವರೇ ಪ್ರಶ್ನಿಸಿದ್ದಾರೆ. ಪ್ರತಿದಿನದಲ್ಲಿ ನಡೆಯುತ್ತಿದ್ದ ಬದಲಾವಣೆಗಳಿಗೆ ತೆರೆದುಕೊಳ್ಳುತ್ತಿದ್ದ ಕಾರಂತ ಮನಸ್ಸು, ಗ್ರಹಿಸುತ್ತಿದ್ದ ಅಸಂಖ್ಯಾತ ವಿಷಯಗಳು, ಎದುರಾಗುತ್ತಿದ್ದ ಅಸಂಖ್ಯಾತ ಮನಸ್ಸುಗಳು, ಘಟಿಸುತ್ತಿದ್ದ ಅಸಂಖ್ಯಾತ ಘಟನೆಗಳು, ಸೃಜನಶೀಲ ಮನಸ್ಸೊಂದರ ಪಟಲದ ಮೇಲೆ ಮೂಡಿಸುತ್ತಿದ್ದ ಚಿತ್ರಗಳು ಪ್ರತಿಬಿಂಬಿಸಿ ವಿಚಾರದ ಮೂಸೆಯಲ್ಲಿ ಆಕೃತಿಗಳಾಗಿ ಎರಕಗೊಂಡು ಕನ್ನಡ ಜನಸಮೂಹಕ್ಕೆ ವಿಚಾರ ಪ್ರಚೋದಕವಾಗಿ ಸಾಹಿತ್ಯಮಾರ್ಗದಲ್ಲಿ ಚಿತ್ರಿಸಲ್ಪಡುತ್ತಿದ್ದವು. ಕಾರಂತರ ಮನಃಪಟಲದ ಮೇಲೆ ಮೂಡಿ ನಿಂತ ವ್ಯಕ್ತಿ, ಸಮಾಜ, ಘಟನೆ, ವಿಷಯ ಇವೆಲ್ಲವೂ ಇಡೀನಾಡಿನ ಸ್ವತ್ತಾಗುತ್ತಿದ್ದವು. ಅವು ಅನೇಕ ವಿಚಾರಶೀಲ ಮನಸ್ಸುಗಳಲ್ಲಿ ಸದಾ ಜೀವಂತವಾಗಿರುತ್ತ, ಮನಸ್ಸಿನ ಅನುಭವದ ಭಾಗವಾಗಿರುತ್ತ, ಅಂತಃಸತ್ವವಾಗಿರುತ್ತ, ಮನುಷ್ಯ ಚೇತನವನ್ನು ಎಚ್ಚರದ ಸ್ಥಿತಿಯಲ್ಲಿಡಲು ಪ್ರೇರಕವಾಗಿರುತ್ತಿದ್ದವು.

ಕಾರಂತರು ರೂಪಿಸಿರುವ ವ್ಯಕ್ತಿಚಿತ್ರಗಳು ಅಸಂಖ್ಯಾತ. ವಿಶ್ವ ಸಾಹಿತ್ಯದಲ್ಲಿಯೇ ಇಂಥ ಪ್ರಯತ್ನಗಳು ತೀರಾ ಅಪರೂಪ. ಕರಾವಳಿಯ ಸಮುದ್ರತೀರದಿಂದ ಪಶ್ಚಿಮ ಘಟ್ಟಗಳ ನಿಬಿಡ ಕಾನನಗಳ ಮಧ್ಯೆ ಹಬ್ಬಿದ ಜನಜೀವನದ ವಿವಿಧ ಮುಖಗಳು ಸಹಜವಾಗಿ, ಜೀವಂತವಾಗಿ ಓದುಗನ ಮನಃಪಟಲದ ಮೇಲೆ ನೇರವಾಗಿ ಮುದ್ರಿತವಾಗುವುದು ಕಾರಂತ ಶೈಲಿ. ಬ್ರಹ್ಮನೆಂಬ ಮಹಾನುಭಾವ ಎಷ್ಟೆಲ್ಲಾ ವೈವಿಧ್ಯಮಯ ಜೀವನವನ್ನು ರೂಪಿಸಿದ್ದಾನೋ ನಾವರಿಯೆವು! ಆದರೆ ಕಾರಂತರು ರೂಪಿಸಿದ ಜೀವನ ಓದುಗನ ಮನಸ್ಸಿನಲ್ಲಿ ಮರೆಯಾಗದೆ ಅದೇ ಮನಸ್ಸನ್ನು ಸಂಸ್ಕರಿಸುವ ಮತ್ತು ಮನಸ್ಸಿನ ಭಾಗವಾಗುವ ತಾರ್ಕಿಕ ಪ್ರಕ್ರಿಯೆಯಲ್ಲಿ ಅತ್ಯಂತ ಸಹಜವಾಗಿ ಮಿಳಿತವಾಗುವ ಪರಿಯಂತೂ ಅಸದೃಶವಾದುದು.ಅವರು ರೂಪಿಸಿರುವ ಒಂದೊಂದು ಪಾತ್ರವೂ, ಒಂದೊಂದು ಘಟನೆಯೂ ಓದುಗನ ಮನಃಪಟಲದ ಮೇಲೆ ಚಿರಪರಿಚಿತವಾಗಿ ನಿಜಜೀವನದಲ್ಲಿ ಕಂಡ ಜೀವಂತ ವ್ಯಕ್ತಿಗಳಂತೆ, ನಡೆದ ನೈಜ ಘಟನೆಗಳಂತೆ, ಅಚ್ಚೊತ್ತಿ ನಿಲ್ಲುವ ಪರಿಗಿನ ವಿದ್ಯಮಾನವಂತೂ ಆಶ್ಚರ್ಯಕಾರಕವಾದುದು.

'ಬೆಟ್ಟದ ಜೀವ'ದ 'ಮಲ್ಲಿಗೆಯಂತಹ ತುಟಿಯ ಮೇಲೆ ಜಾಜಿಯಂತಹ ನಗುವನ್ನು ಸೂಸುವ' ಗೋಪಾಲಯ್ಯ ಅವರ ವ್ಯಕ್ತಿತ್ವವನ್ನು ಕಾರಂತರು ಕಟೆದ ರೀತಿಯೆಂಬುದು, ಆಧುನಿಕ ಜಗತ್ತು ಕಳೆದುಕೊಂಡ ಜೀವನ ಪದ್ಧತಿಯೊಂದರ, ನಿರಂತರ ಹೋರಾಟದ ಬದುಕನ್ನು ಆರಿಸಿಕೊಂಡೂ ನಿರ್ಲಿಪ್ತವಾಗಿರಬಲ್ಲ ಸ್ವಭಾವವೊಂದರ ಪುನರನಾವರಣ. ಅವರ ಮಡದಿ ಶಂಕರಮ್ಮ ಮತ್ತು ಅವರ ಅತಿಥಿಸತ್ಕಾರ, ಆ ತಾಯಿಯ ಕೈಯಲ್ಲಿ ತಯಾರಾಗುತ್ತಿದ್ದ ಕಾಯಿಹುಳಿಯ ವ್ಯಂಜನ ಇವನ್ನು ಮರೆಯಲು ಸಾಧ್ಯವೇ? ಹಾಗೆಯೇ ಆ ನಿಷ್ಕಳಂಕ ಮನಸ್ಸಿನಲ್ಲಿ ಮಗನಿಗಾಗಿ ಮಡುಗಟ್ಟಿದ್ದ ದುಃಖ, ಆ ದುಃಖವನ್ನು ಅರಿತೂ ತೋರಗೊಡದೆ, ಆ ದುಃಖವನ್ನು ಪರಿಹರಿಸುವ ಮಾರ್ಗವನ್ನೂ ಕಾಣದೆ, ಅದರಿಂದಾದ ಪರಿತಾಪವನ್ನೂ ಹೊರತೋರಿಸದೆ, ನಿರ್ಲಿಪ್ತತೆಯನ್ನು ನಟಿಸುತ್ತಿದ್ದ ಗೋಪಾಲಯ್ಯನವರ ಮನಃಸ್ಥಿತಿಗೆ ಮರುಗದ ಮನಸ್ಸುಗಳೂ ಉಂಟೆ? ಹೆತ್ತ ಮಗನ ಅಗಲಿಕೆಯ ದುಃಖವನ್ನು ಸ್ವಲ್ಪವಾದರೂ ಶಮನಗೊಳಿಸುತ್ತ, ಗೋಪಾಲಯ್ಯನವರ ವೃದ್ಧ ವಯಸ್ಸಿಗೆ ಆಸರೆಯಾಗಿರುವ, ಕರ್ಮಯೋಗಿಯಂತೆ ಕರ್ತವ್ಯದಲ್ಲಿ ತೊಡಗಿದ್ದ, ಅಂದಿನ ಮಲೆನಾಡಿನ ಮುಷತ್ತು ವಿಪತ್ತಾದ ಮಲೇರಿಯಾ ಜ್ವರದ ಗಡ್ಡೆಯಿಂದ ಭೂಷಿತನಾದ, ಬೇಸರವನ್ನು ಕಳೆಯಲು ಅಡಕೆ ವೀಳಯದ ಚಟದಿಂದ ಕಂಪಾದ ಹಲ್ಲಿನ ನಾರಾಯಣಯ್ಯನದು ಆಗಿನ ಸಮಾಜದಲ್ಲಿ ಸಹಜವಾಗಿ ಕಂಡುಬರುತ್ತಿದ್ದ ವ್ಯಕ್ತಿತ್ವವೇ ಆಗಿದ್ದರೂ ಕಾರಂತರ ಮಾಂತ್ರಿಕ ಲೇಖನಿಯ ಶಕ್ತಿಯಿಂದಾಗಿ ಇನ್ನಷ್ಟು ಜೀವಂತವಾಗಿದೆ. ಅವನ ಮಡದಿ ಲಕ್ಷ್ಮಿಯು ಯಾರಲ್ಲೂ ಹೇಳಲಾರದ ಗುಟ್ಟನ್ನು ಮನಸ್ಸಿನಲ್ಲಿ ಮುಚ್ಚಿಟ್ಟು, ಅದರ ನೆನಪಿನಲ್ಲಿಯೇ ಪರಿತಾಪ ಪಡುತ್ತಿದ್ದ ಆರ್ತತೆ, ಸಾಮಾನ್ಯವಾಗಿ ಕಾರಂತರು ಹೆಣ್ಣು ಜೀವಗಳನ್ನು ಚಿತ್ರಿಸುವಾಗ ತಳೆಯುವ ಮಾನಸಿಕ ಅನನ್ಯತೆಯ ಪರಿಣಾಮದಿಂದಾಗಿ ಇನ್ನಿಲ್ಲದ ಆರ್ದ್ರತೆಯನ್ನು ಪಡೆಯುತ್ತದೆ.

ಈ ಎಲ್ಲ ಚಿತ್ರಗಳ ಜೊತೆಗೆ ಕುಮಾರಪರ್ವತ, ಕುಮಾರಧಾರಾ ನದಿ, ಅರಣ್ಯ ಮಧ್ಯದಲ್ಲಿ ಹರಿಯುತ್ತಿದ್ದ ಆ ನದಿಯ ನೀರಿನ ಮೈಕೊರೆಯುವ ತಂಪು, ಹೊಸ ಹೊಸ ತಾವುಗಳಲ್ಲಿ, ಗೋಪಾಲರಾಯರು ಅರಣ್ಯದ ಜೊತೆಯಲ್ಲಿ ಸೆಣಸುತ್ತಾ ನಡೆಸುವ ವ್ಯವಸಾಯದ ಸಾಹಸಗಳು, ಆ ಸಾಹಸಗಳಿಗೆ ಸವಾಲಾಗಿ ನಿಂತ ವನ್ಯಮೃಗಗಳು. ಅವುಗಳ ಕಾಟವನ್ನು ಶಿವರಾಮಯ್ಯನಿಗೆ ಗೋಪಾಲಯ್ಯನವರು ನಿವೇದಿಸಿದಾಗ, ಶಿವರಾಮಯ್ಯ ನಗುತ್ತಾ, 'ಅಲ್ಲಾ ಗೋಪಾಲಯ್ಯನವರೇ, ಆನೆ, ಕಾಟಗಳ ಜಾಗಕ್ಕೇ ಬಂದು ಅವುಗಳನ್ನೇ ದೂರಿದರೆ ಹೇಗೆ? ಹೋಗಲಿ, ಅವಕ್ಕೆ ನಿಮ್ಮ ಮೇಲೆ ಕರುಣೆ ಬಂದು ಕುಮಾರ ಪರ್ವತದ ಮೇಲಕ್ಕೇ ಹೋಗಿ ವಾಸಿಸುತ್ತವೆ ಎಂದೇ ಇಟ್ಟುಕೊಳ್ಳೋಣ, ಆಗಲಾದರೂ ನೀವು ಸುಮ್ಮನಿರುವವರೇ? ಆ ಪರ್ವತದ ಮೇಲೇ ಅಡಕೆ ತೋಟ ಮಾಡಲು ತೊಡಗುವ ಪೈಕಿ ನೀವು'. ಎಂದು ತಮಾಷೆಗೆ ಹೇಳುವ ಮಾತೇ,

ಮಾನವನ ವಿಸ್ತರಣಾ ಪ್ರವೃತ್ತಿಯ ಮೇಲಿನ ವ್ಯಾಖ್ಯಾನದಂತಿಲ್ಲವೇ? ಇಡೀ 'ಬೆಟ್ಟದ ಜೀವ' ಕಾದಂಬರಿಯಲ್ಲಿ ಕಾರಂತರು ಕಟ್ಟಿಕೊಡುವ ಜೀವಂತ ಕಾನನ, ಅವರು ಕಾದಂಬರಿಯನ್ನು ರಚಿಸಿದ ಕಾಲಕ್ಕೆ ಅವರು ಕಂಡ, ಅವರ ಮನಸ್ಸು ಪರಿಭಾವಿಸಿದ, ಸುಬ್ರಹ್ಮಣ್ಯದ ಸುತ್ತಲಿನ ಸೊಕ್ಕಿದ ಮಲೆ, ತಲೆಯೆತ್ತಿ ನಿಂತ ಕುಮಾರಪರ್ವತ, ಉಕ್ಕಿ ಹರಿಯುವ ಕುಮಾರಧಾರೆ ಇವುಗಳ ಅಂತರಂಗದಲ್ಲಿನ ಜೀವ ಸೆಲೆ. ಈ ಎಲ್ಲದರ ಅಭೂತಪೂರ್ವ ಪರಿಸರವನ್ನು ದಟ್ಟವಾಗಿ ದಾಖಲಿಸುವಲ್ಲಿ ಕಾರಂತರು ಲೀಲಾಜಾಲವಾಗಿ ಯಶಸ್ವಿಯಾಗಿದ್ದಾರೆ.

ಕಾರಂತರ ಕಾದಂಬರಿಗಳಲ್ಲಿ ಪರಿಸರವೊಂದು ಪ್ರತ್ಯೇಕ ವ್ಯವಸ್ಥೆಯಲ್ಲ. ನಿಜ ಜೀವನದಲ್ಲಿನಂತೆ ಸಹಜವಾಗಿ ಮಾನವನ ಜೀವನದೊಡನೆ ಸಮ್ಮೇಳವಾಗಿರುವ, ಜೀವದ ಸುತ್ತ ನೈಜವಾಗಿ ಆವರಿಸಿರುವ ಒಂದು ಪರ್ಯಾವರಣ. ಅಂತೆಯೇ ಓದುಗನ ಓದಿನ ತಾದಾತ್ಮ್ಯದ ಜೊತೆಯಲ್ಲಿ ಸದ್ದಿಲ್ಲದೆ ಬೆರೆಯುತ್ತಲೇ ಮನಸ್ಸನ್ನು ಆವರಿಸುವ ಸಹಜ ಆವರಣ. ಆದರೂ ಅವರ ಕೆಲವು ಕಾದಂಬರಿಗಳು, ಪರಿಸರಕ್ಕಾಗಿಯೇ ಮೀಸಲಾಗಿರುವಂಥವು. ಅದರಲ್ಲಿ 'ಬೆಟ್ಟದ ಜೀವ'ದಂತೆಯೇ **'ಕುಡಿಯರ ಕೂಸು'** ಒಂದು ಪ್ರಮುಖ ಕಾದಂಬರಿ. ಇಡಿಯ ಕಾದಂಬರಿಯ ಸಮಸ್ತ ಘಟನಾವಳಿಗಳು ನಡೆಯುವ ಪ್ರದೇಶ, ಹೆಮ್ಮರಗಳ ಮಧ್ಯದ ನಿತಾಂತ ಕಾಂತಾರ. ಏಕೆಂದರೆ ಅಂದಿನ ಕಾಲಕ್ಕೆ ಕುಡಿಯರು ಸಂಪೂರ್ಣವಾಗಿ ಕಾಡಿನ ಮಕ್ಕಳು. ನಾಗರಿಕ ಸಮಾಜ -ವಿದೂರವಾದ, ತಮ್ಮದೇ ಕಾನನದ ಬದುಕನ್ನು ಬದುಕುತ್ತಿದ್ದ, ಕಾಡಿನ ಮಧ್ಯದ ಗುಹೆಗಳಿಂದಲೇ ಹೊರಬಂದು, ಹಾಡಿಗಳನ್ನು ಕಟ್ಟುವಷ್ಟರ ಮಟ್ಟಿಗೆ ಮಾತ್ರ ವಿಕಾಸದ ಗತಿಯಲ್ಲಿ ಕ್ರಮಿಸಿದ ಅವರ ಜೀವನ ಶೈಲಿಯನ್ನು ಜಗತ್ತಿನೆದುರು ತಮ್ಮದೇ ರೀತಿಯಲ್ಲಿ ಎತ್ತಿ ಹಿಡಿದವರು ಕಾರಂತರು. ಅದೊಂದು ರೋಚಕ ಕತೆಯ ರೂಪದಲ್ಲಿದ್ದರೂ ಕರಿಯನೆಂಬ ಉತ್ಸಾಹಿ ಯುವಕನ ಆದರ್ಶೀಕರಿಸಿರುವ ಪಾತ್ರದ ಸುತ್ತಣ ಕಥಾಹಂದರವನ್ನು ಹೊಂದಿದ್ದರೂ ನೈಜತೆಗೆ ಭಂಗ ಬರದಂತೆ ಜಾಣ್ಮೆಯಿಂದ ಕುಡಿಯರ ಬದುಕನ್ನು ಕಟ್ಟಿಕೊಡಲು ಕಾರಂತರು ಪ್ರಯತ್ನಿಸಿರುವರು.

ಕಿರಿಮಲೆಯ ಗುರಿಕಾರನಾದ ಕೆಂಚನ ಒಳತುಮುಲಗಳು, ಅಂತರಂಗದ ಆತಂಕಗಳು, ಅವನ ಸುತ್ತಲೂ ನಡೆಯುತ್ತಿದ್ದ ಬದಲಾವಣೆಗಳ ಜೊತೆಗೆ, ಅವನ ವಿರುದ್ಧವೇ ತಿರುಗುತ್ತಿದ್ದ ಶುಕ್ರನ ಒಳಸಂಚುಗಳನ್ನು ನಿರಾಳವಾಗಿ ಚಿತ್ರಿಸುತ್ತಾ, ಕುಡಿಯರ ಜೀವನ ವಿಧಾನವನ್ನು ಅನಾವರಣಗೊಳಿಸುತ್ತಾ ಹೋಗುವ ಕಾರಂತರು ಮುಗ್ಧ ಕುಡಿಯರನ್ನು ಸದ್ದಿಲ್ಲದೆ ಶೋಷಿಸುತ್ತಿದ್ದ ಧಣಿಗಳು ಮತ್ತು ಅವರ ಅನೈತಿಕ ಬದುಕನ್ನೂ, ಅದಕ್ಕಾಗಿ ಮುಗ್ಧ ಮಲೆಕುಡಿಯ ಹೆಣ್ಣುಮಕ್ಕಳ ಶೀಲದ ಜೊತೆ ಅವರಾಡುವ ಚೆಲ್ಲಾಟವನ್ನೂ ಸಹ, ಅಕೃತಿಮವಾಗಿ ಚಿತ್ರಿಸುತ್ತಾ ಹೋಗುತ್ತಾರೆ.

ತಮಗರಿವಿಲ್ಲದೆಯೇ ಯಾರೋ ಧಣಿ ಎಂಬುವವನಿಗೆ ಬಿಟ್ಟೀ ಚಾಕರರಾಗಿ ದುಡಿಯುತ್ತಾ ತಮ್ಮ ಬದುಕನ್ನು ತಾವೇ ಕಟ್ಟಿಕೊಳ್ಳುತ್ತಲೇ ಇನ್ನೊಬ್ಬನ ಹಂಗಿಗರಾಗಿ ಬದುಕುವ ಈ ಮಲೆಯ ಮಕ್ಕಳು ಮುಗ್ಧತೆಯೇ ಮೈವೆತ್ತವರು. ಸ್ವಾತಂತ್ರ್ಯವೆಂಬ ಬೆಳಕೇ ಬೀಳದ ಈ ಜೀವಗಳ ಚಿತ್ರಣ ಇಪ್ಪತ್ತನೇ ಶತಮಾನದ ಆರಂಭಕಾಲದ ಸಾಮಾಜಿಕ ಸ್ಥಿತಿಗತಿಗಳ, ಅದರಲ್ಲೂ ವಿಶೇಷವಾಗಿ ಮುಗ್ಧ ಮಲೆಯ ಮಕ್ಕಳ ಶೋಷಣೆಯ ಒಂದು ನೈಜ ಚಿತ್ರಣ. ಕಾದಂಬರಿಯ ಕೆಲ ಸನ್ನಿವೇಶಗಳು ಒಮ್ಮೊಮ್ಮೆ ನಾಟಕೀಯವೆನಿಸಿದರೂ ಕಾರಂತರ ಮಾಂತ್ರಿಕ ಲೇಖನಿ ಅದನ್ನು ಸಹಜವೆನಿಸುತ್ತದೆ. ಉದಾಹರಣೆಗೆ ಕುಡಿಯರ ಭಾವೀ ಗುರಿಕಾರನಾದ, ಕೆಂಚನ ಮೊಮ್ಮಗ ಕರಿಯನ ಸಾಹಸಗಳು ಒಂದು ರೀತಿಯ ಕೃತಕ ಆವರಣವನ್ನು ತರುತ್ತವೇನೋ ಎನಿಸಿದರೂ ನಿರೂಪಣೆಯ ರೀತಿ ಅಂಥ ಆವರಣವನ್ನೇ ಸಹಜ ಆವರಣವನ್ನಾಗಿ ಪರಿವರ್ತಿಸುತ್ತದೆ. ಅವನ ಸಾಹಸಮಯ ಬದುಕಿನಲ್ಲಿ, ಹುಲಿಯ ಬೇಟೆ, ಇಡೀ ಸನ್ನಿವೇಶವೇ ನಾಟಕೀಯವಾಗಿದ್ದರೂ ಅದನ್ನು ಅತ್ಯಂತ ಚಾಕಚಕ್ಯತೆಯಿಂದ ಚಿತ್ರಿಸುವ ಕಾರಂತರ ಶೈಲಿಯಿಂದಾಗಿ ಅದೊಂದು ಸಹಜ ಸನ್ನಿವೇಶವಾಗಿ ಮಾರ್ಪಡುತ್ತದೆ.

ಬಾಲ್ಯದಿಂದಲೂ ಕರಿಯನಿಗಿದ್ದ ಹುಚ್ಚೆಂದರೆ ಆನೆಯನ್ನು ಪಳಗಿಸಿ ಸಾಕಬೇಕೆಂಬುದು. ಅದು ಅವನಿಗೆ ಕೈಗೂಡುವ ಸನ್ನಿವೇಶ ಬೇರೆ ಯಾರು ಬರೆದಿದ್ದರೂ ಅಷ್ಟೊಂದು ಸಹಜವಾದ ನೆಲೆಯಲ್ಲಿ ಚಿತ್ರಿಸುವುದು ಕಷ್ಟವಾಗುತ್ತಿತ್ತು. ಆ ಕೆಸರಿನ ರಾಡಿಯಿಂದ ಮರಿಯಾನೆಯನ್ನು ಪಾರುಮಾಡುವ ಆ ಅದ್ಭುತ ಸನ್ನಿವೇಶದಲ್ಲಿ ತಾದಾತ್ಮ್ಯ ಹೊಂದುವ ಓದುಗ ತಾನೂ ಭಾಗಿಯಾದ ಅನುಭವವನ್ನು ಪಡೆಯುತ್ತಾನೆ.

ಕುಡಿಯರ ಕೂಸಿನ ಕೆಂಪಿ. ತನಗಿರುವ ರೂಪದ ಅರಿವಿನಿಂದಾಗಿಯೇ ರೇಷ್ಮೆ ಕೀಟದಂತೆ ತನ್ನ ಸುತ್ತ ಬಲೆ ನೆಯ್ದುಕೊಂಡು ಒದ್ದಾಡುವ ವ್ಯಕ್ತಿತ್ವದವಳು. ತಾರುಣ್ಯದಲ್ಲಿ ತನ್ನ ರೂಪಕ್ಕೆ ತಾನೇ ಮರುಳಾಗಿ ಅದು ಅನ್ಯರ ಮೇಲಿನ ಅಸಹನೆಯಾಗಿ, ಅಂತ್ಯದಲ್ಲಿ ದುರಂತವನ್ನು ಕಂಡ ಅಸಹಾಯಕಿ ಕೆಂಪಿಯ ಬದುಕನ್ನು ಆರಂಭದಲ್ಲಿ ಕಲಾತ್ಮಕವಾಗಿ ಚಿತ್ರಿಸುವ ಕಾರಂತರು ವನಪ್ರಾಂತ್ಯದ ಸಹಜ ಸೊಬಗಿನ ಜೊತೆಗೆ ಸುಂದರಿಯೊಬ್ಬಳ ತಾದಾತ್ಮ್ಯವನ್ನು ಪರಿಚಯಿಸುತ್ತಾ, ಮಾನವಸ್ವಭಾವ ಸಹಜವಾದ ಕಾಲುಷ್ಯದ, ಕಂದುವ ಯೌವನದ, ಮಾಸುವ ರೂಪದ ಎಲ್ಲ ಅವಸ್ಥೆಗಳನ್ನೂ ಕೆಂಪಿಯ ಬದುಕಿನ ಸುತ್ತ ಕಟ್ಟುತ್ತಾ, ಓದುಗನ ಮನಸ್ಸಿನಲ್ಲಿ ವಿಸ್ಮಯವನ್ನೇ ಸೃಷ್ಟಿಸುತ್ತಾರೆ.

ತಿಮ್ಮ, ಅವನ ಹೆಂಡತಿ ಗಿಡ್ಡಿ, ಕರಿಯನ ನಾಯಕತ್ವದಲ್ಲಿ ಹೊಸ ಸವಾಲುಗಳನ್ನು ಎದುರಿಸುವ ಎದೆಗಾರಿಕೆ ಮತ್ತು ಮನುಷ್ಯನ ಸಹಜವಾದ ಪ್ರೀತಿಯ ಹೊಸ ನೆಲೆಗಳತ್ತ ಸರಿಯುವುದೇ ಒಂದು ವಿಶೇಷವಾದ ಅನನ್ಯತೆ. ಈ ಎಲ್ಲ ಮಾನವ ಪ್ರಪಂಚದ ನಡುವೆ, ನಾವೂ ಇದ್ದೇವೆ ಎಂದು ಸದಾ ನೆನಪಿಸುವ ಕಿರಿಮಲೆಯ ಕಲ್ಕುಡ ಮುಂತಾದ ಕುಲದ ದೈವಗಳು ಬೇರೆ ಕುಡಿಯರ ಭಾವ ಪ್ರಪಂಚವನ್ನು ಸದಾ ಕೆಣಕುತ್ತಲೇ ಇರುತ್ತವೆ. ಹಿರಿಯ ಗುರಿಕಾರನಾದ ಕೆಂಚನಿಗೆ ಈ ದೈವಗಳನ್ನು ಸಂಪ್ರೀತಿಯಿಂದ ಇಡುವುದೇ ಒಂದು ಹರಸಾಹಸ ವಾಗುತ್ತದೆ. ಹಾಲೀ ಕೋಲವನ್ನು ಸಲ್ಲಿಸಿಕೊಳ್ಳುತ್ತಲಿದ್ದ ಭೂತರಾಯನಷ್ಟೇ. ತಮ್ಮಕುಲ, ಗುಹಾವಾಸಿ ಗಳಾದಾಗಿನ ಹಳೆಗಾಲದ ಇನ್ನೊಂದು ದೈವ ಕೂಡಾ ಮುನಿಯದಂತೆ ನೋಡಿಕೊಳ್ಳ ಬೇಕಾದ ಜವಾಬ್ದಾರಿಯಿಂದ ಕೆಂಚ ಹೈರಾಣಾಗಿ ಹೋಗುತ್ತಾನೆ. ಈ ದೈವ, ಮನುಷ್ಯರು ಮತ್ತು ಪ್ರಾಣಿಗಳ ಜೊತೆಗೆ, ಇವನ್ನೆಲ್ಲಾ ಆವರಿಸಿದ ಬೃಹದಾರಣ್ಯವೆಂಬುದು ಇದ್ದೇ ಇದೆ. ಆ ಅರಣ್ಯಕ ಬದುಕಿನಲ್ಲಿ ತಮ್ಮ ಪಾಡಿಗೆ ತಾವು ಕಷ್ಟಜೀವಿಗಳಾಗಿ ಬದುಕುತ್ತಿರುವ ಕುಡಿಯರನ್ನು ತಮ್ಮ ಸ್ವತ್ತುಗಳಂತೆ ನಡೆಸಿಕೊಳ್ಳುವ ಧಣಿಗಳು ಇದ್ದೇ ಇದ್ದಾರೆ. ಇದರ ಜೊತೆಗೆ ಕುಲದಲ್ಲಿಯೇ ವಿರೋಧಗಳನ್ನು ಸೃಷ್ಟಿಸುವ ಧೂರ್ತರೂ ಇದ್ದಾರೆ.

ಕಾಡಿನಲ್ಲಿ ವಾಸಿಸುವ ಜನರಿಂದ ಸಾಕಷ್ಟು ತೊಂದರೆ ಅನುಭವಿಸುತ್ತಾ, ಅವರಿಗೂ ಸಾಕಷ್ಟು ತೊಂದರೆ ಕೊಡುತ್ತಾ, ಜೊತೆಯಲ್ಲೇ ಬದುಕುತ್ತಿರುವ ವನ್ಯಜೀವಿಗಳೂ ಸಹ ಜೀವ ಪ್ರಪಂಚದ ಈ ಹೋರಾಟದಲ್ಲಿ ತಮ್ಮ ಅಸ್ತಿತ್ವವನ್ನೂ ಪ್ರಕಟಪಡಿಸುತ್ತಲೇ ಇವೆ. ಇವೆಲ್ಲವುಗಳಿಂದಾಗಿ **'ಕುಡಿಯರ ಕೂಸು'** ಒಂದು ಸಂಕೀರ್ಣ ಬದುಕಿನ ದಟ್ಟ ವಿವರಣೆಗಳ. ಇಪ್ಪತ್ತನೆಯ ಶತಮಾನದ ಪ್ರಾರಂಭ ಕಾಲದ ಕುಡಿಯರ ಜೀವನ ಚಿತ್ರವನ್ನು ಮತ್ತು ಅಂದಿನ ಸಮೃದ್ಧ ಮಳೆ ಕಾಡನ್ನೂ ಸಾಹಿತ್ಯೀಕರಿಸುವುದರಲ್ಲಿ ಯಶಸ್ವಿಯಾಗಿದೆ.

'ಚೋಮನ ದುಡಿ' ಕಾರಂತರ ಕಾದಂಬರಿಗಳಲ್ಲಿಯೇ ಸಹಜತೆಗೆ ಹತ್ತಿರವಾದ ಸೂಕ್ಷ್ಮ ಬರಹ. ಬರಿಯ ೯೩ ಪುಟಗಳ ಈ ಪುಟ್ಟ ಕಾದಂಬರಿ ಹುಟ್ಟಿಸಿದ ಕಂಪನಗಳು ಬಹುಶಃ ಈ ರೀತಿಯ ಬರಹಗಳಲ್ಲೇ ವಿಸ್ಮಯ ತರಿಸುವಷ್ಟು ಅನನ್ಯ. ದಲಿತ ಜಗತ್ತನ್ನು ಚಿತ್ರಿಸುವ ಅನೇಕ ಬರಹಗಳು ಕನ್ನಡದಲ್ಲಿ ಈವರೆಗೆ ಬಂದಿವೆಯಾದರೂ ಚೋಮನನ್ನು ಸರಿಗಟ್ಟುವ ಬರಹಗಳು ಬರಲೇ ಇಲ್ಲ! ಚೋಮನಷ್ಟು ಓದುಗರ ಭಾವಪ್ರಪಂಚವನ್ನು ಕೆಣಕಲೂ ಇಲ್ಲ! ಇಡೀ ಕಾದಂಬರಿಯ ಒಂದು ಸಾಲೂ ಸಹ ಅಲ್ಲಿನ ಸನ್ನಿವೇಶಕ್ಕೆ ಹೊರತಾದುದೆಂಬುದಿಲ್ಲ! ಒಂದು

ಪದವೂ ಸಹ! ಅಷ್ಟೊಂದು ಕರಾರುವಾಕ್ಕಾಗಿ ಭಾಷೆಯನ್ನು ಕಾರಂತರು ದುಡಿಸಿಕೊಳ್ಳುತ್ತಾರೆ.

ಕಾದಂಬರಿ ಆರಂಭವಾಗುವುದು ನಿಶ್ಶಬ್ದ ಸಮಯದಿಂದ. ಯಾವ ಶಬ್ದವೂ ಇಲ್ಲ. ಸಣ್ಣ ಹುಳು ಹರೆಯುವ ಶಬ್ದ ಕೂಡಾ. ತರಗೆಲೆಯ ಅಲುಗು ಕೂಡಾ. ಗಾಳಿಯ ಸೂಕ್ಷ್ಮ ಚಲನೆ ಕೂಡಾ. ನಂತರದ ಶಬ್ದ ಪ್ರಪಂಚದಲ್ಲಿ ನಡೆಯುವ ಅನಾಹುತಗಳಿಗೆ ಕೊನೆಯೆಂಬುದೆಲ್ಲಿ? 'ಅಪ್ಪಾ! ಹೊಲೆಯರಿಗೆ ಬಂದ ಸೊಕ್ಕೇ' ಎನ್ನುವ ಪರಿಣಾಮವನ್ನೇ ಅರಿಯದೇ ಬರುವ ಒಂದು ಶಬ್ದ. ಹೊಸಕಿ ಹಾಕಿದ್ದು ಎಷ್ಟೊಂದು ಜೀವಗಳನ್ನು. 'ಈ ಸುಟ್ಟ ಹೊಲೆಯನ ಜಾತಿಯಲ್ಲಿ ನನ್ನ ಮಗ ಹುಟ್ಟದಿದ್ದರೆ ಅವನು ಬದುಕುತ್ತಿದ್ದ. ಯಾರಾದರೂ ಮುಟ್ಟಿ ಅವನನ್ನು ಉಳಿಸುತ್ತಿದ್ದರು' ಎಂದು ಚೋಮನ ಬಾಯಲ್ಲಿ ಬರುವ ಹತಾಶ ಶಬ್ದ ಎಷ್ಟು ಭಯಾನಕವಾದುದು? ತಾನೂ ಬೇಸಾಯಗಾರನಾಗಬೇಕು ಎಂಬ ಒಂದು ಸಣ್ಣ ಆಸೆ. ಅದೂ ತನಗೆ ಆಕಸ್ಮಿಕವಾಗಿ ದೊರಕಿದ ಎರಡು ಹೋರಿಯ ಕರುಗಳು ಪ್ರಚೋದಿಸಿದಂತಹುದು. ಸಹ ಮಾನವನೊಬ್ಬನ ಸಣ್ಣ ಆಸೆಯನ್ನು ತಿರಸ್ಕರಿಸುವಷ್ಟು ಕಠೋರತೆಯನ್ನು ಮಾನವ ಸಮಾಜ ಪಡೆದುಕೊಂಡುದು ಯಾವಾಗ? ತನ್ನಂತೆಯೇ ಇರುವ ಮನುಷ್ಯನೊಬ್ಬನನ್ನು ನಿಷ್ಕರುಣೆಯಿಂದ ಶೋಷಿಸುವಷ್ಟು. ತುಳಿದು ಹೊಸಕಿ ಹಾಕುವಷ್ಟು ಕ್ರೂರತನವನ್ನು ಈ ಸಮಾಜ ಪಡೆದುಕೊಂಡದ್ದಾದರೂ ಯಾಕಾಗಿ ? ಮೂಕವಿಸ್ಮಿತ ಕಾರಂತರು ತಮ್ಮದೇ ಅನುಭವಗಳ ದಾರುಣ ಪ್ರಪಂಚದಲ್ಲಿನ ಈ ಪ್ರಶ್ನೆಗಳನ್ನು ತಾವು ಹಾಕಿಕೊಂಡು ಸಮಾಜದ ಎದುರೂ ಹರವಿಡುತ್ತಾರೆ. ಅಂತಿಮವಾಗಿ ನೀರವ ರಾತ್ರಿಯನ್ನು ಬಡಿದೆಬ್ಬಿಸುವ ಆ ದುಡಿಯ ಹತಾಶೆಯ ಅತಿರೇಕದ ಹುಚ್ಚು ಶಬ್ದ; ಅದು ಶಬ್ದವಲ್ಲ ಕಿವಿಯ ತಮ್ಮಟೆ ಹರಿಯುವ. ಮುರಿದ ಮನದ ಭರಾಟೆ. ಹಾಗೆಯೇ ಒಮ್ಮೆಲೇ ಶಬ್ದ ಸ್ತಬ್ಧವಾಗಿ. ನಿಶ್ಶಬ್ದದ ನೆಲೆಗೆ ಮತ್ತೆ ಸರಿದು ಹೋಗುವ ರೀತಿ ಬೀಭತ್ಸವಾದುದು.

ಚೋಮನ ಸಣ್ಣ ಸಂತೋಷಗಳೂ ಸಹ ಬೆಳ್ಳಿಯ ಅಸಹನೀಯ ವಾಸ್ತವ ಮೌನದೆದುರು ಗುಳ್ಳೆಗಳಂತೆ ಒಡೆದುಹೋಗುವುದು. ಕೊನೆಗೆ ಆ ಬೆಳ್ಳಿಯೇ ದೇಹ ಮತ್ತು ಮನಸ್ಸುಗಳ ಜಾಲಕ್ಕೆ ಸಿಲುಕಿ ಚೋಮನ ಮನದ ಎತ್ತರದ ಸೌಧವೊಂದು ಕುಸಿದು. ಅಸಹನೀಯ ಯಾತನಾಮಯ ಹತಾಶೆಯೊಂದು ತನ್ನ ಕರಿ ನೆರಳನ್ನು ಅವನ ಮೇಲೆ ಭಯಾನಕವಾಗಿ ಹರಡುವುದು. ಇದೆಲ್ಲ ಸದ್ದಿಲ್ಲದೆ ಕಾರಂತರು ಕಟ್ಟಿಕೊಡುವ ವಾಸ್ತವ. ಶೋಷಕ ಪ್ರಪಂಚದ ಚಿತ್ರಗಳು.

ಇದಕ್ಕೆ ಪೂರಕವಾಗಿ ಕಾಫೀ ತೋಟದ ಮಲೇರಿಯಾ ಮಿಶ್ರಿತ ದುಡಿತವಿದೆ. ಕೂಲಿಗಳಾಗಿ ಹೋಗುವವರ ಕರುಳ ಕುಡಿಗಳ ಸಾವಿದೆ. ಅದೆಲ್ಲಾ ಶಿಷ್ಟ ಪ್ರಪಂಚಕ್ಕೆ ಸಾವೇ ಅಲ್ಲ! ಹೊಲೆಯರ ಸಣ್ಣ ಹುಡುಗಿಯ ಸಾವೊಂದು ಸಾವೇ?! ಅದು ಕೇವಲ ಗುಮಾಸ್ತನ ಒಂದು ವರದಿ. ಸೋತು ಹೋದ ಜೀವಗಳು ಧರ್ಮಾಂತರಕ್ಕೆ ಪಕ್ಕಾಗುವ ಪ್ರಕ್ರಿಯೆ ಹತಾಶೆಯ ಪರಾಕಾಷ್ಠೆ. ಇರುವಲ್ಲಿ ಇರಲೂ ಆಗದೆ. ಮಗನಂತೆ ಹುಂಬ ಧೈರ್ಯದಿಂದ ಹೊರಹೋಗಲೂ ಆಗದೆ. ಪಂಜುರ್ಲಿಯ ಪ್ರಶ್ನೆಗಳಿಗೆ ತತ್ತರಿಸಿ ಸೋತ ಜೀವವಾಗಿ ನಿರ್ವಿಣ್ಣನಾಗುವ ಚೋಮ ಬಿತ್ತುವುದು ವಿಷಾದದ ನೆರಳನ್ನು.

ಲೋಕದ ಕಣ್ಣುಗಳಿಗೆ ಸ್ವಲ್ಪ ಕಠಿಣರಂತೆ, ಅತಿ ವಾಸ್ತವವಾದಿಯಂತೆ ಕಾಣುವ ಕಾರಂತರ ಭಾವಪ್ರಪಂಚ ಅತ್ಯಂತ ಆರ್ದ್ರವಾದುದು. ಅಲ್ಲಿ ಮರುಕದ ಮಹಾಪೂರವೇ ಇದೆ. ಶೋಷಕ ಪ್ರಪಂಚವನ್ನು ಕಂಡು ಸಿಡಿದೇಳುವ ಕಾರಂತರು ಒಬ್ಬ ಅಪರೂಪದ ಮನುಷ್ಯತ್ವದ ಹರಿಕಾರ. ಹೆಣ್ಣಿನ ಶೋಷಣೆ ಅವರನ್ನು ಅತಿಯಾಗಿ ಕೆರಳಿಸುವ ಒಂದು ವಿಷಯ. ಅಲ್ಲಿ ಅವರು ಯಾರನ್ನೂ ಖಂಡಿಸದೆ ಬಿಡುವುದಿಲ್ಲ. ಯಾವ ಧರ್ಮವನ್ನೂ ಯಾವ ಸಮಾಜವನ್ನೂ ಅವರು ಲೆಕ್ಕಿಸುವುದಿಲ್ಲ. ಮನುಷ್ಯ ಸಮಾಜವೇ ಒಂದು ಕಪಟ ಸಮಾಜ ಎಂದು ನಿರ್ದಾಕ್ಷಿಣ್ಯವಾಗಿ ಹೇಳಿಬಿಡುತ್ತಾರೆ. ಸಂಸ್ಕೃತಿ ಮತ್ತು ಧರ್ಮಗಳ ಹೆಸರಿನಲ್ಲಿ ಹೆಣ್ಣನ್ನು ಶೋಷಿಸಿರುವ ಸಮಾಜ ಕಪಟವಲ್ಲದೆ ಇನ್ನೇನು? (ಈ ಬಗ್ಗೆ ಒಂದು ಪ್ರತ್ಯೇಕ ಲೇಖನ ಇರುವುದರಿಂದ ಇಲ್ಲಿ ವಿಷಯದ ವಿಸ್ತರಣೆ

ಇಲ್ಲ.) ಅವರ ಅನೇಕ ಕಾದಂಬರಿಗಳು ಮಹಿಳೆಯ ಮನಸ್ಸಿನ ಸೂಕ್ಷ್ಮ ಎಳೆಗಳನ್ನು ನವಿರಾಗಿ ತೆರೆದಿಡುತ್ತವೆ. ಪುರುಷ ಪ್ರಪಂಚದ ಪಾಶವೀ ಪ್ರವೃತ್ತಿಯನ್ನು ಅವರಷ್ಟು ನಿರ್ದಾಕ್ಷಿಣ್ಯವಾಗಿ ವಿಡಂಬನೆಗೀಡು ಮಾಡಿದವರು ತುಂಬಾ ಅಪರೂಪ. ಅವರ ಬಹುತೇಕ ಎಲ್ಲ ಕಾದಂಬರಿಗಳಲ್ಲಿ ಈ ವಿಷಾದದ ಎಳೆ ವಿಸ್ತರಿಸುತ್ತಲೇ ಹೋಗುತ್ತದೆ. ಅವರಲ್ಲೂ 'ಸರಸಮ್ಮನ ಸಮಾಧಿ', 'ಉಕ್ಕಿದ ನೊರೆ', 'ಮೈಮನಗಳ ಸುಳಿಯಲ್ಲಿ', 'ಬತ್ತದ ತೊರೆ' ಮುಂತಾದ ಕಾದಂಬರಿಗಳು ಹೆಣ್ಣು ಮಕ್ಕಳ ಕೊನೆ ಇಲ್ಲದ ಸಂಕಟಗಳ ಸವಿಸ್ತಾರ ವಿವರಣೆಗಳಿಗಾಗಿಯೇ ಮೀಸಲಾಗಿರುವಂಥವು.

'ಉಕ್ಕಿದ ನೊರೆ' ಅನೇಕ ಕಾರಣಗಳಿಗಾಗಿ ಗಮನಾರ್ಹವಾದುದು. ಅಲ್ಲಿ ಗುಲಾಬಿ ವಂಶಪಾರಂಪರ್ಯವಾಗಿ ಗುಲಾಮಗಿರಿಗೆ ನೂಕಲ್ಪಟ್ಟ ವೇಶ್ಯೆಯರ ವಂಶದವಳು. ಅವಳ ವಂಶವೇ ಅವಳಿಗೆ ಶಾಪ. ಅದೂ ಅಂದಿನ ಕಾಲದಲ್ಲಿ. ಇಂತಹ ವಿಷಮಾವಸ್ಥೆಯಿಂದ ಹೊರಬರಲು ಮಾರ್ಗಗಳೇ ಇಲ್ಲದಂತಹ ಸನ್ನಿವೇಶದಲ್ಲಿ, ಕಾರಂತರು ಈ ವಿಷಯವನ್ನು ಕೈಗೆತ್ತಿಕೊಳ್ಳುತ್ತಾರೆ. (ಇಲ್ಲಿ ಕಾರಂತರು ಕೇವಲ ಸಾಹಿತ್ಯದಲ್ಲಿ ಮಾತ್ರವಲ್ಲ, ಸಮಾಜದ ಒಟ್ಟಾರೆ ಪರಿಸ್ಥಿತಿಗೆ ಎದುರಾಗಿ ಈಜಿದವರು. ಸಮಾಜದಲ್ಲಿದ್ದ ಮೌಢ್ಯ, ಶೋಷಣೆಗಳ ವಿರುದ್ಧ ಧ್ವನಿ ಎತ್ತಿದುದಲ್ಲದೆ, ಅನೇಕ ಶೋಷಿತ ಕುಟುಂಬಗಳ ಹೆಣ್ಣುಮಕ್ಕಳನ್ನು ಮರ್ಯಾದೆಯ ಬದುಕಿಗೆ ಕರೆತಂದ ಸಾಹಸಿ ಎನ್ನುವುದನ್ನು ನೆನಪಿನಲ್ಲಿಡಬೇಕು.) ಗುಲಾಬಿ ವೇಶ್ಯಾಪುತ್ರಿಯಾಗಿದ್ದರೂ, ಮದುವೆಯ ಭಾಗ್ಯವನ್ನೇ ಪಡೆಯದೇ ಬಂದಿದ್ದರೂ ಬಾಳಿದ್ದು ಮಾತ್ರ ಅಪ್ಪಟ ಗೃಹಿಣಿಯಂತೆಯೇ. ಅವಳ ಮನದ ಆಸೆ ಅವಳ ಮಗಳ ಮದುವೆಯ ಸಂತಸದಲ್ಲಿ ಧನ್ಯತೆಯನ್ನು ಪಡೆಯುತ್ತದೆ. ಹರಿಯದೆ ನಿಂತ ನೀರಿನ ಕೊಚ್ಚೆಯ ಮಡುವಿನಂತೆ ದುರ್ವಾಸನೆಯುಕ್ತವಾಗಿದ್ದ ಪರಿಸ್ಥಿತಿಯನ್ನು, ಅಲ್ಲಿನ ದುರ್ವಾಸನೆಯನ್ನು ಲೆಕ್ಕಿಸದೆ ಸನಿಕೆ ಹಿಡಿದು ನೀರನ್ನು ಹರಿಯಬಿಟ್ಟ ಧೀಮಂತ ಈ ಕಾರಂತರು.

'ಉಕ್ಕಿದ ನೊರೆ'ಯ ಕಥೆಯು ಯಾವ ಕ್ರಾಂತಿ ಮಾತನ್ನೂ ಆಡದೆ, ಯಾವ ಭಾಷಣವನ್ನೂ ಮಾಡದೆ ಸಾಮಾನ್ಯ ಅಸಹಾಯಕ ಮನುಷ್ಯನಂತೆಯೇ ಬಾಳು ಮಾಡುತ್ತಾ ಅಪಾರವಾದ ಸಾಧನೆಯನ್ನು ಮೌನವಾಗಿಯೇ ಸಾಧಿಸಿದ ಒಂದು ವನಸುಮದಂಥ ಜೀವ. ಅದು ಬೀರಿದ ಸೌರಭ ಮಾತ್ರ ಮನುಷ್ಯತ್ವದ ಮೌನ ಕ್ರಾಂತಿ.

ಈ ಕಾದಂಬರಿಯ ಚೆನ್ನಕ್ಕ ಒಂದು ವಿಶಿಷ್ಟವಾದ ಪಾತ್ರ. ಅದು ಎಂಥದು ಎನ್ನುವುದನ್ನು ಕಾರಂತರು ಎಲ್ಲಿಯೂ ವಾಚ್ಯವಾಗಿಸುವುದಿಲ್ಲ. ಸುಮ್ಮನೆ ಒಂದು ಬಗೆಯ ನಿರ್ಲಿಪ್ತಿಯೋ? ಮೌನವೋ? ನಿರಾಸಕ್ತಿಯೋ?– ಎಂಬಂತೆ ಚಿತ್ರಿಸತೊಡಗುತ್ತಾರೆ. ಕಾದಂಬರಿಯ ಅತಿ ಮುಖ್ಯ ಭೂಮಿಕೆಯೊಂದನ್ನು ಇಷ್ಟೊಂದು ನಿರ್ವಿಷಯಕವಾಗಿ, ನಿರಾಳವಾಗಿ ಬರೆಯುವುದು ಕಾರಂತ ರಿಂದ ಮಾತ್ರ ಸಾಧ್ಯ. ಅವಳು ಎಂಥವಳು ಎಂಬುದನ್ನು ಕಾರಂತರು ಕಡೆಯ ವರೆಗೂ ವಾಚ್ಯವಾಗಿಸುವುದೇ ಇಲ್ಲ. ಐಹಿಕ ಸುಖದ ಮತ್ತು ಸಿರಿಯ ಬೆನ್ನು ಹತ್ತಿದ ಚೆನ್ನಕ್ಕ, ತನ್ನ ಯೌವನದಲ್ಲಿ ಗಂಡನನ್ನು ತೊರೆದು ಹಣವಿದ್ದವನ ಬೆನ್ನು ಹತ್ತುತ್ತಾಳೆ. ಅದು ವಯಸ್ಸಿನ ಮಹಿಮೆಯೋ? ತನ್ನ ಆಸೆಗಳಿಗೆ ಪೂರಕನಾಗದ, ತೀರಾ ಸಾಮಾನ್ಯನಾದ ತನ್ನ ಗಂಡನ ಬಗ್ಗೆ ತಿರಸ್ಕಾರವೋ? ತನ್ನ ಮಹತ್ವಾಕಾಂಕ್ಷೆಯ ಕಾರ್ಯಸಾಧನೆಯ ಪ್ರಾಯೋಗಿಕತೆಯ ಪರಿಣಾಮವೋ? ಈ ವಿಷಯಗಳ ಬಗ್ಗೆ ಕಾರಂತರೇ ತಲೆ ಕೆಡಿಸಿಕೊಳ್ಳುವುದಿಲ್ಲ. ಸ್ವೇಚ್ಛೆಯಿಂದ ಪಶುವಿನಂತೆ ವರ್ತಿಸುತ್ತಾ, ತನ್ನ ಸುಖಕ್ಕಾಗಿ ಹೆಣ್ಣನ್ನು ಕೇವಲ ತನ್ನ ಯಾವುದೋ ಒಂದು ವಸ್ತುಗಳ ರಾಶಿಯಲ್ಲಿ ಒಂದು ವಸ್ತುವೆಂದು ಪರಿಗಣಿಸಿದ್ದ, ಅಂದಿನ ಪಾಳೇಗಾರಿಕೆಯ ಸ್ವಭಾವದ ಗಂಡಿನ ಸ್ವಾರ್ಥ ಸಮಾಜಕ್ಕೆ ಚೆನ್ನಕ್ಕನಂತಹ ಒಂದು ಆಘಾತ ಕೊಡಬಲ್ಲ, ಹೆಡೆ ಎತ್ತಿದ ಹೆಣ್ಣಿನ ಸರ್ಪಾಘಾತ ಪರಿಣಾಮಕಾರಿ ಎಂಬುದು ಕಾರಂತರ ನಿಲುವೂ ಆಗಿದ್ದರೂ ಆಗಿದ್ದೀತು: ಆದರೆ ಅವರು ಮಾತ್ರ ಹಾಗೇನೂ ಹೇಳುವುದೇ ಇಲ್ಲ.

ಇದು ಇಷ್ಟಕ್ಕೇ ನಿಲ್ಲದೆ ಅವಳ ಮೇಲೆ ಅನೇಕ ಊಹಾಪೋಹಗಳ ಸರಮಾಲೆಗಳೇ ಕಾದಂಬರಿಯಲ್ಲಿ ಕಾಣಸಿಗುತ್ತವೆ. ಇಲ್ಲೆಲ್ಲೂ ಕರ್ತೃ ಕಾರಂತರು ನೇರವಾಗಿ ನಿರೂಪಿಸುವುದೇ ಇಲ್ಲ. ಅವರಿವರು ಅಂಥ ಹೆಣ್ಣಿನ ಬಗ್ಗೆ ಆಡಬಹುದಾದ ಗಾಳಿ ಮಾತುಗಳನ್ನೆ ಯಥಾವತ್ತಾಗಿ ವರದಿ ಮಾಡುತ್ತಾರೆ. ಇಲ್ಲೆಲ್ಲಾ ಕಾರಂತರದು ಮೌನ ಪ್ರತಿಕ್ರಿಯೆಯೇ. ಬೊಂಬಾಯಿಯಿಂದ ಆಗಾಗ ಬರುವ ಚನ್ನಕ್ಕ ಸ್ತ್ರೀಯರ ಕಣ್ಣು ಕೋರೈಸುವಂತೆಯೇ ಬರುತ್ತಾಳೆ. ಅಂಥವಳ ಹಣದ ಬಗ್ಗೆ ಬಿಟ್ಟೀ ಉಪನ್ಯಾಸ ನೀಡುವ ಮಹಾನುಭಾವರೂ ಸಹ, ಆ ಹಣದ ಆಕರ್ಷಣೆಯಿಂದ ವಿಮುಕ್ತರಾದವರೇನೂ ಅಲ್ಲ. ಇಂಥ ಹೆಣ್ಣಿನ ಸಹವಾಸದಿಂದ ಊರ ಹೆಣ್ಣುಮಕ್ಕಳು ದಾರಿ ತಪ್ಪಬಹುದೆಂಬ ಗಾಳಿ ಸುದ್ದಿಯೂ ಹರಡುತ್ತದೆ. ಅನೇಕ ಹುಡುಗಿಯರು ಕಾಣೆಯಾಗುವುದಕ್ಕೂ, ಚನ್ನಕ್ಕನ ಆಗಮನಕ್ಕೂ ಸಂಬಂಧ ಕಟ್ಟಿ ಗುಮಾನಿಯ ಗೂಬೆಯನ್ನೂ ಅವಳ ಮೇಲೆ ಕೂರಿಸಲಾಗುತ್ತದೆ.

ಚನ್ನಕ್ಕನ ವಿಷಯವಾಗಿ ಇಷ್ಟೆಲ್ಲಾ ಇದ್ದಾಗ ಗುಲಾಬಿಯಂತಹ ಶೋಷಿತ ಸಮಾಜದ ಹೆಣ್ಣುಮಗಳ ವಿಷಯವಾಗಿ ವಸ್ತ್ರಾಪಹರಣದಂತಹ ಮಾನಗೆಟ್ಟ ಪ್ರಸಂಗ, ಮುಂದು ಸಮಾಜದಲ್ಲಿ ನಡೆದೇ ತೀರುತ್ತದೆ ಎನ್ನುವಂತಹ ಪರಿಸ್ಥಿತಿ ಗರಿಗಟ್ಟಿದಾಗ, ಚನ್ನಕ್ಕ ಕೊಟ್ಟ ಉತ್ತರ ಇಡೀ ಹೆಣ್ಣುಕುಲದ ಮಾನರಕ್ಷಣೆಯ ಅಸ್ತ್ರವಾಗಿ ಹೋಗುತ್ತದೆ. ಹಗುರಾದ ವಿಷಯಗಳಿಂದ ಗೇಲಿ ಗೂಳಾಗಿದ್ದ ಹೆಣ್ಣು ಜೀವವೊಂದು ಗಂಭೀರ ಸ್ವರೂಪದ ಮಾನವೀಯ ಮುಖವಾಗಿ ಬದಲಾಗಿ ಹೋಗುತ್ತದೆ. ನಂತರ ಹಳ್ಳಿಗೇ ಬಂದು ನೆಲೆಸುವ ಚನ್ನಕ್ಕನ ಒಂದೊಂದು ಚರ್ಯೆಯೂ ಮಾನವ ಸಮಾಜದ, ಮಾನವಂತ ಬದುಕಿನ ನೆಲೆಗಳನ್ನು ಸೂಚಿಸುತ್ತಲೇ ಹೋಗುತ್ತದೆ. ಗ್ರಾಮದೇವತೆಯ ವಿಷಯವಾಗಿ ಆಕೆ ತೆಗೆದುಕೊಳ್ಳುವ ಮುಗ್ಧ ಮನಸ್ಸಿನ ಆರ್ದ್ರ ಭಾವನೆ, ನಂತರ ಊರಿನ ಉಪಕಾರಕ್ಕಾಗಿ ತನ್ನ ಹಣದಿಂದ ಕಟ್ಟಿಸುವ ಉಚಿತ ಮದುವೆಯ ಛತ್ರ, ಆ ಛತ್ರದಲ್ಲಿ ಮೊತ್ತ ಮೊದಲ ಮದುವೆಯಾಗಿ ವೇಶ್ಯಾ ಕುಲದ ಕಳಂಕದಿಂದ ಹೊರಬಂದ ಗುಲಾಬಿಯ ಮಗಳ ಮದುವೆ. ಇವೆಲ್ಲಾ ಚನ್ನಕ್ಕನ ಬಗ್ಗೆ ಗೌರವ ಭಾವನೆ ತಂತಾನೆ ಮೂಡುವ ಸಹಜ ಪ್ರಕ್ರಿಯೆಗಳಾಗುತ್ತವೆ. ಅಂತಹವಳನ್ನೂ, "ಅವಳು ಛತ್ರ ಕಟ್ಟಿಸದಿದ್ದರೆ ಊರಲ್ಲಿ ಮದುವೆಗಳು ನಡೆಯುತ್ತಿರಲಿಲ್ಲವೇ?" ಎನ್ನುವ ಹೊಟ್ಟೆಕಿಚ್ಚಿನ ಕುಟಿಲ ಪ್ರಶ್ನೆಗೆ ಬರುವ ಮಾರ್ಮಿಕ ಉತ್ತರ, "ಮದುವೆಯೇ ಆಗದಿದ್ದರೂ ಮಕ್ಕಳಾಗುವುದಿಲ್ಲವೇ? ಅಂಥ ಸಂಪತ್ತಿಗೆ ಮದುವೆ ಯಾಕೆ ಬೇಕು?" ಎಂಬ ವ್ಯಂಗ್ಯ ಪ್ರಶ್ನೆ ಕಾರಂತರಂಥವರು ಮಾತ್ರ ಈ ಸಮಾಜಕ್ಕೆ ಹಾಕಬಲ್ಲಂಥದು.

✣ **ಸಿ. ಸೋಮಶೇಖರಯ್ಯ :**
'ಅರಿವು', ಸೊಸಾಯಿಟಿ ಹಿಂಭಾಗ, ಜೋಳಗುಡ್ಡ, ಚಿತ್ರದುರ್ಗ-೫೭೭ ೫೦೧ ✣

ನಾಲ್ಕು 'ಹನಿ'

ಸಿ. ಪಿ. ಕೆ

೧. ಬಹುಮಂದಿ ಬರಹಗಾರರಿಗೆ
ಅವರ ಸಾಹಿತ್ಯವೆ ಸರ್ವಸ್ವ;
ಎಲ್ಲೋ ಕೆಲವರಿಗೆ
ಬದುಕಿಗೊಂದು ಅನುಬಂಧ!

೨. ಹುಲ್ಲಿಗಿಂತ ಕಡೆ
ಎಂದೇಕೆ ತಾತ್ಸಾರ?
ಕಬ್ಬು ಒಂದು ಬಗೆಯ ಹುಲ್ಲು
(ಬಿದಿರು ಕೂಡ)!

೩. ಭೂತದ ಬಗೆಗೆ
ಅಚ್ಚರಿ ಪಡುತ್ತ ಪಡುತ್ತ,
ನಾನೇ ಈಗ ಭೂತದ
ಒಂದು ಭಾಗವಾಗುತ್ತಿದ್ದೇನೆ!

೪. ಸೋಲಬಾರದು ಎಂದು
ಜೀವ ಹಟ ಹಿಡಿದಿದೆ!
ನೆಳಲು ಬೆಳಕಿನ ಆಟ
ಸಾಗುತ್ತಿದೆ!

✣ ಡಾ. ಸಿ. ಪಿ. ಕೆ. : # ೨೨೬೫/೧೯, 'ಭಾರತಿ', ೬ನೇ ಕ್ರಾಸ್, ವಿನಾಯಕನಗರ, ಮೈಸೂರು-೧೭ ✣

ಸುಮತೀಂದ್ರ ನಾಡಿಗರ 'ಮೌನದಾಚೆಯ ಮಾತು'

ಜಿ. ಎಸ್. ಸಿದ್ಧಲಿಂಗಯ್ಯ

ಕವಿಯಾಗಿ ಹೆಸರು ಮಾಡಿರುವ ಡಾ. ಸುಮತೀಂದ್ರ ನಾಡಿಗರು ಕೆ. ಎಸ್. ನರಸಿಂಹ ಸ್ವಾಮಿಯವರ ಕಾವ್ಯವನ್ನು ಕುರಿತು ಮಾಡಿರುವ ವಿಮರ್ಶೆಯ ಮಹತ್ವದ ಕೃತಿಯಾಗಿದೆ. ೩೪೦ ಪುಟಗಳ 'ಮೌನದಾಚೆಯ ಮಾತು'. ಈಗಾಗಲೇ ನಾಡಿಗರು ಗೋಪಾಲಕೃಷ್ಣ ಅಡಿಗ ಹಾಗೂ ದ. ರಾ. ಬೇಂದ್ರೆಯವರ ಕಾವ್ಯಗಳನ್ನು ಕುರಿತು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿ ಕೃತಿಗಳನ್ನು ರಚಿಸಿದ್ದಾರೆ.

'ಮೌನದಾಚೆಯ ಮಾತು' ಕೃತಿಯಲ್ಲಿ ಕೆ.ಎಸ್.ನ. ಅವರ ಕಾವ್ಯದ ಮೌಲ್ಯಮಾಪನ ಮಾಡಲು ಹೊರಟಿದ್ದಾರೆ. ಈ ಯತ್ನದ ಹಿಂದೆ ನವ್ಯರು ಅನ್ನಿಸಿಕೊಂಡ ವಿಮರ್ಶಕರು ಕೆ.ಎಸ್.ನ. ಕಾವ್ಯವನ್ನು ಸ್ವಲ್ಪ ಮಟ್ಟಿಗೆ ಅಲಕ್ಷಿಸಿದಂತೆ ತಾವೂ ಒಂದು ಕಾಲದಲ್ಲಿ ಅಲಕ್ಷಿಸಿದ್ದುದು ಅವರಲ್ಲಿ ಪಶ್ಚಾತ್ತಾಪ ಮೂಡಿಸಿದೆ. ಜೊತೆಗೆ ಕೆ.ಎಸ್.ನ. ಕುರಿತು ಸಿದ್ಧಪಡಿಸಿದ ಸಂಪ್ರಬಂಧದಲ್ಲಿ ಅವರ ಎರಡು ಸಣ್ಣಕತೆಗಳನ್ನು ಗಮನಿಸದೆ ಬಿಟ್ಟ ವಿಷಯ ಅವರಿಗೆ ನೋವನ್ನು ತಂದಿದೆ. ನಾಡಿಗರ ಅದೃಷ್ಟವೆಂದರೆ ಕೆ.ಎಸ್.ನ. ಅವರ ದೃಷ್ಟಿ ಶಕ್ತಿ ಕ್ಷೀಣಿಸುತ್ತ ಬಂದ ೧೯೯೭ ರಿಂದಲೂ ಕೆ.ಎಸ್.ನ. ಅವರ ಮನೆಗೆ ಹೋಗಿ ಕವಿ ತನ್ನ ಮನಸ್ಸಿನಲ್ಲಿಯೆ ಕಟ್ಟಿಕೊಂಡು. ಮತ್ತೆ ಮತ್ತೆ ತಿದ್ದಿದ ಪದ್ಯಗಳ ಪತ್ರಗಳನ್ನೂ ಬರೆದುಕೊಂಡು ಪ್ರಕಟಣೆಗೆ ಸಿದ್ಧಪಡಿಸಿದ ಎಂ. ವಿ. ವೆಂಕಟೇಶ ಮೂರ್ತಿಯವರು ಸಾಕಷ್ಟು ಮಹತ್ವದ ವಿವರಗಳನ್ನು ನಾಡಿಗರಿಗೆ ಒದಗಿಸಿದ್ದಾರೆ. ಹೀಗಾಗಿ ಈ ಗ್ರಂಥ ವನ್ನು ಮಿತ್ರರಾದ ಎಂ. ವಿ. ವೆಂಕಟೇಶಮೂರ್ತಿಯವರಿಗೇ ಅರ್ಪಿಸಿದ್ದಾರೆ.

'ಅದೇನೆ ಇರಲಿ. ಬೇಂದ್ರೆ, ಕುವೆಂಪು, ಅಡಿಗರ ಹಾಗೆಯೇ ಆಧುನಿಕ ಕನ್ನಡದ ಅತಿ ಶ್ರೇಷ್ಠ ಕವಿಗಳಾದ ನರಸಿಂಹಸ್ವಾಮಿಗಳನ್ನು ಕುರಿತು ನಾನೊಂದು ಪುಸ್ತಕವನ್ನು ಬರೆಯುವುದನ್ನು ಯೋಚಿಸಿಯೇ ಇರಲಿಲ್ಲ. "ಕೆ.ಎಸ್.ನ. ಕುರಿತು ಐವತ್ತು ಪುಟಗಳಷ್ಟಾದರು ಲೇಖನವನ್ನು ಬರೆಯಬೇಕೆಂದು" ನನ್ನನ್ನು ಕಾಡಿದವರು ಶ್ರೀಯುತ ಎಂ.ವಿ. ವೆಂಕಟೇಶಮೂರ್ತಿಗಳು'. ಎಂದು ಮೊದಲ ಮಾತಿನಲ್ಲಿ ಹೇಳಿದ್ದಾರೆ. ೧೯೪೧ ರಲ್ಲಿ, ಮತ್ತೆ ೧೯೬೫ ರಲ್ಲಿ. ಕೆ.ಎಸ್.ನ. ಬರೆದಿದ್ದ ಎರಡು ಸಣ್ಣಕತೆಗಳನ್ನು ಒದಗಿಸಿಕೊಟ್ಟವರು ಎಂ. ವಿ. ವಿ. ಅವರೇ. ಒಂದರ್ಥದಲ್ಲಿ ನಾಡಿಗರು ಅದೃಷ್ಟವಂತರು. ಈವರೆಗೆ ಇತರರ ಗಮನಕ್ಕೆ ಬಾರದೆ ಉಳಿದಿದ್ದ ಎರಡು ಸಣ್ಣ ಕತೆಗಳು ಪ್ರಾಪ್ತವಾದವು. ಆ ಕತೆಗಳು ಕೇವಲ ಕತೆಗಳೇ ಆಗಿರದೆ ಕೆ.ಎಸ್.ನ. ಅವರ ಬದುಕಿನ ಪ್ರೇಮದ ಸಂಗತಿಗಳೇ ಆಗಿರಬೇಕೆಂದು ನಾಡಿಗರಿಗನ್ನಿಸಿತು.

ಒಂದರ್ಥದಲ್ಲಿ ಇಂಥ ಹದಿಹರೆಯದ ಪ್ರೇಮದ ಸಂಗತಿಗಳು ಬಹಳಷ್ಟು ಸಾಹಿತಿಗಳ ಬದುಕಿನಲ್ಲೂ ಬಂದಂಥವೇ ಇರಬಹುದು. ಕುವೆಂಪು ಅವರ 'ನೆನಪಿನ ದೋಣಿಯಲ್ಲಿ' ಆತ್ಮಕಥೆಯನ್ನೋದುವಾಗ ಗೌರಿ ಮತ್ತು ಪ್ರಭಾವತಿ ಎಂಬ ಇಬ್ಬರ ವೃತ್ತಾಂತ ಬರುತ್ತದೆ. ಹುಡುಕಹೊರಟರೆ, 'ಗೌರಿ'ಯನ್ನು ಕುರಿತಂತೆ ಅವಳ ಅಕಾಲಿಕ ಮೃತ್ಯುವನ್ನು ಕುರಿತು ಕೆಲವು ಕವಿತೆಗಳು ರಚಿತವಾಗಿರುವಂತಿವೆ. ಕೆ.ಎಸ್.ನ. ಅವರ ಆತ್ಮವೃತ್ತ(?)ದಲ್ಲಿ ಅಂಥ ಸಂಗತಿಗಳಿದ್ದಂತಿಲ್ಲ. ಆದರೆ ಕತೆಗಳಲ್ಲಿ ಬರುವ ಹುಡುಗಿಯ ತುಟಿಯ ಒಂದಂಚಿನಲ್ಲಿದ್ದ ಕಲೆಯನ್ನು ಆಧಾರವಾಗಿಟ್ಟುಕೊಂಡು ಕೆ.ಎಸ್.ನ. ಅವರ ಕವಿತೆಗಳಲ್ಲಿ ಕೆ.ಎಸ್.ನ. ಅವರ ವೈಯಕ್ತಿಕವಾದ ಒಲವಿನ ಎಳೆಗಳನ್ನು ಹುಡುಕುವ ಯತ್ನ ಮಾಡಿದ್ದಾರೆ.

ಅತ್ಯಂತ ಶ್ರದ್ಧೆಯಿಂದ ನಡೆಸಿದ ಇವರ ಅಧ್ಯಯನಕ್ಕೆ ಕಳಶವಿಟ್ಟಂತಿರುವುದು ಅನುಬಂಧ–೧ ರಲ್ಲಿ 'ಪಾರ್ವತಿ' ಮತ್ತು 'ಸರೋಜ' ಕವಿತೆಗಳ ವಿವಿಧ ರೂಪಗಳ ಪಠ್ಯ. ಪಾರ್ವತಿ ಕವಿತೆಯ ನಾಲ್ಕು ಪದ್ಯಗಳು, ಅವುಗಳು ರಚನೆ ಆದ ಕಾಲ ಹಾಗೂ ದಿನಾಂಕಗಳೊಂದಿಗಿವೆ. 'ಸರೋಜ' ಕವಿತೆಯದಂತು ಹತ್ತು ಪಾಠಗಳು– ಕವಿತೆಗಳು ಮೆಟೊಮಾರ್ಫಸಿಸ್ಸಾಗುತ್ತಿರುವ ರೂಪಗಳು–

ಇವೆ. ಇವುಗಳನ್ನು ದಾಖಲೆಗೊಳ್ಳುವಂತೆ ರಕ್ಷಿಸಿ ನಾಡಿಗರಿಗೆ ಒದಗಿಸಿದ ಎಂ.ವಿ.ವಿ. ಅವರನ್ನು ಅಭಿನಂದಿಸಬೇಕು. ಕಣ್ಣು ಕಾಣದಿರುವಾಗಲು Paradise Regained ಕಾವ್ಯವನ್ನು ಬರೆಸಿ ಮುಗಿಸಿದ ಮಿಲ್ಟನ್ ಕವಿಯ ಹಾಗೇ ಸುಮಾರು ಐದು ವರ್ಷ ಕಣ್ಣಿನ ದೃಷ್ಟಿಯ ಕೊರತೆಯಿದ್ದರೂ ಕೆ.ಎಸ್.ನ. ಕಾವ್ಯಗಂಗೆ ಬತ್ತದಿದ್ದುದು ಕನ್ನಡದ ಪುಣ್ಯ. ಒಂದರ್ಥದಲ್ಲಿ 'ಶ್ರೀರಾಮಾಯಣ ದರ್ಶನಂ' ಹಸ್ತಪ್ರತಿಯಲ್ಲಿ ಆ ಕೃತಿಯ ಕೆಲವು ಪದಗಳು, ಪಂಕ್ತಿಗಳು ಹಾಗೂ ಭಾಗಗಳು ಕವಿಯಿಂದಲೇ ತಿದ್ದುಪಡಿಗೆ ಒಳಗಾಗಿರುವ ದಾಖಲೆ ಬಿಟ್ಟರೆ ಒಬ್ಬ ಕವಿಯ ಕವಿತೆಗಳ ಮೆಟಮಾರ್ಫಸಿಸ್ಸಿನ ದಾಖಲೆಗಳು ಇಷ್ಟೊಂದು ಪ್ರಮಾಣ ದೊರಕಿರುವುದು ಇಲ್ಲಿಯೇ ಅನ್ನಬಹುದೇನೋ! ಇದಕ್ಕೆ ಪೂರಕವಾಗಿ ನಾಡಿಗರು ಈ ಎರಡು ಕವಿತೆಗಳ ಮೂಲಕ ಕೆ.ಎಸ್.ನ. ಅವರ ಕಲೆಗಾರಿಕೆ ಎಂಬ ವಿಭಾಗದಲ್ಲಿ ವಿವರವಾದ ವಿಶ್ಲೇಷಣೆ ಮಾಡಿದ್ದಾರೆ.

ಕೆ.ಎಸ್.ನ. ಅವರ ಕಾವ್ಯಪ್ರತಿಭೆಯನ್ನು ಅನಾವರಣ ಮಾಡಲು ನಾಡಿಗರು ಆ ಕೃತಿಯನ್ನು ಆರು ವಿಭಾಗಗಳಾಗಿ ವಿಂಗಡಿಸಿಕೊಂಡಿದ್ದಾರೆ:

'ಮೊದಲ ಹೆಜ್ಜೆಗಳು' ಎಂಬ ಮೊದಲ ಭಾಗದಲ್ಲಿ ಕೆ.ಎಸ್.ನ. ಅವರ ಮೊದಲ ಕವಿತೆ, ಮೊದಲ ಪುಸ್ತಕ ಹಾಗೂ ಮೊದಲ ಸಣ್ಣಕತೆಯ ವಿಶ್ಲೇಷಣೆಗಳಿವೆ. ಇಲ್ಲಿ ಕುವೆಂಪು, ಬೇಂದ್ರೆ ಕವಿಗಳ ಪ್ರಭಾವ ಗಳನ್ನು ಗುರುತಿಸಿರುವುದೇ ಅಲ್ಲದೆ 'ಮೈಸೂರು ಮಲ್ಲಿಗೆ' ರಚನೆಯ ಹಿಂದಿನ ಪ್ರೇರಣೆಗಳನ್ನು ಹೇಳಿದ್ದಾರೆ. ಶಾನುಭೋಗರ ಮಗಳು ಕವಿತೆಗೆ ಪ್ರೇರಣೆಯಾಗಿರ ಬಹುದಾದ ಮಾವನ ಮಗಳು ಕತೆಯ ವಿಶ್ಲೇಷಣೆಯೂ ಇದೆ.

ಎರಡನೆಯ ವಿಭಾಗ 'ವೈಚಾರಿಕತೆಯ ಬೆನ್ನ ಹಿಂದೆ' ಎಂಬುದು. ಅರವತ್ನಾಲ್ಕು ಪುಟಗಳಷ್ಟು ವಿಸ್ತಾರವಾಗಿರುವ ಈ ಭಾಗದಲ್ಲಿ ಕೆ.ಎಸ್.ನ. ಕಾವ್ಯದ ಕೆಲವು ಪ್ರಮುಖ ಅಂಶಗಳನ್ನು ಚರ್ಚಿಸುತ್ತಾರೆ. ಕೆ.ಎಸ್.ನ. ಕಂಡ ಕಣ್ಣುಗಳು, ಕನ್ನಡ ಪ್ರೇಮ– ಇಂಥ ಭಾಗಗಳು ಬಹಳ ಮುಖ್ಯವಾದುವು.

ಮೂರನೆಯ ಭಾಗ 'ಕವಿ ಕಾವ್ಯ ವಿಮರ್ಶೆ'ಯನ್ನು ಕುರಿತದ್ದಾಗಿದ್ದು ಕೆ.ಎಸ್.ನ. ಅವರು ಶ್ರೀ, ಬೇಂದ್ರೆ, ಮಾಸ್ತಿ, ಕುವೆಂಪು ಅಡಿಗರು ಇವರುಗಳನ್ನು ಕುರಿತು, ಹಾಗೂ ಪ್ರಗತಿಶೀಲ ಮತ್ತು ನವ್ಯತೆಯನ್ನು ಕುರಿತು ಆಡಿದ ಮಾತು ಮತ್ತು ಬರೆದ ಪದ್ಯಗಳ ಪ್ರಸ್ತಾಪವಿದ್ದು, ಕೆ.ಎಸ್.ನ. ಅವರ ವ್ಯಕ್ತಿತ್ವ ಹಾಗೂ ಕವಿತೆಗಳ ವಿಶಿಷ್ಟತೆಗಳ ಕಡೆಗೆ ನಮ್ಮ ಗಮನ ಹರಿಯುವಂತೆ ಮಾಡುತ್ತಾರೆ. ಒಂದರ್ಥದಲ್ಲಿ ಈ ಕೃತಿಯ ಮಹತ್ವದ ಭಾಗಗಳಲ್ಲಿ ಇದೊಂದು ಎನ್ನಬೇಕು.

ನಾಲ್ಕನೆಯ ಭಾಗ 'ವಿಶಿಷ್ಟ ಕವನಗಳು' ಎಂಬ ಶೀರ್ಷಿಕೆಯಡಿಯಲ್ಲಿ ಹದಿಮೂರು ಕವಿತೆಗಳ ವಿಶ್ಲೇಷಣೆ. ಒಂದರ್ಥದಲ್ಲಿ ಕೆ.ಎಸ್.ನ. ಕಾವ್ಯಾಭ್ಯಾಸಕ್ಕೊಂದು ಒಳ್ಳೆಯ ಪ್ರವೇಶಿಕೆಯಾಗಿದೆ.

ಐದನೆಯ ಭಾಗ 'ಅಂತರಂಗದ ಶೋಧನೆ'ಯಲ್ಲಿ ಮತ್ತೆ 'ಗಡಿಯಾರದಂಗಡಿಯ ಮುಂದೆ', 'ಸಂಜೆ ಹಾಡು' 'ಜಾಲಿಯ ಹೂಗಳ ಕವಿತೆ ಗೋರಿಗಳ ಮೇಲೆ' ಎಂಬ ಮೂರು ಕವಿತೆಗಳ ಮಹತ್ವವನ್ನು ಮನಗಾಣಿಸುವ ರೀತಿ ಮೆಚ್ಚುವಂಥದು. ಇನ್ನೆರಡು ವಿಷಯಗಳು ಕೆ.ಎಸ್.ನ. ಕವಿತೆಗಳಲ್ಲಿ ಬರುವ ತಾಯಿಯ ಹಾಗೂ ದೇವರ ಕಲ್ಪನೆಗಳನ್ನು ಕಟ್ಟಿಕೊಡುತ್ತವೆ. ಒಂದರ್ಥದಲ್ಲಿ ಈ ಎರಡೂ ಚಿಂತನೆಗಳು ಒಂದರೊಳಗೊಂದು ಬೆಸದುಕೊಳ್ಳುತ್ತವೆಂಬುದು ನಾಡಿಗರ ದೃಷ್ಟಿ ಇದ್ದಂತಿದೆ.

ಆರನೆಯ ಭಾಗದಲ್ಲಿ ಕೆ.ಎಸ್.ನ. ಅವರ 'ಕಲೆಗಾರಿಕೆ ಮತ್ತು ಜೀವನದರ್ಶನ' ಕುರಿತು ನಡೆಸಿದ ವಿಶ್ಲೇಷಣೆಯಿದೆ.

ಇಲ್ಲಿರುವ ಆರು ಅನುಬಂಧಗಳು ಹಾಗೂ ಆರಂಭದಲ್ಲಿ ಬರುವ ಮೊದಲ ಕವಿತೆ ಹಾಗೂ ಮೊದಲ ಪುಸ್ತಕ ಎಂಬ ಭಾಗಗಳು ನಾಡಿಗರ ಅಧ್ಯಯನ ಎಷ್ಟು ತಲಸ್ಪರ್ಶಿಯಾದದ್ದು ಎಂಬುದಕ್ಕೆ ಸಾಕ್ಷಿಯಾಗಿವೆ.

ಅನುಬಂಧ–೧ ರಲ್ಲಿ ಕೊಟ್ಟಿರುವ ಎರಡು ಕವಿತೆಗಳು ಕಣ್ಣು ಕಾಣಿಸದಿದ್ದರೂ ಕವಿಯ ಮನಸ್ಸಿನೊಳಗೇ ಕಟ್ಟಿಕೊಂಡು ಭಿನ್ನ ಭಿನ್ನ ಹಂತಗಳಲ್ಲಿ ಬೆಳೆದು ಮೈತಾಳಿದ ರೂಪಗಳು. ಇವುಗಳನ್ನು ನಾಡಿಗರು ಕವಿಯ 'ಕಲೆಗಾರಿಕೆ' ವಿಭಾಗದಲ್ಲಿ ತುಂಬ ಸಮರ್ಥವಾಗಿ ವಿಮರ್ಶಿಸಿದ್ದಾರೆ.

ವಾಸ್ತವವಾಗಿ ನಾಡಿಗರ ಈ ಗ್ರಂಥರಚನೆಯ ಬೀಜಾಂಕುರವಾಗುವುದೇ ಇಲ್ಲಿಂದ ಎನ್ನಬಹುದು. ಈ ಭಾಗ ಎರಡು ದೃಷ್ಟಿಗಳಿಂದ ಮಹತ್ವ ಪಡೆದಿದೆ. ಒಂದು, ದೃಷ್ಟಿಲಾಘವಿಲ್ಲದಿದ್ದ ಕವಿಯ ಪ್ರತಿಭೆಯ ಫಲ ನಾಡಿಗೆ ನಷ್ಟವಾಗಬಾರದು ಎಂದು ಅತ್ಯಂತ ಗೌರವಾದರಗಳಿಂದ ಚಾಚು ತಪ್ಪದಂತೆ ಪ್ರಾಮಾಣಿಕವಾಗಿ ಇವುಗಳನ್ನು ದಾಖಲಿಸಿದ ಎಂ.ವಿ.ವಿ. ಅವರ ಸಾಂಸ್ಕೃತಿಕ ಮಹತ್ವದ ಕ್ಷಮತೆ; ಎರಡು, ಅದರ ಫಲವನ್ನು ಕಾವ್ಯಲೋಕಕ್ಕೆ ಸಿದ್ಧಪಡಿಸಿ ಕುತೂಹಲಭರಿತವಾದ ಕಾವ್ಯಸೃಷ್ಟಿಯ ರಹಸ್ಯವನ್ನು ಮನಗಾಣಿಸಲು ಯತ್ನಿಸುವ ನಾಡಿಗರ ಜಾಣ್ಮೆ.

'ಹೋಗಬೇಕು ನಾನಲ್ಲಿಗೆ' ಮತ್ತು 'ಎಲ್ಲಿರಿಗೊಳಿತನು ಬಯಸಲಿ ಕವನ' ಎಂಬ ಎರಡು ಭಾಗಗಳಲ್ಲಿ ಕೆ.ಎಸ್.ನ. ಅವರ ಕಾವ್ಯ ಹಾಗೂ ಬದುಕಿನ ಸಾಧನೆಗಳನ್ನು ಧ್ವನಿಸಿರುವಂತೆ ಯೋಜಿಸಿರುವುದು ಅತ್ಯಂತ ಅರ್ಥಪೂರ್ಣವಾಗಿದೆ.

ಈ ಕೃತಿಯ ಮಹತ್ವವಿರುವುದು ನಾಡಿಗರು ನಡೆಸುವ ಕೆ.ಎಸ್.ನ. ಅವರ ಕವಿತೆಗಳನ್ನು ವಿಶ್ಲೇಷಿಸುವ ರೀತಿಯಲ್ಲಿ. ಹಾಗೆ ವಿಶ್ಲೇಷಿಸುವಾಗ ಈ ಹಿಂದೆ ನಡೆದಿರುವ ಕೆ.ಎಸ್.ನ. ಕುರಿತ ವಿಮರ್ಶೆಗಳೆಲ್ಲವನ್ನು ಮರುಪರಿಶೀಲನೆಗೆ ಅವರು ಒಡ್ಡುವುದುಂಟು. ಉದಾಹರಣೆಗೆ, 'ತುಂಗಭದ್ರೆ', ಕವನದಲ್ಲಿ ಬರುವ 'ಜೋಳಿಕನ್ಯೆಯರು' ಎಂಬ ಉಲ್ಲೇಖ ಸ್ತ್ರೀಯವರ ಕವನಕ್ಕೆ ಸಂಬಂಧಿಸಿದ್ದು ಎಂಬುದನ್ನು ಸರಿಯಾಗಿಯೆ ಉಲ್ಲೇಖಿಸಿ ಆಕ್ಷೇಪಿಸುತ್ತಾರೆ. ನರಹಳ್ಳಿ ಬಾಲಸುಬ್ರಹ್ಮಣ್ಯ ಅವರ ಅಭಿಪ್ರಾಯವನ್ನು. ಅಷ್ಟೇ ಅಲ್ಲ, 'ಛಂದಸ್ಸಿನ ನೆಲೆಯಲ್ಲಿ ಅಷ್ಟೊಂದು ಪ್ರಯೋಗಶೀಲರಾಗದೆ ಹೋದರು' ಎಂಬ ಎಚ್.ಎಸ್. ರಾಘವೇಂದ್ರರಾಯರ ಅಭಿಪ್ರಾಯವನ್ನು ನಿಸ್ಸಂಕೋಚವಾಗಿ ಸರಿಯಲ್ಲ ಎನ್ನುತ್ತಾರೆ (ಪು. ೬೬). ಹಾಗೆಯೇ ಜಿ.ಎಸ್.ಶಿವರುದ್ರಪ್ಪನವರು. "...ಈ ಕವಿತೆಗಳಿಗೆ ಮನೆ ಸಂಸಾರವಷ್ಟೆ ಕೇಂದ್ರ. ಅದರಾಚೆಯ ಸಮಾಜವಾಗಲಿ, ಅಥವಾ ಬದುಕಿನ ಬೇರೆ ಬೇರೆಯ ಪರಿಣಾಮಗಳ ಪ್ರಭಾವವಾಗಲಿ ಅಪ್ರಕೃತ" ಎಂದಿರುವ 'ಮನೆಯಿಂದ ಮನೆಗೆ' ಸಂಗ್ರಹದ ವರೆಗಿನ ಕವಿತೆಗಳ ಬಗ್ಗೆ ಹೇಳಿದ ಮಾತುಗಳನ್ನು ಚರ್ಚೆಗೆ ಎತ್ತಿಕೊಳ್ಳುತ್ತಾರೆ.

ನಿಸ್ಸಂಕೋಚವಾಗಿ ತಮಗೆ ಸರಿಯಲ್ಲ ಅನ್ನಿಸಿದ್ದನ್ನು ಹೇಳುವ ಹಾಗೂ ಪ್ರತಿಸ್ಥಿಸುವ ನಾಡಿಗರು 'ವಿಶಿಷ್ಟ ಕವನಗಳು' ಎಂಬ ಭಾಗದಲ್ಲಿ ಬರುವ ಕವನಗಳು, ಹಾಗೆಯೇ 'ಗಡಿಯಾರ ದಂಗಡಿಯ ಮುಂದೆ' ಕವನಗಳ ವಿಶ್ಲೇಷಣೆಯನ್ನು ತುಂಬ ಚೆನ್ನಾಗಿ ಸಮರ್ಥಿಸಿಕೊಳ್ಳುತ್ತಾರೆ. ಈ ಕವಿತೆಗಳ ವಿಶ್ಲೇಷಣೆ ಈ ಗ್ರಂಥದ ಮಹತ್ವದ ಭಾಗಗಳಲ್ಲಿ ಒಂದು ಎಂದೇ ಹೇಳಬೇಕು. ಅನಂತಮೂರ್ತಿ, ಶಿವರುದ್ರಪ್ಪ, ನರಹಳ್ಳಿ ಬಾಲಸುಬ್ರಹ್ಮಣ್ಯಂ, ಎಚ್.ಎಸ್. ರಾಘವೇಂದ್ರರಾವ್ ಮುಂತಾದವರ ವಿಮರ್ಶೆಗಳನ್ನು ಮರುಪರಿಶೀಲನೆಗೆ ಒಡ್ಡಿರುವ ನಾಡಿಗರು ಎತ್ತಿಕೊಳ್ಳುವ ಹಾಗೂ ಸಮರ್ಥಿಸುವ ಮುಖ್ಯ ಅಂಶಗಳು ಇವು:

೧. ಕುಟುಂಬ ಸೀಮಿತ ವಲಯದಿಂದ ಕೆ.ಎಸ್.ನ. ಕವಿತೆ ವ್ಯಾಪಕಗೊಳ್ಳುತ್ತವೆ.
೨. ರಾಷ್ಟ್ರ, ಯಾಂತ್ರೀಕರಣ, ನಗರೀಕರಣಗಳ ಅನುಭವಗಳಿಂದ ಇವರ ಕಾವ್ಯ ಸಮರ್ಥ ದನಿಯಾಗುತ್ತದೆ.
೩. ಛಂದಸ್ಸಿನ ಸಾಧನೆಯಲ್ಲಿ ಕೆ.ಎಸ್.ನ. ಹಿಂದೆ ಬಿದ್ದವರಲ್ಲ.

ಹೀಗಾಗಿ ಇವರ ಕಾವ್ಯ ನವ್ಯತೆಯ ತಂತ್ರಗಳನ್ನು ಒಳಗೊಂಡು ಬೇಂದ್ರೆ, ಕುವೆಂಪು, ಅಡಿಗರ ಕಾವ್ಯಗಳಿಗೆ ಸರಿಸಮಾನವಾಗುತ್ತದೆ ಎಂದು ಈ ಗ್ರಂಥದಲ್ಲಿ ನಿರೂಪಿಸಲು ಹೊರಟಿದ್ದಾರೆ. ಆದ್ದರಿಂದಲೇ ಅವರು "ಇದೊಂದು ಅಪೂರ್ಣ ಪುಸ್ತಕ ಅನ್ನಿಸಿದರೂ ಅಡ್ಡಿಯಿಲ್ಲ. ನರಸಿಂಹಸ್ವಾಮಿಯವರ ಕಾವ್ಯಕ್ಕೆ ಈವರೆಗೆ ಕೊಡದಿದ್ದ ಗಮನವನ್ನು ಕೊಡುವುದು ನನಗೆ ಮುಖ್ಯವಾಗಿದೆ" (ಪು.೪೪) ಎಂದು ಹೇಳುತ್ತಾರೆ.

ಮುಂದುವರಿದು 'ದೀಪದ ಮಲ್ಲಿ' ಯಲ್ಲಿ ಪ್ರಕಟವಾದ ಕವಿತೆ 'ವಚನ ಭಾರತ ಪ್ರವೇಶ' ಕವಿತೆಯನ್ನು ವಿಶ್ಲೇಷಿಸುತ್ತ 'ನರಸಿಂಹಸ್ವಾಮಿಯವರು ನವ್ಯತೆಯನ್ನು ಬಹಳ ಮುಂಚೆಯೇ ತಂದರು' (ಪು. ೧೧೮) ಎಂದು ಹೇಳುತ್ತಾರೆ.

ಹಾಗೆ ನೋಡಿದರೆ ಒಂದರ್ಥದಲ್ಲಿ ನವ್ಯ ಕಾವ್ಯದ ಪ್ರಸ್ಥಾನಕಾರರು ಎನ್ನಬಹುದಾದ

ಅಡಿಗರ ಕಾವ್ಯತಂತ್ರಗಳ ಬಹ್ವಂಶಗಳು ಕೆ.ಎಸ್.ನ. ಅವರ ಕವಿತೆಗಳಲ್ಲಿ ಬಹಳ ಮುಂಚೆಯೇ ಕಾಣಿಸಿಕೊಳ್ಳುವುದನ್ನು ಎತ್ತಿ ಹೇಳುತ್ತಾರೆ. ಕೆ.ಎಸ್.ನ. ಅವರೇ ಬಿ.ಶ್ರೀ. ಅವರ ಮೂಲಕ ಆದ ಇಂಗ್ಲಿಷ್ ಕವಿತೆಗಳ ಪ್ರಭಾವದ ಕಾರಣವಾಗಿ ತಮ್ಮ ಕಾವ್ಯಾಭಿವ್ಯಕ್ತಿ ಹಾಗೂ ವಸ್ತುವಿನ ಆಯ್ಕೆಯಲ್ಲಾದ ಸತ್ವಯುತವಾದ ಬೆಳವಣಿಗೆಗಳ ಬಗೆಗೆ ಹೇಳಿಕೊಂಡಿರುವುದನ್ನು ನಾಡಿಗರು ವಿವರಿಸುತ್ತಾರೆ. ವಾಸ್ತವವಾಗಿ 'ಇರುವಂತಿಗೆ' ಕವನ ಸಂಕಲನವನ್ನು ಓದುವಾಗ ಕೆ.ಎಸ್.ನ. ಕಾವ್ಯ ಮಿತಿಗಳಿಗೆ ಒಳಗಾಗತೊಡಗಿದುದು, ರತ್ನನ ಪದಗಳ ಪ್ರಭಾವವೂ ಆಗುತ್ತಿರುವುದು ಅನುಭವಕ್ಕೆ ಬರುತ್ತದೆ.

ಕನ್ನಡದ ಪುಣ್ಯ – ಸಹಜ ಪ್ರತಿಭೆಯ ಕೆ.ಎಸ್.ನ. ಅವರಿಗಿದ್ದ ಅನುಭವದ ಗಟ್ಟಿತನ, ವಿಷಯಗಳ ಮೇಲಿನ ಪ್ರಭುತ್ವ ಅನ್ನಿಸುವ ಹಿಡಿತ, ಬದುಕನ್ನು ಕುರಿತ ಆರೋಗ್ಯಕರ ದೃಷ್ಟಿ ಇವುಗಳಿಗೆ ಬಿ.ಶ್ರೀ. ಅವರ ಪ್ರಭಾವದಿಂದಾಗಿ ಒಂದು ಕಾಯಕಲ್ಪವೇ ಆಯಿತು– ಕೆ.ಎಸ್.ನ. ಅವರ ಕಾವ್ಯ 'ಮೈಸೂರ ಮಲ್ಲಿಗೆ'ಯ ಭಾವವಲಯವನ್ನು ಸಶಕ್ತವಾಗಿ ವಿಸ್ತರಿಸಿ ಸಮರ್ಥ ಕವಿತೆಗಳಿಗೆ ಕಾರಣವಾಯಿತು. ಒಂದರ್ಥದಲ್ಲಿ ಕುಟುಂಬ ಕೇಂದ್ರದಿಂದ ಸೀಮಿತಗೊಳ್ಳದ ಬಗೆಯ ಕವಿತೆಗಳಿಗೆ ಕಾರಣವಾಯಿತು. 'ವಿಜ್ಞಾನ ವಿಚಾರ', 'ಪುರಾಣ ಪರಿಶೀಲನೆ', 'ಚರಿತ್ರೆಯ ಓದು', 'ಪ್ರಜಾಪ್ರಭುತ್ವದ ಅರ್ಥ', 'ದೇಶದ ಆಡಳಿತ' ಎಂಬ ಭಾಗಗಳಲ್ಲಿ ಇದನ್ನು ನಾಡಿಗರು ಚೆನ್ನಾಗಿ ನಿರೂಪಿಸಿದ್ದಾರೆ. ಈ ಕವಿತೆಗಳನ್ನು ವಿಶ್ಲೇಷಿಸಿರುವ ರೀತಿ ಮೆಚ್ಚುವಂಥದ್ದು.

ವ್ಯಕ್ತಿಯಾಗಿ ಕೆ.ಎಸ್.ನ. ಮೃದು ಸ್ವಭಾವದವರಂತೆ ಭಾಸವಾಗಬಹುದು. ನಾಡಿಗರು ಕೆ.ಎಸ್.ನ. ಅವರ ಮೆಲುದನಿಯ ಹಿಂದಿರುವ ದೃಢ ಸಂಕಲ್ಪವನ್ನು, ವೈಚಾರಿಕತೆಯ ಪ್ರಖರತೆಯನ್ನು ಸಮರ್ಥವಾಗಿಯೆ ನಿರೂಪಿಸಿದ್ದಾರೆ. ಅಡಿಗರು ತಮ್ಮ ಕವಿತೆಗಳ ಬಗೆಗೆ ತಾಳಿದ ಭಾವನೆಗಳಿಗೆ ಸಂಬಂಧಿಸಿದಂತೆ ಕವಿತೆಗಳ ಮೂಲಕವಾಗಿಯಾಗಿಯೂ ಮತ್ತೆ ಉತ್ತರ ರೂಪವಾಗಿಯೂ ಕೆ.ಎಸ್.ನ. ದಟ್ಟವಾಗಿ ಹಾಗೂ ಸಮರ್ಥವಾಗಿ ಉತ್ತರಿಸಿರುವುದನ್ನು 'ನವ್ಯ ಕಾವ್ಯ ಮತ್ತು ಅಡಿಗರು' ಎಂಬ ಭಾಗದಲ್ಲಿ ಸಶಕ್ತವಾಗಿ ನಿರೂಪಿಸಿದ್ದಾರೆ. ಸಾಂಸ್ಕೃತಿಕವಾಗಿ ಕೂಡ ಬಹಳ ಮಹತ್ವ ಪಡೆದುಕೊಳ್ಳುವ ಅಂಶ ಇದು. ಕುವೆಂಪು ಕಾವ್ಯ ಭಾಷೆಯನ್ನು ಕುರಿತ ಕೆ.ಎಸ್.ನ. ಅಭಿಪ್ರಾಯಗಳೂ ಗಮನಾರ್ಹವಾದುವೇ. ಈ ಭಾಗದಲ್ಲಿಯೆ 'ಬಿಳಿಯ ಹೂಗಳ ಕವಿತೆ ಗೋರಿಗಳ ಮೇಲೆ', 'ಗಡಿಯಾರದಂಗಡಿಯ ಮುಂದೆ' ಕವಿತೆಗಳು ಪಡೆದಿರುವ ಸಿದ್ಧಿ ಯಾವ ಭಾಷೆಯಾದರೂ ಹೆಮ್ಮೆಪಡುವಂಥದ್ದು ಎಂದು ಮನಗಾಣಿಸುತ್ತಾರೆ.

ನಮ್ಮ ಶ್ರೇಷ್ಠ ಕವಿಗಳಲ್ಲೊಬ್ಬರಾದ ಅಡಿಗರ ಕಾವ್ಯದಲ್ಲಿ 'ಇವಳ ಹೊಟ್ಟೆ ಚರಂಡಿಗಾರು ಕುಕ್ಕಿದರಯ್ಯ, ಕಳ್ಳ ಬಸುರಿನ ಯಾವ ಜಾಣರಂಭೆ?'ಯಂಥ ಪ್ರತಿಮೆಗಳ ದುಂದು ಅರ್ಥ ಕೇಂದ್ರವನ್ನು ಸಡಿಲುಗೊಳಿಸುವುದುಂಟು. 'ಚಂಡಮದ್ದಳೆ'ಯ ಅನಂತರದ ಕವನ ಸಂಕಲನಗಳನ್ನು ನೋಡಿದರೆ ಜೀವನ ಸಂಭ್ರಮ ಅಂಶಗಳನ್ನು ನಿರ್ಲಕ್ಷಿಸಿಯೇ ಬಿಡುವರೇನೊ ಎಂಬ ಆತಂಕ ಮನಸ್ಸಿಗಾದರೆ ಕೆ.ಎಸ್.ನ. ಅವರ ಕಾವ್ಯದಲ್ಲಿ ಒಮ್ಮೊಮ್ಮೆ ಚಿಂತನೆ ಜಾಳಾಯಿತೇನೋ ಅನ್ನಿಸುವುದುಂಟು. ಉದಾಹರಣೆಗೆ, 'ಸೀತೆಯ ಭಾಗ್ಯ' ಕವಿತೆಯಲ್ಲಿ 'ಬೆಂಕಿಯಲಿ ನಿಂತು ಬೆಳ್ದಿಂಗಳಾದಳು ಸೀತೆ' ಎಂಬಂಥ ಅಭಿವ್ಯಕ್ತಿಯನ್ನೆ ಗಮನಿಸಬಹುದಾಗಿದೆ. ಆಕೆ ರಾಮನ ಪಾಲಿಗೆ ಬೆಳ್ದಿಂಗಳೇ ಆಗಿರಬಹುದು. ಆದರೆ ಅವಳು ಬೆಂಕಿಯಲ್ಲಿ ನಿಂತಾಗ ಆದ ಬೆಂಕಿಯ, ಉರಿಯ ತೀಕ್ಷ್ಣತೆಯ ಅನುಭವವೇ ನಮಗಾಗುವುದಿಲ್ಲ. ಇನ್ನೊಂದು ಉದಾಹರಣೆ ಗಮನಿಸುವುದಾದರೆ 'ನಿಮ್ಮ ಸಂಸಾರ ಇದು' ಕವಿತೆಯ ಈ ಸಾಲುಗಳನ್ನು ಗಮನಿಸಿ: ಕುಟುಂಬದ ಜವಾಬ್ದಾರಿಯೇ ಇಲ್ಲದ ಗಂಡನನ್ನು ಕುರಿತು ಹೆಂಡತಿ ಹೇಳುವುದು ಹೀಗೆ:

ಹತ್ತಾರು ವರುಷ ಸಂಸಾರ ಮಾಡಿದ ಮೇಲೆ
ಏನಿದೀ ಹಗಲ ಸಂನ್ಯಾಸ? ಹತ್ತಿರ ಬಂದು
ಆದದ್ದು ತಪ್ಪು ಮಾತೆಂದು, ಕಂದನ ತುಟಿಗೆ
ಮುತ್ತಿಟ್ಟು ಎದ್ದು ಹೋಗಿರಿ, ಸಾಕು ಈ ಮಾತು,
ಹೆಣ್ಣ ಕಣ್ಣೀರಿನಲಿ ಮನೆಮಾರು ತೆಪ್ಪ ತೇಲೀತು!

'ನಲವತ್ತರ ಚೆಲುವೆ' ಕವನವೂ ಇದೇ ರೀತಿಯದು. ಆದರೆ ಕೆ.ಎಸ್.ನ. ಕಾವ್ಯ ತನ್ನ ಪರಿಮಿತಿಗಳನ್ನು ದಾಟಿ ಬೆಳೆದು ಕನ್ನಡಕ್ಕೆ ಮಹತ್ವದ ಕವಿತೆಗಳನ್ನು ನೀಡಿದೆ. ಅಡಿಗರಷ್ಟೇ ಮಹತ್ವದ ಕಾವ್ಯದ ಜೊತೆಗೆ ಸೇರಬೇಕಾದ ಕಾವ್ಯವಾಗಿದೆ. ಅಡಿಗರು ಹಾಗೂ ಕೆ.ಎಸ್.ನ. ಪರಸ್ಪರ ಪೂರಕ ಪ್ರತಿಭೆಗಳೆಂದರೂ ತಪ್ಪಾಗದು. ಏಕೆಂದರೆ ಅಡಿಗರ ಕಾವ್ಯದಲ್ಲಿ ಜೀವನದ ಸಂಭ್ರಮದ ಕ್ಷಣಗಳು ಕಡಿಮೆಯಾದರೆ ಕೆ.ಎಸ್.ನ. ಅವರಲ್ಲಿ ಬದುಕಿನ ಭಯಾನಕ ಕ್ಷಣಗಳು ಕಡಿಮೆಯಾಗುತ್ತವೆ.

ಕೆ.ಎಸ್.ನ. ಅವರು ತಮಗೆ ಹಿರಿಯರಾಗಿದ್ದ ಶ್ರೀ. ತೀ.ನಂ.ಶ್ರೀ. ಬೇಂದ್ರೆ. ಮಾಸ್ತಿ. ವಿ.ಸೀ. ಕುವೆಂಪು ಇವರ ಕಾವ್ಯಗಳು ಹಾಗೂ ವ್ಯಕ್ತಿತ್ವಗಳ ಬಗೆಗೆ ತಮ್ಮ ಕೃತಿಗಳಲ್ಲಿ ತೋರಿಸಿರುವ ಗೌರವ ಹಾಗೂ ಪ್ರತಿಕ್ರಿಯೆಗಳನ್ನು ನಾಡಿಗರು ಚೆನ್ನಾಗಿ ವಿವರಿಸಿದ್ದಾರೆ. ವಚನಭಾರತಪ್ರವೇಶ, ಮಾಸ್ತಿಯವರ ಕವಿತೆ, ಶ್ರೀ ಅವರಿಗೆ, ತೀ.ನಂ.ಶ್ರೀ ಅವರಿಗೆ- ಇಂಥ ಕವಿತೆಗಳಲ್ಲಿ ವಿಶ್ಲೇಷಿಸಿರುವ ರೀತಿ ಕುತೂಹಲಕರವಾಗಿದೆ.

'ವಚನ ಭಾರತ ಪ್ರವೇಶ : ಒಂದು ಟಿಪ್ಪಣಿ' ಎಂಬ ಅನುಬಂಧ-೫ ರ ಭಾಗ ಇದೇ ವರ್ಗಕ್ಕೆ ಸೇರಿದ್ದು ಎನ್ನಬಹುದು. ಕವಿಯೂ ಆದ ನಾಡಿಗರು ಇಲ್ಲಿ ಕೆ.ಎಸ್.ನ. ಅವರ ಅಂತರಂಗವನ್ನು ಒಳಹೋಗುವ ಯತ್ನ ನಡೆಸಿದ್ದಾರೆ. ಒಂದರ್ಥದಲ್ಲಿ ಇದು ಕೆ.ಎಸ್.ನ. ಅವರ ಎರಡು ಕಥೆಗಳಲ್ಲಿ ಅವರ ಬದುಕಿನ ಸಂಗತಿಗಳನ್ನು ಕುರಿತಂತೆ ಇರಬಹುದಾದ ಅಂಶಗಳನ್ನು ಗುರುತಿಸಿರುವ ರೀತಿಯಲ್ಲಿಯೇ ಇದೆ.

'ದೀಪದ ಮಲ್ಲಿ' ಮೊದಲು ಪ್ರಕಟವಾದದ್ದು ೧೯೪೭ರಲ್ಲಿ. ಅದರ ಮೊದಲ ಮರು ಮುದ್ರಣ ೧೯೫೦ರಲ್ಲಿ. ಇದರ ಮೂರನೆಯ ಮುದ್ರಣ ಆದದ್ದು ೧೯೫೭ರಲ್ಲಿ, ಕಾವ್ಯಾಲಯ ಪ್ರಕಾಶನದ ಮೂಲಕ. ಆಗ ಪ್ರಕಾಶಕರು ಕವಿತೆಗಳನ್ನು ಕುರಿತು ಕೆಲವು ಮಾತು ಬರೆಯಿರಿ ಎಂದು ಕವಿಗೆ ಹೇಳಿದ್ದರು. ಆಗ ಕವಿ 'ಮಹಾಭಾರತ ಪ್ರವೇಶ' ಎಂಬ ಕವಿತೆ ಮತ್ತಿತರ ಹತ್ತು ಕವಿತೆಗಳನ್ನು ಇದರಲ್ಲಿ ಸೇರಿಸಿ ತಮ್ಮ ಕವಿತೆ ಬಗ್ಗೆ ಪ್ರಸ್ತಾಪಿಸುತ್ತ, ಒಂದು ಸಂಜೆ ಒಂದು ಕಾಡಿನ ಹುಲಿಯನ್ನು ಕಂಡ ಘಟನೆಯನ್ನು ವರ್ಣಿಸುತ್ತಾರೆ. ಈ ಹಿನ್ನೆಲೆಯಲ್ಲಿ ನಾಡಿಗರ ಒಂದು ಊಹೆ ಬೆಳೆಯುತ್ತದೆ. 'ಮುನ್ನುಡಿಯಲ್ಲಿ ಬರುವ ಸಂಸ್ಕೃತದ 'ವ್ಯಾಘ್ರ'. 'ಸಾವಿರ ಹೆಡೆಯ ಹಾವು' ಕುವೆಂಪು ಅವರನ್ನು ಸೂಚಿಸುತ್ತಿರಬಹುದು ಎನ್ನುತ್ತಾರೆ. ಇದಕ್ಕೆ ಪೋಷಕವಾಗಿ 'ವಚನ ಭಾರತ ಪ್ರವೇಶ'ದಲ್ಲಿನ ಈ ಸಾಲುಗಳನ್ನು ನೆನಪಿಸಿಕೊಳ್ಳಬಹುದು: 'ನನಗೆ ಒಂದೇ ಪ್ರಶ್ನೆ: ಶಾಸ್ತ್ರಿಗಳು ಕವಿಗಳೆ/ ಹುತ್ತವನು ಕೆದಕಿ ಹಾವಿನ ಹೆಡೆಯ ಹಿಡಿದಂತೆ/ ಉತ್ತರದ ಹಾದಿ.' ಎನ್ನುತ್ತಾರೆ.

೧೯೪೭ರಲ್ಲಾಗಲೇ ಕೆ.ಎಸ್.ನ. ಅವರು ಕುವೆಂಪು ಕವಿತೆಗಳನ್ನು ಕುರಿತು- ಅವರ ಭಾಷೆ ಹಾಗೂ ಪ್ರಣಯ ಗೀತೆಗಳ ಬಗ್ಗೆ ದಿಟ್ಟವಾಗಿ 'ಪುಸ್ತಕ ಪ್ರಪಂಚ'ದಲ್ಲಿ ಬರೆದಿದ್ದರು ಎಂಬುದನ್ನು ಗಮನಿಸಿದರೆ ಇಷ್ಟೆಲ್ಲಾ ಊಹೆಯ ಅಗತ್ಯ ಇದ್ದಿತೆ ಅನ್ನಿಸಬಹುದು. ಏನಾದರೂ ನಾಡಿಗರು ಇಂಥಲ್ಲಿ ಸೃಜನಶೀಲತೆಯ ರಹಸ್ಯಗಳತ್ತ ಹಲವಾರು ಬಾರಿ ಪ್ರಯತ್ನಿಸಿರುವುದುಂಟಷ್ಟೆ!

ನಾಡಿಗರು ಈ ಕೃತಿಯಲ್ಲಿ ಕೆ.ಎಸ್.ನ. ಕಾವ್ಯವನ್ನು ಅಧ್ಯಯನ ಮಾಡುವವರಿಗಾಗಿ ಹೊಸ ಓದಿನ ಕ್ರಮವನ್ನು ನಮ್ಮ ಮುಂದಿಟ್ಟಿದ್ದಾರೆ. ಈ ಓದು ಈ ವರೆಗೆ ಕೆಲವು ವಿಷಯಗಳಲ್ಲಿ ಅಲಕ್ಷ್ಯಕ್ಕೆ ಒಳಗಾಗಿದ್ದ ಹಲವಾರು ಮಹತ್ವದ ಅಂಶಗಳತ್ತ ನಮ್ಮ ಗಮನ ಸೆಳೆಯುವಲ್ಲಿ ಸಮರ್ಥವಾಗಿದೆ. ಈ ಹೊಸ ಓದಿಗೆ ನೆರವಾಗುವಂತೆ ಕೆ.ಎಸ್.ನ. ಕಾವ್ಯ ಕುರಿತ ಇತರರ ಅಭಿಪ್ರಾಯಗಳನ್ನು ಇಲ್ಲಿ ದಾಖಲಿಸಿದ್ದಾರೆ. ಕೆ.ಎಸ್.ನ. ಅವರ ಕಾವ್ಯದ ಬೆಳವಣಿಗೆಯನ್ನು ಸೂಚಿಸುವ ಪೂರಕ ಸಾಮಗ್ರಿಗಳನ್ನು ಒದಗಿಸಿದ್ದಾರೆ.

ನಾಡಿಗರನ್ನು ಇದಕ್ಕಾಗಿ ಅಭಿನಂದಿಸಬೇಕಾಗಿದೆ.

✣ **ಪ್ರೊ. ಜಿ. ಎಸ್. ಸಿದ್ಧಲಿಂಗಯ್ಯ**, # ೨೦೩, ೭ನೇ ಮೇನ್,
ಆರ್.ಪಿ.ಸಿ. ಲೇಔಟ್, ವಿಜಯನಗರ (ಪೂರ್ವ), ಬೆಂಗಳೂರು-೫೬೦ ೦೪೦ ✣

೧. ಕುಲವ್ಯಾಕುಲ

ಕುಲವ್ಯಾಕುಲಗಳ ಬೇರ ಕೀಳಲೆಳಸಿದ ಬಸವಣ್ಣನ ಕುಲ ಕೇಳುತ್ತೀರಿ ನೀವು
ಹೇಳುತ್ತೀರಿ ನಿಮಗೆ ಹೊಳೆದ ಹಾಗೆ; ಹರಿವ ಹೊಳೆಗೇಕೆ ಸುಳಿಯಾಗುತ್ತೀರಿ?

ಹೌದಾದರೆ ಹೌದು ಬಸವಣ್ಣನದು ಸಕಲ ಜಾತಿ
ಅಲ್ಲವಾದರೆ ಅಲ್ಲ ಅವನದು ಯಾವುದೇ ಜಾತಿ
ಅವನು ಬಿಡಿ ಎನ್ನುವದ ಬಿಡದೆ ಹಿಡಿ ಎನ್ನುವದ ಹಿಡಿಯದೆ
ಅನಾಚಾರವೆಸಗುವ ನೀವು ಯಾಕೆ ಶಾಸ್ತ್ರ ಹೇಳಿ ತಿನ್ನುತ್ತೀರಿ ಬದನೆಕಾಯಿ?

ಹೌದು ಚರಿತ್ರೆ ಬೇಕು ನಮಗೆ, ಚಾರಿತ್ರ್ಯ ಕೂಡ
ಹಿಂದಣ ಹೆಜ್ಜೆ ಬೇಕು ಮುಂದಣ ದಾರಿಗೆ
ಬೇಡೆಂದು ಬಿಸಾಕಿದ ಗೊಂದಲದ ಒಜ್ಜೆಗಳಲ್ಲ
ತಪ್ಪಿದ್ದು ಸರಿಪಡಿಸಿ ಒಪ್ಪಿದ್ದು ಅಪ್ಪಿದ್ದು ಅದಕ್ಕಾಗಿ ಸಾವರಿಸಿ ಸತ್ತದ್ದು ಕಣ್ಣೆದುರಿಗಿದೆ
ಹರಿಯುತ್ತಿದೆ ಮಹಾಬೆಳಗಿನ ಹೊಳೆ ಕೊಚ್ಚಿ ಹೋಗಬೇಕಲ್ಲವೇ ಚರಿತ್ರೆಗಳ ಸ್ಥಾವರ ಕೊಳೆ
ಜಂಗಮವ ಭಂಗಿಸುವ ತೌಡು ಕುಟ್ಟುವ ಸೂತಕದ ಪಾತಕಗಳಿಂದೇನು ಲಾಭ ಚರಿತ್ರೆಗೆ
ಬಸವ ಕಂಡ ಕನಸಿಗೆ ವರ್ತಮಾನದ ಬೆಳಸಿಗೆ
ಬರುವ ದಾರಿಯ ಬೆಳಕಾಗುವುದೇ ಚರಿತ್ರೆಯ ಚಾರಿತ್ರ್ಯವಲ್ಲವೇ?
ಶರಣರ ನಿಲುವುಗನ್ನಡಿಯಲ್ಲಿ ಸತ್ಯದ ನಿಲುವು ಇದಲ್ಲದೆ ಬೇರೇನಿದೆ?

ಚರಿತ್ರೆಯ ದೋಷಗಳ ಮೋಸಗಳ ಜಾಲಾಡಲೆಳಸುವ ಸತ್ಯದ ಪಕ್ಕಾರದುಗಳೇ
ಶರಣರು ಹೇಳಿದ್ದು ಮಾಡಿದ್ದು ಅದನ್ನೇ
ಹುಟ್ಟಿನಾಧಾರಗಳ ಬಿಟ್ಟು ನಡೆಯುವದನ್ನೇ
ಬೆಳೆಯುತ್ತ ಒಂದಾಗುವ ಗುರಿಯ ಮುಟ್ಟುವ ಪರಿಯನ್ನೇ
ಒತ್ತಿ ಹೇಳಿದ ಅವರ ದಿಕ್ಕು ಬೇರೆ ನಿಮ್ಮ ಚಪಲದ ದೆಸೆಯೆ ಬೇರೆ

ಕುಲದ ಬಿಲಗಳಲ್ಲಿ ಅವಿತ ಇಲಿ ಹೆಗ್ಗಣಗಳಿಗೆ ಬಸವನಿತ್ತ ಮದ್ದು ಇನ್ನೂ ಚಲಾವಣೆಯಲ್ಲಿದೆ
ಹೌದು ಆ ಮದ್ದನ್ನೇ ತಿಂದು ಕೊಬ್ಬಿ ಗೂಳಿಗಳಾಗಿ
ಮುಸುಗುಡುವ ತೋಳಗಳು ನಮ್ಮೆದುರಿಗಿವೆ
ಹಾಗಂತ ಈ ಕುಲವ್ಯಾಕುಲಗಳ ಸಂತೆಯ ಶಬ್ದಕ್ಕೆ ನಾಚಿ
ಶರಣರ ಕನಸಿನ ಕುಸುಮಗಳು ಬಾಡಬೇಕೇ?
ನೊರೆ ತೊರೆಗಳಲ್ಲಿ ಮುಳುಗಿ ಸಾಯಬೇಕೇ?
ಮೃಗಗಳಿಗಂಜಿ ಓಡಬೇಕೇ? ನೀವೂ ಅಂಥದೇ ಮೃಗಗಳಾಗಬೇಕೇ?

ಜಾತಿಯ ಹುಟ್ಟುಗಳ ಅಡಗಿಸಲೆಳಸಿದವನ ಹುಟ್ಟಿನ ಜಾತಿಯ ಕಟ್ಟಿಕೊಂಡೇನ ಮಾಡುವಿರಿ?
ಚರಿತ್ರೆಯ ಯಾವ ತಪ್ಪ ತಿದ್ದುವಿರಿ? ವರ್ತಮಾನದ ಯಾವ ಸಿರಿಯ ಹೊದ್ದುವಿರಿ?
ನಿಂತ ನೀರಿನ ಹಳೆಯ ಹೊಂಡದ ಕೊಳೆಗೆ ಬಿದ್ದು
ನರಕಕ್ಕೆ ಭಾಜನರಾಗುವಿರಿ. ಚರಿತ್ರೆಯ ನರಕವನ್ನೇ ಹಾದಿಗೆ ಹಾಸುವಿರಿ
ನಿಮ್ಮ ಕುಲ ವ್ಯಾಕುಲ ಉಂಟುಮಾಡುವುದೆಂಬ
ಮನುಜ ಕುಲಂ ತಾನೊಂದೆ ವಲಂ ಎಂಬ
ಆದಿಕವಿಯ ಬೀಜವಾಣಿ ಚರಿತ್ರೆಯ ವೃಕ್ಷವಾಗದೇ?
ಆ ವೃಕ್ಷಕ್ಕೆ ನೀರೆರೆದವರ ಲಕ್ಷ್ಯ ಫಲವಾಗದೇ?

೨. ಯಾರು

ಗೋಡೆಗಳ ಕೆಡವಿದ ನಿನಗೆ ಗೋಡೆಗಳ ಕಟ್ಟಿದರು
ಗೋಡೆಯೊಳಗಡೆ ನಿನ್ನ ಕಟ್ಟವರು ಯಾರು
ಒಡಲ ಗೋಡೆಗಳಲ್ಲಿ ಸಂಗಮನ ಜಂಗಮ ರೂಪ
ತೋರಿಸಿದವನ ಕಲ್ಲಗೋಡೆಗಳಲ್ಲಿ ಕೆಡುವವರು ಯಾರು
        ನಿನ್ನ ರೂಪ ಕಲ್ಪನೆಗಳ ಕಲ್ಲೊಳಗೆ ಕೆತ್ತಿ
        ನಿಲ್ಲಿಸಿದರು ಮಠ ಮಂದಿರ ಕೂಟಗಳಲಿ
        ಸಕಲ ರೂಪಗಳ ಜೀವರೂಪ ವಿರೂಪನ ಹೊತ್ತು ತಿರುಗುವ
        ಕ್ಷಣ ನಿಲ್ಲದ ನಿನ್ನ ಕಲ್ಲೊಳಗೆ ಕಟೆದು ನಿಲ್ಲಿಸುವವರು ಯಾರು
ಸಾವಿನೊಳಗೂ ಯಾರ ಕೈಗೆ ಸಿಗದವನ
ಸಂಗಮದ ಹೊಳೆಯಲ್ಲಿ ಜಿಗಿದವನ
ನಿತ್ಯ ಜಂಗಮದೊಳಗೆ ಮೃತ್ಯುವನು ಗೆದ್ದವನ
ಸಮಾಧಿಯಲಿ ಹಿಡಿದಿಡುವ ಸೂತಕಗಳು ಯಾರು
        ಸಕಲ ಭೂತಗಳ ಜೀವಕೇಂದ್ರಗಳೊಳಗೆ
        ಇವ ನಮ್ಮವ ಎಂದು ಮಿಡಿವ ಲಿಂಗನುಡಿ ಕೇಳಿಸಿದವನ
        ಇವ ಬರಿ ನಮ್ಮವ ಎಂದು ಮೆರವಣಿಗೆ ಮಾಡುವ
        ಇವನವರವ ಎಂದು ಉರವಣಿಗೆ ಮಾಡುವ ಭೂತಗಳು ಯಾರು

೩. ಕನಕನ ಕಿಂಡಿ

ಕಿಂಡಿ ಕೃಷ್ಣನಿಗಲ್ಲ
ನಿಜ ತೂಗುತಿರುವ ಗರ್ಭಗುಡಿ ತೊಟ್ಟಿಲಕೆ
ಕೃಷ್ಣ ರಂಧ್ರಗಳಿರುವ ಮುಗಿಲ ಬಟ್ಟಲಕೆ
        ಒಳಗಿಂದ ಹೊರಗೆ
        ಹೊರಗಿಂದ ಒಳಗೆ ಆರುಪಾರು
        ಇದು ಕನಕನ ಕಿಂಡಿ
ಎಷ್ಟೊಂದು ಗೋಡೆಗಳು ಮುಚ್ಚಿರುವ ಬಾಗಿಲುಗಳು
ಮಡಿಯ ಕತ್ತಲೆಯೊಳಗೆ ಮಡಿದಿರುವ ನಿಜಗಳು
ಹೆದ್ದಾರಿಯಲ್ಲಿ ಹೆಬ್ಬಾಗಿಲಲ್ಲಿ ಓಡಾಡಿಯು
ಹೆಣವಾಗಿ ಕೊಳೆವ ಸೂತಕಿಗಳು ಪಾತಕಿಗಳು
ಈ ಕಿಂಡಿಯೊಳಗಿಂದಲೆ ಬರಲಿ ಹೊರಗೆ
ಕನಕ ಬಂದದ್ದೇ ಕುರಿಗಳ ಬಿಡುಗಡೆಗೆ
        ಯಾರಿಗೆ ಬೇಕು ಪ್ರವೇಶ ಕೃಷ್ಣಪಕ್ಷದ ಕತ್ತಲೆಗೆ
        ಶುಕ್ಲಪಕ್ಷದ ಬೆಳದಿಂಗಳಿನ ಹಾಲು ಕುಡಿವವರಿಗೆ
        ಕತ್ತಲೆಯ ಕಂಬಳಿ ಮಾಡಿ ಹೊದ್ದವರಿಗೆ
        ಬೆಳಕ ದಾರಿಯ ಗುಂಟ ನಡೆವ ಜಂಗಮರಿಗೆ
ಕಿಂಡಿ ಕೃಷ್ಣನಿಗಲ್ಲ
ಗುಡಿಯ ಗೋರಿಗಳಿಂದ ಹೊರಬರುವ ಜೀವಕ್ಕೆ
ಮೈಮನದ ಗೋಡೆಗಳ ಸೀಳಿ ಒಳಗಿಳಿವ ಬೆಳಕಿಗೆ
ರಾಗಿಯಲ್ಲರಳುವ ನೆಲದ ಅನುರಾಗಕ್ಕೆ.

೪. ಶಬ್ದಗಳು ಸೆರಗು ಹಾಸುತ್ತವೆ

ಶಬ್ದಗಳು ಸೆರಗು ಹಾಸುತ್ತವೆ
ಅರಮನೆ ಅಂತಃಪುರಗಳ ಪಲ್ಲಂಗಗಳ ಮೇಲೆ
ಲಿಂಗ ವಚನಗಳ ಹಂಗಿಲ್ಲದೆ
ಅನಂಗಲೀಲೆಗೆ ಅಂಗ ಚಾಚುತ್ತವೆ
        ಮೀಸೆ ತಿರುವುತ್ತ ಓಡಾಡುವ ದೀರ್ಘ ಒತ್ತಕ್ಷರ ಮಹಾಪ್ರಾಣಗಳು
        ಬಳುಕುತ್ತ ಸಂಚರಿಸುವ ಕಾಗುಣಿತದ ಬಳ್ಳಿಗಳು
        ಅನುಕೂಲಕ್ಕೆ ತಕ್ಕ ಸಂಧಿ ಸಮಾಸಗಳ ಏರ್ಪಡಿಸಿಕೊಂಡು
        ಅಲ್ಪಪ್ರಾಣಗಳಾಗಿ ಸೆರಗು ಹಾಸುತ್ತವೆ
        ಗುಡುಗು ಮಿಂಚುಗಳ ಅಟ್ಟಹಾಸಗೈವ ಮೋಡಗಳು
        ಕರಗಿ ನೀರಾಗಿ ನೆಲಕ್ಕೆ ಒರಗುತ್ತವೆ
ಅರ್ಥಸ್ವಾರ್ಥಗಳ ಸಂತೆಯಲ್ಲಿ ವಾಚ್ಯ ಅನಿರ್ವಾಚ್ಯಗಳ ಬೀದಿಯಲ್ಲಿ
ಕಣ್ಣು ಹೊಡೆಯುವ ಬಣ್ಣ ಬಣ್ಣದ ಹೂಗಳು
ನವರಸದ ಹಣ್ಣುಗಳಾಗಿ ತಕ್ಕಡಿಯಲ್ಲಿ ತೂಗುತ್ತವೆ
ಕೊಂಬು ಕಹಳೆ ಕೊಳಲುಗಳು ಊದುಗೊಳವೆಗಳಾಗಿ
ಒಲೆ ಊದುತ್ತವೆ ಬೇಳೆ ಬೇಯಿಸಲು
        ಅಕ್ಷರ ಪದ ವಾಕ್ಯಗಳಲ್ಲಿ ಸ್ಥಾನಮಾನ ಪಲ್ಲಟಗಳಾಗಿ
        ಕರ್ತೃ ಕ್ರಿಯೆ ಕರ್ಮ ಹಿಂದು ಮುಂದಾಗಿ
        ಮುಕ್ತ ಛಂದದಲ್ಲಿ ಅಲಂಕಾರಗೊಂಡು ಕುಣಿಯುತ್ತವೆ
        ಮೂರು ಕಾಲಗಳಲ್ಲಿ ಕಾಲನೂರುತ್ತ ನೂಪುರದ ದನಿ ಚೆಲ್ಲಿ
        ಬಹುಮಾನಗೊಳ್ಳಲು ಮಾನ ಹಾಸುತ್ತವೆ
ಕತ್ತಲಲ್ಲಿ ಬತ್ತಲಾಗುವ ಹಗಲ ತಾರೆಗಳು
ಮೌನದ ತೆಕ್ಕೆಯೊಳಗೆ ಕವನ ಜೀಕುತ್ತವೆ
ಉಲ್ಕೆಗಳಾಗಿ ಉದುರುವ ವರೆಗೆ
ಬೆದರುಬೊಂಬೆಗಳು ಸೆರಗು ಹಾಸುತ್ತವೆ
ಲಿಂಗಪತಿಗಳ ಎದುರು ಸತಿಯಾಗಿ ಶರಣಾಗತಿಯಾಗಿ
        ಸವ್ಯಗಳ ಹುದ್ದೆಗಳ ಗದ್ದೆಗಳ ಕೊಯ್ಲಿಗೆ
        ಕೈಯ ಚಾಚುತ್ತವೆ ಮೈಯನೊಡ್ಡುತ್ತವೆ
        ಗದ್ಯ ಪದ್ಯ ಎರಡರಲ್ಲೂ ಹೃದ್ಯವಾಗಿ
        ಸಲ್ಲಾಪಗೈದು ಉಲ್ಲಾಸಗೊಂಡು
        ಗದ್ದುಗೆಗಳ ಅಕ್ಕ ಪಕ್ಕ ಮುದ್ದೆಯಾಗಿ ಬೀಳುತ್ತವೆ
ಸೂತಕವಿಲ್ಲದ ಶಬ್ದಗಳು ಬಿದ್ದು ಬಿದ್ದು
ಮತ್ತೆ ಮತ್ತೆ ಮೇಲೆದ್ದು ಹಾರುತ್ತವೆ
ಪಾತರಗಿತ್ತಿಗಳಾಗಿ ಬೇಲಿಯ ಆಚೆ ಈಚೆ
ಸೆಳೆವ ದುಃಶಾಸನರಿಗೆ ಅಕ್ಷಯಾಂಬರವಾಗಿ
ಹಾಸಲಿಕ್ಕೆ ಸೆರಗುಗಳ ನೇಯುತ್ತವೆ
ಸ್ವಯಂ ವಸ್ತ್ರಾಪಹರಣಗೊಂಡು ಸರದಿಗಾಗಿ ಕಾಯುತ್ತವೆ

೫. ಜಾಗ

ಜಗತ್ತಿನ ಜೀವಗಳೆಲ್ಲ
ತಮ್ಮ ನೋವುಗಳನ್ನು ಸುರಿವರೆ
ಹಿಡಿಸಲೆಂದು
ಬಯಲು ಅನಂತವಾಗಿದೆ
    ಹಾಗೆಯೇ ಆ ಜೀವಗಳು
    ತಮ್ಮ ಆನಂದವನ್ನು
    ಸುರಿದರೂ ಜಾಗವಿದೆ
    ಆಕಾಶದಲ್ಲಿ
ನಕ್ಷತ್ರಗಳೇ ನೀವು
ಯಾರ ನೋವಿನ ಕೆಂಡಗಳು
ಯಾರ ಕಣ್ಣೀರ ಮುತ್ತುಗಳು
    ಯಾರ ಆನಂದದ
    ಮಿಣುಕು ಹುಳುಗಳು
    ಯಾರ ಎದೆ ಬೆಳಗುತ್ತಿರುವ
    ದೀಪಗಳು

೬. ಕಣ್ಣಾಲಿ

ಆಕಾಶದ ನೀಲಿ
ಗಡಿಯಲ್ಲ
ಕಣ್ಣು ಹಾಕಿಕೊಂಡ ಬೇಲಿ
    ಅಗಣಿತ ನಕ್ಷತ್ರಗಳ
    ಹಾಲು ಹಾದಿಗಳ
    ಅನಂತ ಕೋಟಿ ಮೈಲಿ
    ದಾಟಿ ಹಬ್ಬಿರುವ ನೀಲಿ
    ಸಣ್ಣ ಕಣ್ಣೊಳಗೆ
    ಮೂಡುತ್ತದೆ
ಅದೆಂಥ ಖಾಲಿ !
ಅದೆಂಥ ಬೇಲಿ !
ಅದೆಂಥ ಕಣ್ಣಾಲಿ !

✣ ಬಸವರಾಜ ವಕ್ಕುಂದ : # ೩೨, ಮಾಲತೇಶ ಬಿಲ್ಡಿಂಗ್, ೧ನೇ ಕ್ರಾಸ್,
ಕೆಲಗೇರಿ ರಸ್ತೆ, ಕುಸುಮನಗರ, ಧಾರವಾಡ-೫೮೦ ೦೦೮ ✣

ಕಿನ್ನೂರಿಯ ಬೆನ್ನೇರಿ...

ಗಿರಿಜಾ ಶಾಸ್ತ್ರಿ

ಕಿನ್ನೂರಿ ನುಡಿಸೋನ ದನಿ ಚೆಂದವೋ
ಕಿನ್ನೂರಿ ನುಡಿಸೋನ ಬೆರಳಿನ ಅಂದಚೆಂದವೋ
    ಚುಕ್ಕಿನುಂಗ್ರಕ್ಕೆ ನಾರಿ ಮನಸೋತಳೋ...
    ಬೆಳ್ಳಿನುಂಗ್ರಕ್ಕೆ ನಾರಿ ಮನಸೋತಳೋ...
ಎಲ್ಲೋ ಜೋಗಪ್ಪ ನಿನ್ ಅರಮನೆ
ಎಲ್ಲೋ ಜೋಗಪ್ಪ ನಿನ್ ತಳಮನೆ
    ಬೆಟ್ಟ ಹತ್ತೋಗಬೇಕು, ಬೆಟ್ಟ ಇಳದೋಗಬೇಕು
    ಅಲ್ಲಾದೆ ಕಣೆ ನನ್ ಅರಮನೆ ಅಲ್ಲಾದೆ ಕಣೆ ನನ್ನ ತಳಮನೆ
    ಎಲ್ಲೋ ಜೋಗಪ್ಪ ನಿನ್ ಅರಮನೆ...
ಹಾರ್ವಾರ ಕೇರಿಯ ದಾರಿ ಪಡಸಾಲೆ ಮೇಲೆ ಲೋಲೋಕ್ಕಿ ನುಡಿಸೋನೇ
ಮೊಗ್ಗಾಗಿ ಬಾರೋ ತುರುಬೀಗೇ...
ಎಲ್ಲೋ ಜೋಗಪ್ಪ ನಿನ್ ಅರಮನೆ...
    ಎಳ್ಳೀನ ಹೊಲವ ಬಿಟ್ಟೆ, ಒಳ್ಳೇಯ ಗಂಡನ್ ಬಿಟ್ಟೆ
    ಕಳ್ಳಾದ ಜೋಗಿ ಕೂಡೆ ಹೋಗಬುಹುದೇ... ನಾರಿ
    ಎಲ್ಲೋ ಜೋಗಪ್ಪ ನಿನ್ ಅರಮನೆ...
ನಿನ್ನಾ ಕಂಡಾಗಲೆನ್ನ ಕಣ್ಣೂರಿ ಕಾಣೋ ಜೋಗಿ
ನಿನ್ನಲ್ಲಿ ನನಗೆ ಮನಸಾದೆ
ಎಲ್ಲೋ ಜೋಗಪ್ಪ ನಿನ್ ಅರಮನೆ...

ಎಲ್ಲಾನು ಬಿಟ್ಟು ಮ್ಯಾಲೆ ನನ್ನನ್ಯಾಕೆ ಬಿಡಾಪ್ಲೊಲ್ಲೆ
ನಿನ್ನಲ್ಲಿ ನನಗೆ ಮನಸಾದೆ
ಎಲ್ಲೋ ಜೋಗಪ್ಪ ನಿನ್ ಅರಮನೆ...
ನನ್ನ ತೋಳಲ್ಲಿ ನಿನ್ನ ಕಿನ್ನೂರಿ ಮಾಡಿಕೊಂಡು
ಚಂದದ ಪದವ ನುಡಿಸೇನು... ನಾರಿ
ಎಲ್ಲೋ ಜೋಗಪ್ಪ ನಿನ್ ಅರಮನೆ...

ಮಾಯದಂಥ ಮಳೆ ಬಂದ ಕಾಲಕ್ಕೆ ಗಂಗಮ್ಮ ತಾಯಿಗೆ ನೆರೆಬಂದಂತೆ ಬರುವ ಈ ಕಿನ್ನರಿಯ ದಾಪುಗಾಲಿನ ಧಾವಂತದ ಮುಂದೆ ಯಾರ ಜೋರೂ ನಡೆಯುವುದಿಲ್ಲ. ಇದು ಬರುವ ರಭಸಕ್ಕೆ ಜಾತಿ, ಲಿಂಗ, ಪ್ರಾದೇಶಿಕತೆಗಳ ನಡುವಿನ ಎಲ್ಲ ಗೋಡೆಗಳು ರಟ್ಟಿನ ಕಟ್ಟಡಗಳಂತೆ ಉರುಳಿಬಿದ್ದು ಹೋಗಿಬಿಡುತ್ತವೆ. ಈ ಕಿನ್ನರಲೋಕದ ಕಿನ್ನರಿಬೊಮ್ಮನಹಳ್ಳಿಯ 'ಚಿನ್ನಾ'ರನ್ನು ಮಾತ್ರ ಅಪಹರಿಸುವುದಿಲ್ಲ. ಬದಲಾಗಿ, ಕನಸಿನ ಹಾದಿಯಲ್ಲಿ ನಡೆಯುವ ಎಲ್ಲರ ಮನೋಮಯ ಕದವನ್ನು ತಟ್ಟಿ ಕಳ್ಳ ಹೆಜ್ಜೆಯಲ್ಲಿ ಒಳಬಂದು ತಾವೂರಿ ಕಾವೂರಿ ಬಾಯಾರಿ ಕಾಯುತ್ತವೆ. ಕಳೆದ ವಯಸ್ಸು ಉಳಿದ ಆಯುಸ್ಸುಗಳೆರಡೂ ಮರೆತುಹೋಗಿಬಿಡುತ್ತವೆ.

ಹೀಗೆ ಮನೋಮಯ ಕೋಶದೊಳಗ ಬಂದು ಹೆಜ್ಜೆಗೆ ತತ್ತಿ ಇಡಲು ಪ್ರಾರಂಭಿಸುವ ಇದು ಅನ್ನಮಯ ಕೋಶದ ತೆಕ್ಕೆಗೆ ಸುಲಭವಾಗಿ ದಕ್ಕಿಬಿಡುವುದಿಲ್ಲ. ಪಂಚವಟಿಯ ಆಶ್ರಮದ ಬೇಲಿಯ ಹೊರಗೇ ನಿಂತು ತನ್ನ ಅಲೌಕಿಕ ಸೌಂದರ್ಯದಿಂದ ಕಣ್ ಮನ ಸೆಳೆಯುವ ಇದು ನಮ್ಮ ಸುತ್ತಿ ಸುತ್ತಿ ಸುಳಿದು ಕೊನೆಗೂ ಕೈಗೆ ಹತ್ತದೇ ಹೋಗುವ ಮಾಯಾ ಜಿಂಕೆ. ಇನ್ನೇನು ಹಿಡಿದೇ ಬಿಟ್ಟೆವೆಂದುಕೊಂಡಾಕ್ಷಣವೇ ನುಣುಚಿಕೊಂಡುಬಿಡುವ 'ಬಿಟ್ಟೇ ಬಿಟ್ಟೆ'ನೆಂದರೂ ಬೆಂಬಿಡದು ಈ ಮಾಯಾ ಕಿನ್ನರಿಯ ಮಾಯೆ. ಒಂದನ್ನು ಹಿಡಿಯಹೋದರೆ ಮತ್ತೊಂದು, ಮಗುದೊಂದು ಹೀಗೆ ಒಂದಕ್ಕಿಂತ ಒಂದು ಆಕರ್ಷಕವಾಗಿ ಸೆಳೆಯುವ, ಕೈಗೆ ಹತ್ತಿತೆಂದುಕೊಳ್ಳುವುದರಲ್ಲಿಯೇ 'ಘೂಲಿಕೆಂಡವಾಗಿ' ಬಿಡುವ ಈ ಬಂಗಾರ ಕಿನ್ನರಿ, ಒಳಗೆ ಬಂದು ತತ್ತಿ ಇಡುವ ತನಕ ತನ್ನ ಸುಳಿವನ್ನೇ ಕೊಡದು. ನಮ್ಮ ಸಾಮಾಜಿಕ ನಿಷ್ಠುರ ನಿಯಮಗಳ ತೆಕ್ಕೆಗೆ ಬಗ್ಗದ ಇದು, ಇದೆ ಎನ್ನುವುದು ನಿಜ. ಇದು ಇರಬೇಕೋ ಬೇಡವೋ ಎನ್ನುವ ಪ್ಯೂರಿಟಾನ್ ಚಿಂತನೆಗಳಿಗಿಂತ ಇದು ಯಾಕೆ ಇದೆ ಎನ್ನುವುದೇ ಮುಖ್ಯ. ಇದರ ಪರಿಭ್ರಮಣದಲ್ಲಿಯೇ ಬಹುಶಃ ಬದುಕು ಕಳೆಯುತ್ತಿರುವುದರ ಅರಿವೇ ಆಗದೆ ಕಳೆದುಹೋಗಿ ಬಿಡುತ್ತದೆ. ಇದರ ಅಂತಿಮ ಶೋಧದಲ್ಲಿ ಶರೀರದ ಜೊತೆಗೆ ಈ ಕಿನ್ನರಿಯೂ ದಫನ್ ಆಗಿಬಿಡುತ್ತದೆ– ಅದರ ಕನಸುಗಳ ಕೊನೆಗೆ. ಈ ಕಿನ್ನರಿಯ ಹಿಂಬಾಲಿಸಿ ಹೋಗಲು, ಏಳೇಳು ಬೆಟ್ಟ ಹತ್ತಿ ಹೋಗುವ, ಸಪ್ತ ಸಮುದ್ರಗಳನ್ನು ದಾಟುವ ಎಂಟೆದೆ ಬೇಕು.

ಮನುಷ್ಯ ಸಮಾಜದ ಹಿಂದಿನ ಅಖಂಡವಾದ 'ಏಕ' ತತ್ವದ ಮಾನವತಾವಾದಿ ರೂಪಕ್ಕೆ ಕಾಲಾನುಕ್ರಮದಲ್ಲಿ ಅನೇಕ ಉಳಿಪೆಟ್ಟುಗಳು ಬಿದ್ದು ಅವು ಛಿನ್ನಾಛಿದ್ರವಾಗಿ ಸಾವಿರ ಹೋಳುಗಳಾಗಿ ಒಡೆದು ಹೋದ ಹೊತ್ತಿನಲ್ಲಿಯೇ ಬಹುಶಃ ಈ ಕಿನ್ನರಿಯ ಆಲಾಪನೆ ಪ್ರಾರಂಭವಾಗಿರಬಹುದು. ಏಕೆಂದರೆ ಹೀಗೆ ಛಿದ್ರವಾಗಿ ಸಿಡಿದುಹೋಗುವ ಹೋಳುಗಳಿಗೆ ತಮ್ಮದೇ ಆದ ಗೂಡು ಕಟ್ಟಿಕೊಳ್ಳುವ ಬಯಕೆ ಮೊಳಕೆಯೊಡೆಯುತ್ತದೆ. ಆಗ 'ಮನೆ ಮನೆಗೆ ಬೇಲಿ... ಮನ ಮನಕೆ ಬೇಲಿ'ಗಳು ಏಳುತ್ತವೆ. ಒಂದು ಎರಡಾಗುತ್ತಾ ಹೀಗೆ ಏಳುವ ಕಳ್ಳಿ(ಳ್ಳ)ಬೇಲಿಗಳ ನಡುವಿನ 'ಒಳ' ಹಾಗೂ 'ಹೊರ' ಪ್ರಪಂಚಗಳು ಅಪರಿಚಿತವಾಗಿಬಿಡುತ್ತವೆ. ಇಲ್ಲಿ ಒಂದಕ್ಕೆ ಇನ್ನೊಂದನ್ನು ಸದಾ ಅಧೀನದೊಳಗೆ ಇಟ್ಟುಕೊಳ್ಳುವ ತವಕ. ಇಂತಹ ಅಧೀನತೆಯಿಂದ ಪರಸ್ಪರ ಪಾರಾಗ ಬೇಕೆಂಬ ಮೂಗುಬ್ಬಸದ ಗಳಿಗೆಗಳಲ್ಲಿ ಕಿನ್ನರಿ ಹೊರಗಿನಿಂದ ಬಂದು ಕಿಟಕಿ ಬಾಗಿಲುಗಳನ್ನು ತೆರೆಯುತ್ತದೆ. ಅರಮನೆ, ಗುರುಮನೆಗಳು ಬರಬರುತ್ತಾ ಸೆರೆಮನೆಗಳಾಗಿ ಬಿಟ್ಟ ಹೊತ್ತಿನಲ್ಲಿ ಅದರ ಸಲಾಕೆಗಳ ಹೊರಗೇ ನಿಂತು ಮೋಹನರಾಗವನ್ನು ನುಡಿಸುವ ಇದಕ್ಕೆ ಕೂಡ

'ಜೊಮ್ಮನಹಕ್ಕಿಯ' ಸರಪಳಿಯೊಳಗೆ ಬರುವ ತವಕ. ಜೊಮ್ಮನಹಕ್ಕಿಯು 'ಜಿಣ್ಣರಿ'ಗೋ ಕಿಟಕಿ ಸಲಾಕೆಗಳ ಹಾರಿ ಕಿನ್ನರಿಯ ಹಿಂದೆ ಓಡುವ ಅವಸರ. ಕಿನ್ನರಿ ಹಾಗೂ 'ಜಿಣ್ಣರ' ಮಧ್ಯೆ 'ಭೇದವಲಿ ಹೊಕ್ಕಿರಿಯುವ' ಪ್ರಭುತ್ವದ ಅಧಿಕಾರಕ್ಕೆ ಮಾತ್ರ ಎರಡನ್ನೂ ತನ್ನ ನಿಯಂತ್ರಣದೊಳಗೆ ಇಟ್ಟುಕೊಳ್ಳುವ ದಾಹ. ಹಾಗಾಗಿ ತನ್ನನ್ನು ತೂತು ಕೊರೆದು ಪೊಳ್ಳು ಮಾಡುವ ಮೂಷಕಗಳನ್ನೂ ಹಾಗೂ ಕಿನ್ನರಿಯನ್ನೂ ಏಕಕಾಲಕ್ಕೆ ಒಂದೇ ಏಟಿಗೆ ನಾಶಮಾಡುವ ಹುನ್ನಾರವನ್ನು ಈ ಪ್ರಭುತ್ವದ ಅಧಿಕಾರವೆಂಬುದು ಸೃಜಿಸುತ್ತಲೇ ಇರುತ್ತದೆ. ಮತ್ತು ಸಂಪೂರ್ಣ ಕ್ರಾಂತಿ ಆಗುಮಾಡದ ಹಾಗೆ ಸದಾ ಎಚ್ಚರಿಕೆ ವಹಿಸುತ್ತಿರುತ್ತದೆ.

ಈ ಕಿನ್ನರಿಯ ಆಲಾಪಕ್ಕೆ ಸಾವಿರ ಸಾವಿರ ವರುಷಗಳ ಇತಿಹಾಸವಿದೆ. ಸೀತಾಯನದ ಹಾದಿಯಲ್ಲಿಯೇ ಇದರ ಹೆಜ್ಜೆ ಗುರುತುಗಳನ್ನು ಕಾಣಬಹುದಾಗಿದೆ. ಇಲ್ಲಿ ಗೌತಮ ಮಹಾಮುನಿಯ ಶಾಪದಿಂದ 'ಜಡರೂಪದಿಂ ನಿಷ್ಠುರ ಶಿಲಾತಪಸ್ವಿನಿಯಾಗಿ, ಕನಿಕರದ ಕಣ್ಗೆ ಬಾಹಿರೆಯಾಗಿ, ಜಗದ ನಿರ್ದಾಕ್ಷಿಣ್ಯ ವಿಸ್ಮೃತಿಗೆ ತುತ್ತಾಗಿ ವಜ್ರಮೌನ'ವನ್ನು ಧರಿಸಿದ ಅಹಲ್ಯೆ ಇನ್ನೂ ಪ್ರೇತದಂತೆ ಊಳಿಡುತ್ತಲೇ ಇದ್ದಾಳೆ (ಶ್ರೀರಾಮಾಯಣ ದರ್ಶನಂ). ಕಿನ್ನರಿಗೆ ಒಲಿದ ದಂಡವನ್ನು ತೆರುತ್ತಲೇ ಇದ್ದಾಳೆ. 'ಕರುಣಾಳು ರಾಘವನಲಿ ಇನಿತು ತಪ್ಪಿಲ್ಲ' ಅನ್ನುವ ಜಾನಕಿಯೇ ಸೀತಾಯನದ ನಾಯಕಿಯಾಗಿ ರಾವಣನ ಚಿತ್ರವನ್ನು ಪಟದ ಮೇಲೆ ಬಿಡಿಸುತ್ತಾಳೆ. ಕುಂತಿ ಬುಟ್ಟಿಯಲ್ಲಿಟ್ಟ ಹಸುಳೆ ಕಂದನನ್ನು ಗಂಗೆಗೆ ಅರ್ಪಿಸುತ್ತಾಳೆ. ದ್ರೌಪದಿ ಅವಳ ಒಳಗಿನ ಕಿನ್ನರಿಯನ್ನು ಹೊರಗೆಡಹದೇ ಮರದಿಂದ ಬಿದ್ದ ಹಣ್ಣು ಮತ್ತೆ ಮರ ಸೇರಲೊಲ್ಲದು. ಋಷಿಯ ಶಾಪದಿಂದ ಮುಕ್ತಿ ಸಿಗಲೊಲ್ಲದು. ಅಹಲ್ಯೆಯೊಳಗೆ ಒಬ್ಬ ಇಂದ್ರ, ಸೀತೆಯೊಳಗೊಬ್ಬ ರಾವಣ, ಕುಂತಿಯೊಳಗೊಬ್ಬ ಸೂರ್ಯ, ದ್ರೌಪದಿಯೊಳಗೊಬ್ಬ ಕರ್ಣ: ರಾಧೆಯೊಳಗೆ, ಅಸಂಖ್ಯಾತ ಗೋಪಿಯರೊಳಗೊಬ್ಬ ಕೃಷ್ಣ– ಹೀಗೆ ಈ ಎಲ್ಲ ಹೆಣ್ಣುಗಳೊಳಗೊಂದು ಅನ್ಯಕ್ಕೆ ತುಡಿಯುವ ಅವಸರವಿದೆ. 'ಮನೆಯ ಹೊರೆಗೆಲಸವನ್ನು, ಪಕ್ಕದ ಗಂಡನ್ನು, ತೊಟ್ಟಿಲಿನ ಹಸುಗೂಸನ್ನು' ಎಲ್ಲವನ್ನು ತೊರೆದು ಬೃಂದಾವನಕೆ 'ತ್ವರೆ' ಮಾಡುವ, ಅದಮ್ಯ ಶಕ್ತಿಯ ಜಾಲವನ್ನು ಈ ಮಾಯಾಕಿನ್ನರಿ ಎಲ್ಲ ಅಸಹಾಯಕರ ಮನದ ಮುಂದೆ ಬೀಸಿ ಬಿಗಿಯುತ್ತದೆ.

ಕಿನ್ನರಿಯ ಸಂಗೀತಕ್ಕೆ ರಾಜಾರೋಷವಾಗಿ ಒಲಿದು, 'ಎಳ್ಳು ಹೊಲವನ್ನು, ಒಳ್ಳೆಯ ಗಂಡನನ್ನು' ಬಿಟ್ಟು ಕಿನ್ನರಿಯ ಮೈಯೊಳಗೆ 'ಪೊಲ್ಲಮೆಯೇ ಲೇಸೆಂದು' ಹೊರಟ ಅಮೃತಮತಿಗೆ ಅಷ್ಟಾವಂಕನ ಹಾಡು 'ಕೃತಕ ಬೀಜವಾಗಿ ಕಾಡುತ್ತದೆ'. 'ಅರಸನಂಬ ಪಾತಕನ್ ಕೇಳಿಕೆಯಾದು ತಿರ್ದಪೆ' (ಯಶೋಧರ ಚರಿತೆ) ಕೇವಲ ಸಾಕ್ಷಿಭಾವದಿಂದ ನೋಡುವ ಅವಳು, ಗಂಡನ ತೋಳ್ಸೆರೆಯಿಂದ ನುಸುಳಿಕೊಂಡು 'ಒಲಿವಾದಡೆ ರೂಪಿನ ಕೋಟಲೆ ಏವುದೋ' ಎನ್ನುತ್ತಾ ತನ್ನ ನಲ್ಲನೆಡೆಗೆ ಧಾವಿಸುತ್ತಾಳೆ. ಗೂನು ಬೆನ್ನಿನ ಬದಗನೇ ಅವಳಿಗೆ 'ಇಂದ್ರ, ಚಂದ್ರ, ದೇವೇಂದ್ರ'. ಅವನ ಕಾಲಬುಡದಲ್ಲಿ ಕೇರೆ ಹಾವಿನಂತೆ ಹೊರಳುವ ಇವಳ ಭವಿಷ್ಯ ಇನ್ನೂ ಭೀಕರವಾದುದು. 'ಕುಲಟೆ, ಪಾತಕಿ, ಹಾಣ್ಮೆಯಾಗಿ, ನಾಯಿ' ನರಿಯಾಗಿ ಇವಳು 'ಧೂಮಪ್ರಭೆ'ಯೆಂಬ ನರಕದೊಳಗೆ ಹೋಗಿಬೀಳುತ್ತಾಳೆ.

ಈ ಕಿನ್ನರಿಯ ಶಕ್ತಿಗೆ ಒಡೆತನ ಹಾಗೂ ಅಧಿಕಾರವನ್ನು ನಿರಾಕರಿಸುವ ತಾಕತ್ತಿದೆ. ಇದು ಅಧಿಕಾರದ ಆಮಿಷಗಳನ್ನು ಮೀರುವ ಸಾಧನ ಕೂಡ ಹೌದು. ಇದನ್ನು ಕಟ್ಟಿಹಾಕಲು ಸಾಧ್ಯವಿಲ್ಲ. ಕಟ್ಟಿಹಾಕಲು ಹೋದರೆ ಅವು ನಿಯಂತ್ರಣ ಮೀರಿ ಹಾರಿ ಹೋಗುತ್ತವೆ. ಇಲ್ಲವಾದರೆ ಒಳಗೇ 'ವಿವಾಹವೆಂಬ ನರಕ'ದೊಳಗೇ ನರಳುತ್ತವೆ. ಕೇವಲ ಕೌಟುಂಬಿಕ ಅಗತ್ಯಗಳು, ವಂಶಾಭಿವೃದ್ಧಿಯ ಪರಿಕಲ್ಪನೆಗಳು, ಗಂಡು ಹೆಣ್ಣುಗಳ ನಡುವಿನ ಸಹಜವಾದ ಒಲವು ಅನುರಾಗಗಳ ಮೇಲೆ ಸವಾರಿ ಮಾಡುತ್ತಿರುವುದರಿಂದಲೇ, ಬೇಲಿಯೊಳಗೆ ಅನೇಕ ನರಕಗಳು ಸೃಷ್ಟಿಯಾಗಿವೆ. ಈ ನರಕವನ್ನು ಸೃಷ್ಟಿ ಮಾಡಿರುವವರೂ ನಾವೇ. ಅದಕ್ಕೆ ತಕ್ಕಾಗಿ ಅದರೊಳಗೆ

ಸಿಕ್ಕಿ ನರಳುತ್ತಿರುವವರೂ ನಾವೇ. ಅದರಿಂದ ಬಿಡುಗಡೆ ಹೊಂದಬೇಕಾದವರೂ ನಾವೇ. ಇಲ್ಲದಿದ್ದರೆ 'ಕಿನ್ನೂರಿ'ಯ ಬೆನ್ನುಹತ್ತಿ ಹೋಗುವ ಹಂಬಲಕ್ಕೆ ಸಾಮಾಜಿಕ ನ್ಯಾಯ ದೊರಕಿಸಿ ಕೊಡಬೇಕಾಗಿದೆ. ಈ 'ಕಿನ್ನೂರಿ'ಯ ಮಲಯ ಮಾರುತ ರಾಗದಲ್ಲಿ ನಮ್ಮ ಇತಿಹಾಸ, ಪುರಾಣ, ಸಾಹಿತ್ಯದ ಪುಟಗಳೆಲ್ಲ ಸೂತ್ರ ಹರಿದುಕೊಂಡ ಗಾಳಿ ಪಟಗಳಾಗಿ ಹಾರಿ ಹೋಗಿರುವುದನ್ನು ನಾವು ಕಾಣಬಹುದಾಗಿದೆ. ಈ ಪುಟಗಳಲ್ಲಿ ಎಲ್ಲ ಹೆಣ್ಣಿಗೆ ಇರುವಂತೆ, ಎಲ್ಲಾ ಗಂಡಿಗೂ ಕಿನ್ನರಿಯ ಕನಸೊಂದಿದೆ.

ಹಾರ್ವಾರ ಕೇರಿಯ ದಾರಿ ಪಡಸಾಲೆ ಮೇಲೆ ಲೋಲೋಕ್ಕಿ ನುಡಿಸುವ ಕಿನ್ನರಿ :

ಈ ಕಿನ್ನರಿ ಹಾರವರ ಕೇರಿಯ ಮೇಲೇ ಸುಳಿಯುವುದು ಹೆಚ್ಚು. ಯಾಕೆಂದರೆ, ಈ ಕೇರಿಯೊಳಗಿನ ಬದುಕೆಂಬುದು 'ಜಗುಲಿ', 'ಅಡುಗೆಕೋಣೆ', 'ನಡುಮನೆ', 'ಓತ್ತಲು'ಗಳೆಂಬ ಕಂಪಾರ್ಟ್‌ಮೆಂಟುಗಳೊಳಗೆ ಛಿದ್ರವಾಗಿ ಚೆಲ್ಲಿಹೋಗಿದೆ. ಅಲ್ಲಿ ಅಡುಗೆಕೋಣೆಯ ದನಿಗಳಾಗಲೀ, ಓತ್ತಲಿನ ವ್ಯಸ್ತತೆಯಾಗಲೀ ಜಗುಲಿಯ ಅಬ್ಬರದೊಳಗೆ ಕರಗಿಹೋಗಿವೆ. ಅವು ಪರಸ್ಪರ ಸಂಪರ್ಕವನ್ನು ಕಡಿದುಕೊಂಡುಬಿಟ್ಟಿವೆ. ಹಾರವರ ಕೇರಿಯ, ಅಗ್ರಹಾರದ ದೊಡ್ಡ ದೊಡ್ಡ ಅಂಕಣಗಳ, ದಪ್ಪ ದಪ್ಪ ತೊಲೆ ಕಂಭಗಳ, 'ತೊಟ್ಟಿಮನೆ'ಗಳಲ್ಲಿ ಹೊರಗಿನ ಬೆಳಕನ್ನು ಒಳಬಿಡದ ಕಿರಿದಾದ ಕಿಂಡಿಗಳಂತಹ ಕಿಟಕಿಗಳಿವೆ. ಸ್ವಲ್ಪ ತಲೆಯೆತ್ತಿ ನಡೆದರೂ ಸಾಕು ಢಿಕ್ಕಿ ಹೊಡೆಯುವ ಗಿಡ್ಡ ಬಾಗಿಲುಗಳಿವೆ. ಬಾಣಂತಿಕೋಣೆ, ಮುಟ್ಟಿನ ಕೋಣೆಗಳಲ್ಲಿ 'ಸೀತಕ್ಕ, ಯಮುನಕ್ಕ, ಫಣಿಯಕ್ಕ, ಶಾರದೆ, ಭಾಗೀರಥಿಯರು', 'ಮೂಕಜ್ಜಿಯರು' ಉಸ್... ಎನ್ನುವ ನಿಟ್ಟುಸಿರು ಕಿವಿಗೊಟ್ಟು ಆಲಿಸಿದವರಿಗೆ ಮಾತ್ರ ಕ್ಷೀಣವಾಗಿ ಕೇಳಿಸುತ್ತದೆ. ಗಂಡ ಹೆಂಡಿರ ಪಿಸುಮಾತುಗಳನ್ನು, ಕತ್ತಲ ವಾಸನೆ ಸೂಸುವ ಕಿರಿದಾದ ಮಲಗುವ ಕೋಣೆಗಳ ಆಚೆ ಅಂಟಿಕೊಂಡು ಕೇಳುತ್ತಿರುವ ಜಾಗರೂಕ ಕಿವಿಗಳಿವೆ. ಖಾಸಗಿತನಕ್ಕೆ ಎಡೆಯೇ ಇಲ್ಲದಂತೆ ಗೋಡೆಗಳಿಗೂ ಕಿವಿ ಕಣ್ಣುಗಳಿರಬಹುದೆಂಬ ಶಂಕೆಯಲ್ಲಿ ರತಿವಿಲಾಸಗಳೆಲ್ಲಾ ಕಲೆಯಾಗದೇ ಕತ್ತಲೆಯಲ್ಲಿಯೇ ಕರಗಿಹೋಗುವ ಬಲೆಯಾಗಿದೆ. ಆದರೆ ಯಮುನಕ್ಕ, ಫಣಿಯಕ್ಕ, ಮೂಕಜ್ಜಿಯಂತಹವರಿಗೆ ಕತ್ತಲೆಯಲ್ಲಿ, ಕಳ್ಳತನದಲ್ಲಿಯಾದರೂ ನರಳುವ ಸೌಭಾಗ್ಯವು ಇಲ್ಲವಾಗಿದೆ. ಫಣಿಯಮ್ಮ ಜೋಗಿಯ 'ಕಿನ್ನೂರಿ'ಯನ್ನು ಕೇಳಿಸಿಕೊಳ್ಳದವಳಂತೆ ಜಾಣಕಿವುಡು ನಟಿಸಿ ಬೇಲಿಯೊಳಗೇ ಕರಗಿ ಪಾರಾಗಿದ್ದಾಳೆ. ಅದೇ ಯಮುನಕ್ಕ ಕಿನ್ನರಿಗೆ ಒಲಿದರೂ ಬೇಲಿ ದಾಟುವ ಕ್ಷಣದಲ್ಲಿ ಸಿಕ್ಕಿಬಿದ್ದಿದ್ದಾಳೆ. ಮೂಕಜ್ಜಿ ಪಿಟಿ ಪಿಟಿ ಮಂತ್ರದ ಅತೀಂದ್ರಿಯ ವಿಲಕ್ಷಣತೆಗೆ ಗುರಿಯಾಗಿದ್ದಾಳೆ. ಹೀಗೆ ಫಣಿಯಮ್ಮ, ಯಮುನಕ್ಕ, ಮೂಕಜ್ಜಿ ಈ ಎಲ್ಲರೂ ಬೇರೆ ಬೇರೆ ಕಾರಣಕ್ಕಾಗಿ ಕ್ಷೌರಿಕನ ಕತ್ತಿಗೆ ತಮ್ಮ ತಲೆಗಳನ್ನು ಒಡ್ಡಿದ್ದಾರೆ. ತಮ್ಮ ಬೇಲಿಯೊಂದರ ಸರಹದ್ದನ್ನು ದಾಟಿದಾಕ್ಷಣ ಯಮುನಕ್ಕನಂತಹವರಿಗೆ ಸಿಕ್ಕಿಬೀಳುವುದು ನಿರಾತಂಕ ಬಯಲಲ್ಲ. ಬದಲಾಗಿ ಮತ್ತೊಂದು ದುರ್ಗಮವಾದ ಮುಳ್ಳುಬೇಲಿಯೊಳಗಿನ ಬದುಕು. ಈ ಬೇಲಿಯೊಳಗಿನ ಬದುಕಿಗೆ ಸಾದೃಶ್ಯವಾಗಿ 'ವೈಶಾಖ'ದ ರುಕ್ಮಿಣಿ ಕೊನೆಗೆ ಐಕ್ಯವಾಗಿಬಿಡುವ ಚಿತ್ರಮೂಲಿನ ಕೋಟೆ ಅದ್ಭುತ ಪ್ರತೀಕವಾಗಿ ಕೆಲಸ ಮಾಡುತ್ತದೆ.

ಈ ಬೇಲಿಯೊಳಗಿನ ಬಲೆಯೊಳಗೆ ಗಂಡಹೆಂಡಿರು ಹಗಲಲ್ಲಿ ಅಪರಿಚಿತರಾಗಿ, ಇರುಳಲ್ಲಿ ಕಳ್ಳರಾಗಿ, ಇರುಳು ಹಗಲುಗಳ ವೇಷಧಾರಿಗಳಾಗಿ ಡಬಲ್ ಆ್ಯಕ್ಟಿಂಗ್ ಮಾಡುತ್ತಾ ಕಳೆದು ಹೋಗುವ ಜೀವನವೆಂಬುದು ನಮ್ಮ ಸಂಸ್ಕೃತಿ ನಮಗೆ ನೀಡಿದ ವರಪ್ರಸಾದ. ಪ್ರತಿರಾತ್ರಿ ಬೇಲಿ ನೆಗೆದು ಹಾರಿ ಹೋಗಿ ಸೂಳೆಯೊಬ್ಬಳ ತೆಕ್ಕೆಯಲ್ಲಿ ಕಾಲ ಕಳೆಯುವ 'ಅಪ್ಪಣ್ಣ' (ನಾಗಮಂಡಲ), ತನ್ನ ಹೆಂಡತಿ ರಾಣಿಯನ್ನು ಒಳಗೆ ಕೂಡಿಹಾಕಿ ಬಾಗಿಲಿಗೆ ಬೀಗ ಜಡಿದು, ಬೇಲಿಯ ಕಾವಲಿಗೆ ನಾಯಿಯೊಂದನ್ನು ಕಟ್ಟಿಹಾಕಿ ಅವಳನ್ನು ಕಾಯುತ್ತಾನೆ. ಆದರೆ ರಾಣಿಯಾದರೋ ಬೇಲಿಯಾಚೆಗೆ ಕಣ್‌ಸನ್ನೆ ಮಾಡುವ 'ಕಿನ್ನೂರಿ'ಯನ್ನು ಒಳಕರೆದು ತಲೆಯಲ್ಲಿ 'ಮೊಗ್ಗಾಗಿ ಮುಡಿಯುತ್ತಾಳೆ'. ಆ ಪಾಪಕ್ಕೆ ಅವಳು 'ನಾಗನ ದಿವ್ಯ'ಕ್ಕೆ ಒಳಗಾಗಬೇಕಾಗುತ್ತದೆ.

ಎಲ್ಲಾನು ಬಿಟ್ಟ ಮೇಲೆ ನನ್ನನ್ಯಾಕೆ ಬಿಡಾವ್ರೊಲ್ಲೆ...

ಭವಿಯೊಡನೆ ದೇಹಸಾಂಗತ್ಯಕ್ಕೆ ಹಾತೊರೆದು ಕಿನ್ನರಿಗೆ ಒಲಿದ ಮೇಲಿನ ಈ ಎಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಸಾಮಾಜಿಕ ದಂಡವನ್ನು ತೆತ್ತಿದ್ದಾರೆ. ಯಾಕೆಂದರೆ ಇವರಿಗೆ ಪಾರಾಗಲು ಯಾವ 'ಚೆನ್ನಮಲ್ಲಿಕಾರ್ಜುನನ' ಆತ್ಮಸಾಂಗತ್ಯವೂ, ಯಾವ 'ಗಿರಿಧರ ನಾಗರನ' ಪ್ರೇಮವೂ ರಕ್ಷಣೆಗೆ ಬರದಾಗಿದೆ. ಭವಿಯೊಡನೆ ಸಾಂಗತ್ಯವೆಂಬುದೇ, ಬಾಣಲೆಯಿಂದ ಬೆಂಕಿಗೆ ವರ್ಗಾವಣೆಯಾಗುವಂತಹುದು. ಒಂದು ಬೇಲಿಯ ಸರಹದ್ದನ್ನು ದಾಟಿದರೆ ಮತ್ತೊಂದು ಬೇಲಿಯೊಳಗಿನ ಬಂಧನಕ್ಕೆ ಎಡೆಮಾಡಿಕೊಡುವಂತಹದು. ಸಾವ ಕೆಡುವ ಅಂತಹ ಮದುವೆಗಳಿಗೆ, ಸಂಬಂಧಗಳಿಗೆ ಕೊನೆಯೆಂಬುದಿದೆ. ಅಕ್ಕನಿಗಾದರೋ ನಿರಂತರವಾದ ಸಾಂಗತ್ಯ ಬೇಕಾಗಿದೆ. ಲೌಕಿಕದಲ್ಲಿ ಕೌಶಿಕನಿಂದ ನಿರಾಕರಿಸಿದುದನ್ನು ಪಾರಮಾರ್ಥದ ನೆಲೆಯಲ್ಲಿ ಶಿವನಿಂದ ಬಯಸುತ್ತಾಳೆ. 'ಹರನೊಡನೆ ಹಾದರವ ಮಾಡಿದೆ'ನೆಂದು ಹೇಳಿಕೊಳ್ಳುವ ಅವಳಿಗೆ ಮೈಮೇಲಿನ ಸೆರಗೂ ಕೂಡ ವ್ಯವಸ್ಥೆ ಅವಳ ಮೇಲೆ ಹರಡಿದ ಹುನ್ನಾರವಾಗಿ ಕಂಡಿದೆ. ಕೇವಲ 'ಚೆನ್ನಮಲ್ಲಿಕಾರ್ಜುನನ ಬೆಳಕನುಟ್ಟು ಲಜ್ಜೆಗೆಟ್ಟವಳು' ಅವಳು. ಕಾಡುಮೇಡುಗಳಲ್ಲಿ ಗಿರಿಗಹ್ವರ, ನದಿಸರೋವರಗಳಲ್ಲಿ, ಖಗ ಮೃಗಗಳಲ್ಲಿ ಬಿಳಿಮಲ್ಲಿಗೆಯನ್ನು ಅರಸುತ್ತಾ ಹೊರಟುಬಿಡುತ್ತಾಳೆ. ಯಾಕೆಂದರೆ, ಈ ಮಲ್ಲಿಗೆಯನ್ನು ಸೂಸುವ ಸುಗಂಧಕ್ಕಾಗಲೀ, ತಳಿತ ಮಾಮರದಲ್ಲಿ ಸ್ವರಗೈಯುವ ಕೋಗಿಲೆಗಳಿಗಾಗಲೀ, 'ಸರವರದೊಳಗಾಡುವ' ಅಂಚೆಗಳಿಗಾಗಲೀ, ಹುಳಿ ನೀರಿನ ಈಳೆ, ನಿಂಬೆ, ಮಾವು, ಮಾದಲಕ್ಕಾಗಲೀ ಯಾವ ಬಂಧನವೂ ಇಲ್ಲ. ಯಾವ ಅಧಿಕಾರವೂ ಅವುಗಳನ್ನು ಬಂಧಿಸಲಾರದು. 'ಗಾಳಿ ಹೆಜ್ಜೆ ಹಿಡಿದು' ಬರುವ ಅವುಗಳ ಸುಗಂಧ ಯಾರ ಅಧೀನತೆಗೂ ಒಳಪಟ್ಟುದಲ್ಲ. ಇಂತಹ ಪ್ರಕೃತಿಯ ಮಡಿಲಿನಲ್ಲಿ ಮಾತ್ರ ಆತ್ಯಂತಿಕ ಬಿಡುಗಡೆಯ ಸುಖವಿದೆ. ಇಂತಹ ಅಲೌಕಿಕ ಕಿನ್ನರಿಗೆ ಒಲಿಯುವ ಅವಳಿಗೆ ಚೆನ್ನಮಲ್ಲಿಕಾರ್ಜುನನ ಅಂಕಿತದ ಕೃಪೆಯೂ ಸೇರಿದುದರಿಂದ ಅವಳು ಗಂಡನನ್ನು ತೊರೆದು ಹರನ ಮದುವಣಗಿತ್ತಿಯಾಗಿ, ಲಿಂಗೈಕ್ಯಳಾಗಿ ಅಮರಳಾಗಿದ್ದಾಳೆ. ಆದರೆ ಅಕ್ಕನಿಗೆ ಈ ಅಮರತ್ವವೆನ್ನುವುದು ಸುಲಭವಾಗಿ ದಕ್ಕಿದುದಲ್ಲ. ಕಾಡ ಜೋಗಿ ಅವಳನ್ನು ಸುಲಭವಾಗಿ ತನ್ನ ತೋಳುಗಳಲ್ಲಿ ಎತ್ತಿಕೊಂಡು ಬಿಡುವುದಿಲ್ಲ. 'ಚಂದ್ರನೀಲಗಿರಿಯನೇರಿಕೊಂಡು, ಕೊಂಬು ಕಹಳೆಯನೂದಿಕೊಂಡು' ಬರುವ ಅವನ ತೋಳಲ್ಲಿ ಅವಳೊಂದು ಕಿನ್ನರಿಯಾಗುವ ಮುನ್ನ, 'ಅವಳ ಕುಂಭಕುಚದ ಮೇಲೆ ಅವನನ್ನೊತ್ತಿ'ಕೊಳ್ಳುವ ಮುನ್ನ, ಅವಳೂ ಕೂಡ ತನ್ನ ತಲೆ ಮೊಲೆಯಿಂದ ಹಿಡಿದು ಹಾದಿ, ತನ್ನನ್ನು ಸಾಬೀತುಪಡಿಸುವ ಮುನ್ನ ಮನೆಮನೆದಪ್ಪದೆ ಅನ್ನಕ್ಕಾಗಿ ಅಲೆಯಬೇಕಾಗಿದೆ. ನಾಯಿ ನರಿಗಳ ಜೊತೆಗೆ ಭಿಕ್ಷಾನ್ನವನ್ನು ಹಂಚಿ ಉಣ್ಣಬೇಕಾಗಿದೆ. ಕಂಡ ಕೆರೆಹಳ್ಳ ಬಾವಿಗಳಲ್ಲಿ ಬಾಯಾರಿಕೆಯನ್ನು ನೀಗಿಸಿಕೊಂಡು, ಪಾಳುದೇಗುಲಗಳಲ್ಲಿ ಮಲಗಬೇಕಾಗಿದೆ. ಈ ಎಲ್ಲ ಹೋರಾಟದ ಪರಿಭ್ರಮಣಕ್ಕೆ, ಸ್ವಾತಂತ್ರ್ಯದ ಶೋಧಕ್ಕೆ ಅವಳಿಗೆ ಚೆನ್ನಮಲ್ಲಿಕಾರ್ಜುನನೆಂಬ ಕಿನ್ನರಿಯ ಆತ್ಮಸಾಂಗತ್ಯವಿದೆ. ದುರ್ಗಮ ದಾರಿಯನ್ನು ಸವೆಸಿ ತನ್ನನ್ನು ಸಾಬೀತುಪಡಿಸಿಕೊಳ್ಳುವ ಅಕ್ಕನನ್ನು, 'ಭವಗೆಟ್ಟು ಬಂದ ಮಗಳೆಂದು... ಚೆನ್ನಮಲ್ಲಿಕಾರ್ಜುನ ಬಿಗಿಯಪ್ಪಿ' ಚಂದದ ಪದವಾಗಿ ನುಡಿಸಿದ್ದಾನೆ.

ಅಕ್ಕಮಹಾದೇವಿ ಗುರುಮನೆ ಅರಮನೆಯನ್ನು ತೊರೆದು ಕಾಡನ್ನು ಹೊಕ್ಕಳು. ವಿಸ್ತರಿಸಿಕೊಂಡಷ್ಟು ಮತ್ತೂ ವಿಸ್ತರಿಸಿಕೊಳ್ಳುವ ಲಾಲಸೆಗೆ, ನಿಯಂತ್ರಿಸಿದಷ್ಟು ಮತ್ತೂ ನಿಯಂತ್ರಣವನ್ನು ಬಿಗಿಗೊಳಿಸುವ ನಗರದ ಹಂಬಲಿಕ್ಕೆ, 'ಕಾಡ ಮೂಲಕವೇ ಆಗಸಕ್ಕೆ ಪಥ'ವನ್ನು ಅಕ್ಕ ಕಂಡುಕೊಂಡಳು. ಹುಸಿ ನಾಗರಿಕ ಸಂಸ್ಕೃತಿಗೆ ಉತ್ತರವಾಗಿ ಒಂದು ನಿಜ ಸಂಸ್ಕೃತಿಯ ಪ್ರತೀಕವಾದಳು. ಆದುದರಿಂದಲೇ ಅಕ್ಕ ತನ್ನ ಶಕ್ತಿ ಮೂಲಕ್ಕೆ ಸಂಪೂರ್ಣವಾಗಿ ಅರಳಲು ಸಾಧ್ಯವಾಯಿತು, ಒಡೆತನ ಮತ್ತು ಅಧಿಕಾರವನ್ನು ನಿರಾಕರಿಸಲು ಸಾಧ್ಯವಾಯಿತು. ಅದು ಸೃಷ್ಟಿಸುವ ನರಕದಿಂದ ಪಾರಾಗಲು ಸಾಧ್ಯವಾಯಿತು.

ನಾಡಿನಿಂದ ಕಾಡಿಗೆ :

ಈ ಕಿನ್ನರಿಗೆ ನಗರವೆಂದರೆ ಬಹಳ ಪ್ರಿಯ. ಯಾಕೆಂದರೆ ಕಾಡಿನೊಳಗೆ ಇದರ ಆಟ ನಡೆಯುವುದಿಲ್ಲ. ಗ್ರಾಮೀಣ ಜಗತ್ತಿನೊಳಗೂ ಇದಕ್ಕೆ ಸೊಪ್ಪು ಹಾಕುವವರಿಲ್ಲ. ನಿಸರ್ಗ ಸಹಜವಾಗಿ ಬದುಕುವ, ಅದರೊಂದಿಗೆ ತನ್ಮಯಗೊಳ್ಳುವುದರ ಮೂಲಕವೇ ಶಕ್ತಿಯನ್ನು ಗಳಿಸಿಕೊಳ್ಳುವ, ಜೀವಂತಿಕೆಯನ್ನು ಪಡೆದುಕೊಳ್ಳುವ ಅಲ್ಲಿನ ಜನಪದ, ಈ ಕಿನ್ನರಿಗೆ 'ಕೇರು' ಮಾಡುವುದಿಲ್ಲ.

ನಾಡನ್ನು ತೊರೆದು ಕಾಡಿನ ಹಾದಿ ಹಿಡಿದ, ಪರ್ಯಾಯ ಸಂಸ್ಕೃತಿಗೆ ಪ್ರತೀಕವಾದ, ಹೊರಗೆ ಕಾಡಿನ ಉತ್ಪಾದನೆಯನ್ನೇ ಅವಲಂಬಿಸಿದ ಜನಪದ, ನಿಸರ್ಗಕ್ಕೆ ಹತ್ತಿರವಾಗಿ, ಸಹಜವಾಗಿ ಬದುಕನ್ನು ಒಂದು ಉತ್ಸವವನ್ನಾಗಿ ಮಾಡಿಕೊಂಡುದುದರ ನಿದರ್ಶನವಾಗಿ, ಗುತ್ತಿ, ತಿಮ್ಮ, ಐತ, ಪೀಂಚಲು, ಮುಕುಂದಯ್ಯ, ಚಿನ್ನಮ್ಮ (ಮಲೆಗಳಲ್ಲಿ ಮದುಮಗಳು), ಗ್ರಾಮೀಣ ಬದುಕಿನ ನೆಲೆಯಲ್ಲಿ, ಸಾವಂತ್ರಿ, ಆಣೆ ಬಡ್ಡಿ ರಂಗಪ್ಪ (ಮುಸ್ಸಂಜೆಯ ಕಥಾಪ್ರಸಂಗ), ಉಮಾಪತಿಯ ಅಪ್ಪ (ಉಮಾಪತಿಯ ಸ್ಕಾಲರ್‌ಶಿಪ್ ಯಾತ್ರೆ), ಕಿರಗೂರಿನ ಗಯ್ಯಾಳಿಗಳು, ದೇವೀರಿ (ಅಕ್ಕ), ಅಕ್ಕು, ಗೌರಿ (ದಿವ್ಯ) ಮುಂತಾದವರು ಬರುತ್ತಾರೆ. ತಾವು ಗಳಿಸಿಕೊಂಡ ಶಕ್ತಿಯ ಬಲದಿಂದಲೇ ನಗರದ ನಾಗರಿಕರಿಗೆ ಚಳ್ಳೆಹಣ್ಣನ್ನು ತಿನ್ನಿಸುವವರು ಇವರು. ಸಮಾನ ದುಡಿಮೆ ಹಾಗೂ ಉತ್ಪಾದನೆಯ ಮೇಲಿನ ಸಮಾನ ಸ್ವಾಮ್ಯವನ್ನು ಹಂಚಿಕೊಳ್ಳುವ ಇವರು ಬದುಕನ್ನು ಪ್ರಕೃತಿಯ ಮಡಿಲಿನಲ್ಲಿ ಉಲ್ಲಾಸಮಯಗೊಳಿಸಿದ್ದಾರೆ. ಇವರುಗಳಿಗೆ ಬದುಕೆನ್ನುವುದು ಒಂದು ಬಂಧನವೆನಿಸದೆ, ಉತ್ಸವವಾಗಿದೆ.

ಮೇಲಿನ ಈ ಎಲ್ಲರೂ ಬೆಳೆಸಿಕೊಂಡಂತಹ ಅದಮ್ಯ ಸಹಜ ಪ್ರೇಮ ಮಾತ್ರ ವಿವಾಹ ವ್ಯವಸ್ಥೆಯ ಅಡಿಗಲ್ಲಾಗುವುದಾದರೆ, ಯಾಂತ್ರಿಕತೆಯಲ್ಲಿ ಕಳೆದುಹೋಗುವ, ಏಕತಾನತೆಯ ಬೇಸರದಲ್ಲಿ 'ತೆಕ್ಕೆಗೊಗ್ಗದ' ಕಿನ್ನರಿಯ 'ದಘೂತಿ ತೊಡೆಗಳ' ಹಗಲುಗನಸಿನಿಂದ ಆಧುನಿಕ ಮನುಷ್ಯನನ್ನು ಅದು ಪಾರುಮಾಡಬಲ್ಲುದೇನೋ. ಇಂತಹ ಒಲವಿಗೆ ಮಾತ್ರ ಅಧಿಕಾರವನ್ನು, ಒಡೆತನವನ್ನು ಧಿಕ್ಕರಿಸುವ ಶಕ್ತಿ ಇರುತ್ತದೆ. ಎಲ್ಲಾ ಬಂಧನಗಳನ್ನು ಕಿತ್ತೊಗೆಯುವ ನಿಸರ್ಗವೇ ಆಧುನಿಕ ಮನುಷ್ಯ ಹೊಂದಬೇಕಾದ ಉತ್ಕಟ ಪ್ರೇಮದ ಅತ್ಯಂತಿಕ ಮಾದರಿ. ಸತಿಪತಿಗಳೊಂದಾಗುವ ಒಲವಿನ, ಪರಸ್ಪರ ಅನುರಾಗದ ಆಸರೆಯನ್ನಷ್ಟೇ ಅದು ಬಯಸುತ್ತದೆ. ಏಕತಾನತೆಯಿಂದ ಸಂಬಂಧಗಳು ಹಳತಾಗುವ ವಾಸನೆ ಮೂಗಿಗೆ ಹತ್ತುವ ಮೊದಲೇ ಅದನ್ನು ನವೀಕರಿಸಿಕೊಳ್ಳುವ ಉಪಾಯಗಳನ್ನು ನಮಗೆ ಪ್ರಕೃತಿ ಕಲಿಸುತ್ತದೆ. ಇಂತಹ ಪರಸ್ಪರ ಪ್ರೀತಿ ಆಧಾರ ಇಲ್ಲದ, ಒಂದು ಪಕ್ಷ ಇದ್ದರೂ, ಅದರೊಳಗೆ ಹೊಸತನವನ್ನು ಕಂಡುಕೊಳ್ಳುವುದರ ಮೂಲಕ ಪ್ರೀತಿಯನ್ನು ನವೀಕರಿಸದ, ಏಕತಾನತೆಯನ್ನು ಮೀರಲು ಪ್ರಯತ್ನಿಸದ ಒಂದೇ ಮಾಡಿನ ಕೆಳಗೆ ಬದುಕುವ ಗಂಡಹೆಂಡತಿಯರಿಗೆ ಕಿನ್ನರಿಯ ಮೊರೆ ಹೋಗುವುದೊಂದೇ ಗತಿ. ಆಗ ಈ ಕಿನ್ನರಿ ನೀರಸ ಬದುಕಿನ ಕತ್ತಲಿನಲ್ಲಿ ಮಿಂಚುವ ಮಿಂಚುಹುಳುಗಳಂತೆ ತಾತ್ಕಾಲಿಕ ಬೆಳಕನ್ನಿತ್ತು ಭ್ರಮೆಯನ್ನು ಹೇರಿ ಮಾಯವಾಗಿಬಿಡುತ್ತದೆ. ಹಿಡಿಯಲಾರದ ಮಿಂಚುಹುಳುವನ್ನು ಹಿಡಿದಿಹೆವೆಂಬ ಭ್ರಮೆಯಲ್ಲಿ ಒಂದು ಮಿಂಚುಹುಳುವಿನಿಂದ ಇನ್ನೊಂದು ಮಿಂಚುಹುಳುವಿಗೆ ಹಾರುತ್ತಾ ಮನುಷ್ಯನ ಬದುಕು ಮುಗಿದೇ ಹೋಗುತ್ತದೆ.

✣ **ಡಾ. ಗಿರಿಜಾ ಶಾಸ್ತ್ರಿ :**

\# ೨೦೩/ಡಿ-೬, 'ಲೋಕಧಾರಾ', ಕಲ್ಯಾಣ (ಪೂ)- ೪೨೧ ೩೦೬ (ಠಾಣೆ) ✣

ಷ. ಶೆಟ್ಟರ್ ಅವರ 'ಕವಿರಾಜಮಾರ್ಗಮಂಥನ'

ಎಚ್. ಎಸ್. ಶಿವಪ್ರಕಾಶ್

೧

'ಸಂಕಲನ'ದಲ್ಲಿ ಪ್ರಕಟವಾಗಿರುವ, ಹಲವು ರೀತಿಯಲ್ಲಿ ವಿಶಿಷ್ಟವಾಗಿರುವ ಪ್ರೊಫೆಸರ್ ಷ.ಶೆಟ್ಟರ್ ಅವರ 'ಕವಿರಾಜಮಾರ್ಗಮಂಥನ' ಕುರಿತ ಮಹತ್ವದ ಲೇಖನಗಳ ಬಗ್ಗೆ ಬರೆಯುವುದು ನನ್ನ ಮಟ್ಟಿಗೆ ಹೆಮ್ಮೆಯ ವಿಷಯ.

ಇತಿಹಾಸಕಾರರಾದ ಡಾ. ಶೆಟ್ಟರ್ ಅವರ ಹಲವು ಕೃತಿಗಳು ಈಗಾಗಲೇ ಇಂಗ್ಲಿಶ್‌ನಲ್ಲಿ ಪ್ರಕಟವಾಗಿ ರಾಷ್ಟ್ರದ ಒಳಗೆ ಮತ್ತು ಹೊರಗೆ ಬಹು ಚರ್ಚಿತವಾಗಿ, ಪ್ರಶಂಸಿತವಾಗಿವೆ. ಈ ಹಿಂದೆ ಕನ್ನಡದಲ್ಲೂ ಅವರು ಕೆಲವು ಅನರ್ಘ್ಯ ಬರಹಗಳನ್ನು ಪ್ರಕಟಿಸಿದ್ದರು ನಿಜ. ಆದರೆ ಈಗ ಈ ಲೇಖನಗಳ ಮೂಲಕ ಮೊಟ್ಟಮೊದಲಿಗೆ ಒಂದು ಪೂರ್ಣ ಪ್ರಮಾಣದ ಸಾಹಿತ್ಯ ಸಂಶೋಧನಾ ಕೃತಿಯನ್ನು ಕನ್ನಡಕ್ಕೆ ನೀಡಿದ್ದಾರೆ.

ಈ ಲೇಖನಗಳು ಹಲವು ದಶಕಗಳ ಶಿಸ್ತುಬದ್ಧ ಸಂಶೋಧನೆ, ಆಲೋಚನೆ ಮತ್ತು ಚಿಂತನೆಗಳ ವಿದ್ವತ್‌ಪೂರ್ಣ ಪಕ್ವ ಫಲವೆನ್ನುವುದು ನಿಜವಾದರೂ ಇದರಲ್ಲಿರುವ ಬಿಚ್ಚು ನೋಟಗಳ ಮಹತ್ತ್ವ ಕೇವಲ ವಿದ್ವಾಂಸರಿಗೆ ಸೀಮಿತವಾದದ್ದಲ್ಲ, ಎಲ್ಲರಿಗೂ ಸಂಬಂಧಪಟ್ಟದ್ದು.

ಭಾಷಿಕ ಮತ್ತು ಪ್ರಾದೇಶಿಕ ಮತಾಂಧತೆಗಳು ತೀವ್ರವಾಗುತ್ತಿರುವ ನಮ್ಮ ಸುತ್ತು ನೆಲೆಯಲ್ಲಿ ಒಂದು ಭಾಷಿಕ ಮತ್ತು ಪ್ರಾದೇಶಿಕ ಸಮುದಾಯವನ್ನು ವಸ್ತುನಿಷ್ಠವಾಗಿ ಪರಿಭಾಷಿಸುವುದು ನಮ್ಮೆಲ್ಲರಿಗೂ ಇಂದು ಅಗತ್ಯ. ಎಲ್ಲ ಮತಾಂಧತೆಗಳ ಹಾಗೆ ಈ ನಮೂನೆಯ ಮತಾಂಧತೆಯೂ ವಸ್ತುನಿಷ್ಠ ಸತ್ಯದ ಮರೆಹಿನ ಮೇಲೆ ನಿಂತದ್ದು. ಇದು ಯೋಚಿಸಬಲ್ಲ ಎಲ್ಲರೂ ಅರ್ಥಮಾಡಿ ಕೊಳ್ಳುವ ವಿಚಾರ. ಆದರೆ ಇದರ ಜೊತೆಗಂಟಿಕೊಂಡ ಇನ್ನೊಂದು ಸತ್ಯ ತಿಳಿದರೂ ತಿಳಿಯ ದಂಥದು. ಮತಾಂಧತೆಯ ತಳಪಾಯದ ಕೆಲವು ಪ್ರಜ್ಞಪ್ತಿಗಳು ಮತಾಂಧತಾ ವಿರೋಧಿಗಳ ಚಿಂತನೆಗಳಲ್ಲೂ ಬಚ್ಚಿ ಕೂತಿರುತ್ತವೆ. ಉದಾಹರಣೆಗೆ ಕನ್ನಡ ಸಂಸ್ಕೃತಿಯ ಮಾತನ್ನೇ ತಗೊಳ್ಳಿ. ಉಗ್ರ ಕನ್ನಡವಾದಿಗಳಿಗೆ ಹೇಗೋ ಹಾಗೇ ನಮ್ಮ ಬಹುತೇಕ ಸಾಹಿತ್ಯ ಚಿಂತಕರಿಗೂ ಕನ್ನಡ ಸಂಸ್ಕೃತಿಯೆಂದರೆ ಈಗಾಗಲೇ ತೀರ್ಮಾನವಾಗಿರುವ ವಿಷಯ.

'ಉಗ್ರ'ರು ಈಗಾಗಲೇ ತೀರ್ಮಾನವಾಗಿರುವ ಕನ್ನಡದ ಕಲ್ಪನೆಗಳನ್ನು 'ಅನ್ಯ' ಸಮುದಾಯಗಳ ವಿರೋಧದ ನೆಲೆಯಲ್ಲಿ ಮಾತ್ರ ಗ್ರಹಿಸುತ್ತಾರೆ. ರಣಧೀರ ಕಂಠೀರವ ತಿರುಚಿನಾಪಳ್ಳಿಯಲ್ಲಿ ತಮಿಳು ಪೈಲ್ವಾನನೊಬ್ಬನನ್ನು ಮಣ್ಣು ಮುಕ್ಕಿಸಿದ್ದು ಇವರಿಗೆ ಕನ್ನಡ ಪೌರುಷದ ಪ್ರತೀಕವಾಗಿ ಬರುತ್ತದೆ. 'ಸೌಮ್ಯ' ಕನ್ನಡ ಸಂಸ್ಕೃತಿಯ ವಕ್ತಾರರು ಇದೇ ಪರಿಕಲ್ಪನೆಯನ್ನು ಪುಣ್ಯಕೋಟಿಯ ಬ್ರಾಹ್ಮಣೀಕೃತ ಕತೆಯ ಮೂಲಕ ಗ್ರಹಿಸುತ್ತಾರೆ. ವ್ಯಾಘ್ರನ ಸಂಘರ್ಷಕ್ಕಿಳಿಯದ, ಸತ್ಯವಚನಕೆ ತಪ್ಪಿ ನಡೆಯದ ಪುಣ್ಯಕೋಟಿಯ 'ಹೆಣ್ಣು' ಪ್ರತಿಕ್ರಿಯೆ ಈ ಪ್ರಭೃತಿಗಳಿಗೆ ಕನ್ನಡತ್ತ್ವದ ಅಹಿಂಸಾತ್ಮಕ ಸೌಮ್ಯತೆಯ ಪ್ರತೀಕವಾಗಿ ಬಿಡುತ್ತದೆ. ಪುಣ್ಯಕೋಟಿ ಕತೆಯ ಬ್ರಾಹ್ಮಣೇತರ ಪಾಠಗಳಲ್ಲಿ ಏನಿದೆ ಎಂಬ ಗೋಜಿಗೆ ಇವರು ಹೋಗುವುದೇ ಇಲ್ಲ. ಮಧ್ಯಯುಗದ ಕನ್ನಡ ಭಾಷೆಯ ೨೬ ಕಥನಗಳಲ್ಲಿ ಬರುವ ಕನ್ನಡಿಗರೇ ಆದ ಪುಂಡರಸರು ಪರಸ್ಪರ ಎಸಗಿದ ಬರ್ಬರ ಹಿಂಸೆಯ ಚಿತ್ರಗಳಾಗಲೀ ಇಂದಿನ ಕರ್ನಾಟಕದ ನಾಚ್ಚುಗೆಟ್ಟ ಜಾತೀಯತೆ, ಭ್ರಷ್ಟಾಚಾರಗಳಾಗಲೀ ಇವರ ನೆನಪಿಗೆ ಬರುವುದೇ ಇಲ್ಲ. ಇನ್ನು 'ಉಗ್ರ'ರೂ 'ಸೌಮ್ಯ'ರ ಹಾಗೆ ಕನ್ನಡತನದ ಕಲ್ಪನೆಯನ್ನು ತಮ್ಮ ಅಜೆಂಡಾಗಳಿಗನುಸಾರವಾಗಿಯೇ ಕಟ್ಟಿಕೊಳ್ಳುವುದಕ್ಕೆ ಬೇಜಾನು ನಿದರ್ಶನಗಳನ್ನು ಕೊಡಬಹುದು. ಇಂಥವರಿಗೆ ಬೆಳವಡಿ ಮಲ್ಲಮ್ಮ

ಇಂದಿನ ಹಿಂದುತ್ವವಾದಿಗಳ ಜ್ವಲಂತ ಸಂಕೇತವಾದ ಶಿವಾಜಿಯನ್ನು ಪರಾಭವಗೊಳಿಸಿದ್ದಾಗಲೀ, ಕನ್ನಡಿಗರ ಹೆಮ್ಮೆಯ ಸಂಕೇತವಾದ ಪುಲಿಕೇಶಿ ತಮಿಳುನಾಡಿನ ಪಲ್ಲವ ರಾಜನಿಂದ ಸೋತದ್ದಾಗಲೀ ಯಾಕೆ ನೆನಪಾಗುವುದಿಲ್ಲ? 'ಉಗ್ರ'ರು ಮತ್ತು 'ಸೌಮ್ಯ'ರು ಇಬ್ಬರೂ ತಮ್ಮ ಅನುಕೂಲಕ್ಕೆ ತಕ್ಕಂತೆ ತಮಗೆ ರುಚಿಸುವುದನ್ನು ಪ್ರಧಾನವಾಗಿಟ್ಟುಕೊಂಡು ಅನನುಕೂಲವಾದದ್ದನ್ನು ಹಾಗೆಯೇ ಶೇಲಿಸಿಬಿಡುತ್ತಾರೆ. ಉದಾಹರಣೆಗೆ, ಅನಂತಮೂರ್ತಿಯವರಿಗೆ ಪುಣ್ಯಕೋಟಿಯ ಕತೆಯಲ್ಲಿ ಕಾಣಸಿಗುವ ವಿರೋಧಾತೀತ ಅಹಿಂಸಾತ್ಮಕ ಸಮನ್ವಯ ತತ್ತ್ವವೇ ಕೆ. ವಿ. ಸುಬ್ಬಣ್ಣನವರಿಗೆ 'ಕವಿರಾಜಮಾರ್ಗ'ದಲ್ಲಿ ಕಂಡುಬಿಡುತ್ತದೆ. ಇಂತಹ ಜಾಣಗುರುಡುತನಕ್ಕೆ ಹೊರತಾದುದರಿಂದ ಶೆಟ್ಟರ್ ಅವರ ಈ ಕೃತಿಯ ದೃಷ್ಟಿ ಮಹತ್ತ್ವಪೂರ್ಣವಾಗುತ್ತದೆ.

ಶೆಟ್ಟರ್ ಅವರಿಗೆ ಕನ್ನಡ ನಾಡನುಡಿಗಳು ಈಗಾಗಲೇ ತೀರ್ಮಾನವಾಗಿರುವ ವಿಷಯಗಳಲ್ಲ. ಬದಲಾಗಿ ಅವು ಅನ್ವೇಷಣೆ, ಆಲೋಚನೆ ಮತ್ತು ಅನುಸಂಧಾನಗಳ ಮುಂದಿರುವ ಸವಾಲುಗಳು.

೨

ಶೆಟ್ಟರ್ ಅವರ ಲೇಖನಗಳ ಈ ಸಂಗ್ರಹವನ್ನು ಪ್ರವೇಶಿಸುವ ಮುಂಚೆ ಈಚೆಗೆ ಕನ್ನಡ ಸಾಹಿತ್ಯ ಸಂಸ್ಕೃತಿಗಳ ಪ್ರಾದುರ್ಭಾವದ ಬಗ್ಗೆ ಪ್ರಧಾನವಾಗಿ ಅಕಡೆಮಿಕ್ ವಲಯಗಳಲ್ಲಿ ಪ್ರಚಾರವಾಗುತ್ತಿರುವ ಮತ್ತೊಂದು ಚಿಂತನಾ ಮಾದರಿಯನ್ನು ಚರ್ಚಿಸುವುದು ಅಗತ್ಯ. ಇಂದು ಜಗತ್ತಿನ ಏಕಮೇವ ಅಧಿಕಾರ ಕೇಂದ್ರವಾಗಲು ಹೊರಟಿರುವ ಪೆಂಟಗನ್‌ನವರು ಜಾರಿಗೆ ತಂದ 'ದಕ್ಷಿಣ ಏಷಿಯ'ದ ಪರಿಕಲ್ಪನೆಯನ್ನು ತನ್ನ ಬುಡಮಾಡಿಕೊಂಡು ಈ ಪರಿಕಲ್ಪನೆಯನ್ನು ಕನ್ನಡ ಪರಿಸರದಲ್ಲಿ ಪ್ರಚಾರ ಮಾಡಿದವರು ಮೇಲೆ ಹೇಳಿದ ರೀತಿಯಲ್ಲಿ ಸತ್ಯಾತಿಶಯವಾದಿಗಳಾದ ಕೆ. ವಿ. ಸುಬ್ಬಣ್ಣನವರು.

ಆಮೇಲೆ ಸುಬ್ಬಣ್ಣನವರಿಗಿಂತ ಹೆಚ್ಚು ಸಂಕೀರ್ಣ ರೀತಿಯಲ್ಲಿ ಅದೇ ವಾದ ಮಂಡಿಸಿದವರು ಡಿ. ಆರ್. ನಾಗರಾಜ್ ಅವರು. ಅಮೆರಿಕದ ಪ್ರಸಿದ್ಧ ಇಂಡಾಲಜಿಸ್ಟ್ ಶೆಲ್ಡನ್ ಪೊಲಕ್ ಅವರು ನಿರೂಪಿಸಿರುವ ದಕ್ಷಿಣ ಏಷಿಯಾ ಸಾಹಿತ್ಯ ಸಂಸ್ಕೃತಿಗಳ ಸಾಮಾನ್ಯ ಕಥನದ ಈ ಸಂದರ್ಭದಲ್ಲಿ ಕನ್ನಡದ ಮೊಟ್ಟಮೊದಲ ಗ್ರಂಥವಾದ 'ಕವಿರಾಜಮಾರ್ಗ'ವನ್ನು ಇಡೀ ದಕ್ಷಿಣ ಏಷಿಯಾ ಸಂದರ್ಭದಲ್ಲಿ ಒಂದು ಯುಗಪ್ರವರ್ತಕ ಕೃತಿಯನ್ನಾಗಿ ಕಾಣಲಾಗಿದೆ. ಯಾಕೆಂದರೆ ಪೊಲಕ್‌ರ ಪ್ರಕಾರ ಕ್ರಿಸ್ತ ಶಕ ಮೊದಲನೆಯ ಸಹಸ್ರಮಾನವು ವಿಶ್ವದಾದ್ಯಂತ 'ಕ್ಲಾಸಿಕಲ್' ಭಾಷೆಗಳ ಮೆಟ್ರೊಪೋಲಿಸ್‌ನ ಮೇಲೆ ಕಟ್ಟಿದ ಸಂಸ್ಕೃತಿ; ಆದರೆ ಎರಡನೆಯ ಸಹಸ್ರಮಾನ ವಿಸ್ತಾತ್ಮಕ ದೇಶಭಾಷೆಗಳ ಅಭ್ಯುದಯ ಕಾಲ. ಪ್ರಾದೇಶಿಕ ಭಾಷೆಯೊಂದು ಶಿಷ್ಟ ಭಾಷೆಯೊಂದರ ಸವಾಲನ್ನು ಹೇಗೆ ಎದಿರುಗೊಳ್ಳುತ್ತದೆ ಎಂಬುದು ಈ ಎರಡು ಯುಗಗಳ ಸ್ಥಿತ್ಯಂತರದ ಬಹು ದೊಡ್ಡ ಸವಾಲು. ಪೊಲಕ್ ಪ್ರಕಾರ ಇಂದು ಜಗತ್ತಿನ ಶಕ್ತಿಕೇಂದ್ರವಾದ ಅಮೆರಿಕನ್ ಸಂಸ್ಕೃತಿಯನ್ನು ಜಗತ್ತಿನ ಇತರ ಸಂಸ್ಕೃತಿಗಳು ಹೇಗೆ ಸ್ವೀಕರಿಸಬೇಕು ಅನ್ನುವುದು ಇಂದಿನ ಸವಾಲು. ಈ ಚಿಂತನಾ ಮಾದರಿಯನ್ನು ಲಂಬಿಸುವುದಾದರೆ 'ಕವಿರಾಜಮಾರ್ಗ' ಅತ್ಯಂತ ಅನುಕರಣೀಯ ರೀತಿಯಲ್ಲಿ ನಿಭಾಯಿಸಿದೆ. ಅದು ಮೇಲುಸಂಸ್ಕೃತಿಯನ್ನು– ಅಂದರೆ ಸಂಸ್ಕೃತವನ್ನು– ತನ್ನ ಎದುರಾಳಿಯನ್ನಾಗಿಯಾಗಲೀ ಅಥವಾ ತಾನು ಅನುಕರಿಸಬೇಕಾದ ಅನಿವಾರ್ಯ ಮಾದರಿಯನ್ನಾಗಿಯಾಗಲೀ ನೋಡದೆ ಎರಡು ಸಂಸ್ಕೃತಿಗಳು ಭಿನ್ನವಾದರೂ ಸಮಾನ ಸ್ತರದವೆಂಬ ಗ್ರಹಿಕೆಯ ಬುನಾದಿಯ ಮೇಲೆ ಅಂತರ್‌ಪ್ರಾದೇಶಿಕ ಮತ್ತು ಪ್ರಾದೇಶಿಕ ಭಾಷಿಕ ಸಂಸ್ಕೃತಿಗಳ ನಡುವಣ ಅನುಸಂಧಾನವನ್ನು ನಡೆಸಿದೆ. ಹೀಗಾಗಿ ತನ್ನತನವನ್ನು ಬಿಟ್ಟುಕೊಡದೆ ಅನ್ಯವನ್ನು ಒಪ್ಪಿಕೊಂಡಿದೆ. ಪ್ರಬಲ ಸಂಸ್ಕೃತಿಯೊಂದರೊಡನೆ ಪ್ರಾದೇಶಿಕ ಸಂಸ್ಕೃತಿ ಸಮನ್ವಯ ಮಾಡಿಕೊಳ್ಳುವುದಕ್ಕೆ ಇದು ಕವಿಮಾರ್ಗವೂ ಆಗಿದೆ, ರಾಜಮಾರ್ಗವೂ ಆಗಿದೆ. ಕನ್ನಡ ನಾಡಿನ ಗಡಿಯನ್ನು ರೇಖಿಸುತ್ತಲೇ ವ್ಯಾಕರಣ ಮತ್ತು ಕಾವ್ಯಮೀಮಾಂಸೆಗಳನ್ನು ರೂಪಿಸಿದೆ.

೩

ಭಾಷಿಕ/ಸಾಹಿತ್ಯಕ ಪ್ರಬುದ್ಧತೆ ಮತ್ತು ಸಾಮ್ರಾಜ್ಯ ಸ್ಥಾಪನೆಗಳ ಅವಿನಾ ಸಂಬಂಧ ಮೊದಲ ಸಹಸ್ರಮಾನದಲ್ಲಿ ಉತ್ತರದ ಸಾಮ್ರಾಜ್ಯ ರಚನೆ ಗಟ್ಟಿಗೊಂಡಂತೆ ಸಂಸ್ಕೃತ ಭಾಷೆ, ವ್ಯಾಕರಣ, ಕಾವ್ಯಮೀಮಾಂಸೆ ಮುಂತಾದ ಶಾಸ್ತ್ರಗಳು ಹೆಚ್ಚು ಹೆಚ್ಚು ನಿಖರತೆಯನ್ನು ಪಡೆದವು. ಈ ತೆರನ ವಿದ್ಯಮಾನಗಳು ಎರಡನೇ ಸಹಸ್ರಮಾನದಲ್ಲಿ ವಿಶ್ವಾತ್ಮಕ ದೇಶಭಾಷೆಗಳ ನಿರ್ಮಾಣ ಕಾಲದಲ್ಲಿ ಕೇವಲ ಭಾರತದಲ್ಲಲ್ಲ, ಯೂರೋಪನ್ನೂ ಒಳಗೊಂಡು ವಿಶ್ವದ ಬಹುತೇಕ ಭಾಗಗಳಲ್ಲಿ ಪುನರಭಿನೀತವಾದವು. ಪೊಲಕ್‌ರು ಇಡೀ ಪ್ರಕ್ರಿಯೆಯನ್ನು ಒಂದು ಸೆಕ್ಯುಲರ್ ಘಟನಾವಳಿಯಾಗಿ ನೋಡುವುದರಿಂದ ಧರ್ಮಗಳ ಮತ್ತು ಧಾರ್ಮಿಕ ಆಂದೋಲನಗಳ ಪ್ರಾಮುಖ್ಯತೆಯನ್ನು ಪರಿಗಣಿಸುವುದಿಲ್ಲ. ಅಂದರೆ ಅವರ ಪ್ರಕಾರ ಕನ್ನಡ ಭಾಷೆ/ಸಾಹಿತ್ಯದ ಪ್ರಾದುರ್ಭಾವಕ್ಕೆ 'ಕವಿರಾಜಮಾರ್ಗ' ನಿರ್ಣಾಯಕವಾಯಿತೇ ಹೊರತು, ಮುಂದಿನ ಶತಮಾನಗಳ ಭಕ್ತಿ ಆಂದೋಲನಗಳಿಗಲ್ಲ.

ಶೆಟ್ಟರ್ ಅವರು ಪೊಲಕ್‌ರ ಜೊತೆ ಮುಖಾಮುಖಿ ಮಾಡುವುದಿಲ್ಲ, ನಿಜ; ಆದರೆ ತಮ್ಮ ಆಕರ ಮತ್ತು ವಾದಗಳ ಮೂಲಕ ಮೇಲ್ಕಂಡ ಸಿದ್ಧಾಂತದ ಹಲವು ಗ್ರಹೀತಗಳನ್ನು ಅಲುಗಿಸಿದ್ದಾರೆ.

ಮೊದಲನೆಯದಾಗಿ, ಆರಂಭಿಕ ಸಹಸ್ರಮಾನವನ್ನು ಸಂಸ್ಕೃತ ಯುಗವೆನ್ನುವುದಕ್ಕೆ ಬಹಳ ದೊಡ್ಡ ಅಪವಾದ ಪ್ರಾಚೀನ ತಮಿಳು ಪರಂಪರೆ. ಶಂಗಂ ಕಾವ್ಯದ ಭಿತ್ತಿಯಾಗಿರುವ 'ತಮಿಳಗಂ' ಎಂಬ ಪ್ರದೇಶ ಪ್ರಧಾನತಃ ಒಂದು ಸಾಂಸ್ಕೃತಿಕ ವಲಯವಾಗಿತ್ತೇ ಹೊರತು, ಒಂದು ರಾಜಕೀಯ ವಲಯವಾಗಿರಲಿಲ್ಲ. ಸದಾ ಪರಸ್ಪರ ಕಾದಾಡುತ್ತಿದ್ದ ಮೂವೇಂದರ್– ಅಂದರೆ ಚೋಳ, ಪಾಂಡ್ಯ ಮತ್ತು ಚೇರರು– ಒಂದು ಸಾಮಾನ್ಯ ರಾಜಕೀಯ ವಲಯವನ್ನು ಕಟ್ಟಿಕೊಳ್ಳುವುದಕ್ಕೆ ಅನುವೇ ಇರಲಿಲ್ಲ. ಕವಿಮಾರ್ಗ ಜನಮಾರ್ಗವೂ ಆಹುದೆನ್ನುವುದು ಪೊಲಕ್‌ರ ಮತ್ತು ಸುಬ್ಬಣ್ಣನವರ ಸಿದ್ಧಾಂತದ ತಿರುಳು. 'ತಿಣೈ' ಕಲ್ಪನೆಯ ಮೂಲಕ ಕಾವ್ಯವನ್ನು ಜನರ ಕಸುಬು, ಪ್ರದೇಶ, ಆಚರಣೆಗಳ ಜೊತೆ, ಪ್ರದೇಶ ವಿಶಿಷ್ಟವಾದ ಸಸ್ಯ ಮತ್ತು ಪ್ರಾಣಿಗಳ ಜೊತೆ ಹೊಂದಿಸುವ 'ತೊಲ್‌ಕಾಪ್ಪಿಯಂ'ನ ಕಲ್ಪನೆಯಲ್ಲಿ ಕವಿಮಾರ್ಗ ಮತ್ತು ರಾಜಮಾರ್ಗಗಳು ಬೇರೆ ಬೇರೆಯಾಗಿವೆ. ಶೆಟ್ಟರ್ ಅವರ ಪ್ರಕಾರ ದೊಡ್ಡ ದೊಡ್ಡ ರಾಜರಿಗಿಂತ ಮಿಗಿಲಾಗಿ ಸಣ್ಣ ಪುಟ್ಟ ನಾಯಕರು ಕಾವ್ಯ ಸಾಮ್ರಾಜ್ಯ ನಿರ್ಮಾಣಕ್ಕೆ ಕೊಡುಗೆ ನೀಡಿದ್ದಾರೆ. ಶಂಗಂ ಕಾವ್ಯಕ್ಕೆ ಕನ್ನಡವನ್ನೂ ಒಳಗೊಂಡ ತಮಿಳೇತರ ಭಾಷಾವಲಯದ 'ವಡುಗ' ಜನಾಂಗಗಳು ನೀಡಿದ ಕೊಡುಗೆಗಳು ಇದನ್ನೇ ಸಾಬೀತುಗೊಳಿಸುತ್ತವೆ. (ಈ ಕೊಡುಗೆಯ ವಿಸ್ತೃತ ಚರ್ಚೆ ಪ್ರಸ್ತುತ ಲೇಖನಮಾಲಿಕೆಯ ಕೊನೆಯ ಅಧ್ಯಾಯದಲ್ಲಿದೆ.)

ಸಾಂಸ್ಕೃತಿಕ ಮತ್ತು ರಾಜಕೀಯ ರಚನೆ ಮತ್ತು ಪ್ರಕ್ರಿಯೆಗಳ ಅಸಮಾನಾಂತರ ಸಂಬಂಧ 'ಶಂಗಂ ತಮಿಳಗಂ....' ಲೇಖನಗಳ ಮುಖ್ಯ ಅವಧಾರಣೆಗಳಲ್ಲೊಂದು. ಸಾಮ್ರಾಜ್ಯ ಶಕ್ತಿ ಸೃಜನಶೀಲತೆಯ ವಿಷಯದಲ್ಲಿ ಅಷ್ಟೊಂದು ನಿರ್ಣಾಯಕ ಪಾತ್ರ ವಹಿಸುವಂತಿದ್ದರೆ ಇಪ್ಪತ್ತನೇ ಶತಮಾನದ ಅಮೆರಿಕನ್ ಸಾಹಿತ್ಯ ವಿಶ್ವದ ಅತ್ಯಂತ ಶ್ರೇಷ್ಠ ಸಾಹಿತ್ಯವಾಗಬೇಕಾಗಿತ್ತು. 'ರಕ್ತ ವಿವಾಹ'ದ ಕವಿ ಲೋರ್ಕಾ ಬಂದದ್ದು ಯೂರೋಪಿನಲ್ಲೇ ಅತ್ಯಂತ ಹಿಂದುಳಿದ ರಾಷ್ಟ್ರವಾದ ಸ್ಪೇನ್‌ನ ಅತ್ಯಂತ ಹಿಂದುಳಿದ ಪ್ರದೇಶವಾದ ಅಂಡುಲೇಷಿಯಾದಿಂದ. ಇನ್ನು ಸಿಜೇರ್‌ವಾಯ್ಜೆ, ಅಮಿಸಿಜರ್, ವೋಲೆ ಷೋಯಿಂಕಾ ಇತ್ಯಾದಿ ಯುಗಪ್ರವರ್ತಕ ಬರಹಗಾರರು ಅಸ್ಥಿರ ರಾಷ್ಟ್ರಗಳಿಂದ ಬಂದವರು. ಅಂದ ಮಾತ್ರಕ್ಕೆ ಸೃಜನಶೀಲತೆಯನ್ನು ರಾಜಕೀಯ ಅಸ್ಥಿರತೆಯ ಶಿಶು ಎಂದೂ ತಿಳಿಯಲಾಗದು. ಒಟ್ಟಿನಲ್ಲಿ ಸಾಮ್ರಾಜ್ಯದ ಏಳಿಗೆ ಮತ್ತು ಸಂಸ್ಕೃತಿಯ ಏಳಿಗೆ ಒಟ್ಟೊಟ್ಟಾಗಿರಬೇಕೆಂಬ ನಿರ್ಬಂಧವೇನೂ ಇಲ್ಲ.

ಶೆಲ್ಡನ್. ಪ್ರೋಲಕ್ ಮುಂತಾದವರ ವಾದವನ್ನು ಇನ್ನೂ ಆಳದಲ್ಲಿ ಅಲ್ಲಾಡಿಸುವ ಇನ್ನೊಂದು ಪುರಾವೆ 'ಶಂಗಂ ತಮಿಳಗಂ....' ಲೇಖನಗಳಲ್ಲಿದೆ. ಶೆಟ್ಟರ್ ಪ್ರಕಾರ ಪ್ರಾಚೀನ ಕಾಲದಲ್ಲಿ ತಮಿಳು ಎಷ್ಟೇ ಬಲಿಷ್ಠ ಸಾಹಿತ್ಯ ಸಂಸ್ಕೃತಿಯಾಗಿ ವಿಕಾಸಗೊಂಡರೂ ಲಿಪಿ ಸಂಸ್ಕೃತಿಯಾಗಿ ರೂಪು ತಾಳಿದ್ದು ತೀರಾ ತಡವಾಗಿಯೇ. 'ತೊಲ್‌ಕಾಪ್ಪಿಯಂ' ಮತ್ತು 'ಮಾರ್ಗ'ವನ್ನು ಹೋಲಿಸಿ ನೋಡಿದಾಗ ಒಂದು ಸ್ವತಂತ್ರ ಸಾಹಿತ್ಯ ಸಂಸ್ಕೃತಿಯ ನಿರ್ಮಾಣದಲ್ಲಿ ಕನ್ನಡಿಗರು 'ತೊಲ್'ಗಿಂತ ಹಿಂದೆ ಬಿದ್ದಿದ್ದರೆಂಬುದು ಸ್ಪಷ್ಟ. ಆದರೆ ಲಿಪಿ ಸಂಸ್ಕೃತಿಯಲ್ಲಿ ಕನ್ನಡಿಗರು ತಮಿಳನ್ನು ಹಿಂದೆ ಹಾಕಿದ್ದರು. ಈ ಸಿದ್ಧಾಂತದ ಬಗ್ಗೆ ತಮಿಳರು ದೊಡ್ಡ ಆಕ್ಷೇಪ ಎತ್ತಬಲ್ಲರೆಂಬುದು ನನಗೆ ಗೊತ್ತು. ಆದರೂ ಈ ತೀರ್ಮಾನ ನಿಜವಾದರೆ, ಬರಹ ಸಂಸ್ಕೃತಿಯ ನಿರ್ಮಾಣ ಸಾಹಿತ್ಯ ಸಂಸ್ಕೃತಿಗೆ ಅನಿವಾರ್ಯ ಎಂಬ ತಿಳಿವಳಿಕೆಯೇ ತಪ್ಪಾಗುತ್ತದೆ. ಈ ತೀರ್ಮಾನ ನಿಜವಾದರೆ ಲಿಪಿ ಸಂಸ್ಕೃತಿ ರೂಪುಗೊಳ್ಳುವ ಮೊದಲೇ ತಮಿಳಗಂ ಒಂದು ಅಭಿಜಾತ ಕಾವ್ಯವನ್ನೂ ಕಾವ್ಯ ಮೀಮಾಂಸೆಯನ್ನೂ ಸೃಜಿಸಿಕೊಂಡಿತ್ತು. ಅಂದರೆ ಸಾಹಿತ್ಯದ 'ಮಾರ್ಗ'ಕ್ಕೂ ಲಿಪಿಗೂ ನಾವು ಇದೆಯೆಂದುಕೊಂಡಿರುವ ಕಾರ್ಯಕಾರಣ ಸಂಬಂಧ ಗಾಯಬ್ ಆಗುತ್ತದೆ.

೪

ಯಾವನಿಗೆ ರೋಮ್ ಮಾತ್ರ ಗೊತ್ತಿರುತ್ತದೆಯೋ ಅವನಿಗೆ ರೋಮ್ ಕೂಡ ಪೂರ್ತಿ ಗೊತ್ತಿರುವುದಿಲ್ಲ. ಆದ್ದರಿಂದ ಕನ್ನಡ ಭಾಷೆ ಮತ್ತು ಸಾಹಿತ್ಯಗಳ ಆಗುಹೋಗುಗಳನ್ನು ಕೇವಲ ಕನ್ನಡದ ಭಿತ್ತಿಯೊಂದರಲ್ಲೇ ನೋಡಬಾರದು. ಮಾರ್ಗಕಾರ ಅಭಿವೃದ್ಧಿಶೀಲ ಕನ್ನಡ ನಾಡು-ನುಡಿಗಳ ವೈಶಿಷ್ಟ್ಯವನ್ನು ಬಿಟ್ಟುಕೊಡದೆ ಈಗಾಗಲೇ ಅಭಿವೃದ್ಧಿಗೊಂಡಿರುವ ಸಂಸ್ಕೃತದ ಜೊತೆಗೆ ಕೀಳರಿಮೆಯಿರದ ಮುಖಾಮುಖಿ ನಡೆಸಿದನೆಂಬ ಕಾರಣಕ್ಕಾಗಿ ವಿದ್ವಾಂಸರಿಂದ ಪ್ರಶಂಸೆ ಪಡೆದಿದ್ದಾನೆ. ಡಿ. ಆರ್. ನಾಗರಾಜ್ ಅವರಂತೂ ಮಾರ್ಗಕಾರನನ್ನು ಸೀದಾ ಬ್ರಹ್ಮನಿಗೆ ಹೋಲಿಸಿಬಿಡುತ್ತಾರೆ. ಆದರೆ ಇಡೀ ಕನ್ನಡ ಸಾಹಿತ್ಯ ಪರಂಪರೆಗೆ ಮಾರ್ಗಕಾರ ಬ್ರಹ್ಮನೋಪಾದಿ ಯಾದರೆ ಮುಂದಿನ ಶತಮಾನಗಳ ಕನ್ನಡ ಸಾಹಿತ್ಯ ಆತನಿಗೆ ಎಷ್ಟು ಋಣಿ ಎಂಬುದನ್ನೂ ಪರೀಕ್ಷಿಸಬೇಕಾಗುತ್ತದೆ. ಈ ಕಡೆ ಶೆಟ್ಟರ್ ನಮ್ಮ ಗಮನ ಸೆಳೆದಿದ್ದಾರೆ. ಯಾವ ರೀತಿ 'ತೊಲ್‌ಕಾಪ್ಪಿಯಂ'ನ ಕಾವ್ಯ ಭಾಷೆ-ಬದುಕಿನ ಸಿದ್ಧಾಂತದ ಜೊತೆಗೆ ಶಂಗಂ ಕಾವ್ಯರಾಶಿ ಅವಿನಾ ಸಂಬಂಧ ಹೊಂದಿದೆ ಆ ರೀತಿಯ ಸಂಬಂಧವನ್ನು 'ಕವಿರಾಜಮಾರ್ಗ' ಕನ್ನಡ ಪರಂಪರೆಯೊಂದಿಗೆ ಹೊಂದಿದೆಯೆ ಎಂಬ ಪ್ರಶ್ನೆಯನ್ನು ಇಲ್ಲಿ ಎತ್ತಲಾಗಿದೆ. ಶಂಗಂ ಯುಗ ಮುಗಿದ ನಂತರವೂ 'ತೊಲ್‌ಕಾಪ್ಪಿಯಂ'ನ ಮರುದನಿಗಳು ಆಳ್ವಾರ್-ನಾಯನ್ ಮಾರರ ಭಕ್ತಿ ಕಾವ್ಯದಲ್ಲೂ ಕೇಳುತ್ತವೆ. ಆಂಡಾಳ್ ತನ್ನ 'ತಿರುಪ್ಪಾವೈ'ಯನ್ನು 'ಶಂಗತ್ತಮಿಳ್'ನಲ್ಲಿ ಬರೆದುದಾಗಿ ಹೇಳಿಕೊಳ್ಳುತ್ತಾಳೆ. 'ತೊಲ್‌ಕಾಪ್ಪಿಯಂ'ನ ಪ್ರಭಾವಕ್ಕೆ ತಮಿಳಿನಲ್ಲಿ ದೀರ್ಘ ಕಾಲದ ನಿರಂತರತೆಯಿದೆ.

ಆದರೆ ಕನ್ನಡದಲ್ಲಿ 'ಕವಿರಾಜಮಾಗ'ಕ್ಕೆ?

೫

ವಿಶ್ವಸಾಹಿತ್ಯಕ್ಕೊಂದು ಲಿಬರಲ್ ಚರಿತ್ರೆಯನ್ನು ಬರೆಯುವ ನೆವದಲ್ಲಿ ಶೆಲ್ಡನ್ ಪ್ರೋಲಕ್‌ರು ಒಂದು ನೇರ ಗೆರೆಯ ಥರದ ಮಾದರಿಯ ಮೊರೆ ಹೋಗುತ್ತಾರೆ. ಸಂಸ್ಕೃತದ ಮೆಟ್ರೊಪೋಲಿಸ್ ಪ್ರಾದೇಶಿಕ ವಿಶ್ವಾತ್ಮಕ ದೇಶಭಾಷೆಗಳ ಉಗಮ ಇತ್ಯಾದಿ. ಮುಂದಕ್ಕೆ? ಬಹುಶಃ ನಾವು ಗೋಳೀಕೃತ ಜಗತ್ತಿಗೆ ಬರುತ್ತೇವೆ. ಇದೇ ಅಲ್ಲವೆ ಈ ಅದ್ಭುತ ಕಲ್ಪನೆಗೆ ಪ್ರೇರಣೆ ನೀಡಿದ್ದು?

ಡಿ. ಆರ್. ನಾಗರಾಜ್ ಅವರು ಈ ಮಾದರಿಯ ಇನ್ನೊಂದು ನಮೂನೆಯನ್ನಿಡುತ್ತಾರೆ. ಮೇಲ್ಕಂಡ ಕಥನಕ್ಕೆ ಪತ್ತೇದಾರೀ ಮತ್ತು ಬಂಡಾಯದ ರಂಗು ನೀಡುವ ಮೂಲಕ 'ಕವಿರಾಜಮಾರ್ಗ' ಒಂದು ಥರ ಬ್ರಹ್ಮಸೃಷ್ಟಿಯೆಂದು ಭಾವುಕತೆಯಿಂದ ಘೋಷಿಸಿದ ನಂತರ,

ಅವರ ಸುತ್ತ ಬಂಡಾಯ ಪ್ರಜ್ಞೆ ಜಾಗ್ರತವಾಗಿ ವಾದಿಸತೊಡಗುತ್ತಾರೆ. ಸಾಹಿತ್ಯ ಚರಿತ್ರಕಾರ ಒಬ್ಬ ಪತ್ತೇದಾರ ಮತ್ತು ಶೋಷಿತರ ಹಕ್ಕು ಹೋರಾಟಗಾರನಾಗಿಯೂ ಕೆಲಸ ಮಾಡಬೇಕು. 'ಕವಿರಾಜಮಾರ್ಗ'ದಲ್ಲಿ ನಾಪತ್ತೆಯಾಗಿರುವ ಪರಂಪರೆಗಳನ್ನು ಪತ್ತೆ ಮಾಡಿ ಗುರುತಿಸಿ ಆ ಪರಂಪರೆಗಳ ಮೌಲ್ಯಗಳಿಗಾಗಿ ಹೋರಾಟ ಮಾಡಬೇಕು. ಅವರ ಪ್ರಕಾರ 'ಕವಿರಾಜಮಾರ್ಗ'ದ ಜೈನಯುಗದಲ್ಲಿ ಹತ್ತಿಕ್ಕಲ್ಪಟ್ಟ ಶಕ್ತಿಗಳು ವಚನದ ಪ್ರಾದುರ್ಭಾವ ಕಾಲದ ವೀರಶೈವ ಯುಗದಲ್ಲಿ ತಲೆಯೆತ್ತಿದವು. ಅಂದರೆ ಅವರ ಪ್ರಕಾರ ಸಾಹಿತ್ಯ ಪರಂಪರೆಗಳ ನಿರ್ಮಾಣ ತುಮುಲಗಳಿಂದ ಕೂಡಿದ ಪ್ರಕ್ರಿಯೆ. ಪತ್ತೇದಾರಿ ಮತ್ತು ಬಂಡಾಯದ ಚುರುಕು ಸೇರಿಸಿದಾಗ ಈ ಕಲ್ಪನೆ ನಾಟಕೀಯವೂ ರೋಚಕವೂ ಆದದ್ದು. ಆದರೆ ಅದರ ವಾಸ್ತವಾಂಶ?

ಪೋಲಕ್‌ರ ರೀತಿಯ ಯಾಂತ್ರಿಕ ಪ್ರಗತಿಶೀಲತೆಯ ದೃಷ್ಟಿಯಾಗಲೀ ಅಥವಾ ಡಿ. ಆರ್. ಅವರ ಮಾರ್ಕ್ಸ್‌ಪ್ರೇರಿತ ಗತಿತಾರ್ಕಿಕ ಪ್ರಗತಿಶೀಲ ದೃಷ್ಟಿಯಾಗಲೀ ಅವಾಸ್ತವವೆಂದು ನಾನು ಅಲ್ಲಗಳೆಯುತ್ತಿಲ್ಲ. ಆದರೆ ಈ ವಾದಗಳು ಆಂಶಿಕವಾಗಿ ಮಾತ್ರ ನಿಜ.

ಉದಾಹರಣೆಗೆ ಪ್ರಾಚೀನ ಭಾರತದ ಕಾವ್ಯಕರ್ಮ ಮತ್ತು ಕಾವ್ಯಧರ್ಮಗಳನ್ನು ಏಕರೂಪತೆಗಿಳಿಸಲು ಸಾಧ್ಯವೆ? ಸಂಸ್ಕೃತದ ಪ್ರಭಾವ ಆ ಸಂದರ್ಭದಲ್ಲಿ ಪ್ರಧಾನವಾದರೂ ಅದೊಂದೇ ನಿರ್ಣಾಯಕವಲ್ಲ. ಜೊತೆಗೆ ತಮಿಳು ಸಾಹಿತ್ಯ ಪರಂಪರೆಗೆ ತನ್ನದೇ ಆದ ಸ್ವಧರ್ಮವಿದೆ. 'ತಮಿಳಗಂ'ನ ಮೊದಲ ಅಧ್ಯಾಯದ ಅತ್ಯಂತ ರಸವತ್ತಾದ ಭಾಗದಲ್ಲಿ ಶೆಟ್ಟರ್ ಅವರು ತಮಿಳು ಮತ್ತು ಸಂಸ್ಕೃತ ಕಾವ್ಯಧರ್ಮಗಳ ಸ್ವಧರ್ಮಗಳ ತುಲನಾತ್ಮಕ ಚಿಚ್ಚುನೋಟವನ್ನು ನೀಡಿದ್ದಾರೆ. ಈ ಎರಡು ಪರಂಪರೆಗಳ ದೃಷ್ಟಿ ತೀರಾ ಭಿನ್ನ. ತೋರುಮೊಲೆಗಳ, ತಾವರೆ ಮೋರೆಯ, ತೆಲುನಡುವಿನ, ದೊಡ್ಡ ಅಂಡುಗಳ ಹೆಂಗಸರನ್ನು ಕೀರ್ತಿಸುವ ಸಂಸ್ಕೃತ ಪರಂಪರೆಗೂ ಅಡಗಿಕೊಂಡಿರುವ ಚೆಲುವನ್ನು ಅರಸುವ ತಮಿಳು ಸೌಂದರ್ಯಪ್ರಜ್ಞೆಗೂ ತೀರಾ ವ್ಯತ್ಯಾಸ. 'ತೊಲ್'ನ ವ್ಯಾಖ್ಯಾನಗಳು ಬರುವ ಹೊತ್ತಿಗೆ ಆ ಕೃತಿಯನ್ನು ನೋಡುವ ದೃಷ್ಟಿ ಹೇಗೆ ಸಂಸ್ಕೃತೀಕರಣಗೊಂಡಿತ್ತೆಂದು ಇಳಕ್ಕುವನಾರ್‌ನಂಥ ವಿದ್ವಾಂಸ ಗುರ್ತಿಸಿದ್ದಾನೆ.

ಅದೇನೆ ಇರಲಿ, ಪ್ರಾಚೀನ ಭಾರತದಲ್ಲಿ ಈ ಎರಡೂ ಪರಂಪರೆಗಳು ಸಮಾನಾಂತರವಾಗಿ: ಮೀಮಾಂಸೆಗಳಾಚೆಗಿನ ಸಮಾನಾಂತರ ಪರಂಪರೆಗಳೊಂದಿಗೆ ಕೆಲಸ ಮಾಡಿವೆ. ಉದಾಹರಣೆಗೆ, ಆಳ್ವಾರ್-ನಾಯನ್ನಾರ್‌ರ ಭಕ್ತಿಕಾವ್ಯದಲ್ಲಿ ರೂಪುತಾಳುವ ಆಕೃತಿಗಳು ಪ್ರಧಾನವಾಗಿ ತಮಿಳು ಸ್ವಲ್ಪ ಮಟ್ಟಿಗೆ ಸಂಸ್ಕೃತ ಪರಂಪರೆಗಳಿಂದ ಪೋಷಿಸಲ್ಪಟ್ಟವೆಯಾದರೂ ಇತರ ಸಣ್ಣಪುಟ್ಟ ಪರಂಪರೆಗಳ ಪ್ರಭಾವವನ್ನು ಒಳಗೊಂಡಿರುವುದಕ್ಕೆ ಆಂಡಾಳ್ ಬರೆದ 'ತಿರುಪ್ಪಾವೈ' ಒಂದು ಅತ್ಯುತ್ತಮ ಉದಾಹರಣೆ. ಅಲ್ಲಿ 'ಶಂಗತ್ತಮಿಳ್' ಇದೆ. ದ್ರಾವಿಡರ ಲಾಗಾಯ್ತಿನ ಆಚರಣೆಯಾದ 'ಪಾವೈ' ಇದೆ; ವಲಸೆ ಬಂದ ಗಂಗಾತಟದ ಗೋವಳಿಗ ಜನಾಂಗದ ಸ್ಮೃತಿಯ ಕೃಷ್ಣ ಕತೆಯಿದೆ: ವೈದಿಕ ಪರಂಪರೆಯ ಮರುದನಿಗಳೂ ಇವೆ. ಹೀಗೆ 'ತಿರುಪ್ಪಾವೈ' ಹಲವು ಪರಂಪರೆ ಮತ್ತು ಪ್ರಕ್ರಿಯೆಗಳ ಮೇಳವಾಗಿ ತೋರುತ್ತದೆ. ಸಾಹಿತ್ಯ ಕೃತಿಗಳ ಬಗ್ಗೆ ಹೇಳಬಹುದಾದ ಈ ಮಾತನ್ನು ಸಾಹಿತ್ಯ ಪರಂಪರೆಗಳಿಗೂ ಅನ್ವಯಿಸಬಹುದೇನೊ.

'ತೊಲ್' ನಿರ್ಮಿಸಿರುವ ಕಾವ್ಯಸಿದ್ಧಾಂತ ಹಲಪ್ರದೇಶಗಳ ನಡೆ-ನುಡಿಗಳ ಸಂಕರದ ಫಲ. ಮುಂದಿನ ಯುಗಗಳ ಭಕ್ತಿಸಾಹಿತ್ಯ ಸಂಸ್ಕೃತಿಗಳೂ ಹಾಗೆ. ಶಿವನನ್ನು 'ವಡಮೊಟಿಯುಂ ತೆನ್‌ಮೊಟಿಯುಂ ಆನಾನವನ್' ಅಂದರೆ 'ವಡನುಡಿಯೂ ತೆನ್‌ನುಡಿಯೂ ಆದವನು' ಎಂದು ಅಪ್ಪರ್ ಕೀರ್ತಿಸುತ್ತಾರೆ. ಕನ್ನಡದ ವಚನ ಸಮುಚ್ಚಯವನ್ನು ನೋಡಿದಾಗಲೂ ಅಲ್ಲಿ ಹಲ ಪರಂಪರೆಗಳ ಮುಖಾಮುಖಿ ಮತ್ತು ಸಂಕರಗಳು ಏಕಕಾಲದಲ್ಲಿ ನಡೆದಿವೆ. ಕುಮಾರಸ್ವಾಮಿ ಗಳು ಗುರ್ತಿಸಿದ ಹಾಗೆ ವಚನಕಾರರ ಅಂಕಿತಗಳೇ ಸಾಂಸ್ಕೃತಿಕ ಸಂಘರ್ಷ ಮತ್ತು ಸಂಕರಗಳ ಕುರುಹುಗಳು.

ಅಂದರೆ ಪೋಲಕ್‌ರ ಮತ್ತು ಡಾ. ಡಿ. ಆರ್. ಅವರ ಏಕರೂಪೀ ಅಥವಾ ದ್ವಂದ್ವಾತ್ಮಕ ಕಥನಗಳನ್ನು ದಾಟದ ಬಹುಸ್ತರೀಯ ಸಂಘರ್ಷ-ಸಂಕರಾತ್ಮಕ ಇತಿಹಾಸ ಮತ್ತು ಸಾಹಿತ್ಯ ಚರಿತ್ರೆಗಳು ನಿಜಕ್ಕೆ ಹೆಚ್ಚು ನಿಕಟವಾಗಬಲ್ಲವು. ಇತಿಹಾಸಕಾರ ಇಲ್ಲಿ ಜೇಮ್ಸ್ ಬಾಂಡ್ ಮತ್ತು ಚೆಗವಾರಾರ ಪಾತ್ರದ ಜೊತೆಗೆ ನಿಷ್ಪಕ್ಷಪಾತಿಯಾದ ನ್ಯಾಯಾಧೀಶನ ಕೆಲಸವನ್ನೂ ಮಾಡಬೇಕಾಗುತ್ತದೆ. ಚರಿತ್ರೆ ಮತ್ತು ಸಾಹಿತ್ಯ ನಿರ್ಮಾಣದಲ್ಲಿ ಪರಸ್ಪರ ಭಿನ್ನ ಜನಪದಗಳು, ಭಾಷೆಗಳು, ಸಾಹಿತ್ಯಗಳು ಹೇಗೆ ಹೇಗೆ ಸಂಘರ್ಷ, ಸಂಕರ ಮತ್ತು ಕೊಡುಕೊಳೆಗಳಲ್ಲಿ ತೊಡಗಿರುತ್ತವೆಂಬುದನ್ನು ಈ ರೀತಿಯಲ್ಲಿ ವಿವರಿಸಿರುವ ಕಾರಣ ಶೆಟ್ಟರ್ ಅವರು ಇನ್ನೊಂದು ಬಗೆಯ ಸಾಹಿತ್ಯಚರಿತ್ರೆಯ ಹರಿಕಾರರಾಗಿ ಕಾಣತೊಡಗುತ್ತಾರೆ. ಇದೇ ತೆರನ ಅನೇಕಾಂತವಾದೀ ಮಾದರಿಯನ್ನು ರಿಚ್ ಫ್ರೀಮನ್ ಮಧ್ಯಕಾಲೀನ ಮಲೆಯಾಳಂ ಭಾಷೆ ಮತ್ತು ಸಾಹಿತ್ಯ ಚರಿತ್ರೆಯ ಬಿಚ್ಚುನೋಟದಲ್ಲಿ ಬಳಸಿರುವುದನ್ನು ಇಲ್ಲಿ ನೆನೆಯಬಹುದು.

೬

ಮೇಲೆ ಸೂಚಿಸಿದ ಬಹು ಮಜಲಿನ ಪ್ರಕ್ರಿಯೆಯ ಹಿನ್ನೆಲೆಯಲ್ಲಿ ಅನುವಾದಗಳ ಪಾತ್ರ ತುಂಬಾ ಪ್ರಧಾನ. ಆಧುನಿಕ ಪೂರ್ವ ಯುಗದಲ್ಲಿ ಮಾತ್ರವಲ್ಲ ಇಂದಿಗೂ ಕೂಡ ಅನುವಾದ ಸಾಂಸ್ಕೃತಿಕ ಬೆಸುಗೆಯ ಒಂದು ಪ್ರಧಾನ ಸಾಧನವಾಗಿದೆ. ಜಗತ್ತಿನ ಪ್ರಾಚೀನ ಕಥನಕಾವ್ಯಗಳು– ರಾಮಾಯಣ, ಮಹಾಭಾರತ, ಗಿಲ್ಗಿಮಿಶ್, ಬೇವೂಲ್ಫ್, ಒಡಿಸ್ಸಿ, ಇಲಿಯಡ್ – ಮೂಲದಲ್ಲೇ ಅನುವಾದಗಳು. ಅವು ಮೌಖಿಕ ಪರಂಪರೆಯಿಂದ ಲಿಪಿಸಂಸ್ಕೃತಿಗೆ ತುರ್ಜುಮೆಯಾಗಿ ಬಂದವು. ಸಾಂಸ್ಕೃತಿಕ ಆದಾನಪ್ರದಾನವಾಗಿ ಅನುವಾದ ಪ್ರಕ್ರಿಯೆ ಕೇವಲ ಭಾಷಿಕ ಪ್ರಕ್ರಿಯೆಯಾಚೆಗೂ ಹಬ್ಬಿಕೊಳ್ಳುವ ಚಟುವಟಿಕೆ. ಆಧುನಿಕ ಅನುವಾದಚಿಂತನೆ ಮೂಲ ಮತ್ತು ಅನುವಾದಿತ ಪಠ್ಯಗಳ ಸಾರೂಪ್ಯವನ್ನು ಆಧರಿಸಿದೆ. ಆದರೆ ಆಧುನಿಕ ಪೂರ್ವ ಯುಗದ ಅನುವಾದ ತಿಳಿವಳಿಕೆ ಪಾಠಸಾರೂಪ್ಯಕ್ಕಿಂತ ಮುಖ್ಯವಾಗಿ ಆಶಯ ಮತ್ತು ತಿರುಳಿನ ಸಾರೂಪ್ಯವನ್ನು ಆಶ್ರಯಿಸಿದ್ದು. ಅದ್ದರಿಂದ ಅದನ್ನು ರೂಪಾಂತರ ಎಂದು ಕರೆದರೆ 'ಕವಿರಾಜಮಾರ್ಗ'ವೂ ಈ ರೀತಿಯ ಅನುವಾದವೇ. ಆದರೆ ದೂರದ ದಂಡಿ-ಭಾಮಹರ ಕೃತಿಗಳಿಂದ ಪ್ರೇರಣೆ ಪಡೆದ ಈ 'ಅನುವಾದ' ಯಾಕೆ ತಮಿಳು ಪರಂಪರೆಗೆ ಮಿಡಿಯಲಿಲ್ಲ? 'ಕವಿರಾಜಮಾರ್ಗ'ದ ಮಲಯಾಳಂ ಸಂವಾದಿಕೃತಿ 'ಲಲಿತತಿಲಕಂ' ಅತ್ತ ಸಂಸ್ಕೃತ ಇತ್ತ ತಮಿಳು ಎರಡರಿಂದಲೂ ಪ್ರೇರಿತವಾಗಿದೆ. ಪಾಠಗಳ ಅನುವಾದದಲ್ಲಿ ಮಾತ್ರವಲ್ಲ, ಪರಿಕಲ್ಪನೆಗಳ ಅನುವಾದದಲ್ಲೂ ಕನ್ನಡ ಪರಂಪರೆ ಯಾಕೆ ಸಂಸ್ಕೃತದ ಕಡೆ ಮುಖ ಮಾಡಿತು? ತಮಿಳಿನ ಯಾವುದೇ ಮೇರುಕೃತಿ ಇಡೀ ಎರಡನೆಯ ಸಹಸ್ರಮಾನದಲ್ಲಿ ಯಾಕೆ ಕನ್ನಡಕ್ಕೆ ಬರಲಿಲ್ಲ? ತಮಿಳುನಾಡಿನ ಭಕ್ತಿಯ ಪ್ರವಾಹ ಹನ್ನೆರಡನೆ ಶತಮಾನದಲ್ಲಿ ಕರ್ನಾಟಕಕ್ಕೆ ಹರಿದು ಬಂದಾಗ ತಮಿಳು ಶಿವಭಕ್ತರ ಕತೆಗಳನ್ನು ರಗಳೆಗಳ ಮೂಲಕ ಕನ್ನಡಕ್ಕೆ ತಂದವನು ಹರಿಹರನೊಬ್ಬನೆ. ಇನ್ನು ತಮಿಳುನಾಡಿನಲ್ಲೇ ನೂರಾರು ವರ್ಷ ಭೂಗತವಾಗಿದ್ದ ಶಂಗಂ ಕಾವ್ಯವಾಗಲೀ ಕಾವ್ಯಮೀಮಾಂಸೆಯಾಗಲೀ, ಕನ್ನಡಕ್ಕೆ ಬರತೊಡಗಿದ್ದು ತಮಿಳುನಾಡಿನಲ್ಲಿ ಅದು ಪುನರ್ಜನ್ಮ ಪಡೆದ ಸುಮಾರು ಒಂದು ನೂರು ವರ್ಷಗಳ ನಂತರ– ಅಂದರೆ ತೀರಾ ಇತ್ತೀಚೆಗೆ. ಕನ್ನಡ ಆಧುನಿಕ ಪೂರ್ವ ಯುಗದಲ್ಲಿ ಸಂಸ್ಕೃತ-ಪ್ರಾಕೃತಗಳಿಂದ ಆಧುನಿಕ ಯುಗದಲ್ಲಿ ಇಂಗ್ಲಿಶಿನಿಂದ ಬೇಕಾದಷ್ಟು ಪಡೆದುಕೊಂಡಿದೆ. ಆದರೆ ನೆರೆಯೂರಿನ ತಮಿಳಿನಿಂದ ಪಡೆದುಕೊಳ್ಳಬೇಕಾದ್ದು ಬೇಕಾದಷ್ಟಿದೆ. ಜಾರ್ಜ್ ಹಾರ್ಟ್ ಅವರ ವಿಶ್ಲೇಷಣೆಯ ಪ್ರಕಾರ ಸಂಸ್ಕೃತ ಕಾವ್ಯಮೀಮಾಂಸೆಯ ಹೆಮ್ಮೆಯಾಗಿರುವ ಧ್ವನಿ ಸಿದ್ಧಾಂತಕ್ಕೆ ಪ್ರೇರಣೆ ಪ್ರಮುಖವಾಗಿ ಬಂದದ್ದು ತಮಿಳು ಶಂಗಂ ಕಾವ್ಯದಿಂದಲೇ ಹೊರತು, ಧ್ವನಿ ಪೂರ್ವ ಸಂಸ್ಕೃತ ಕಾವ್ಯದಿಂದಲ್ಲ.

ಕನ್ನಡಿಗರ ಮಟ್ಟಿಗೆ ನೆನೆಗುದಿಗೆ ಬಿದ್ದಿದ್ದ ಈ ಮಾನಾಡಿ ಕಾವ್ಯ ಫಸಲನ್ನು ಅವರ ಎಲ್ಲಿ

ಸಾಂಸ್ಕೃತಿಕ ಮತ್ತು ಸಾಂದರ್ಭಿಕ ಸಂಕೀರ್ಣತೆಗಳೊಂದಿಗೆ ತಲಸ್ಪರ್ಶಿಯಾಗಿ ಕನ್ನಡಿಗರಿಗೆ ಪರಿಚಯ ಮಾಡಿಕೊಟ್ಟು ಶೆಟ್ಟರ್ ಅವರು ಕವಿರಾಜಮಾರ್ಗಕ್ಕಿಂತ ಭಿನ್ನವಾದ ಕವಿಜನಮಾರ್ಗದ ಸಾಧ್ಯತೆಯನ್ನು ಇಲ್ಲಿ ತೆರೆದಿದ್ದಾರೆ. ಜೊತೆಗೆ ಇವತ್ತಿನ ಕನ್ನಡ ಪ್ರದೇಶದವರು ಶಂಗಂ ಕಾವ್ಯ ಸಮುಚ್ಚಯಕ್ಕೆ ನೀಡಿದ ತಮಿಳು ಸಂಗಂ ಕವಿತೆಗಳಲ್ಲಿ ಕೆಲವನ್ನು ಆಯ್ದು ಅಚ್ಚುಕಟ್ಟಾಗಿ ಅನುವಾದ ಮಾಡಿಕೊಟ್ಟಿದ್ದಾರೆ. ಕಾವ್ಯಸೂಕ್ಷ್ಮತೆ ಮುಕ್ಕಾಗದ ಹಾಗೆ ಸಂಸ್ಕೃತಿ ವಿಶಿಷ್ಟವಾದ ಅಂಶಗಳನ್ನು ಈ ಅನುವಾದಗಳಲ್ಲಿ ಕಟ್ಟಿಟ್ಟಿದ್ದಾರೆ. ಅಲ್ಲದೆ ಕನ್ನಡದ ವಿಪುಲ ಅನುವಾದ ಸಾಹಿತ್ಯದಲ್ಲಿದ್ದ ಒಂದು ದೊಡ್ಡ ಕೊರತೆಯನ್ನು ತುಂಬಿಕೊಟ್ಟಿದ್ದಾರೆ.

ಭಾರತೀಯತೆಯ ಬಗ್ಗೆ, ಕನ್ನಡದ ಬಗ್ಗೆ ತಮಿಳು-ಕನ್ನಡ ಬಾಂಧವ್ಯದ ಬಗ್ಗೆ, ಸಾಹಿತ್ಯ-ಸಂಸ್ಕೃತಿಗಳ ಬಗ್ಗೆ ಹೊಸ ರೀತಿಯ ಚಿಂತನೆ ಮತ್ತು ವಿಶ್ಲೇಷಣೆಗಳನ್ನು ಪ್ರೇರೇಪಿಸುವ ಶೆಟ್ಟರ್ ಅವರ ಈ ಅಪೂರ್ವ ಲೇಖನಗಳನ್ನು ನಾನು ಸ್ವಾಗತಿಸುತ್ತೇನೆ. ಇತರ ಓದುಗರೂ ಒಳನೋಟಗಳ ಈ ಗಣಿಯಿಂದ ಅನರ್ಘ್ಯವಾದ ದ್ರವ್ಯಗಳನ್ನು ಪಡೆಯಬಹುದು.

೭

ಈ ಬರಹವನ್ನು ಮುಗಿಸುವ ಮುಂಚೆ ಇನ್ನೊಂದು ಮಾತು ನೆನಪಾಗುತ್ತಿದೆ. ಶೆಟ್ಟರ್ ಅವರ 'ಪರ್‌ಸೂಯಿಂಗ್ ಡೆತ್' ಎಂಬ ಇಂಗ್ಲಿಶ್ ಪುಸ್ತಕದ ವಿಮರ್ಶೆ ಮಾಡುವ ಸಂದರ್ಭದಲ್ಲಿ ನಾನು 'ಬಹಳ ಕಡಿಮೆ ಪ್ರಚಾರದಲ್ಲಿರುವ ವಸ್ತುವಿನ ಬಗ್ಗೆ ಬರೆಯುತ್ತಲೇ ಶೆಟ್ಟರ್ ಅವರು ಎಲ್ಲರಿಗೂ ಮುಖ್ಯವಾಗುವ ಒಳನೋಟಗಳನ್ನು ನೀಡುತ್ತಾರೆ' ಎಂದು ಬರೆದಿದ್ದೆ. ರೊಮಿಲಾ ಥಾಪರ್, ಇರ್ಫಾನ್ ಹಬೀಬ್‌ರಂತೆ ಶೆಟ್ಟರ್ ಟಾಪಿಕಲ್ ವಸ್ತುವಿನ ಬಗ್ಗೆ ಬರೆಯುವುದಿಲ್ಲ. ಈ ಪುಸ್ತಕ ಕೂಡ ನಮ್ಮೆಲ್ಲರನ್ನು ಸದ್ಯ ಆವರಿಸುತ್ತಿರುವ ಸಮಸ್ಯೆಯ ಬಗ್ಗೆ ಪರೋಕ್ಷವಾಗಿ ನಮ್ಮನ್ನು ಎಚ್ಚರಿಸುತ್ತದೆ. ಕನ್ನಡ ನಾಡು ನುಡಿ ಸಂಸ್ಕೃತಿಗಳ ನಿರ್ವಚನದಲ್ಲಿ ಆಂಶಿಕ ಸತ್ಯವನ್ನೇ ಬಹುತೇಕ ಹಿಂದಿನವರು ಹೇಗೆ ಅಂತಿಮ ಸತ್ಯವೆಂದು ಪ್ರತಿಪಾದಿಸುತ್ತಾರೆ ಎಂಬುದನ್ನು ಹಿಂದೆ ಆಗಲೇ ಪ್ರಸ್ತಾಪಿಸಿದ್ದೇನೆ. ಆದರೆ ಸಾಹಿತ್ಯದಲ್ಲಾಗಲೀ ಚರಿತ್ರೆಯಲ್ಲಾಗಲೀ ಸತ್ಯವೆಂಬುದು ಹಠಾತ್ ಪ್ರತ್ಯಕ್ಷವಾಗುವ ಅಥವಾ ಆಯ್ಕೆದಾರರಿಗೆ ಕೈಗೆ ಸಿಕ್ಕುವ ಶಕ್ತಿಯಲ್ಲ. ಅದು ಹಂತ ಹಂತವಾಗಿ ಗೋಚರಿಸುತ್ತಾ ಹೊರಬರುವಂಥದು. ಇಂದಿನ ಸಾಂಸ್ಕೃತಿಕ ಭಿತ್ತಿಯಲ್ಲಿ ನಮ್ಮ ರಾಜಕೀಯದಲ್ಲಿ ಆಗುತ್ತಿರುವಂತೆ ಸಂಕುಚಿತವಾದ ಆಂಶಿಕ ಸತ್ಯಗಳನ್ನು ತಮ್ಮ ಅನುಕೂಲಕ್ಕನುಸಾರವಾಗಿ ಎಗ್ಗಿಲ್ಲದೆ ಹಿಗ್ಗಲಿಸುವ ಆತುರದ ಅಸಹನೀಯತೆಯ ಅಸಹ್ಯ ಪ್ರವೃತ್ತಿ ಎಲ್ಲ ಕಡೆ ಸೋಂಕು ಜಾಡ್ಯದಂತೆ ಹಬ್ಬುತ್ತಿದೆ. ಜಾತೀಯ, ಉಪಜಾತೀಯ, ಉಪಉಪಜಾತೀಯ ವಕ್ತಾರರೆಲ್ಲರೂ ನಿಜಗಳನ್ನು ತಮ್ಮ ಜೊತೆಗಾರರೆಂದು ಪರಿಗಣಿಸದೇ ಎದುರಾಳಿಗಳಂತೆ ನೋಡತೊಡಗಿದ್ದಾರೆ. ತಮ್ಮ ಜೊತೆಗಿನ ಸತ್ಯಗಳನ್ನು ಹೇಗಾದರೂ ಮಾಡಿ ಭೂಗತಗೊಳಿಸುವ ತರಾತುರಿಯಲ್ಲಿದ್ದಾರೆ. ಆದರೆ ಶೆಟ್ಟರ್ ಅವರ ಬಿಚ್ಚುನೋಟದ ಕ್ರಮ ಮತಿಗೆಡದ ತಾಳ್ಮೆಯಿಂದ, ಅನ್ವೇಷಕನ ಶ್ರದ್ಧೆಯಿಂದ ನಿಜದ ಗೋಜು ಗೋಜಲುಗಳನ್ನು ಒಂದೊಂದಾಗಿ ಬಿಡಿಸುತ್ತಾ ಹೋಗುವುದು....

ಅಲ್ಲಮಪ್ರಭು ಹೇಳಿದ ಹಾಗೆ 'ಮಣಿಯನೆಣಿಸಿ ದಿನವ ಕಳೆಯಲುಬೇಡ. ಒಮ್ಮೆಯಾದರೂ ನಿಜದ ನೆನಹೇ ಸಾಕು. ಒಂದರೆ ಗಳಿಗೆಯಾದರೂ ನಿಜದ ನೆನಹೇ ಸಾಕು.'

ಕವಿರಾಜಮಾರ್ಗ ಲೇಖನಗಳ ಈ ಓದಿನಿಂದ ನಾನಂತೂ ಮಣಿ ಎಣಿಸುವ ಬಾಯಿಲೆಯಿಂದ ಬಹುಮಟ್ಟಿಗೆ ಗುಣ ಹೊಂದಿದ್ದೇನೆ.

✣ ಡಾ. ಎಚ್. ಎಸ್. ಶಿವಪ್ರಕಾಶ್ : ಸ್ಕೂಲ್ ಆಫ್ ದಿ ಆರ್ಟ್ಸ್ ಆಂಡ್ ಈಸ್ತಟಿಕ್ಸ್, ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ, ನವದೆಹಲಿ-೧೧೦ ೦೬೭ ✣

ಪುಸ್ತಕ ಪರಿಶೀಲನೆ

೧. ತಬಲಜಿ : ಬಸವರಾಜ ಡೋಣೂರ

ಬ್ಯಾಲದಕೆರ ಪ್ರಕಾಶನ, ಬೆಳ್ಳೂರು ಹೋಬಳಿ, ತಾ. ನಾಗಮಂಗಲ, ಪ್ರಮು. ೨೦೦೫, ಪು. ೧೦೦, ರೂ. ೬೦/-

ಇದು ಬಸವರಾಜ ಡೋಣೂರರ ಮೂರನೆಯ ಕಥಾಸಂಕಲನ. ಕಥೆ ಹಾಗೂ ಕಾದಂಬರಿಗಳ ಯುಗ ಮುಗಿದೇ ಹೋಯಿತೇನೊ ಎಂದು ನಮ್ಮ ಸೃಜನಶೀಲ ಜಗತ್ತು ತಬ್ಬಿಬ್ಬಾಗಿರುವಾಗ ಇಷ್ಟೊಂದು ತೀವ್ರಗತಿಯಲ್ಲಿ ಕಥೆ ಹೇಳಲು ಹೊರಟಿರುವ ಡೋಣೂರರನ್ನು ಅಭಿನಂದಿಸಲೇಬೇಕು.

'ತಬಲಜಿ' ಜಾಗತೀಕರಣದೆಡೆಗೆ ನಾಗಾಲೋಟದಲ್ಲಿರುವ ಸಮಾಜಕ್ಕೊಂದು ಮೂಗುದಾರ. ವರ್ತಮಾನದ ಎಲ್ಲ ಭಾರತೀಯ ಬರಹಗಾರರ ಮುಂದೆ ಪ್ರಗತಿಶೀಲ ಸಾಹಿತ್ಯ ಘಟ್ಟದ ಸಂದರ್ಭದಂಥದೆ ಒಂದು ಸಂದರ್ಭ ಈಗ ನಿರ್ಮಾಣವಾಗಿದೆ. ಐರೋಪ್ಯ ತಂತ್ರಜ್ಞಾನ ಹಾಗೂ ವ್ಯಾಪಾರೀಕರಣದ ಗಾಳಿಯಲ್ಲಿ ಕೊಚ್ಚಿ ಹೋಗುತ್ತಿರುವ ನಮ್ಮ ಹಳ್ಳಿಗಳ, ಜನಪದರ, ಕುಶಲಕರ್ಮಿಗಳ, ಗುಡಿಕೈಗಾರಿಕೆಯವರ, ಆಂತರಿಕ ತಲ್ಲಣಗಳತ್ತ ಮುಖಾಮುಖಿಯಾಗಿಸುವ, ಆತ್ಮಾವಲೋಕನಕ್ಕೆ ಒಳಪಡಿಸುವ ಸಾಹಿತ್ಯ ಹಾಗೂ ಸಾಹಿತಿಗಳು ಈಗ ಬೇಕಾಗಿದ್ದಾರೆ. ಪ್ರಗತಿಶೀಲರ ಸಂದರ್ಭದಲ್ಲಿ ಇರಲಾರದ ಅತೀ ದಯನೀಯವಾದ, ಸಾಂಸ್ಕೃತಿಕ ಹಾಗೂ ಭಾಷಿಕ ಸಮಸ್ಯೆಗಳನ್ನು ವರ್ತಮಾನದ ಎಲ್ಲ ಕ್ರಿಯಾಶೀಲ ಮನಸ್ಸುಗಳು ಎದುರಿಸುತ್ತಿವೆ.

'ತಬಲಜಿ' ಐದೇ ಕತೆಗಳ, ದೀರ್ಘ ನಿರೂಪಣೆಯ ಸಂಕಲನ. ಬಹುಪಾಲು ಕತೆಗಳಲ್ಲಿ ಮುಸ್ಲಿಂ ನಾಯಕಿ ಹಾಗೂ ಶಾಂತನಾಳ ಎಂಬ ಊರುಗಳೇ ಕೇಂದ್ರ ವಸ್ತುಗಳು. ಶಾಂತನಾಳ ಸಾಮಾಜಿಕ ಹಾಗೂ ಸಾಂಸ್ಕೃತಿಕ ವಿಘಟನೆಯ ಈ ಕಾಲಘಟ್ಟದಲ್ಲಿ ನಮ್ಮ ಮೂಲ ಪ್ರಜ್ಞೆಯಂತೆ, ಬಿಟ್ಟ ನೆಲದಂತೆ— ಹೀಗೆ ಕೆಲವು ರೀತಿ ಬಿಚ್ಚಿಕೊಳ್ಳುವ, ಅರಳಿಕೊಳ್ಳುವ ತೆರೆದುಕೊಳ್ಳುವ ಊರು. ಆದರೆ ಬದಲಾವಣೆಯ ಈ ಗಾಳಿಯಲ್ಲಿ ಶಾಂತನಾಳ ಒಂದು ಕಾಲ್ಪನಿಕ ಊರೇ ಆಗಿದ್ದರೂ ಬದಲಾಗದೆ ಇರುವುದು ಒಂದು ಅಚ್ಚರಿ. ಇದೊಂದು ರೀತಿ ಕತೆಗಾರನ ಆದರ್ಶ ರಾಜ್ಯ. ಇಲ್ಲಿ ಎಲ್ಲವೂ ಮುಗ್ಧ, ಸರಳ ಹಾಗೂ ಹೃದಯವಂತಿಕೆಯ ಪ್ರತೀಕ.

'ಮೌನಿ' ನಮ್ಮ ಹಳ್ಳಿಗಳ ಸಂವಿಧಾನದೊಳಗೆ ಕುಸಿದು ಹೋಗುವ, ಉಸಿರಿಲ್ಲದೆ ಬತ್ತುವ ಪ್ರೇಮಿಗಳ ಕತೆ ಒಂದಿಷ್ಟು ನಿಸರ್ಗಸಹಜ ದೈಹಿಕ ಆಕರ್ಷಣೆ, ಆನಂತರ ಪ್ರೇಮಿಗಳ ಜಾತಿ ಕಾರಣ ವಿಘಟನೆ. ಅಂತಹದೆ ಮತ್ತೊಂದು ಕತೆ ಸಂಕಲನದ ಕೊನೆಯಲ್ಲಿ ಬರುವ 'ನಿತ್ಯ ಮುತ್ತೈದೆ'. ಈ ಎರಡೂ ಕತೆಗಳಲ್ಲಿ ಕತೆಗಾರ ಘಟನೆಗಳನ್ನಷ್ಟೇ ವಿವರಿಸುತ್ತ, ಪತ್ರಿಕಾ ವರದಿಯ ಪರಿಧಿಯನ್ನು ಮೀರಿ ಬೆಳೆಯುವುದಿಲ್ಲ. ಕತೆಗಳು, ಓದಿನ ನಂತರ ಮನಸ್ಸು ಕದಡಿದ ನೀರಾಗುವುದಿಲ್ಲ, ತರಂಗಗಳೇಳುವುದಿಲ್ಲ, ಯಾವ ರಿಂಗಣವೂ ಅಲ್ಲಿ ಗೌಣ. ಈ ಎರಡೂ ಕತೆಗಳ ನಾಯಕಿಯರು ಜುಬೇದಾ ಮತ್ತು ರಜಿಯಾ ಇಬ್ಬರ ಮಧ್ಯೆ ತಾತ್ತ್ವಿಕ ವ್ಯತ್ಯಾಸವೇನೂ ಇಲ್ಲ. ಇದು ಒಂದು ರೀತಿಯಲ್ಲಿ ಒಂದೇ ಕತೆಯನ್ನು ಎರಡು ಸಾರಿ ಹೇಳಿದಂತೆ. ಮುನ್ನುಡಿಕಾರರು ಗುರುತಿಸಿರುವಂತೆ 'ಕತೆಗಾರ ಡೋಣೂರರು ಎಲ್ಲಿ ಈ ಕತೆಗಳನ್ನು ಮುಗಿಸಿದ್ದರೋ ಅಲ್ಲಿಂದಲೇ ಪ್ರಾರಂಭಿಸಬೇಕಿತ್ತು!'

'ತಬಲಜಿ', 'ಹೃದಯವಂತ' ಹಾಗೂ 'ಮೌನಿ' ಉತ್ತಮ ಕತೆಗಳು. 'ತಬಲಜಿ' ಸನಾತನವಾದ ಹಾಗೂ ಆರೋಗ್ಯಪೂರ್ಣ ಎಂದು ಆಚರಿಸಲ್ಪಡುತ್ತಿರುವ ಇಡೀ ವೈವಾಹಿಕ ಭಾರತೀಯ ಪದ್ಧತಿಯನ್ನೇ ಪರೀಕ್ಷೆಗೆ ಗುರಿಪಡಿಸಿದರೆ, 'ಹೃದಯವಂತ' ಉತ್ತರ ಕರ್ನಾಟಕದ, ಮನೋವೈಶಾಲ್ಯಕ್ಕೆ ಹೆಸರಾದ ಜಂಗಮ ಸಂಸ್ಕೃತಿಯನ್ನು ಕುರಿತು ಚರ್ಚಿಸುತ್ತದೆ. ಈ ಎರಡು ಕಥೆಗಳು ನಮ್ಮ ಹಳ್ಳಿಗಳಿಗೆ ಶಾಪಪ್ರಾಯವಾದ ಬಡತನ, ಇದಕ್ಕೆ ಕಾರಣವಾದ ಚಟಗಳನ್ನು ಕುರಿತು ಬಹಳಷ್ಟು ಮಾತನಾಡುತ್ತವೆ. ಆದರೆ ಕಾದಂಬರಿಯ ವ್ಯಾಪ್ತಿಗೆ ಸಶಕ್ತವಾಗಿರುವ ವಸ್ತು ಮತ್ತು ವ್ಯಕ್ತಿಗಳನ್ನು ಕತೆಗಾರ ಬಲವಂತವಾಗಿ ಕತೆಯ ಚೌಕಟ್ಟಿಗೆ ಒಳಪಡಿಸಿದ್ದಾನೆ ಎನ್ನಿಸದೆ ಇರಲಾರದು.

'ಮುಕ್ತಿ' ಭಿನ್ನ ನಿರೂಪಣಾ ಶೈಲಿಯೊಂದಿಗೆ, ವಿಷಯವಸ್ತುವಿನೊಂದಿಗೆ ಬೆಳೆಯುವ ಕತೆ. ಎಲ್ಲ ಕಾಲಕ್ಕೂ ಅಮೂಲ್ಯ ಎನ್ನಿಸುವ ಸಂದೇಶವನ್ನು ಈ ಕತೆ ಸಾರುತ್ತದೆ.

ಬಸವರಾಜ ಡೋಣೂರರರು ಬದುಕನ್ನು ಬಹಳಷ್ಟು ಅರ್ಥಪೂರ್ಣ ದೃಷ್ಟಿಕೋನದಿಂದ, ಹೃದಯ ಸೌಂದರ್ಯದಿಂದ ನೋಡುವ ಆದರ್ಶಜೀವಿ ಎಂಬುವುದು ಅವರ ಕತೆಗಳ ನಾಯಕ ಮತ್ತು ನಾಯಕಿಯರ ಮೇಲೆ ಮಾನಸಿಕವಾಗಿ ಸವಾರಿ ಮಾಡುವುದರ ಮೂಲಕ ತೋರಿಸಿಕೊಟ್ಟಿದ್ದಾರೆ. ಮುಕ್ತಿ ಅವರ ಭಾಷೆಯಲ್ಲ. ಅವರ ಯಾವ ಪಾತ್ರಗಳಿಗೂ ಅವರಿಂದ ಮುಕ್ತಿಯಿಲ್ಲ. ತಮ್ಮಿಂದ ಪಾತ್ರಗಳನ್ನು ಹೊರಗಿಟ್ಟು ನೋಡುವ ಕಲಾತ್ಮಕತೆಯನ್ನು ಡೋಣೂರರರು ಮೈಗೂಡಿಸಿಕೊಂಡರೆ ಇನ್ನೂ ಒಳ್ಳೆಯ ಕತೆಗಳನ್ನು ನೀಡಬಲ್ಲರು.

– ಡಾ. ಆರ್. ಜಿ. ಮಠಪತಿ, ಅಧ್ಯಾಪಕರು, ಇಂಗ್ಲಿಷ್ ಸ್ನಾತಕೋತ್ತರ ವಿಭಾಗ
ಬಸವೇಶ್ವರ ಕಲಾ ಮಹಾವಿದ್ಯಾಲಯ, ಬಾಗಲಕೋಟೆ-೫೮೭ ೧೦೧

೨. ಅನಾಮಿಕನ ಉಲುಹು : ಸಂ. ಮೋಹನ ಹಬ್ಬು

ಪ್ರಜ್ಞಾ ಪ್ರಕಾಶನ, ಮಂದಿಗೆ, ಅಂಕೋಲಾ-೫೮೧ ೩೧೪, ಪ್ರಮು. ೨೦೦೪, ಪು. ೮೮, ರೂ. ೪೦/-

'ಜನವಾಣಿ ಬೇರು ಕವಿವಾಣಿ ಹೂವು' ಎಂಬ ಮಾತಿದೆ. ಶಿಷ್ಟ ಸಾಹಿತ್ಯದ ರಚನೆಗಳ ಹಿಂದೆ ಎಷ್ಟೋ ಅನಾಮಿಕ ಉಲುಹುಗಳು ಕೆಲಸ ಮಾಡಿರುತ್ತವೆ. ರಾಷ್ಟ್ರೀಯ, ಸಾಮಾಜಿಕ ನೇತಾರರ ತಾತ್ವಿಕತೆ, ಪ್ರಣಾಳಿಕೆಗಳ ಹಿಂದೆ ಕೂಡ ಅನೇಕ ಜನರ ಜೀವನಾನುಭವಗಳ ಅನಾಮಿಕ ಉಲುಹುಗಳು ಇದ್ದೇ ಇರುತ್ತವೆ. ಈ ಮಾತಿಗೆ ದಾಖಲೆಯಾಗಿ 'ಅನಾಮಿಕನ ಉಲುಹು' ಕೃತಿಯನ್ನು ಗಮನಿಸಬೇಕು. ಇದು ೧೯೬೨ ರಲ್ಲಿ ತೀರಿಹೋದ ಸಗುಣ ಶಂಕರ ಹಬ್ಬು ಅವರು ಉಳಿಸಿಹೋಗಿರುವ ವಿಚಾರ, ವಿಡಂಬನೆ, ಕವನಗಳ ಸಂಗ್ರಹ. ಆ ವ್ಯಕ್ತಿ ತೀರಿಹೋಗಿ ೪೨ ವರ್ಷಗಳ ನಂತರ ಇದು ಪ್ರಕಟವಾಗಿದೆ. ಅವರ ಮಗ ಮೋಹನ ಹಬ್ಬು ಸಂಪಾದಿಸಿದ್ದಾರೆ. ಸಾಮಾನ್ಯರಾಗಿ ಉಳಿದು, ಅನಾಮಿಕರಾಗಿ ಕಳೆದುಹೋಗುವ ಅಸಂಖ್ಯಾತರ ಪ್ರತಿನಿಧಿಯಾಗಿ ಆ ವ್ಯಕ್ತಿ ಪ್ರಜಾಪ್ರಭುತ್ವದ ಈ ಕಾಲದಲ್ಲಿ ಸಾಮಾನ್ಯರ ಚರಿತ್ರೆಗೂ ಅವಕಾಶವಾಗಬೇಕೆಂಬ ವಾದಕ್ಕೆ ಪುಷ್ಟಿ ನೀಡುವಂತೆ ಈ ಉಲುಹುಗಳನ್ನು ಉಳಿಸಿಹೋಗಿದ್ದಾರೆ.

ಈ ಕೃತಿಯಲ್ಲಿ ಆರು ಭಾಗಗಳಿವೆ. 'ವಿಚಾರ ಲಹರಿ' ಮೊದಲ ಮತ್ತು ಪ್ರಮುಖ ಭಾಗ. ಇದರಲ್ಲಿ ಭಾರತೀಯ ಏಳಿಗೆ ಕುರಿತ ಅತ್ಯಂತ ವಸ್ತುನಿಷ್ಠವಾದ ಚಿಂತನೆಗಳಿವೆ. ದೇವಸ್ಥಾನಗಳ ನಿರ್ವಹಣೆಯಿಂದ ಹಿಡಿದು ಸ್ತ್ರೀ-ಪುರುಷರ ಸಮಾನತೆ, ರೈತರ ದೈನ್ಯಾವಸ್ಥೆ, ಕೋಮುವಾದ, ರಾಜಕಾರಣಿಗಳ ಭ್ರಷ್ಟತೆ, ಅಮೆರಿಕಾ-ಬ್ರಿಟನ್ ಕೂಟಗಳ ದಬ್ಬಾಳಿಕೆ ಮೊದಲಾದ ರಾಜಕೀಯ ಸಾಮಾಜಿಕ ವಿಷಯಗಳ ಸಮಗ್ರ ವ್ಯಾಪ್ತಿ ಇಂದಿಗೂ ಪ್ರಸ್ತುತವಾಗಿರುವ ಸಂಗತಿಗಳ ಮೇಲೆ ಬೆಳಕು ಚೆಲ್ಲುತ್ತದೆ. ಗಾಂಧೀ, ಬೋಸ್, ಸಮಾಜವಾದಗಳ ಗಾಢ ಪ್ರಭಾವಕ್ಕೆ ಒಳಗಾದಂತೆ ತೋರುವ ಸಗುಣಶಂಕರರು ೧೯೪೦ ಕ್ಕೂ ಪೂರ್ವದಲ್ಲಿ, [illegible] ಮೂಡಿಸಿ ಬರೆದಿರುವುದು ಗಮನಾರ್ಹ.

ಒಂದು-ಒಂದೂವರೆ ಪುಟ ವಿಸ್ತಾರದಲ್ಲಿ ಅವರ ಚಿಂತನೆಗಳನ್ನು ಮಂಡಿಸಿದ್ದು, ಅವುಗಳ ತೀವ್ರತೆಗೆ ಒಂದೆರಡು ಉದಾಹರಣೆ ಇಲ್ಲಿವೆ :

ದಿನಾಂಕ : ೧೮-೦೫-೧೯೩೮ : ಅಧಿಕಾರ ಗ್ರಹಣ : .....ಹಿಂದುಸ್ಥಾನವು ಕೃಷಿಪ್ರಧಾನ ದೇಶವಿದ್ದು ಕೃಷಿ ಕರ್ಮದಲ್ಲಿ ಶ್ರಮಪಟ್ಟರೂ ಹೊಟ್ಟೆಗೆ ಅನ್ನ ಸರಿಯಾಗಿ ಸಿಗದೇ ಉಪವಾಸದಲ್ಲಿ ತೊಳಲುತ್ತಿರುವುದು. ಇಂಥ ಸಮಯದಲ್ಲಿ ಕಾಂಗ್ರೆಸ್ಸು ಅಧಿಕಾರಗ್ರಹಣ ಮಾಡಿ ಪ್ರಾಂತಿಕ ಸ್ವಾಯತ್ತತೆಯ ಲಾಭವನ್ನು ಜನರಿಗೆ ಎಷ್ಟರ ಮಟ್ಟಿಗೆ ಮಾಡಿಕೊಡುವದೆಂಬುದೇ ದೊಡ್ಡ ಸಮಸ್ಯೆಯಾಗಿದೆ.

ದಿನಾಂಕ : ೦೭-೦೩-೧೯೪೦ : ಕಾಂಗ್ರೆಸ್ಸು ಮಾಡಿದ್ದೇನು? : .....ಇಂದು ಕಾಂಗ್ರೆಸ ಪುಢಾರಿಗಳು ಪರಸತ್ತೆಯನ್ನು ಹರಿದೊಗೆಯಬೇಕಾದರೆ ಮೊದಲು ಅಂತರ್ಮುಖಿಗಳಾಗಿ ಆತ್ಮನಿರೀಕ್ಷಣೆ ಮಾಡಿಕೊಳ್ಳಬೇಕು. ದಾಸ್ಯಕ್ಕೊಳಗಾದ ರೈತ ಮತ್ತು ಕೂಲಿಕಾರ ಸಮಾಜವನ್ನು ಮುಕ್ತರನ್ನಾಗಿ ಮಾಡಿ ಅವರನ್ನು ಒಂದು ಶಿಸ್ತಿಗೆ ಒಳಪಡುವಂತೆ ಮಾಡಬೇಕು.....

ದಿನಾಂಕ : ೨೭-೦೩-೧೯೬೦ : ಸ್ವರಾಜ್ಯದ ಫಲ : .....ದರ್ಪದಿಂದ ನಡೆಯುವ ಸರಕಾರವನ್ನು ಉರುಳಿಸಲು ನೊಂದ ಜನತೆ ಹಿಂಸಾಚಾರಕ್ಕೆಳಸಿ ಕ್ರಾಂತಿ ಬಯಸಿದರೆ ಆಶ್ಚರ್ಯಪಡಬೇಕಾಗಿಲ್ಲವಷ್ಟೇ.....

ಅವರ ವಿಡಂಬನೆಗೆ ಒಂದು ಉದಾಹರಣೆ : 'ರಘುಪತಿ ರಾಘವ ಉಪರಾಟೆ / ಪತಿತಪಾವನ ಉಪರಾಟೆ' 'ರಾಜಾರಾಮ ವ ಸೀತಾರಾಮ ಹೋಗಿ 'ಉಪರಾಟೆ'ಯಾಗಿದೆ. ಇದರ ಕಾರಣವಿಷ್ಟೆ... ಪಾವನನು ಪತಿತನಾಗಲು ಪ್ರಾರಂಭವಾಗಿದೆ.' ಕವನಗಳು ವಿಭಾಗದಲ್ಲಿ ಆರೇಳು ಪದ್ಯಗಳು ಸೇರಿದ್ದು, ಕಂದ, ಷಟ್ಪದಿಗಳ ಕಿರುಪ್ರಯೋಗಗಳಿವೆ. ಅವುಗಳಲ್ಲಿಯೂ ರಾಷ್ಟ್ರೀಯ ಸಾಮಾಜಿಕ ವಿಷಯಗಳು ವಸ್ತುವಾಗಿವೆ. ಇದೊಂದು ವೈಭವೀಕರಣವಿಲ್ಲದ ಸರಳ ಸಾಮಾಜಿಕ ಪ್ರಯತ್ನವಾಗಿದ್ದು ಸಂಪಾದಕರು ಅಭಿನಂದನಾರ್ಹರು.

೨. ಬಾಳ ದಾರಿಯಲಿ : ಪ್ರೊ. ಎಸ್. ಆರ್. ಮಳಗಿ

ಅಮಿತ-ಹರ್ಷ ಪ್ರಕಾಶನ, ೧೧೧೧, ೧೯ನೆಯ ಮುಖ್ಯರಸ್ತೆ, ೧ನೆಯ ಬ್ಲಾಕ್, ರಾಜಾಜಿನಗರ, ಬೆಂಗಳೂರು-೫೬೦ ೦೧೦, ಪ್ರಮು. ೨೦೦೫, ಪು. ೬೦, ರೂ. ೪೫/-

ಪ್ರೊ. ಎಸ್. ಆರ್. ಮಳಗಿಯವರು ಕನ್ನಡದ ಹಿರಿಯ ವಿದ್ವಾಂಸರಲ್ಲಿ ಒಬ್ಬರು. ೧೯೩೧ ರಿಂದ ೨೦೦೦ ದ ವರೆಗಿನ ಸುಮಾರು ೭೦ ವರ್ಷಗಳ ಅವಧಿಯಲ್ಲಿ ರಚನೆಗೊಂಡ ಕವಿತೆಗಳಲ್ಲಿ ಆಯ್ದ ೩೪ ಇಲ್ಲಿವೆ. ಕವಿ ಇವುಗಳನ್ನು ಕಾಲಬದ್ಧ ರಚನೆಗಳೆಂದು ಕರೆದಿದ್ದಾರೆ. ಇವು ಲಯಬದ್ಧ, ಛಂದೋಬದ್ಧ ರಚನೆಗಳೂ ಹೌದು. ಇಲ್ಲಿನ ಪದಲಾಲಿತ್ಯ, ಮುಗ್ಧ ಭಾವದ ಸೊಗಸು, ರೂಪಕಗಳ ಸಹಜಸ್ಫುರಣ, ನವೋದಯದ ಕಾವ್ಯಕರ್ಮದ ಕೌಶಲ, ಶ್ರದ್ಧೆ, ಮೌಲ್ಯಪ್ರಜ್ಞೆ– ಇವು ಕವಿತೆಗಳಿಗೆ ಒಟ್ಟಂದದ ಕಂಪನ್ನು, ಮೆರುಗನ್ನು ನೀಡಿವೆ. ನವೋದಯದ ಭಾವಸಾಮಯತೆ, ಕನಸುಗಾರಿಕೆಗಳು ನವ್ಯ ವಿಮರ್ಶೆಯ ಟೀಕೆಗೆ ಒಳಗಾದ ಕಾಲವೊಂದಿತ್ತು. ಆದರೆ ನವೋದಯ ಕಾಲದ ಸಮೃದ್ಧಿ ಮತ್ತು ಶ್ರೇಷ್ಠತೆಗಳನ್ನು ಕಳೆದ ಶತಮಾನದ ಕನ್ನಡ ಕಾವ್ಯ ಮುಂದಿನ ಯಾವ ಕಾಲಘಟ್ಟದಲ್ಲೂ ಪಡೆಯಲು ಸಾಧ್ಯವಾಗಲಿಲ್ಲ ಎಂಬುದೂ ಅಷ್ಟೇ ಸತ್ಯ. ಇಂದಿನ ಕಾವ್ಯ ನವೋದಯದಿಂದ ಕಲಿಯಬೇಕಾದದ್ದು ಬಹಳಷ್ಟಿದೆ ಎಂಬ ಹಿನ್ನೆಲೆಯಲ್ಲಿ ಇಲ್ಲಿನ ಕವನಗಳನ್ನು ಪರಿಭಾವಿಸುವ ಪ್ರಯತ್ನ ನನ್ನದಾಗಿದೆ.

ವೈಚಾರಿಕತೆಯು ಭಾವನೆಗಳನ್ನು ಸಾರಾಸಗಟಾಗಿ ಹುಸಿ, ಟೊಳ್ಳು ಎಂಬಂತೆ ಅರ್ಥೈಸಿದ್ದರ ದುರಂತವನ್ನು ನಾವಿಂದು ನೋಡುತ್ತಿದ್ದೇವೆ. ಮಾನವೀಯ ಭಾವನೆಗಳೇ ಬತ್ತಿದಂತಿರುವ ವ್ಯಾಪಾರೀಕರಣದ ಈ ಸಂದರ್ಭದಲ್ಲಿ ಪ್ರಾಂಜಲ ಮನಸ್ಸಿನ ಭಾವಗಳನ್ನು ಸಮುದಾಯಗಳ ಅರಿವಿನಲ್ಲಿ ಹರಿಸಿಕೊಳ್ಳುವ, ತುಂಬಿಸುವ ಪರಿಶ್ರಮದ ಭಾಗವಾಗಿ ಇಂಥ ಕವಿತೆಗಳನ್ನು ಓದಬೇಕು.

'ಮಗು'ವಿನ ನಿದ್ದೆಯಷ್ಟು ಪ್ರಸಂಗವನ್ನು ಶಾಂತಭಾವದ ಶಮತ್ವದಲ್ಲಿ ಎದ್ದಿ ತೆಗೆಯುವ ಮೊದಲ ಪದ್ಯದ ಕುರಿತು ಸುಮತೀಂದ್ರ ನಾಡಿಗರು ತಮ್ಮ ಮುನ್ನುಡಿಯಲ್ಲಿ ವಿಶದವಾಗಿ ಬರೆದಿದ್ದಾರೆ. tranquility ಆ ಯುಗದ ಮುಖ್ಯ ಕಾಣ್ಕೆ, ಭೂಮಿಕೆ ಎಂಬುದನ್ನು ಗಮನದಲ್ಲಿಟ್ಟುಕೊಂಡೇ ಇಲ್ಲಿನ ರಚನೆಗಳನ್ನು ಸವಿಯಬೇಕು. ಮಳಗಿಯವರ ಕಾವ್ಯ ಈ ಹಿನ್ನೆಲೆಯಲ್ಲಿ ಬೇಂದ್ರೆಯವರ ಒಡನಾಟದಲ್ಲಿದ್ದೂ ಅವರ ಭಾವೋತ್ಕರ್ಷದ ರಭಸದಿಂದ ದೂರವುಳಿದು, ವಿ.ಸೀ., ಪು.ತಿ.ನ. ಅಂಥವರ ಭಾವಶಮನದ ಮಂದ್ರಸ್ಥಾಯಿಗೆ ಒಲಿದಿರುವುದನ್ನು ಕಾಣಬಹುದು.

ಮುತ್ತು ಮಲಗಿತೆಂದು ತಾಯಿ / ಎತ್ತಿ ಮೆಲ್ಲನಪಚಿಕೊಂಡು
ತೊಟ್ಟಿಲೊಳಗೆ ಮಲಗಿಸೆನ್ನ / ತೂಗ ಕರೆದಳು
ಮುದ್ದು ಮೊಗದಿ ಶಿಶುವಿಸೆದೆಯೊ- / -ಳಿದ್ದ ಶುದ್ಧ ಹೃದಯವೆಲ್ಲ
ಎದ್ದು ತೋರಲಾಗ ಮುಗ್ಧ- / -ನಾಗಿ ನೋಡಿದೆನು

ಹರಿಯುವ ಛಂದೋಲಯಗಳನ್ನು ಲೀಲಾಜಾಲವಾಗಿ ಬಳಸುವ ಮಳಗಿಯವರು ನಿಖರತೆ(accuracy)ಯನ್ನು ಉಳಿಸಿಕೊಂಡೂ ಕೃತಕಗೊಳ್ಳದ ಹಾಗೆ ಎಚ್ಚರ ವಹಿಸಿರುವುದು ಅವರ ಹೆಚ್ಚುಗಾರಿಕೆಯೇ ಸರಿ. ಕೆಲವು ಕಡೆ ಸಿದ್ಧ ಛಂದೋಲಯಗಳನ್ನು ಮುರಿದು ಭಿನ್ನ ವಿನ್ಯಾಸಗಳಿಗೆ ಒಳಪಡಿಸಿರುವುದೂ ಇದೆ. ನಿದರ್ಶನವಾಗಿ 'ಬಾಳದಾರಿಯಲಿ' ಎನ್ನುವ ಕವಿತೆಯನ್ನೇ ಗಮನಿಸಬಹುದು.

ಬಾಳದಾರಿಯಲಿ ನಡೆವ ನನ್ನ ಗುರಿ / ನಿನ್ನ ಕಡೆಗೆ ಇರಲಿ! -ಮನ / ನಿನ್ನ ನೆನೆಯುತಿರಲಿ!

ಮೂರು ಸಾಲಿನ ಈ ರಚನೆಯನ್ನು ಮೇಘದೂತ ಪ್ರಖ್ಯಾತಿಯ ಮಂದಾಕ್ರಾಂತದ ಒಂದೂವರೆ ಸಾಲಾಗಿ ಕೆಳಗಿನಂತೆ ಬರೆಯಬಹುದು :

ಬಾಳದಾರಿಯಲಿ ನಡೆವ ನನ್ನ ಗುರಿ ನಿನ್ನ ಕಡೆಗೆ ಇರಲಿ! / .... ಮನ ನಿನ್ನ ನೆನೆಯುತಿರಲಿ

ಇದೇ ಲಯವನ್ನವರು ಅಲ್ಪ ಸ್ವಲ್ಪ ಬದಲಾವಣೆಯೊಂದಿಗೆ 'ರವೀಂದ್ರ ವಂದನೆ'ಯೆಂಬ ಅನುವಾದ ಕವಿತೆಯಲ್ಲೂ ಬಳಸಿದ್ದಾರೆ.

ಹೋಗಲಾಗದು ಬರಿಯ ಕೈಯಿಂದರಸುಗಳ ಸಾನ್ನಿಧ್ಯಕೆ

ಅಕ್ಕನ ಸಾವಿನ ಸಂದರ್ಭವನ್ನು ಮನಮಿಡಿಯುವ ಶೋಕಗೀತೆಯಾಗಿಸುವ ಮಳಗಿಯವರು ಆಸ್ತಿಕ ಮನೋಭಾವದವರು. ಅರವಿಂದರ ಆಧ್ಯಾತ್ಮಿಕ ಹಿನ್ನೆಲೆಯೊಂದಿಗೆ ವಿಶ್ವದ ಮೂಲಭೂತ ಅಸ್ತಿತ್ವದಲ್ಲಿ ದೈವಿಕತೆಯ ಹುಡುಕಾಟ ಅವರ ಕವನಗಳಲ್ಲಿದೆಯೇ ಹೊರತು ಮೂಢಾಚರಣೆಗಳ ಆಡಂಬರವಲ್ಲ.

ಲತೆಗಳನಿಲ ತಾಗಲೇನು / ಸತತ ನಗೆಯನುಗುವುವು /
ಅಲೆಗಳೆಮ್ಮ ಚೀಳಲೇನು / ಕುಲು ಕುಲು ಕುಲು ನಗುವುವು (ದೇವ ಮನ್ನಿಸು)
ಮಾನವನ ಚೇತನವದಿನ್ನು ಹೊಸ ಹಸುಳೆಯದು
ವಿಚ್ಛರದ ಸದಭೀಪ್ಸೆಯುದರೊಳಡಗಿಹುದು..... (ಮೌನ ಸಪ್ತಾಹ)

ಮಳಗಿಯವರಲ್ಲಿ ಬದುಕಿನ ವಿಕೃತಿಗಳನ್ನು ಗುರುತಿಸುವ ವಾಸ್ತವಿಕ ದೃಷ್ಟಿಯೂ ಹಲವಾರು ಕವಿತೆಗಳಲ್ಲಿ ತೀವ್ರವಾಗಿಯೇ ಪ್ರಕಟವಾಗಿದೆ.

ಪಾಪವಾಹಿನಿ ಮಹಾಪೂರದಲಿ ಹರಿಯುತಿದೆ / ವಿಶ್ವದುದ್ದಗಲಗಳ ಸೂಸಿ
ನಾಗರಿಕ ನಯ-ವಿನಯ ಸಂಪನ್ನ ಮಾನವನ / ರಕ್ತ ನಾಳಗಳಲ್ಲು ವಿಷವ ಬೆರಸಿ! (ಪಾಪವಾಹಿನಿ)

ಏನು ಬರಲೇಬೇಕೇ ಪ್ರಳಯ ಕಾಲ?, ರಣದ ಕರೆ, ಭೂದಾಹಭೂತ, ಚಿರಯುವಕ ಜವಾಹರ, ಮುಂದೆ ಮುಂದೆ– ಮುಂತಾದ ಇನ್ನೂ ಹಲವಾರು ಕವಿತೆಗಳಲ್ಲಿ ಸಾಮಾಜಿಕ ಕಾಳಜಿ, ದೇಶಪ್ರೇಮದ ವಸ್ತುಗಳು ವಾಸ್ತವತೆಯ ಬೆಳಕಿನಲ್ಲಿಯೇ ರೂಪುತಳೆದಿವೆ.

ಮನಸ್ಸಿಗೆ ಆಹ್ಲಾದ ನೀಡುವ ಅವರ ಕೆಲವು ಪ್ರೇಮ ಕವನಗಳಲ್ಲಿ ರೂಪಕ ನಿರ್ಮಿತಿ ಅವರ ಪ್ರತಿಭಾ ಸಂಪನ್ನತೆಗೆ ನಿದರ್ಶನ ಒದಗಿಸಿದೆ.

ನಲ್ಲೆ! / "ಸುಳಿಗಾಳಿಯೈತಂದು ತುಳುಕುವೊಲು ತುಂಬಿರುವ / ತಿಳಿಗೊಳವನಪ್ಪುತಲಿರೆ /ಮೆಲುನಗೆಯ ಬೀಲ ಕೊಳವೊಲಿದು ಮೆಚ್ಚಿಸಿ ಮತ್ತೆ / ಕುಲುಕುಲನೆ ನಗುವುದಲ್ತೆ?" / ನಲ್ಲೆ!;

"ಸುಳಿಗಾಳಿಯಾಗಿ ಬಾ ಕೊಳವಾಗಿ ನಕ್ಕೇನು. / ತಿಳಿದೀಗ ಪೋಪುದಲ್ತೆ?" (ನಲ್ಲೆಯ ಕೋಪ)

ನಿನ್ನ ನಲುಮೆಯಾಳದಿಂದ / ಮುತ್ತು ಮೇಲೆ ಬಂದಿವೆ / ಆದರೇಕೊ ನಿನ್ನ ತುಟಿಯ / ತುದಿಯ ಬಳಿಯೆ ನಿಂದಿದೆ!

ಅತ್ತ ನೋಡು. ಪಡುವಣ ನಂ- / ದನದ ರಕ್ತ ಕಾಂತಿಯ! / ಅದೊ! ದಿನಮಣಿ-ಭೂರಮೆಯರ / ಮಧುಚುಂಬನ ಶಾಂತಿಯ!

'ತುಂಬಿ ತುಳುಕುವ' ಕೊಳದ ರೂಪಕ ಹಾಗೂ 'ಮುತ್ತು'ವಿನ ರೂಪಕಗಳು ವಿಪ್ರಲಂಭ-ಮಿಲನಗಳನ್ನು 'ರಾಗರತಿ'ಯ ಭಾವೋತ್ಕಟ ಸ್ಥಿತಿಯಲ್ಲಿ ಬೆಸೆಯುವ ಸಂಕೀರ್ಣ ಭಾವಕ್ಕೆ ಉಜ್ವಲ ನಿದರ್ಶನವೆನಿಸುತ್ತದೆ.

ಕೆಲವು ಅನುವಾದಗಳು, ಸಾಂದರ್ಭಿಕ ತೆಳುರಚನೆಗಳು ಇಲ್ಲಿ ಸೇರಿದ್ದರೂ ಹಿರಿಯ ಜೀವವೊಂದರ ಭಾವಯಾತ್ರೆಯ ದಾಖಲೆಯಾಗಿ ಇಲ್ಲಿನ ಕವನಗಳು ಗಮನಾರ್ಹವಾಗಿವೆ.

– ಬಸವರಾಜ ವಕ್ಕುಂದ : # ೩೨, ಮಾಲತೇಶ ಬಿಲ್ಡಿಂಗ್, ೧ನೇ ಕ್ರಾಸ್
ಕೆಲಗೇರಿ ರಸ್ತೆ, ಕುಸುಮನಗರ, ಧಾರವಾಡ - ೫೮೦ ೦೦೮

೪. ತೋಡಿರಾಗ : ಆರ್. ತಾರಿಣಿ ಶುಭದಾಯಿನಿ

ಸದಾಶಿರಿ ಪ್ರಕಾಶನ, 'ಸಿರಿ', ಮೊದಲ ರಸ್ತೆ, ನೃಪತುಂಗ ಬಡಾವಣೆ, ಚಿತ್ರದುರ್ಗ, ಪ್ರಮು.೨೦೦೫, ಪು.೮೦, ರೂ. ೫೦/-

ಹತ್ತು ವರ್ಷಗಳಿಂದೀಚೆ ಭರವಸೆಯ ದನಿಯಾಗಿ ಕೇಳಿಬರುತ್ತಿರುವವರಲ್ಲಿ ಚಿತ್ರದುರ್ಗದ ತಾರಿಣಿ ಶುಭದಾಯಿನಿ ಹೆಸರು ಮುಖ್ಯವಾದದ್ದು. ಕಾವ್ಯವು ತನ್ನ ಜೀವನದ ಮುಂಜಾನೆ(ನಸುಕಿನಲ್ಲಿ) ಹುಟ್ಟಿದ್ದರಿಂದ ಸಂಕಲನಕ್ಕೆ ಆಕೆ 'ತೋಡಿರಾಗ' ಎಂದು ಅರ್ಥಪೂರ್ಣ ಹೆಸರು ಕೊಟ್ಟಿದ್ದಾರೆ. ಮೂವತ್ತು ಕವನಗಳು, ೧೨ ಹನಿ ರೂಪದ 'ಚಂದ್ರಪದ್ಯ'ಗಳು ಇಲ್ಲಿ ಸಂಕಲಿತವಾಗಿದ್ದು, ಒಬ್ಬ ಯುವತಿಯ ಒಳದನಿ ಮತ್ತು ಒಬ್ಬ ತಾಯಿಯ ಮೆಲುದನಿ ಹೆಚ್ಚಿನ ಕವನಗಳಲ್ಲಿ ದಾಖಲಾಗಿದೆ. 'ಏನೆಲ್ಲ ಸಂಕೋಚ, ನೋವು, ತಲ್ಲಣಗಳನ್ನಿಟ್ಟುಕೊಂಡು ನರಳುವಾಗ ಕಾವ್ಯ ನನಗೆ ದಾರಿಯಾಗಿ ಒದಗಿಬಂದಿದೆ. ಮಾತು-ಮೌನ ಸಂದರ್ಭಗಳಲ್ಲೆಲ್ಲ ಕವಿತೆ ಅನಿವಾರ್ಯ ಸಾಧನವಾಗಿದೆ.... ಕವನ ಬರೆಯುವುದು ಜೀವಕ್ಕಂಟಿದೆ' ಎಂದು ತಾರಿಣಿ ಹೇಳಿಕೊಂಡಿರುವಂತೆ ಸಹಜತೆಯ ಸೊಬಗು ಪ್ರತಿಯೊಂದು ಪ್ರಯತ್ನದಲ್ಲಿ ಕಾಣುತ್ತಿದೆ.

'ಎದೆ ಪುಣ್ಣಿಗೆ / ಬೆಳದಿಂಗಳ ಹಾಡಿತ್ತು / ಕನಸು ಬೆಚ್ಚಗೆ ಕೂತು / ನುಡಿಸಿತ್ತು. ನವರಾಗ /ನಡುವೆ ಯಾಕೋ / ಹಾಡ ಹಾದಿಯು ತಪ್ಪಿದೆ'

ಎಂದು ವಚನ ಶೈಲಿಯಲ್ಲಿ ತನ್ನ ಪಾಡನ್ನು ವಿವರಿಸುವ ತಾರಿಣಿ, 'ಚರಮಗೀತೆ'ಯೆಂಬಂತೆ

'ಕೆಲವು ಪದ್ಯ ಹಾಗೇನೇ / ಪದ್ಮದ ತರ. / ಒಳಗನೆಲ್ಲ ಬರಿದು ಮಾಡಿ / ಬಯಲಲಿ ನಿಲ್ಲಿಸುತ್ತವೆ'

ಎಂದೂ ತೋರಿಸಿಕೊಳ್ಳುತ್ತಾರೆ. ದಿನನಿತ್ಯದ ಸುತ್ತಮುತ್ತಲ ಆಗುಹೋಗುಗಳಿಗೆ ಸ್ಪಂದಿಸುವ, ಪ್ರತಿಕ್ರಿಯಿಸುವ ಪದ್ಯಗಳೇ ಹೆಚ್ಚಾಗಿವೆ. 'ಮರೆತಿದ್ದು', 'ಯುದ್ಧವೆಂದರೆ' ಪದ್ಯಗಳು ಅಪರೂಪಕ್ಕೆಂಬಂತೆ ವಿಚಾರವಾಹಿನಿಯಾಗುತ್ತವೆ. ಮಗಳು, ಮಗಳಿಗೆ, ಜೋಗುಳ– ಎಂಬ ಮೂರು ಪದ್ಯಗಳ ಸ್ವಾನುಭವದ ಅನಿಸಿಕೆ ವಿಶಿಷ್ಟವಾಗಿದೆ. 'ಕೇಳುವುದಿಲ್ಲ ನಿಮಗೆ ಬಿಕ್ಕು / ಚಡಪಡಿಸಿತು ಕವಿತೆ. ಕವಿಗೋಷ್ಠಿಯಲಿ' ಎಂದು ತನ್ನ ಕವಿತಾ ರಚನೆ ಮತ್ತು ವಾಚನದ ಕಷ್ಟವನ್ನು ಹೇಳುವ ತಾರಿಣಿ,

'ಮಾತೇ ಬೇಡವೆಂದು / ಕದ ಹಾಕಿದೆ / ಒಳಗಿರುವ ಮಾತ / ಹೊರಗೆ ಹಾಕಲೇಬೇಕು / ಅದಕ್ಕೇ. ಮತ್ತೆ ಬಾಗಿಲು ತೆಗೆದೆ' ಎಂದೂ ಅಭಿವ್ಯಕ್ತಿ ಅನಿವಾರ್ಯ ತನಗೆ ಸಹಜವೂ ಸ್ವಾಗತಾರ್ಹವೂ ಆಗಿದೆಯೆನ್ನುವ ತೀರ್ಮಾನಕ್ಕೆ ಮರಳುತ್ತಾರೆ. ಆಶಾದಾಯಕ ರೀತಿಯಲ್ಲಿ ಪದ್ಯ ಬರೆಯುತ್ತಿರುವ ತಾರಿಣಿ ಶುಭದಾಯಿನಿಯ 'ತೋಡಿರಾಗ' ನಸುಕಿನ ಕಸುಗಾಯ್ತನದಿಂದ ಮಾಗುವ ಕಡೆಗೆ ತನ್ನ ಆಲಾಪಗಳನ್ನು ವಿಸ್ತರಿಸಲಿ.

೫. ಮಾತಿನ ಚಪ್ಪರ : ಶಿಕಾರಿಪುರ ಕೆ. ಹರಿಹರೇಶ್ವರ

ಸಂವಹನ ಪ್ರಕಾಶನ, ೧೨/೧, ಶಿವರಾಮಪೇಟೆ, ಮೈಸೂರು-೧, ಪ್ರಮು. ೨೦೦೫, ಪು. ೨೪೦, ರೂ. ೧೦೦/-

ಮೂರು ದಶಕಗಳ ಕಾಲ ಅಮೆರಿಕಾ ನಿವಾಸಿಯಾಗಿದ್ದ ಶಿಕಾರಿಪುರ ಹರಿಹರೇಶ್ವರ, 'ಅಮೆರಿಕನ್ನಡ' ಸಂಘಟನೆಯಿಂದ ಭಾರತೀಯರಿಗೆ, ಅದರಲ್ಲೂ ಕನ್ನಡಿಗರಿಗೆ ಪ್ರಿಯರೂ ಪ್ರಸಿದ್ಧರೂ ಆದ ವ್ಯಕ್ತಿ. ಔದ್ಯೋಗಿಕ ರಚನಾ ಸ್ಥಪತಿಯಾಗಿ, ಹರಿಹರೇಶ್ವರರು ಅಮೆರಿಕದಲ್ಲಿ ನಿರ್ವಹಿಸಿದ ಎಂಜಿನಿಯರಿಂಗ್ ಸೇವೆ ಅಲ್ಲಿನವರಿಂದ ಮೆಚ್ಚುಗೆ-ಮರ್ಯಾದೆ ಪಡೆದಿದೆ. ವೃತ್ತಿಯ ಯಶಸ್ವೀ ನಿರ್ವಹಣೆಯ ಜತೆಗೆ ಅವರು ಬೆಳೆಸಿಕೊಂಡ ಪ್ರವೃತ್ತಿ– ಗ್ರಂಥ ಅಧ್ಯಯನ ಮತ್ತು ಬರಹ. 'ಓದಬೇಕು; ಓದಿದ್ದನ್ನು ನಾಲ್ಕಾರು ಜನರಿಗೆ ತಿಳಿಹೇಳಬೇಕು, ಇದನ್ನು ಕಡೆಗಣಿಸಬಾರದು' ಎಂಬ ಉಪನಿಷತ್ತಿನ ಸಂದೇಶವನ್ನು ಮೈಗೂಡಿಸಿಕೊಂಡ ಇವರು, ಜ್ಞಾನಾಸಕ್ತಿ ಮತ್ತು ವಿಷಯಪ್ರಭುತ್ವ ಬೆಳೆಸಿಕೊಂಡ ಲೇಖಕರು. 'ಮಾತಿನ ಚಪ್ಪರ' ಹರಿಹರೇಶ್ವರರು ಪ್ರಕಟಿಸಿದ ನಾಲ್ಕನೆಯ ಪುಸ್ತಕ. ಹದಿಮೂರು ಪರಿಪುಷ್ಟ ಮಾಹಿತಿ ಮತ್ತು ಪ್ರಾಮಾಣಿಕ ವಿಶ್ಲೇಷಣೆಯುಳ್ಳ ಲೇಖನಗಳ ಸಂಗ್ರಹ ಇದು.

ವೈದಿಕ ವಾಙ್ಮಯದ ಒಂದು ಭಾವಗೀತೆ 'ಶ್ರೀಸೂಕ್ತ'; ಅಗ್ನಿ, ಚಿಗ್ನ, ಲಕ್ಷ್ಮಿ ಮತ್ತು ಶುಕ್ರ; ಕಠೋಪನಿಷತ್ತಿನಲ್ಲಿ ಉಪ್ಪಿನಕಾಯಿ; ನೀರಾಜನ ವಿಧಿ; ಗಣಪತಿ ಎಂದಾಗ 'ಗಣಗಳು' ಯಾರು?; ತ್ರಿಶಂಕು ಕಥೆ; ಶಬರಿ; ನಿಜಗುಣ ಶಿವಯೋಗಿಯ ಕೈವಲ್ಯ ಪದ್ಧತಿ– ಈ ಶೀರ್ಷಿಕೆಗಳನ್ನು ಬರಿ ನೋಡಿದರೆ ಸಾಕು,

ಹರಿಹರೇಶ್ವರರ ಓದಿನ, ಶೋಧನೆಯ, ಅಧ್ಯಯನದ ಒಲವು– ಪ್ರಾಚೀನ ಜ್ಞಾನಮೌಲ್ಯಗಳತ್ತ ಹರಿದಿರುವುದು ವ್ಯಕ್ತವಾಗುತ್ತದೆ. 'ದೇಶ-ಕೋಶ' ಎಂಬ ಪ್ರಬಂಧವಂತೂ ಹರಿಹರೇಶ್ವರರ ಸ್ವಾಧ್ಯಾಯ-ಸ್ವಾನುಭವದ ಸುಂದರ ಕಥನ. 'ಬುದ್ಧಿವಂತಿಕೆ'ಯನ್ನು ವ್ಯಾಖ್ಯಾನಿಸುವ ಲೇಖನ; 'ಕನ್ನಡದಲ್ಲಿ ಧರ್ಮ' ಎಂಬ ಸಂಪ್ರಬಂಧ; ವರ್ಷಕ್ಕೊಂದು ಒಳ್ಳೆಯ ಹೆಸರು(ಸಂವತ್ಸರಗಳ ಮರ್ಮ) ಲೇಖನಗಳ ಹಿಂದಿರುವುದು ಅಧ್ಯಯನದ ಸೊಗಸಾದ, ರುಚಿಕರ ಫಲ.

ಎತ್ತಿಕೊಂಡ ವಿಷಯ / ಸಂಗತಿಯನ್ನು ಕೂಲಂಕಷ ಪರಿಶೀಲಿಸಲು ಹರಿಹರೇಶ್ವರರು ಹಲವು ಆಕರಗಳತ್ತ ಕಣ್ಣು ಹಾಯಿಸುತ್ತಾರೆ; ಬೀಸು ಹೇಳಿಕೆಗಳನ್ನು ಕೊಟ್ಟು ಪ್ರಶಂಸೆ ಅಥವಾ ಟೀಕೆ ಮಾಡದೆ, ಪ್ರತಿಯೊಂದು ಉಲ್ಲೇಖಕ್ಕೂ ಆಧಾರ, ಉದ್ಧರಣೆಯನ್ನು ನಮೂದಿಸುತ್ತಾರೆ. ಪ್ರಾಚೀನ ವಿಧಿ, ಕ್ರಿಯೆ, ಜ್ಞಾನಮೂಲಗಳನ್ನು ಇವರು ಆರಾಧಿಸುತ್ತಾರೆಂದು ಅನಿಸುವುದಿಲ್ಲ. ಮಾಹಿತಿಪ್ರಧಾನ ಪ್ರಬಂಧ ರಚನೆಗೆ ಬೇಕಾದ ತಾಳ್ಮೆ, ಸ್ಮೃತಿ, ಸಂಯೋಜನ ಔಚಿತ್ಯ ಮತ್ತು ದಣಿವರಿಯದ ಉತ್ಸಾಹದ ಶೈಲಿ– ಹರಿಹರೇಶ್ವರರ ಜ್ಞಾನಸಾಹಿತ್ಯಕ್ಕೆ ಬೆಂಬಲವಾಗಿವೆ. ಅಡಿಟಿಪ್ಪಣಿ, ಆಕರ(ಪರಾಮರ್ಶನ) ಗ್ರಂಥಗಳ ವಿಪುಲವಾದ ಪಟ್ಟಿಗಳನ್ನು ಅವರು ಕೊಡುವ ರೀತಿಯಲ್ಲಿಯೇ ಶಿಸ್ತಿನ, ಜವಾಬ್ದಾರಿಯ ಲೇಖಕರಾಗಿ ಇವರು ನಮ್ಮ ಮೆಚ್ಚುಗೆಯನ್ನು ಅನಾಯಾಸ ಗಳಿಸುತ್ತಾರೆ.

ಮತ್ತೆ ಮತ್ತೆ, ಸಂದರ್ಭ-ಸ್ವಾರಸ್ಯಗಳನ್ನು ಮೆಲುಕು ಹಾಕಲು, ಕಾದಿಟ್ಟು ಓದಬೇಕಾದ ಗ್ರಂಥ 'ಮಾತಿನ ಚಪ್ಪರ'. ಈಗಿನ ಯುವ ಕತೆಗಾರರು, ಕವಿಗಳು, ಮತ್ತು ಎಲ್ಲ ಕಾಲದ ವಿಮರ್ಶಕರು, ಪತ್ರಿಕಾ ಸಂಪಾದಕರು ಸದಾ ಅಂಗೈಯಲ್ಲಿ ಇಟ್ಟುಕೊಳ್ಳಬೇಕಾದ ಪುಸ್ತಕ ಇದು. ಹರಿಹರೇಶ್ವರರು ಅಮೆರಿಕಾದಲ್ಲಿದ್ದರೂ ತನ್ನ ಸತ್ವ ಕಳೆದುಕೊಳ್ಳದ ಕನ್ನಡಿಗರು. ಬರಹದ ಮೂಲಕ ಅವರು ಅದನ್ನು ಸಾಬೀತುಪಡಿಸಿದ್ದು ಅಭಿನಂದನೀಯ.

– ಡಾ. ಶ್ಯಾಮಸುಂದರ ಬಿದರಕುಂದಿ, ೧೫೧, ೫ನೇ ಮುಖ್ಯರಸ್ತೆ, ಸವನಗರ, ಹುಬ್ಬಳ್ಳಿ-೫೮೦ ೦೨೫

೬. ಪಂಡಿತರ ಕೂಟ : ಎಸ್. ಆರ್. ಚಂದ್ರ

ಪುಸ್ತಕ ನಿಧಿ, ಗಾವಳಿ, ಕುಂದಾಪುರ-೫೭೬ ೨೧೦, ಪ್ರಮು. ೨೦೦೩, ಪು. ೧೪೧, ರೂ. ೫೦/-

ಕನ್ನಡದಲ್ಲಿ ವಿಪುಲವಾದ ಪ್ರಬಂಧಸಾಹಿತ್ಯ ಸೃಷ್ಟಿಯಾಗಿದೆ. ಅನೇಕ ಸಾಹಿತಿಗಳು ತಮ್ಮ ಪ್ರಬಂಧಗಳ ಶೈಲಿ ನಿರೂಪಣೆಗಳಿಂದ ಖ್ಯಾತನಾಮರಾಗಿದ್ದಾರೆ. ಅಲಕ್ಷಿತ, ಲಘು ವಿಷಯಗಳು, ಹಾಸ್ಯ-ವಿಡಂಬನೆಗಳು ಪ್ರಬಂಧಗಳ ಪ್ರಮುಖ ವಸ್ತುವಾದರೂ ಸಮರ್ಥ ನಿರೂಪಕನು ಯಾವ ವಿಷಯವನ್ನಾದರೂ ಎತ್ತಿಕೊಂಡು ಪ್ರಬಂಧ ರಚಿಸಬಲ್ಲ. ಅದಕ್ಕೆ ಉದಾಹರಣೆ ೧೯ ಪ್ರಬಂಧಗಳನ್ನು ಒಳಗೊಂಡ 'ಪಂಡಿತರ ಕೂಟ'.

'ಅಳು-ನಗು' ಸಂಗ್ರಹದ ಮೊದಲ ಪ್ರಬಂಧ. ಇದು ಗಿಬ್ರಾನನ ಸೌಂದರ್ಯ ಮತ್ತು ಕುರೂಪ ಪ್ರಬಂಧವನ್ನು ನೆನಪಿಸುವಂತಿದೆ. ಒಂದು ಮತ್ತೊಂದರ ರೂಪದಲ್ಲಿರುವ ವೈಚಿತ್ರ್ಯವನ್ನು ಬಿಂಬಿಸುತ್ತದೆ. 'ಮಾತು' ಚಿಂತನಾರ್ಹವಾದ ಮಾತುಗಳಿಂದ "ವಿವೇಕಿಯ ನಾಲಗೆ ಹೃದಯದಲ್ಲಿ, ಅವಿವೇಕಿಯ ಹೃದಯ ನಾಲಗೆಯಲ್ಲಿ" ಎಂದು ಮಾತಿನಲ್ಲಿರುವ ಬೆಂಕಿ-ಬೆಳಕನ್ನು ಚಿತ್ರಿಸುತ್ತದೆ. 'ಹೆಸರು' ಪ್ರಬಂಧದಲ್ಲಿ 'ಸುಳ್ಳಿಗೆ ಸತ್ಯದ ನಿಶಾನಿ, ಅಧರ್ಮಕ್ಕೆ ಧರ್ಮದ ಬಾವುಟ, ಅನ್ಯಾಯಕ್ಕೆ ನ್ಯಾಯದ ಲೇಬಲ್, ಕೊಲೆ-ಸುಲಿಗೆ-ಲಂಚ ರಿಶ್ವತ್ತು-ಲಪಟಾವಣೆಗಳಿಗೆ ತನಿಖಾ ಆಯೋಗಗಳ ವೈಟ್‌ವಾಶ್' ಎನ್ನುವ ಅಭಿಪ್ರಾಯ ಹಾಗೂ 'ಹೆಸರು ಗಳಿಸಬೇಕೆಂದಾದರೆ ಹೆಸರಿಗೆ ಮಾತ್ರ ಕೆಲಸ ಮಾಡಿದರೆ ಸಾಲದು, ಹೆಸರಿಗಾಗಿಯೇ ಕೆಲಸ ಮಾಡಬೇಕು' ಎಂಬ ಮಾತುಗಳು ಇಂದಿನ ಜನ-ಜೀವನಕ್ಕೆ ಬರೆದ ಮುನ್ನುಡಿಯಂತಿವೆ.

ಮರವೆ, ಮೂಗು, ಪರೀಕ್ಷೆಗೆ ಓದುವುದು, ಸಂಭಾಷಣೆ, ಸಾಲ, ಕನ್ನಡಿ, ಮುಪ್ಪು ಪ್ರಬಂಧಗಳು ವ್ಯಥೆ, ಕಥೆ, ನವಿರು ಹಾಸ್ಯ, ಸನ್ನಿವೇಶದ ವ್ಯಂಗ್ಯವನ್ನು ಒಳಗೊಂಡರೆ 'ಪಂಡಿತರ ಕೂಟ' ಪಂಡಿತರ ವಿತಂಡ, ಕುತರ್ಕ, ಆಲಾಪ-ಅಹಂಕಾರಗಳ ಶುಷ್ಕ ಜೀವನವನ್ನು ವಿಡಂಬಿಸುತ್ತದೆ. ಒಟ್ಟಾರೆ ಇಲ್ಲಿನ ಪ್ರಬಂಧಗಳು ಕಾಲಹರಣಕ್ಕೆ ಮಾಡಿರದ ಬರಹಗಳಾಗಿರದೆ, ಸನ್ನಿವೇಶದ ಸೂಕ್ಷ್ಮತೆಯನ್ನು ತಿಳಿಸುವಲ್ಲಿ ಯಶಸ್ವಿಯಾಗಿವೆ.

– ಶಶಿಧರ ತೋಡಕರ, ಪ್ರಾಚಾರ್ಯರು, ಡಾ. ಹಿರೇಮಲ್ಲೂರ ಈಶ್ವರನ್ ವಿಜ್ಞಾನ ಕಾಲೇಜು, ಲನೇ ಕ್ರಾಸ್, ಕಲ್ಯಾಣನಗರ, ಧಾರವಾಡ-೫೮೦ ೦೦೭

ಸಂಕಲನ : ಅನಿಸಿಕೆ

೧. ಹೊಸ ಹೊಸ ಅಂಕಣಗಳೊಂದಿಗೆ, ವೈವಿಧ್ಯಪೂರ್ಣ ಲೇಖನಗಳೊಂದಿಗೆ ಹೊರ ಬರುತ್ತಿರುವ ಸಂಕಲನ ಹಲವು ಪ್ರಥಮಗಳ ಕೀರ್ತಿಗೆ ಭಾಜನವಾಗುತ್ತಿರುವುದು ಸಂಕಲನದ ಬಳಗಕ್ಕೆಲ್ಲಾ ಸಂತಸದ ವಿಷಯ. ಮೊನ್ನೆ ೨೪-೮-೨೦೦೭ ರಂದು ಝೀ ಟಿ.ವಿ.ಯಲ್ಲಿ 'ನನ್ನ ಅಪ್ಪ ಅಮ್ಮ' ಕಾರ್ಯಕ್ರಮ ಪ್ರಸಾರವಾಯಿತು. ಈ ಕಾರ್ಯಕ್ರಮ ವಾರಕ್ಕೊಂದು ಸಲ ಪ್ರಸಾರವಾಗುತ್ತದೆಯಂತೆ. ಬಹಳ ಸಂತೋಷ. ಆದರೆ ಐದು ವರ್ಷಗಳ ಹಿಂದೆಯೇ **ಸಂಕಲನ** 'ನನ್ನ ಅವ್ವ ನನ್ನ ಅಪ್ಪ' ಹೆಸರಿನ ಕೃತಜ್ಞತಾ ಮಾಲಿಕೆಯ ಅಂಕಣವನ್ನು ಪ್ರಾರಂಭಿಸಿದೆ. ಅಲ್ಲದೇ 'ನನ್ನ ಶಾಲಾಗುರುಗಳು' ಅಂಕಣ ಲೇಖನಗಳು ಕೂಡ ಸಂಕಲನದಲ್ಲಿ ಪ್ರಕಟವಾಗುತ್ತಿವೆ. ಇನ್ನು ಮುಂದೆ 'ನನ್ನ ಗೆಳೆಯರು ಗೆಳತಿಯರು' ಮಾಲಿಕೆಯನ್ನು ಪ್ರಾರಂಭಿಸಲಿದ್ದೀರಿ ಎಂಬುದೂ ನಮಗೆ ತಿಳಿದುಬಂದ ವಿಷಯವಾಗಿದೆ. ಯಾವ ಭಾಷೆಗಾದರೂ ಭೂಷಣವೆನಿಸಬಲ್ಲ ಪತ್ರಿಕೆ **ಸಂಕಲನ**. ನಿಮ್ಮ ಅನುಪಮ ಒಳನೋಟ, ಪ್ರತಿಭೆ, ಪರಿಶ್ರಮ, ಈ ದ್ವೈಮಾಸಿಕ ಪತ್ರಿಕೆಯ ಘನತೆಯನ್ನು ಹೆಚ್ಚಿಸಿದ್ದನ್ನು ನಾವೆಲ್ಲ ಅಭಿಮಾನದಿಂದ, ಗೌರವದಿಂದ ನೆನೆಯುತ್ತೇವೆ. **– ಬಸವರಾಜ ಚಿಕ್ಕನರಗುಂದ, ಹುಬ್ಬಳ್ಳಿ**

೨. **ಸಂಕಲನ-೩೪** ರಲ್ಲಿ ಪ್ರಕಟವಾದ ಸುಕನ್ಯಾ ಮಾರುತಿಯವರ 'ಬಯಲಾಟ' ಕವನ ಬಹಳ ಇಷ್ಟವಾಯಿತು. ಮಧ್ಯವಯಸ್ಕರ ತೊಳಲಾಟದ ನೋವು, ಕಾಲದ ವೈಪರೀತ್ಯದೊಂದಿಗೆ ಹೊಂದಿಕೊಳ್ಳಬೇಕಾದ ಅನಿವಾರ್ಯ ಅಗತ್ಯಗಳನ್ನು ಬಹಳ ಮಾರ್ಮಿಕವಾಗಿ ಈ ಕವಿತೆಯಲ್ಲಿ ಚಿತ್ರಿಸಲಾಗಿದೆ. **–ರಜಿಯಾ ಡಿ. ಬಿ., ಬೆಂಗಳೂರು**

೩. **ಸಂಕಲನ**ದಲ್ಲಿ ಬರುತ್ತಿರುವ ವೈಚಾರಿಕ ಲೇಖನಗಳು ಬಹಳ ಹಿಡಿಸಿವೆ. 'ಒನ್ನೇಪುಟ' ಹಾಗೂ 'ಕಡೀಪುಟ'ಗಳ ವಿಷಯ ಹಾಗೂ ಶೈಲಿ ಓದುಗರನ್ನು ತನ್ಮಯಗೊಳಿಸುತ್ತವೆ. ಈ ಲೇಖನಗಳ ಬರವಣಿಗೆ ಕನ್ನಡಕ್ಕೆ ಹೊಸತನವನ್ನು ನೀಡಿದೆ. ಉತ್ತರ ಕರ್ನಾಟಕದ ಸಾಹಿತ್ಯ ಸಂಸ್ಕೃತಿ ಭಾಷೆಗಳನ್ನು ಲಘುವಾಗಿ ಕಾಣುವವರಿಗೆ ಇಲ್ಲಿಯ ಗಟ್ಟಿ ನೆಲದ ಸತ್ವಶಾಲಿ ಭಾಷೆ ಮತ್ತು ಶೈಲಿಗಳನ್ನು ಈ ಲೇಖನಗಳು ಅನುಕರಣೀಯ ಮಾದರಿಯಲ್ಲಿ ಹಿಡಿದಿಟ್ಟವೆ. **–ಎಂ.ಎಂ. ಪುರದನಗೌಡರ**, ಕಲಘಟಗಿ

೪. **ಸಂಕಲನ-೩೪** ರಲ್ಲಿ ಎಚ್.ಇಬ್ರಾಹಿಂಸಾಹೇಬರನ್ನು ನೆನೆಸಿ, ಅವರನ್ನು ಕುರಿತು ಬಂದ 'ಅಮೃತ ಶರಧಿ'ಯ ನೆಪದಲ್ಲಿ ತುಂಬ ಚೆನ್ನಾಗಿ ಬರೆದಿದ್ದೀರಿ. **– ಡಾ. ಮಿರ್ಜಾ ಬಷೀರ್**, ಶಿವಮೊಗ್ಗ

೫. **ಸಂಕಲನ-೩೪** ರ 'ಕಡೀಪುಟ' ತುಂಬಾ ಇಷ್ಟವಾಯಿತು. **ಸಂಕಲನ** ಬಂದೊಡನೆ ನಾನು ಮೊದಲು ಓದುವುದು ಈ 'ಕಡೀಪುಟ', ಆಮೇಲೆ 'ಒನ್ನೇಪುಟ', ಆಮೇಲೆ ಇತರ ಲೇಖನಗಳು. ಸಂಕಲನ ತುಂಬಾ ಚೆನ್ನಾಗಿ ಬರುತ್ತಿದೆ. **– ಡಾ. ಎಚ್. ಸಿ. ವಿಷ್ಣುಮೂರ್ತಿ**, ಮೈಸೂರು

೬. ಕುತೂಹಲಕಾರಿ ಓದನ್ನು ಸದಾ ಕಾಯ್ದುಕೊಳ್ಳುವ, ಓದುಗರ ಅಭಿರುಚಿಯನ್ನು ಆರೋಗ್ಯಪೂರ್ಣವಾಗಿ ಬೆಳೆಸುವ **ಸಂಕಲನ** ತುಂಬ ಇಷ್ಟವಾಗುತ್ತದೆ. ನವಿರಾದ ಹಾಸ್ಯದ ಲೇಪದೊಳಗೆ ಗಂಭೀರವಾದ ವಿಚಾರವನ್ನು ಹೊತ್ತ ಸಂಪಾದಕರ 'ಒನ್ನೇಪುಟ' ಮತ್ತು 'ಕಡೀಪುಟ'ಗಳ ನಡುವಣ ಎಲ್ಲ ಲೇಖನ-ಕವನ-ವಿಮರ್ಶೆ ಚೆನ್ನಾಗಿ ಬರುತ್ತಿವೆ. ಸಂ-೩೪ ರಲ್ಲಿ ವಿಜಯಾ ಶ್ರೀಧರ್‌ರವರ 'ಹೋಂ ಸ್ವೀಟ್ ಹೋಂ' ಕುರಿತಾದ ಲೇಖನ, ರೇಖಾ ಬನ್ನಾಡಿಯವರ 'ಅಪ್ಪ ಅಮ್ಮ' ಕುರಿತಾದ ಲೇಖನದಲ್ಲಿ ಅವರು ಹಳ್ಳಿಯ ಮಧ್ಯಮ ವರ್ಗದ ಒಂದು ಕುಟುಂಬದ ಬದುಕನ್ನು ಮನಮುಟ್ಟುವಂತೆ ವರ್ಣಿಸಿದ ಬಗೆ, ಕತೆ ಕಾದಂಬರಿಗಳ ವಿಮರ್ಶೆ, ಅರ್ಥಗರ್ಭಿತ ಕವನ, ಅನುವಾದ ಸೇರಿ ಸಂಚಿಕೆ ಸಮೃದ್ಧವಾಗಿದೆ. ಸಂಕಲನವು ಹೀಗೆಯೇ ಮೈದುಂಬಿಕೊಂಡು ಬೆಳೆಯಲಿ, ನಿರಂತರ ಪ್ರಕಟಗೊಳ್ಳುತ್ತಿರಲಿ. **– ಪಾರ್ವತಿ ಜಿ. ಐತಾಳ್**, ಕುಂದಾಪುರ

೭. ಡಾ. ಷ. ಶೆಟ್ಟರ್ ಅವರ ತಮಿಳು ಕಾವ್ಯದ ಅನುವಾದಗಳು ಅದ್ಭುತವಾಗಿವೆ. ಜಟಿಲವಾದ ಸಂಗಂ ಕಾಲದ ಕಾವ್ಯವನ್ನು ಸರಳವಾದ ಹೊಸಗನ್ನಡಕ್ಕೆ ಅನುವಾದಿಸಿದ ಅವರ ಪ್ರತಿಭೆ ಅಭಿನಂದನೀಯ. ಅವರು ನಮ್ಮ ಊರವರು ಎಂಬುದು ಇನ್ನಷ್ಟು ಸಂತೋಷಕ್ಕೆ ಕಾರಣ.

ಇಂತಹ ಲೇಖನಮಾಲೆಯನ್ನು ಅವರಿಂದ ಬರೆಸಿ ಪ್ರಕಟಿಸಿದ ತಮಗೆ ಅಭಿನಂದನೆಗಳು.

– ಗುರುಮೂರ್ತಿ ಪೆಂಡಕೂರು, ರಾಮನಗರ–ಹಗರಿಬೊಮ್ಮನಹಳ್ಳಿ

೮. **ಸಂಕಲನ–೩೪** ಡಾ. ಷ. ಶೆಟ್ಟರ್‌ರವರ ಲೇಖನ 'ಶಂಗಂ ಸಾಹಿತ್ಯಕ್ಕೆ ಕನ್ನಡ ನಾಡಿನ ಕವಿಗಳ ಕೊಡುಗೆ' ಯ ಅನುಬಂಧದಲ್ಲಿ ಕೊಟ್ಟಿರುವ, ಪ್ರೊ. ಶೆಟ್ಟರ್‌ರವರದೆ ಆದ, ಶಂಗಂ ಸಾಹಿತ್ಯದ ಕೆಲವು ಕವಿತೆಗಳ ಅನುವಾದವನ್ನು ಓದಿ ಅವರ ಪ್ರತಿಭೆ ಹಾಗೂ ಪಾಂಡಿತ್ಯಕ್ಕೆ ಬೆರಗಾದೆ. ಒಬ್ಬ ಬಹುಶ್ರುತ ಇತಿಹಾಸಕಾರ ಕವಿಯೂ ಹೌದು ಎನ್ನುವಂತೆ ಅವರ ಕವಿತೆಗಳು ಚೆನ್ನಾಗಿ ಬಿಂಬಿತವಾಗಿವೆ. ಅದಕ್ಕಾಗಿ ತಮಗೂ ಹಾಗೂ ಪ್ರೊ. ಶೆಟ್ಟರ್‌ರವರಿಗೂ ಅಭಿನಂದನೆಗಳು ಸಲ್ಲಲೇಬೇಕು. **– ಎ. ಡಿ. ನಂಜುಂಡಸ್ವಾಮಿ, ಮೈಸೂರು**

೯. ಸ್ವಿಚಾಫ್ ಸ್ವಿಚಾಫ್ ಸ್ವಿಚಾಫ್ ಬಂತು ಬಂತು ಬಂತು. ಹಿಂಗಾಗಿ ಕಡೀಪುಟಕ್ಕ ನಮಸ್ಕಾರ ಹೇಳುವುದಕ್ಕ ಕಾರ್ಡ ಬರೀಬೇಕಾತು. ಕಾಲ್ಮರಿ ಕತಿ ಚಂದ ಹೇಳೀರಿ. ಕೊಡಿ ಕಳಕೋ ಪ್ರಸಂಗದಾಗನೂ ಕೆಲವರು, ವಸ್ತ್ರದ ಹೇಳಿದ್ಹಂಗ್‌ಅ ಮಾಡಿಬಿಡತಾರ. ಒಬ್ಬವ್ನ ಹೊರಗ ಒಯ್ದು ಸರತೆಗೊಮ್ಮೆ ಒಂದೊಂದ ಕೊಡಿ ಮರತ ಇಟ್ಟ ಬರಾವ್ನ ಅಥವಾ ಯಾರರೇ ಒಯ್ದು ಬಿಡವ್ರು! ಇವ್ನ ಪ್ಯಾಲಿ ಹಂಗ ಬರೀಗೈಲೆ ಮನಿಗಿ ಬರೂದೇ ತಡ ಹೇಣತಿ ಹಚ್ಚಿ ಬಯತಿದ್ಲು. ಬಯ್ಯಿಸಿಕೊಂಡರೂ ನೆನಪು ಕೈ ಕೊಡತಿತ್ತು ಮತ್ತ ಮತ್ತ. ಒಮ್ಮೆ ಕೊಡಿ ಹಿಡಕೊಂಡು ಬಂದವ್ನ, 'ಏ ನೋಡಿಲ್ಲಿ, ನೆನಪಲೇ ಕೊಡಿ ತಂದೀನಿ...' ಅಂದ. "ಇವತ್ತ ನೀವೆಲ್ಲಿ ಒಯ್ದಿದ್ರಿ ಹೋಗುಮುಂದ?" ಅಂತ ಹೇಣ್ತಿ ಕೇಳಿದಾಗ, 'ಅಂಬ್ರೆಲಾ ಮೊರೆಲ್' ಅಂತ ಇಂಗ್ಲೀಷ ಎಸೆ ನೆನಪಾತು ಅವ್ನಗ!

ಇರಲಿ ಈಗ ನನಗ ನನ್ನ, ಅಡ್ಡಾತಿಡ್ಡಾ ಪಾದಕಮಲಗಳಿಗೆ ರೆಡಿಮೇಡ್ ತಗೊಂಡು ಫಜೀತಿ ಬಿದ್ದು ಬ್ಯಾಡನ್ನಿಸಿ, ಅಳತೀ ಕೊಟ್ಟು ಹೊಲಿಸಿಕೊಂಡು ಹಾಕ್ಕೋಬೇಕು, ಅಂತ ನಿರ್ಣಯಿಸೀನಿ. ಹುಬ್ಬಳ್ಳಿಯ ಹೊಸೂರಾಗ, ಬೂಟು ಚಪ್ಪಲಿ ಚಂದ ಹೊಲಿದು ಕೊಡುವ ಒಬ್ಬ ಚಮ್ಮಾರ ಇದ್ದಾನಂತ ತಾವು ಹೇಳಿದ್ರಿ, ಅಂಗಡೀ ಹೆಸರು ಮರತೆ. ಸೊಲ್ಪ ನೆನಪಿಸಿದಿರೆಂದರೆ, ನಿಮ್ಮ ಪಾದ(ರಕ್ಷೆ)ದಾಣೆಗೂ ನಾ ಕೃತಜ್ಞ ಇರತೇನಿ./ ಕಡೀಪುಟ– ಚಂದ ಬಂತು– ಅಂತ ಪ್ರತ್ಯೇಕ ಹೇಳಬೇಕಿಲ್ಲ! **– ಡಾ. ಶ್ಯಾಮಸುಂದರ ಬಿದರಕುಂದಿ, ಹುಬ್ಬಳ್ಳಿ**

೧೦. **ಸಂಕಲನ–೩೩** ರಲ್ಲಿ ಪ್ರಕಟವಾದ ಆರ್. ತಾರಿಣಿ ಶುಭದಾಯಿನಿಯವರ ಭೈರಪ್ಪನವರ 'ಆವರಣ' ಕಾದಂಬರಿಯ ವಿಮರ್ಶೆ ಬಹಳ ಇಷ್ಟವಾಯಿತು. ಸರಿಯಾದ ತೂಕವನ್ನಿಟ್ಟುಕೊಂಡು ಬರೆದ ಸಹೃದಯ ವಿಮರ್ಶೆ. ಈ ವಿಷಯದ ಚರ್ಚೆಯಲ್ಲಿ ವಿಮರ್ಶಾಲೋಕ ಎರಡು ಬಣಗಳಾಗಿ ನಿಂತು, ಎರಡೂ ಬಣಗಳೂ ಸಹೃದಯ ವಿಮರ್ಶೆಯ ಎಲ್ಲೆ ಮೀರಿ ಮಾತನಾಡುತ್ತಿರುವಲ್ಲಿ ನೀವು ಇಂಥದೊಂದು ಲೇಖನವನ್ನು ಪ್ರಕಟಿಸಿದ್ದು ಸಂತೋಷದ ವಿಷಯ. ಬಸವರಾಜ ಒಕ್ಕುಂದ ಅವರು ಬರೆದ ಪಾ.ವೆಂ. ಆಚಾರ್ಯರ ಕವಿತೆಗಳ ವಿಷಯದ ಬರಹ ಬಹಳ ಚೆನ್ನಾಗಿದೆ. ಚಿಕ್ಕಂದಿನಿಂದ ಲಾಂಗುಲಾಚಾರ್ಯರ ವ್ಯಂಗ್ಯ ಲೇಖನಗಳನ್ನು ಓದಿ ಸವಿದಿದ್ದೆ, ಅವರು ಇಷ್ಟು ಸುಂದರವಾದ ಕವಿತೆಗಳನ್ನೂ ಬರೆದಿದ್ದಾರೆಂದು ಅರಿತಿರಲಿಲ್ಲ. ಅವರ ಕವಿತೆಗಳ ಪರಿಚಯ ಮಾಡಿಕೊಟ್ಟ ಒಕ್ಕುಂದರಿಗೆ ಧನ್ಯವಾದಗಳು. **– ದಮಯಂತಿ ನರೇಗಲ್ಲ, ಧಾರವಾಡ**

೧೧. **ಸಂಕಲನ–೩೪** ರಲ್ಲಿ ನನ್ನ ಎರಡು ಕವಿತೆಗಳನ್ನು ಪ್ರಕಟಿಸಿ 'ಬಿಡಾಡಿ ಕವಿ'ಯಾದ ನನಗೆ ಸಂಕಲನದಲ್ಲಿ ಒಂದು ಸ್ಥಾನವನ್ನು ಕಲ್ಪಿಸಿಕೊಟ್ಟಿರುವಿರಿ. ಧನ್ಯವಾದ. ನಾನು ಇಂಥ ಕವನವನ್ನು ಬರೆದು, ಒಂಟಿ ಕವಿತೆಗಳನ್ನು ಮಾರಿದ್ದೇನೆ. ೧೦ ಪೈಸೆಗೆ, ೫೦ ಪೈಸೆಗೆ, ೧ ರೂ.ಗೆ. ಹಣ ಗಳಿಸಲಿಕ್ಕೆ ಅಲ್ಲ. ಪ್ರಯೋಗ ಮಾಡಿ ನೋಡಿ, ಜನರ ಅಭಿಮಾನ ತಿಳಿಯಲಿಕ್ಕಾಗಿ ಮಾಡಿದೆ. ವಾಜಪೇಯಿಯವರು ಧಾರವಾಡಕ್ಕೆ ಬಂದ ದಿನ ಚಂದ್ರಕಾಂತ ಬೆಲ್ಲದರ ಚುನಾವಣೆ ಕುರಿತು ಇದ್ದ ಸಭೆಯಲ್ಲಿ ಸಂಜೆಯ ವರೆಗೆ ನಾನು 'ರಾಯರು ಬಂದರು ಅಳಿಯನ ಮನೆಗೆ' ರಾಜಕೀಯ ವಿಡಂಬನೆಯ ಕವನ ಮಾರಿದೆ. ನನಗೆ ಹಣ ಸ್ವೀಕರಿಸಲು, ಬಿಡಿ ಕವಿತೆ ಕೊಡಲು ೨ ಕೈ ಸಾಕಾಗಲಿಲ್ಲ. ಜನ ಚಿಲ್ಲರೆ ವಾಪಸ್ಸು ಕೇಳಲಿಲ್ಲ. ೨ ರೂ. ಕೊಟ್ಟರು ೪ ಕವಿತೆ ಕೊಡು ಅಂದರು. ದಶಕಗಳಾದರೂ ನಾನು ಆ ಚಿಲ್ಲರೆ ನಾಣ್ಯ ಚೀಲದಲ್ಲಿ ಕೂಡಿಟ್ಟಿದ್ದೇನೆ. ಕನ್ನಡಿಗರ ಅಭಿಮಾನವನ್ನು ಕಂಡು ಮುಗ್ಧನಾಗಿದ್ದೇನೆ. ಆ ಹಣ ಬಳಸಿಲ್ಲ, ಬಳಸುವುದಿಲ್ಲ. **–ವೆಂಕಟೇಶ ಕುಲಕರಣಿ, ಧಾರವಾಡ**

ಕಡೀಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ

ಇತ್ತೀಚಿನ ದಿನದಾಗ ಕ್ರಾಂತಿಕಾರಿ ಸಂತ ಅಂತಲೋಕಪ್ರಿಯರಾಗಿರುವ,ಸದಾ ತರುಣಭಾವ, ವಿಚಾರ ತುಂಬಿ ತುಳುಕುತ್ತಿರುವ ಜೈನ ಮುನಿ ತರುಣಸಾಗರ ಅವರು ೨–೩ ತಿಂಗಳ ಹಿಂದ ನಮ್ಮೂರಿಗೂ ಬಂದಿದ್ದರು. ಭಾರತದ ತುಂಬ ಸುತ್ತಾಡಿ ಹಳೇ ಮತ್ತು ಹೊಸ ತಲೆಮಾರಿನ, ವಿಚಾರಗಳ, ಸಂಪ್ರದಾಯಗಳ ಜನರನ್ನ ಏಕಕಾಲಕ್ಕ ಸೆಳೆದು, ತದಕಾಡಿ, ಯೋಚನೆಗೆ ತೊಡಗಿಸಿದ ವಿಶಿಷ್ಟ ಶಕ್ತಿ ಇವರದು. ತಮ್ಮ ನೇರ, ನಿರ್ಭಿಡೆಯ, ಕಟು ವ್ಯಂಗ್ಯದ, ಅನುಭವದ, ಜ್ಞಾನದ ಮಾತುಗಳಿಂದ ಎಲ್ಲಾ ಧರ್ಮಗಳ, ಭಾಷೆಗಳ, ನಂಬಿಕೆಗಳ, ಜನರ ಮುಕ್ತ ಚಿಂತನೆಗೆ ಸೇತು ಆದ್ಹಂಗ ಆದವರು.

ಸಾಮಾನ್ಯವಾಗಿ ಯುವ ಮನಸ್ಸು ಮತ್ತು ವಯಸ್ಸು ಒಂದಿಲ್ಲಾ ಒಂದು ರೀತಿಯೊಳಗ ಕ್ರಾಂತಿಕಾರಿ ಆಗಿರತಾವ, ಯಾರದೂ, ಯಾತರದೂ ಹಂಗಿಲ್ಲದ್ಅ ಸೀದಾ ಮಾತಾಡತಿರತಾವು. ಮುಂದ ಮನಸ್ಸು ತಣಿದಾಗ, ವಯಸ್ಸು ದಣಿದಾಗ ಆ ಕಟುತ್ವ, ವ್ಯಂಗ್ಯ, ನೇರತನಗಳು ನಿಧಾನವಾಗಿ ಮೃದುತ್ವ, ಮಸೃಣತ್ವ ಆಗಿ ಪಕ್ವತೆಯ ಕಡೆಗೆ, ಮೌನದ ಕಡೆಗೆ, ನಿಃಶಬ್ದದ ಕಡೆಗೆ ಸಾಗತಾವು. ಆದರ ಈ ಮುನಿಯ ದನಿ ಕೇಳಿದರ, ನಡೆ ನುಡಿಯ ನೇರ ನಡಿಗೆಯನ್ನ ನೋಡಿದರ, ಕಾಲ–ಗೌರವವನ್ನ ಗಮನಿಸಿದರ ಬಹುಶಃ ಇವರಿಗೆ ಹೇರಳವಾಗಿ, ದೈವದತ್ತವಾಗಿ ಲಭಿಸಿರುವ ಧೀರತ್ವ, ನೇರತ್ವಗಳು ಎಂದಿಗೂ ಅಡ್ಡಿ ಆಗಲಿಕ್ಕಿಲ್ಲ, ದಣಿಯಲಿಕ್ಕಿಲ್ಲ, ಸೋಲಲಿಕ್ಕಿಲ್ಲ ಅಂತ ಅನಿಸ್ತದ.

ತರುಣಧ್ವನಿಗೆ ನೇರ ಗುರಿ ಮನುಷ್ಯತ್ವ, ಅದರ ಶುದ್ಧಿ ಮತ್ತು ಪರಿಪೂರ್ಣತೆ. ಹಿಂದೂ ಮುಸ್ಲಿಂ ಜೈನ ಬೌದ್ಧ ಮುಂತಾದ ಧೂಮ್ರವಲಯಗಳು, ಮಂಜಿನ ಪರದೆಗಳು ಈ ಮುನಿಗೆ ಅಡ್ಡ ಬಂದಿಲ್ಲ ಕಾಡಿಲ್ಲ ಮಂಜ ಆಗಿಲ್ಲ. ಎಲ್ಲಾ ಬಾಳೇವಂತರ ಪ್ರತಿನಿತ್ಯದ ಬದುಕಿನ ಸುತ್ತ ಹರಡಿದ ಭಾಷೆ ಆತಂಕ ನೋವು ನಲಿವು ಕಷ್ಟ ಸ್ವಾರ್ಥ ಸಂಕುಚಿತತೆಗಳನ್ನ ಈ ಮಾರಾಯ ಯಾವಾಗ ನೋಡತಾರೋ ಎಲ್ಲಿ ಕೇಳಿಸಿಕೋತಾರೋ ಹೆಂಗ ತಿಳಕೋತಾರೋ... ನಿರರ್ಗಳ ಮಾತು, ಹೇಳಿಕೆ, ಛೇಡಿಕೆ, ನಿರೂಪಣೆ, ವಿವರಣೆ, ಸಲಹೆ, ಉಪದೇಶ, ಮಾರ್ಗದರ್ಶನ. ಭಾಷೆ, ಶಬ್ದ, ಉದಾಹರಣೆ, ಧರ್ಮಗ್ರಂಥ ಎಲ್ಲಾನೂ ತರುಣ ನದಿಯೊಳಗ ಈಶಾಡುವ ನಿರಾಳ ಮೀನುಗಳು. ಮಾತಾಡತ ಮಾತಾಡತ ಮಾತು ಉದ್ಧರಣ ಆಗಿ ಉದ್ಧಾರದ ಭಾವ ಬೆಳಕಿನ ಕಡೆ ಮಾರೀ ಮಾಡಿ ನಿಂದರತಾವು.

ಮಹಾವೀರ ಮತ್ತು ಜೈನತ್ವದ ಪಾಯಾದ ಮ್ಯಾಲ ನಿಂತಿದ್ದರಿಂದ ಅವುನ್ನ ತಿರುತಿರುಗಿ ನೆನಸೂದು ಸಹಜ ಅಯ್ತಿ, ಆದರ ಆ ಪಾಯಾದ ಆಜೂ ಬಾಜೂ ಮ್ಯಾಲ ಕೆಳಗ ಅಲ್ಲಲ್ಲೆ ಬಿಟ್ಟಿರುವ ಬಿರುಕು, ಒಡಕು, ಕೊಳಕುಗಳನ್ನ ಮಾತ್ರ ನಿರ್ಲಕ್ಷಿಸೂದುಲ್ಲ. ಈ ನಿರ್ಲಿಪ್ತ ಎತ್ತರದ ಮಂತ್ರದಂಡ ಇಟಗೊಂಡಿದ್ದರಿಂದ ಪ್ರತಿಯೊಂದು ಧರ್ಮ, ವ್ಯವಹಾರ, ನಡೆನುಡಿಗಳ ಕಸಾ ಗುಡಿಸಿ ಹಾಕತಾರ.

ಸಂತರ ಪಾಲಿಗೆ ಪ್ರತಿಯೊಬ್ಬ ಮನಶಾ ಒಂದು ಪರಿಪೂರ್ಣ ಧರ್ಮ. ಸಂತರು ಯಾವುದೇ ಸೀಮಿತ ಧಾರ್ಮಿಕ ಚೌಕಟ್ಟಿಗೆ ಸಿಲುಕಿರೊದುಲ್ಲ, ಸಿಲುಕಿರಬಾರದು. ನಿಜವಾದ ಮನುಷ್ಯ–ಪ್ರೀತಿ ಇದ್ದರ ಅದು ಸಂತತ್ವದ ಎತ್ತರಕ್ಕ ಏರಿಸತಯ್ತಿ. ಅಂಥ ಸಂತ ತನ್ನ ಸಂಗಾತಿಗಳನ್ನೂ ಅನುಯಾಯಿಗಳನ್ನೂಸಂತರನ್ನಾಗಿಸ್ತಾನ. ಪ್ರತಿಯೊಬ್ಬ ವ್ಯಕ್ತಿಗೆ ಮಹಾವೀರನ ತನಕ ತಲುಪುವ ಹಕ್ಕು ಸಿಗಬೇಕು. ಅಥವಾ ಮಹಾವೀರನನ್ನ ಪ್ರತಿಯೊಬ್ಬ ವ್ಯಕ್ತಿಯ ಹತ್ತರಕ್ಕ ತರಬೇಕು ಅನ್ನೂದ್ಅ ಜೈನತ್ವ ಅಂತಾರ ಈ ಮುನಿ.

ಇವತ್ತಿನ ಆಧುನಿಕ ಸಮಾಜದಾಗ ಮನಶ್ಯಾನ ಹತ್ತರ ಸುಖ ಸೌಲಭ್ಯ ವಿಲಾಸದ ಸಲಕರಣೆ

ಭಾಳ ಭಾಳ ಅದಾವು – ಟಿವಿ ಸೆಟ್, ಡಿನರ್ ಸೆಟ್, ಡಾಯ್‌ಮಂಡ್ ಸೆಟ್, ಸೋಫಾ ಸೆಟ್, ಟೀ ಸೆಟ್, ಎಲ್ಲಾ ಎಲ್ಲಾ ಸೆಟ್ ಅದಾವು. ಆದರ ಮಾಯಿಂಡ್ ಒಂದು ಅಪ್‌ಸೆಟ್ ಅಯ್ತಿ. ಅವ್ನಗ ಯಾವಾಗಲೂ ಟೆನ್‌ಶನ್ ಇರತಯ್ತಿ. ಆ ಟೆನ್‌ಶನ್‌ದ ಚಿಕಿತ್ಸೆ ಮೆಡಿಸಿನ್‌ದಿಂದ ಅಲ್ಲ, ಮೆಡಿಟೇಶನ್‌ದಿಂದ ಮಾತ್ರ ಸಾಧ್ಯ ಅಂತ ಹೇಳತಾರ.

ಎಲ್ಲಾ ಬಿಟ್ಟಿದ್ದಂಥ, ಮೈಮ್ಯಾಲ ಚಿಂದಿ ಅರಿವೀನೂ ಹಾಕ್ಕೊಂಡಿರದಿದ್ದಂಥಾ ಮಹಾವೀರನ ಹೆಸರಲೇ ಮಹಾವೀರ ವಸ್ತ್ರಭಂಡಾರ, ಮಹಾವೀರ ಹೊಟೇಲ್, ಮಹಾವೀರ ಲಾಜ್ ಏನೇನೋ ಬಿಜಿನೆಸ್ಸು ಮುಂತಾದವು ಆಭಾಸ; ನಿಮ್ಮ ಮನ್ಯಾಗ ಆಳು ಹೋಳು ಚಾಕರಿ ಮಾಡವರು ಬೇಕಾದಷ್ಟು ಮಂದಿ ಇರಬಹುದು, ಆದರ ನಿಮ್ಮ ಕೆಲಸಾ ನೀವ್‌ಅ ಮಾಡಿಕೊಳ್ಳಿರಿ. ನಿಮ್ಮ ಕ್ವಾಣೀ ಕಸಾ ನೀವ್‌ಅ ಹೊಡಕೊಳ್ಳಿರಿ. ನಿಮ್ಮ ಎಂಜಲು ತಾಟು, ಪ್ಲೇಟು ನೀವ್‌ಅ ತೊಳಕೊಳ್ಳಿರಿ, ಇದಕ್ಕೆಲ್ಲಾ ಯಾಕ ನಾಚಿಕೋಬೇಕು? ದಿನಾ ಮುಂಜಾನೆ ನಮ್ಮ ಕುಂಡೀ ನಾವ್‌ಅ ತೊಳಕೋತೇವಲ್ಲ...? ಅಂದಮ್ಯಾಲ ನಮ್ಮ ಮನೀ ಕಸಾ ಹೊಡಕೊಳ್ಳಾಕ, ನಾವೂ ಉಂಡಿದ್ದ ತಾಟು ತೊಳಕೊಳ್ಳಾಕ ನಮ್ಮ ಅವ್ವಾ ಅಪ್ಪನ ಸೇವಾ ಮಾಡಾಕ ನಮಗ ಯಾಕ ನಾಚಿಕಿ ಆಗಬೇಕು– ಹಿಂಗ ಕಡೀಕ ಬಂದು ತಮ್ಮ ವಿಚಾರದ ಪಟಾ ಒಮ್ಮಿಗಿಲೆ ಆಕಾಶದಾಗ ತೂರಿ ಬಿಡತಾರ. ನಿದ್ದೀ ಗುಳಿಗಿ ನುಂಗಲಾರದ ನಿದ್ದಿ ಬಂದರ, ಅಲಾರ್ಮ ಇಟಗೊಳ್ಳದನ್‌ಅ ಏಳಬೇಕನಿಸಿದಾಗ ಎದ್ದರ ಅದ್‌ಅ ಶ್ರೀಮಂತಿಕೆ; ಬರೇ ಶ್ವಾಸ ಇದ್ದರ ಅಲ್ಲ, ವಿಶ್ವಾಸ ಇದ್ದರ ಅದ್‌ಅ ಜೀವನ, ಮನೋಬಲ ಇರಬೇಕು, ಅದರೊಳಗ್‌ಅ ನೋಬಲ್ ಪ್ರೈಜ್ ಇರತಯ್ತಿ; ಪರಮಾತ್ಮ ಪರೀಕ್ಷಕ– ಎಕ್ಸಾಮಿನರ್, ನೀವಿರುವ ಈ ಜಗತ್ತೇ ಪರೀಕ್ಷಾಭವನ, ನಿಮ್ಮ ಜೀವನಾನ್‌ಅ ಉತ್ತರ ಪುಸ್ತಕ. ಮೂರು ತಾಸಿನ ಪೇಪರ್ ಬರೀಬೇಕಾಗೇತಿ. ಪ್ರಶ್ನೆಪತ್ರಿಕೆ ಕೈಯಾಗ ಬಂದಯ್ತಿ. ಬಾಲ್ಯ ಮುಗಿದ ಕೂಡಲೇ ಒನ್ನೇ ಬೆಲ್ ಬಡೀತು ಅಂತ. ಯೌವನ ಮುಗಿದ ಕೂಡಲೇ ಎರಡನೇ ವಾರ್ನಿಂಗ್ ಆತು ಅಂತ. ಸಾವಿನ ಮೂರನೇ ಘಂಟಿ ಇನ್ನೇನು ಬಾರಿಸೇ ಬಿಡೂದಯ್ತಿ. ಫೇಲ್ ಆದಗೀದೇನು ಅನ್ನೂ ಹೆದರಿಕಿ ಇಲ್ಲೇನು ನಿಮಗ?– ಅಂತ ತರುಣಪ್ರಶ್ನೆ.

ಮನಶಾ ದೇವರಿಗಿಂತ ಹೆಚ್ಚಿನವ್ನು ಅಂತ ನಾ ಭಾವಿಸತೆನಿ, ನಾ ದೇವರನ್ನ ಕಂಡಿಲ್ಲ. ಕಂಡಿದ್ದರೂ ಅವ್ನನನ್ನ ಮನಶ್ಯಾನ ಸ್ವರೂಪದೊಳಗ್‌ಅ ಕಂಡೇನಿ. ಒಂದಿಲ್ಲಾ ಒಂದು ದಿನ ತನ್ನ ಮನೋಬಲ ತಪೋಬಲ ಶ್ರದ್ಧೆ ಸಮರ್ಪಣಗಳಿಂದ ತನ್ನನ್ನ ದೇವರನ್ನಾಗಿಸಿ ಕೊಳ್ಳುವವ್ನು ಈ ಮನಶಾನ್ ಅಲ್ಲೇನು ಮತ್ತ?– ಅಂತ ಕೇಳಿದ್ದು ಮಹಾ ವೀರ ವಾಣಿ. ಪ್ರತಿಯೊಬ್ಬ ಮನಶಾನ ಒಳಗ ಗುಪ್ತವಾಗಿ ಭಗವಂತ ವಾಸಿಸತಾನ. ಮನಶ್ಯಾ ಸ್ವತಃ ಜಾಗೃತ ಆಗಬೇಕು, ಅವನೊಳಗ ಅಂತ ಜಾಗೃತಿ ಮೂಡೂಹಂಗ ಮಾಡಬೇಕು– ಇದು ಅಗತ್ಯ ಆಗಬೇಕಾದ ತುರ್ತು. ಇದು ತರುಣಸಾಗರರು ನಂಬಿಕೊಂಡು ಸಾಗಿದ ಮಾನವ ಕಾಳಜಿ. ಹಿಂಗಾಗಿ ಅವರ ಕಟು ವಚನಗಳನ್ನ ಯಾವ ಕಾರಣಕ್ಕೂ ಅಪಾರ್ಥ ಮಾಡಿಕೊಳ್ಳ ಬೇಕಾಗಿಲ್ಲ. ಜ್ವರ ಬಂದ ನಾಲಿಗಿಗೆ ತರುಣ ವೈದ್ಯ ಕೊಟ್ಟ ಗುಳಿಗಿ ನುಂಗುವಾಗ ಕಹಿ ಅನಿಸಬಹುದು, ಆದರ ಅಧರದಿಂದ ಸರಿದು ಉದರಕ್ಕ ಇಳಿದ ಔಷಧ ಮಾಡುವ ಪರಿಣಾಮ ಮಾತ್ರ ಶ್ರೇಯೋಫಲರುಚಿರಸಾನುಭೂತಿ.

ಬುದ್ಧ, ಮಹಾವೀರ, ಯೇಸು, ಮುಹಮ್ಮದ, ನಾನಕ, ಕಬೀರ, ತುಲಸೀದಾಸ, ಶಿವಶರಣರು, ಹರಿದಾಸರು, ಪರಮಹಂಸ, ವಿವೇಕಾನಂದ, ಗಾಂಧಿ ಮುಂತಾದವರೆಲ್ಲರೂ ಹೇಳಿದ್ದನ್ನ ಮತ್ತ ಮತ್ತ ಹೇಳಬೇಕಾಕ್ಕತಿ– ಸಾಗರದ ಅಬ್ಬರದ ತರುಣ ತೆರೆಗಳು ಆ ಕೆಲಸ ಮಾಡಾಕಹತ್ಯಾವು. ಯಾರೂ ಭಿನ್ನರಲ್ಲ– ಇದು ಧರ್ಮದ ಮಂತ್ರ, ಯಾರೂ ಅನ್ಯರಲ್ಲ– ಇದು ಪ್ರೇಮದ ಮಂತ್ರ, ಯಾವುದೇ ವೈರ ಇಲ್ಲ, ದ್ವೇಷ ಇಲ್ಲ, ಎಲ್ಲರೂ ನನ್ನವರು– ಇದು ಸಂತನ ಮಂತ್ರ ಅಂತ ನಂಬಿದವ್ನು ಕ್ರಾಂತಿಸಂತ.

SANKALANA: RNI No. KARKAN 14160/10/1/2002-TC

ಸಂಕಲನ : ಸಪ್ಟಂಬರ್ + ಅಕ್ಟೋಬರ್ ೨೦೦೭
ಸಂಪುಟ ೩ : ಸಂಚಿಕೆ ೫
ಸಂಪಾದಕರು : ಸಿದ್ಧಲಿಂಗ ಪಟ್ಟಣಶೆಟ್ಟಿ + ಹೇಮಾ ಪಟ್ಟಣಶೆಟ್ಟಿ

•

ಮಿತ್ರಾ ವೆಂಕಟ್ರಾಜ, ಅರವಿಂದ ಚೊಕ್ಕಾಡಿ.
ಸ. ರಘುನಾಥ, ಆರ್. ಪವಿತ್ರ ಪ್ರಿಯಭಾಷಿಣಿ,
ವಿಜಯ್ ಕುಮಾರ್/ಆರ್. ಪಿ. ಹೆಗಡೆ. ವಿಜಯಕ್ಕ,
ಹೊರೆಯಾಲ ದೊರೆಸ್ವಾಮಿ, ಪ್ರಸನ್ನ,
ನಾ. ಡಿಸೋಜ, ಯು. ಎನ್. ಸಂಗನಾಳಮಠ,
ಅಶ್ವಿನ್ ಸಿ., ಬಸವರಾಜ ಹೂಗಾರ,
ಸಿ. ಸೋಮಶೇಖರಯ್ಯ,
ಸಿ. ಪಿ. ಕೆ., ಜಿ. ಎಸ್. ಸಿದ್ಧಲಿಂಗಯ್ಯ,
ಬಸವರಾಜ ವಕ್ಕುಂದ, ಗಿರಿಜಾ ಶಾಸ್ತ್ರಿ,
ಎಚ್. ಎಸ್. ಶಿವಪ್ರಕಾಶ್

•

ಆರ್. ಜಿ. ಮಠಪತಿ
ಬಸವರಾಜ ವಕ್ಕುಂದ
ಶ್ಯಾಮಸುಂದರ ಬಿದರಕುಂದಿ
ಶಶಿಧರ ತೋಡಕರ

•

ಬಸವರಾಜ ಚಿಕ್ಕನರಗುಂದ,
ರಜಿಯಾ ಡಿ. ಬಿ., ಎಂ.ಎಂ. ಪುರದನಗೌಡರ,
ಮಿರ್ಜಾ ಬಷೀರ್,
ಎಚ್. ಸಿ. ವಿಷ್ಣುಮೂರ್ತಿ, ಪಾರ್ವತಿ ಜಿ. ಐತಾಳ್,
ಗುರುಮೂರ್ತಿ ಪೆಂಡಕೂರು,
ಎ. ಡಿ. ನಂಜುಂಡಸ್ವಾಮಿ,
ಶ್ಯಾಮಸುಂದರ ಬಿದರಕುಂದಿ, ದಮಯಂತಿ ನರೇಗಲ್ಲ,
ವೆಂಕಟೇಶ ಕುಲಕರಣಿ

•

ಸಿದ್ಧಲಿಂಗ ಪಟ್ಟಣಶೆಟ್ಟಿ

•

ಸಂಕಲನ ಪ್ರಕಾಶನ
ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ – ೫೮೦ ೦೦೪